ವೀರಶೈವ ದರ್ಶನ ಸಾರ

ಬಿ. ಎಸ್. ಪಾಟೀಲ
ಬಿ.ಎ., ಎಲ್.ಎಲ್.ಬಿ.
ಜಿಲ್ಲಾ ನ್ಯಾಯಾಧೀಶರು,

Q234r
33N4

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ,
ಮುಂಡರಗಿ.

Q 234r 8799
33 N4
Patil, B S
Veerashaiva darshana
sara.

Q234r
33N4

8799
S.J.V.J. PRATISHTHAN
LIBRARY
Jangamawadimath, Varanasi

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ ೯೫

ವೀರಶೈವ ದರ್ಶನ ಸಾರ

ಶ್ರೀ ಬಿ. ಎಸ್. ಪಾಟೀಲ

ಬಿ.ಎ., ಎಲ್.ಎಲ್.ಬಿ.

ಜಿಲ್ಲಾ ನ್ಯಾಯಾಧೀಶರು, ನಿಯೋಜಿತ
ಧಾರ್ಮಿಕ ದತ್ತಿ ಆಯುಕ್ತರು,
ಬೆಳಗಾವಿ ವಿಭಾಗ, ಬೆಳಗಾಂವಿ.

೧೯೯೪

ಪ್ರಕಾಶಕರು :

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ,
ಮುಂಡರಗಿ

Veerashaiva Darshana Sara

Written by : **B. S. Patil**

Published by ; Shree Jagadguru Annadaneashwara
Samsthanamatha, Mundargi.

Q234Y
33N4

ಮೊದಲನೆ ಮುದ್ರಣ................1994

ಶ್ರೀ ಜಗದ್ಗುರುಗಳವರು ಶೂನ್ಯ ಪೀಠಾರೋಹಣ ರಜತೋತ್ಸವ
ನೆನಪಿನಲ್ಲಿ ಪ್ರಕಟಿತ

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8799

ಪ್ರತಿಗಳು : ೧೦೦೦

ಹಕ್ಕುಗಳು : ಗ್ರಂಥಕರ್ತರವು

S.J.V.J. PRATISHTHAN
LIBRARY
Jangamawadimath, Varanasi
Acc. No.

ಬೆಲೆ : ರೂ. ೨೦-೦೦

ಮುದ್ರಕರು : ನ್ಯೂ ಅಶೋಕ ಪ್ರಿಂಟಿಂಗ ಪ್ರೆಸ್, ಗದಗ.

— ಅರ್ಪಣೆ —

ಸ್ವಧರ್ಮ ನಿಷ್ಠೆಯುಳ್ಳ

ಪ್ರತಿಯೊಬ್ಬ ವೀರಶೈವನಿಗೂ

ಶ್ರದ್ಧಾಪೂರ್ವಕ ಅರ್ಪಣೆ

—ಬಿ. ಎಸ್. ಪಾಟೀಲ

— ಶ್ರೀವಾಣಿ —

ಶ್ರೀ ಮ। ನಿ। ಪ್ರ। ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು
ಸಂಸ್ಥಾನಮಠ

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥ ಮಾಲೆಯಲ್ಲಿ ವಿಭಿನ್ನ ಜಾತಿಯ ಸುಗಂಧ ಸುಮಗಳ ಗ್ರಂಥನವಾಗುತ್ತಲೆ ನಡೆದಿರುವುದು ಸಂತಸ. ಸಾಹಿತ್ಯದ ವಿವಿಧ ಪ್ರಕಾರಗಳು ಕನ್ನಡಿಗರ ಕೈಗೆ ನೀಡುತ್ತಿರುವುದು ಹೆಮ್ಮೆ. ಮಾನವ ಜೀವನದ ಹೊರ ಬದುಕಿಗೆ ಲೌಕಿಕಜ್ಞಾನ ಅವಶ್ಯವಿರುವಂತೆ,ಆಂತರಿಕ ಬದುಕಿಗೆ ಪಾರಮಾರ್ಥಿಕ ಜ್ಞಾನ ಅತ್ಯವಶ್ಯ. ಲೌಕಿಕದೊಂದಿಗೆ ಪಾರಮಾರ್ಥವನ್ನು ಮೇಳೈಸಿಕೊಳ್ಳುವದೇ ಪೂರ್ಣ ಬದುಕು. ಬಾಹ್ಯ ಪ್ರಪಂಚದ ಆಮಿಷಗಳಿಂದ ಆಂತರಿಕ ಸಾಧನೆ ನಶಿಸುತ್ತಿರುವಾಗ ನ್ಯಾಯಾಧೀಶರೂ, ಧರ್ಮದತ್ತಿ ಆಯುಕ್ತರೂ ಆದ ಶ್ರೀ ಬಿ. ಎಸ್. ಪಾಟೀಲರು— 'ವೀರಶೈವ ದರ್ಶನ ಸಾರ' ವನ್ನು ತಮ್ಮ ಅನುಭವದಿಂದ ಸಂಗ್ರಹಿಸಿ ಸಕಲರ ಲೇಸಿಗೆ ಕೊಡುತ್ತಿರುವುದು ಅತ್ಯಾನಂದ. ಇದು ಈ ಗ್ರಂಥಮಾಲೆಯ ೯೫ ನೇ ಕುಸುಮ. ಶ್ರೀಯುತರು ಉನ್ನತ ಹುದ್ದೆಯಲ್ಲಿದ್ದರೂ ಸರಳ ಜೀವಿಗಳು. ಪರೋಪಕಾರ ಬುದ್ಧಿಯವರು. ಈಗಾಗಲೇ- 'ಅನುಭಾವಿಗಳ ಅಮೃತವಾಣಿ', 'ಚಿರಂತನ ಚೇತನ' ಈ ಕೃತಿಗಳನ್ನು ರಚಿಸಿರುವರು. ಈ ಕೃತಿಯ ಪ್ರತಿಫಲವನ್ನು ಶ್ರೀಮಠಕ್ಕೆ ನೀಡಿದ್ದು ಅವರ ಉದಾರತನದ ದ್ಯೋತಕವಾಗಿದೆ.

"ಎಲ್ಲಾ ಧರ್ಮಗಳ ಸಾರಸರ್ವಸ್ವವನ್ನು ಒಳಗೊಂಡು ವಿಶ್ವ ಮಾನವ ಮಹಾ ಧರ್ಮದ ಸಂಕೇತದಂತೆ ಹಾಗೂ ಚಿರಂತನವಾಗಿ ಉಳಿಯುವಂತೆ ಬೆಳೆದು ಬಂದ ವೀರಶೈವ ಧರ್ಮದ ವಿಶ್ವವ್ಯಾಪಕವಾದ ತತ್ವ ದರ್ಶನವನ್ನು ಪ್ರತಿಯೊಬ್ಬ ವೀರಶೈವನು ಮಾಡಿಕೊಳ್ಳಬೇಕು".

''ಸರ್ವ ಸಮಾನತೆ, ಸರ್ವೋದಯ ದೃಷ್ಟಿ,ಕಾಯಕ ನಿಷ್ಠೆ,ಸಂಪತ್ತಿನ ಹಂಚಿಕೆ, ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಆಧರಿಸಿ ಧಾರ್ಮಿಕ ಮೌಲ್ಯಗಳು ಬೆಳೆಯಲು ವೀರಶೈವ ಧರ್ಮ ಮೊದಲಿನಿಂದಲೂ ಪ್ರಯತ್ನಿಸಿದೆ'' ಎನ್ನುವ ಮಾತುಗಳಲ್ಲಿ ಶ್ರೀಯುತರ ವೈಚಾರಿಕ ಪ್ರಜ್ಞೆ, ವೀರಶೈವ ದರ್ಶನದ ಪ್ರಾಚೀನತೆ, ವ್ಯಾಪಕತೆ,ಎಲ್ಲ ದರ್ಶನಗಳ ಸಾರ ಸರ್ವಸ್ವವನ್ನು ಇಲ್ಲಿ ಅಡಕಗೊಳಿಸಿದ್ದಾರೆ. ವೀರಶೈವ ಧರ್ಮದ ಮೂಲ ತಿರುಳನ್ನು ಸೂಕ್ತವಾಗಿ ಸರಳವಾಗಿ ಪ್ರತಿಪಾದಿಸಿದ್ದಾರೆ.

ವೀರಶೈವದ ತತ್ವತ್ರಯಗಳನ್ನು ವಿವರಿಸಿ ಅನುಭಾವದ ಮರ್ಮವನ್ನು, ಇತರ ಯೋಗಗಳೊಂದಿಗೆ ಶಿವಯೋಗವನ್ನು, ಶರಣರು ಸಾರಿದ ಧರ್ಮವನ್ನು ತಿಳಿಪಡಿಸುತ್ತ

ಶರಣಸತಿ–ಲಿಂಗಪತಿ, ಲಿಂಗಾಂಗ ಸಾಮರಸ್ಯವನ್ನು ಹೇಳಿದ ಮೇಲೂ ಇಷ್ಟಲಿಂಗದ ವಿಚಾರವನ್ನು ವ್ಯಕ್ತ ಮಾಡಿದ್ದಾರೆ. ಯಾಕಂದರೆ ವೀರಶೈವ ದರ್ಶನದಲ್ಲಿ ಇಷ್ಟ ಲಿಂಗವೇ ಮುಖ್ಯವಾದುದು. ಇಷ್ಟಲಿಂಗಧಾರಣದಿಂದಲೇ ವೀರಶೈವನ ಅಸ್ಥಿತ್ವ.

ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ
ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ
ಸರ್ವಕಾರಣ ಲಿಂಗವಾಗಿ
ಲಿಂಗವನೆ ಅರಿದರಿದು ಲಿಂಗಸಂಗವನೆ ಮಾಡುವೆ
ಸಂಗಸುಖದೊಳೋಲಾಡುವೆ ಗುಹೇಶ್ವರಾ (೧೦೩೪)

ಪ್ರಭುದೇವರ ಈ ವಚನ ಇಷ್ಟಲಿಂಗದ ಘನತೆಯನ್ನೇ ಸಾರಿದೆ. ಆ ಲಿಂಗವನ್ನು ಸಾಕ್ಷಾತ್ಕರಿಸಿಕೊಂಡರೆ ಮತ್ತಾವುದರ ಅವಶ್ಯಕತೆಯಿಲ್ಲವೆಂದೆ ಪ್ರಸ್ತಾಪಿಸಿದ್ದಾರೆ. ಲಿಂಗಧಾರಣವಿಲ್ಲದವನು ಲಿಂಗವಂತನಾಗಲಾರನು. ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆದಾಗಲೇ ಲಿಂಗವಂತ ಅಥವಾ ಲಿಂಗಾಯತನೆನಿಸುತ್ತಾನೆ. ಇಷ್ಟ ಲಿಂಗೋಪಾಸನೆಯು ಏಕದೇವೋಪಾಸನೆಯನ್ನು ಬೋಧಿಸುತ್ತದೆ. ಇದರಿಂದ ಧಾರ್ಮಿಕ ಸ್ವಾತಂತ್ರ್ಯ ಲಭಿಸುವದು. ಲಿಂಗಧಾರಣೆಯು ಬಾಲವೃದ್ಧರಿಗೆ, ಸ್ತ್ರೀಪುರುಷರೆಲ್ಲರಿಗೂ ಸಮಾನವಾಗಿದೆ. ಅಷ್ಟೇ ಏಕೆ ? ಶಿಶುವು ಗರ್ಭಸ್ಥವಿರುವಾಗ ಎಂಟನೇ ತಿಂಗಳಲ್ಲಿಯೇ ಲಿಂಗಧಾರಣವನ್ನು ತಾಯಿಯ ಗರ್ಭಕ್ಕೆ ಮಾಡಿಸಬೇಕು. ಅದಕ್ಕಾಗಿ ಇಂಥ ಲಿಂಗದ ಮಹತ್ವವನ್ನು ಪ್ರತಿಯೊಬ್ಬರು ಅರಿಯಬೇಕು.

ಲಿಂಗವಂತನಾದವನು ಮಾನವ ಮಾತ್ರರಿಗೆ ಧರ್ಮವೆನಿಸಿದ ಧೃತಿ, ಕ್ಷಮೆ, ದಮೆಗಳನ್ನು ಅರಿಯಲೆಂದು ಕೃತಿಕರ್ತರು ಇಲ್ಲಿ ಸುಂದರವಾಗಿ ವಿವರಿಸಿದ್ದಾರೆ. ಇನ್ನು ಇಷ್ಟಲಿಂಗೋಪಾಸನೆಯು ಶಿವಯೋಗದಲ್ಲಿ ಧ್ಯಾನ–ಮೌನ–ಪ್ರಾರ್ಥನೆಗಳು ಸಹಜ ವಾಗಿ ಅಳವಡುತ್ತವೆ. ಪ್ರತ್ಯೇಕ ಹೇಳುವ ಅವಶ್ಯಕತೆಯಿರಲಿಲ್ಲ. ಆದರೆ ಇತರ ಧರ್ಮಗಳ ಪ್ರಭಾವ ವ್ಯಕ್ತವಾಗಿದೆ. ಸಾಮೂಹಿಕ ಪ್ರಾರ್ಥನೆಯಿಂದ ಸಮಾಜದಲ್ಲಿ ಭಾವೈಕ್ಯತೆ ಸಾಧ್ಯವೆಂಬುದಕ್ಕೆ ಒತ್ತು ಕೊಟ್ಟಿದ್ದಾರೆ. ಕೊನೆಯದಾಗಿ 'ವೀರಶೈವ ಧರ್ಮದ ಲೋಕ ಸಂಗ್ರಹ ದೃಷ್ಟಿ' ಈ ವಿಚಾರವು ಅತ್ಯಂತ ಮಾರ್ಮಿಕವಾಗಿದೆ. ಹೀಗೆ ಶ್ರೀ ಪಾಟೀಲರು 'ವೀರಶೈವ ದರ್ಶನ ಸಾರ' ವನ್ನು ಸಂಗ್ರಹಿಸಿ ವೀರಶೈವ ಧರ್ಮವನ್ನು ಅರಿಯಬೇಕೆನ್ನುವವರಿಗೆ ಉಪಯುಕ್ತಗೊಳಿಸಿದ್ದಾರೆ. ಇಂಥ ಅನುಭವಿ ಗಳಿಂದ ಸಮನ್ವಯ ದೃಷ್ಟಿಯಲ್ಲಿ ಇನ್ನೂ ಹೆಚ್ಚಿನ ಕೃತಿಗಳು ಮೂಡಿ ಬರಲಿ. ಕೃತಿ ಕರ್ತರಿಗೆ ವಾಚಕರಿಗೆ ಮಂಗಲಗಳು.

೨೦–೭–೮೪

— ಸಕಲರಿಗೆ ಲೇಸಾಗಲಿ —

ಮುನ್ನುಡಿ

1) ನಮ್ಮ ನೆಚ್ಚಿನ ಜಿಲ್ಲಾ ನ್ಯಾಯಾಧೀಶರೂ, ಧರ್ಮದತ್ತಿ ಆಯುಕ್ತರೂ (Charity Commissioner,) ಆದ ಶ್ರೀ ಬಿ. ಎಸ್. ಪಾಟೀಲರು ವೃತ್ತಿಯಲ್ಲಿ ನ್ಯಾಯಾಧೀಶರಾದರೂ ಪ್ರವೃತ್ತಿಯಲ್ಲಿ ಧರ್ಮದರ್ಶಿಗಳು. ಧರ್ಮ, ತತ್ವ, ಸಾಹಿತ್ಯ, ಸಂಸ್ಕೃತಿ ಮುಂತಾದ ವಿಷಯಗಳಲ್ಲಿ ಅಪಾರ ಸಂಸ್ಕಾರವುಳ್ಳವರು, ಅಭಿರುಚಿ ಪಡೆದವರು, ಕೃಷಿ ಮಾಡಿದವರು. ತಮ್ಮ ಕರ್ತವ್ಯ ಕರ್ಮಗಳನ್ನು ನಿತ್ಯವೂ ತೃಪ್ತಿಕರವಾಗಿ ಪೂರೈಸುತ್ತ ಬಿಡುವಿಲ್ಲದ ಅವಧಿಯಲ್ಲಿಯೂ ಗ್ರಂಥ ರಚನೆ ಮಾಡುತ್ತಿರುವುದನ್ನು ನೋಡಿದರೆ ಸಾಹಿತ್ಯ ನಿರ್ಮಿತಿ, ಧರ್ಮ ಜಿಜ್ಞಾಸೆ, ತತ್ವವಿವೇಚನೆಗಳು ಅವರ ಬಾಳಿನ ಉಸಿರಾಗಿರುವುದು ಸ್ಪಷ್ಟವಾಗುತ್ತದೆ. ಓದದೆ, ವಿಚಾರ ಮಾಡದೆ, ಬರೆಯದೆ ಅವರಿಗೆ ತೃಪ್ತಿಯಿಲ್ಲ. ಏಕೆಂದರೆ ಸಾಹಿತ್ಯ ನಿರ್ಮಾಣ ಶಕ್ತಿ ಅದಮ್ಯವಾದುದು. ಒಳಗಿನ ದರ್ಶನವನ್ನು ಹೊರಗೆ ಶಬ್ದ ಮುಖೇನ ಪ್ರದರ್ಶನ ಮಾಡದೆ ಆ ಶಕ್ತಿ ಸುಮ್ಮನಿರಲಾರದು. ಇದರ ಫಲವಾಗಿಯೇ ಅವರ ಲೇಖನಿಯಿಂದ ಈಗಾಗಲೇ ಕೆಲವು ಉತ್ತಮ ಕೃತಿಗಳು, ಲೇಖನಗಳು ಹೊರಹೊಮ್ಮಿವೆ. ಇದೀಗ "ವೀರಶೈವ ದರ್ಶನಸಾರ" ಪ್ರಕಟವಾಗುತ್ತಿದೆ.

2) ವೀರಶೈವ ದರ್ಶನ ಭಾರತೀಯ ಷಡುದರ್ಶನಗಳ ಹೊರಗೆ ನಿಂತ ಮೃಡದರ್ಶನ. ಈ ಮೃಡ ದರ್ಶನಕ್ಕೆ ಮೂಲ ಶಿವಾಗಮಗಳು. ವೀರಶೈವ ದರ್ಶನ ಶಿವಾಗಮಗಳ ಆಧಾರದಿಂದ ಇತರ ಶೈವದರ್ಶನಗಳೊಡನೆ ಅನಾದಿ ಕಾಲದಿಂದಲೂ ಬೆಳೆಯುತ್ತ ಮಾರ್ಪಡುತ್ತ ಬಂದಿದೆ. ಕ್ರೈಸ್ತ, ಬೌದ್ಧ, ಮುಹಮ್ಮದೀಯ ಧರ್ಮಗಳಂತೆ ಇದು ಒಬ್ಬರಿಂದ ಸ್ಥಾಪಿತವಾದುದಲ್ಲ. ಕಾಲ ಕಾಲಕ್ಕೆಉದಯಿಸಿದ ಮಹಾನುಭಾವರು ತಂತಮ್ಮ ಆಚಾರ, ಅನುಭವ, ದರ್ಶನಗಳ ಬಲದಿಂದ ಅದನ್ನು ತಿದ್ದುತ್ತ ತೀಡುತ್ತ ಅದಕ್ಕೆ ಹೊಸ ರೂಪ ಕೊಡುತ್ತ ಬಂದಿರುವರು. ಬಸವಾದಿ ಪ್ರಮಥರು ಪ್ರಾಚೀನ ವೀರಶೈವಕ್ಕೆ ಹೊಸ ರೂಪ ಕೊಟ್ಟು ಇಂದು ನಾವೆಲ್ಲ ಅಪ್ಪಿ, ಒಪ್ಪಿ, ಆಚರಿಸುತ್ತಿರುವ ನೂತನ ವೀರಶೈವವನ್ನು ಪ್ರತಿಷ್ಠಾಪಿಸಿದರು ಎಂಬುದು ಶ್ರೀ ಪಾಟೀಲರ ಅಭಿಮತ. ನ್ಯಾಯಾಧೀಶರು ವಿಷಯಗಳನ್ನು ಕೇಳಿ, ನೋಡಿ, ಓದಿ, ತಮ್ಮ ನಿರ್ಣಯ ಕೊಡುವರು. ಆ ಶೈಲಿಯಲ್ಲಿ ಈ ಗ್ರಂಥವನ್ನು ಪ್ರಾರಂಭಿಸುತ್ತಲೇ ಈ ಅಭಿಪ್ರಾಯವಿಟ್ಟಿರುವರು. ಅದು ನ್ಯಾಯಾಧೀಶರ ನಿರ್ಣಯವಾದುದರಿಂದ ನಾವು ಮೌನವಾಗಿದ್ದೇವೆ.

ಪಾಟೀಲರ ಮುಂದಿದ್ದ ಸಮಸ್ಯೆಯೆಂದರೆ ಈ ವೀರಶೈವ ದರ್ಶನಸಾರವನ್ನು ಜನತೆಗೆ ನೀಡಬೇಕೆಂಬುದು. ಅದನ್ನು ಅವರು ತೃಪ್ತಿಕರವಾಗಿ ಪೂರೈಸಿರುವರೆಂದು ಹೇಳಲು ಸಂತೋಷವೆನಿಸುತ್ತದೆ.

ವೀರಶೈವಕ್ಕೆ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮವೆಂದು ನಿವೇದಿಸಿ ಇವು ಮೂರನ್ನು ವಿಸ್ತಾರವಾಗಿ ವಿವರಿಸಿರುವರು.

ಮಾನವನನ್ನು ದೇವನನ್ನಾಗಿ ಮಾಡಲು ಆತಂಕವಾಗಿರುವ ಪಾಪಗಳನ್ನು ದೇಹದಿಂದ ಹೊರಪಡಿಸಿ, ಹೊಸ ಪಾಪಗಳನ್ನು ದೇಹದೊಳಗೆ ಬಿಟ್ಟು ಕೊಳ್ಳದಂತೆ ಅಷ್ಟಾವರಣ ಗಳು ಆತನಿಗೆ ಕವಚವಾಗಿವೆ ಎಂದು ಮೂಲ ಸೂತ್ರವನ್ನು ಮುಂದಿಟ್ಟು ಅಷ್ಟ ಆವರಣಗಳೆನಿಸಿದ ಗುರು,ಲಿಂಗ, ಜಂಗಮ, ಪಾದೋದಕ,ಪ್ರಸಾದ,ವಿಭೂತಿ, ರುದ್ರಾಕ್ಷಿ ಮಂತ್ರಗಳನ್ನು ಉಲ್ಲೇಖಿಸಿರುವ ಹಾಗೆಯೇ ವೀರಶೈವದ ಪ್ರವೃತ್ತಿ, ನಿವೃತ್ತಿಗಳ ವಿಷಯವನ್ನೆತ್ತಿ ಶಿವನು ಅಂಗ, ಲಿಂಗ ಎಂದು ಎರಡು ವಿಧನಾದನು. ಅವನಲ್ಲಿದ್ದ ಶಕ್ತಿಯು ಎರಡು ವಿಧವಾಯಿತು. ಒಂದು ಶಕ್ತಿಯೆನಿಸಿತು, ಇನ್ನೊಂದು ಭಕ್ತಿ ಯೆನಿಸಿತು. ಒಂದು ಶಕ್ತಿ ಅಧಿಕವಾಗಿ ಲಿಂಗದಲ್ಲಿ ನಿಂತಿತು, ಇನ್ನೊಂದು ಸಂಕೋಚ ಗೊಂಡು ಭಕ್ತಿಯೆನಿಸಿ ಅಂಗನಲ್ಲಿ ನೆಲೆಸಿಂದಿತು. ಈ ಸಂಕೋಚಭಾವವನ್ನು ಕಳೆದು ವಿಕಾಸ ಭಾವವನ್ನುಂಟು ಮಾಡಲು ಶಿವನು ಇಷ್ಟ, ಪ್ರಾಣ, ಭಾವಲಿಂಗಗಳೆಂದು ಮೂರು ಬಗೆಯಾದನು.

ಪಾಪಗಳನ್ನೆಲ್ಲ ನೀಗಿ ಪರಿಶುದ್ಧ ಹೃದಯನಾಗಿ ಶಿಷ್ಯನು ಗುರು ಕಾರುಣ್ಯಕ್ಕಾಗಿ ಕಾತರಿಸುತ್ತಿರುವನು.

"ದೂರದಲ್ಲಿರ್ದನೆಂದು ಆನು ಬಾಯಾರಿ ಬಳಲುತ್ತಿರ್ದೆನಯ್ಯ" ಎಂದು ಅಕ್ಕ ಹೇಳಿರುವುದು ಈ ಸನ್ನಿವೇಶದಲ್ಲಿ. ಗುರುಕಾರಣ್ಯವಾಗಲು ಲಿಂಗವು ಸಾರಿ ಬೆರಸಿ ಎನ್ನ ಕರಸ್ಥಳದಲ್ಲಿ ಮೂರ್ತಿಗೊಂಡರೆ ಆರತವೆಲ್ಲವೂ ನಿಲ್ಲುತ್ತದೆ. ಗುರು ಕಾರಣ್ಯವ ಪಡೆದುದಕ್ಕೆ ಚಿಹ್ನವಾವುದೆಂದರೆ ಅಂಗದ ಮೇಲೆ ಲಿಂಗ ಸ್ವಾಯತವಾಗಿರಬೇಕು. ಅಷ್ಟಾವರಣದ ಗುರು ಬಂದ, ಲಿಂಗ ಬಂದಿತು. ಈಗ ಜಂಗಮ ದಾಸೋಹವಾಗ ಬೇಕು. ಜಂಗಮ ದಾಸೋಹ ಮಾಡುವುದು ಮಧ್ಯಾಹ್ನದ ಉರಿಬಿಸಿಲಿನಂತೆ ಎಂದು ಒಂದು ಮಾತಿನಲ್ಲಿ ವಿವರಿಸುವರು.

"ಅ"ಕಾರವೇ ಶೂನ್ಯ "ಬಿಂದು"ವೇ ಲೀಲೆ 'ಗ'ಕಾರವೇ ಚಿತ್ತ, ಈ ತ್ರಿವಿಧದಲ್ಲಿ ಬಗೆದ ಸಕೀಲ ಅಂಗವನ್ನು ಆವರಿಸಬೇಕಾಗಿದೆ. ಅದಕ್ಕೆ ಭಕ್ತಿಯೇ ಮೂಲ. ಭಕ್ತಿ ಯಿಂದ ಲಿಂಗ ಪೂಜೆ ಮಾಡಬೇಕು, ತನ್ನಾಶ್ರಯದ ರತಿಸುಖವನು, ತಾನುಂಬ

ಊಟವನು ತಾವಮಾಡಬೇಕಲ್ಲದೆ ಬೇರೆ ಮತ್ತೊಬ್ಬರ ಕೈಯುಲು ಮಾಡಿಸಬಹುದೆ ? ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾವಮಾಡಬೇಕಲ್ಲದೆ ಬೇರೆ ಮತ್ತೊಬ್ಬರಿಂದ ಮಾಡಿಸಲಾಗದೆಂದು ಲಿಂಗಾರ್ಚನೆಯ ಮಹತಿ ರೀತಿ ನೀತಿಯನ್ನು ವಿವರಿಸುವರು. ಹಣೆಯ ತ್ರಿಪುಂಡ್ರ ಅಂದರೆ ಮೂರು ಬೆರಳಿನ ವಿಭೂತಿ. ಅರಿವು ಆಚಾರ, ಅನುಭವ ದ್ಯೋತಕವೆಂದು ಮಾರ್ಮಿಕವಾಗಿ ವಿವರಿಸುವರು. ಹೀಗೆ ಅಷ್ಟಾವರಣಗಳಿಂದ ಪಂಚಾಚಾರಕ್ಕೆ ಬರುವರು.

ಆಚಾರವೆಂಬುದು ಅಗೋಚರ, ಮಾಡಿದಲ್ಲದೆ ಇಲ್ಲ ಎಂದು ಹೇಳಿ, ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರಗಳೆಂಬ ಪಂಚ ಆಚಾರಗಳನ್ನು ವಿವರಿಸಿರುವರು.

ಲಿಂಗಾಚಾರದ ಸಂಬಂಧದಲ್ಲಿ ಶರಣೆ ರೇಕಮ್ಮನವರ ವಚನವನ್ನು ಉದ್ಧರಿಸಿದುದು ಗಮನಾರ್ಹವಾಗಿದೆ.

ಲಿಂಗಾಚಾರ ತಪ್ಪಿದವರನ್ನು ಕಂಡವರು ತಮ್ಮಲ್ಲಿ ಶಕ್ತಿಯಿದ್ದರೆ ಈ ಸ್ಥಳದಲ್ಲಿಯೇ ಸಂಹರಿಸಬೇಕು, ಆ ಧೈರ್ಯವಿಲ್ಲದಿರೆ ನಿಜಶರಣ ಕಿವಿಮುಚ್ಚಿಕೊಂಡು ಶಿವ ಮಂತ್ರ ಜಪಿಸುತ್ತ ಆ ಸ್ಥಳವನ್ನು ತ್ಯಜಿಸಬೇಕು.

ರೇಕಮ್ಮನವರ ಈ ವಿಚಾರ ಮಿಕ್ಕ ಶರಣರಿಗೆ ಸಲ್ಲ, ಇದು ಆಗಮ ನಿಯುಕ್ತ ಅಭಿಪ್ರಾಯ ಅದನ್ನು ಒಪ್ಪಿದ ಶರಣರೂ ಇದ್ದರೆಂಬುದನ್ನು ಇದು ಸೂಚಿಸುತ್ತದೆ. ಗುರು ಮಾರ್ಗಾಚಾರದಲ್ಲಿ ನಿಂದ ಶಿವಲಿಂಗಧಾರಿಗಳೆಲ್ಲ ಪರಶಿವಲಿಂಗವೆಂದು ನಂಬಿ ಅವರಿಗೆ ಅರ್ಥ, ಪ್ರಾಣ, ಅಭಿಮಾನವನ್ನು ಅರ್ಪಿಸುವುದು ಶಿವಾಚಾರವೆಂದು ವಿವರಿಸುತ್ತಾರೆ. ಶಿವಾಚಾರದ ವೈಶಿಷ್ಟ್ಯ ಸಾಮಾಜಿಕ ಸಂಘಟನಾ ಶಕ್ತಿಯಲ್ಲಡಗಿದೆ, ಸಮಾಜ ರಚನೆ, ಸಮಾಜ ಸ್ಥಿರತೆ, ಸಮಾಜ ಸಂಘಟನೆಗಳಿಗೆ ಶಿವಾಚಾರ ಅಡಿಗಲ್ಲಾಗಿದೆ. ವ್ಯಕ್ತಿ ಸಮಾಜಗಳಿಗೂ ರೀತಿ ನೀತಿಗಳಿಗೂ ಧರ್ಮಧ್ಯೇಯಗಳಿಗೂ ಉತ್ತೇಜಕವಾಗಿ ವಜ್ರ ಕವಚವಾಗಿದೆ ಎಂದು ಹೇಳಿ ಶಿವಾಚಾರದಲ್ಲಿ ಸಾಮಾಜಿಕ ಸ್ವಾತಂತ್ರ್ಯ ಸರ್ವ-ಸಮಾನತೆ, ಅನ್ಯೋನ್ಯ-ಸಹೋದರತ್ವ ಇವು ಮುಖ್ಯ ಆಧಾರ ಸ್ತಂಭವಾಗಿದೆಯೆಂದು ಹೇಳಿರುವುದು ಸರ್ವ ಸಮತ್ವವಾದ ವಿಚಾರವೆನಿಸಿದೆ.

ವಿಶ್ವಾಸದಿಂದ ಭಕ್ತನಾಗಿ ಆ ವಿಶ್ವಾಸದೊಳಗಣ ನಿಷ್ಠೆಯಿಂದ ಮಹೇಶನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವದಿಂದ ಪ್ರಾಣಲಿಂಗಿಯಾಗಿ, ಆ ಸ್ವಾನುಭಾವದೊಳಗಣ ಅರಿವಿನಿಂದ ಶರಣನಾಗಿ ಅರಿವು ನಿಜದಲ್ಲಿ ಸಮಾನವಾಗಿ ಐಕ್ಯ ಸ್ಥಲವಾದ ವಿಷಯವನ್ನು ಸಾದ್ಯಂತವಾಗಿ ವಿವರಿಸಿ ಷಟ್‌ಸ್ಥಲದ ವಿಚಾರ ಮುಗಿಸುವರು.

ವೀರಶೈವಕ್ಕೆ ವಿನಯವೇ ಮುಖ್ಯವೆಂಬುದನ್ನು ಎತ್ತಿ ತೋರಿಸಿರುವರು. ಬಾವಿಯಲ್ಲಿ ಬೇಕಾದಷ್ಟು ನೀರು ತುಂಬಿ ಕೊಂಡಿರಲಿ, ಅಲ್ಲಿ ಬಿಟ್ಟ ಕೊಡವು ಬಾಗದಿದ್ದರೆ ಒಂದು ಹನಿ ನೀರು ಕೂಡ ಆ ಕೊಡದಲ್ಲಿ ಒಳಗೆ ಹೋಗಲಾರದು. ತುಂಬಬೇಕಾದರೆ ಬಾಗಬೇಕು, ಬೆಳೆಯಬೇಕಾದರೆ ನಮಸ್ಕರಿಸಬೇಕು, ನಂಬಬೇಕು, ಎಂದು ಸುಂದರ ದಿನ ನಿತ್ಯದಲ್ಲಿ ಎಲ್ಲರ ಅನುಭವಕ್ಕೆ ಬರುವ ಸಾದೃಶ್ಯದಿಂದ ವಿವರಿಸಿರುವರು. ಹೀಗೆ ಇಷ್ಟಲಿಂಗ, ಶರಣಸತಿ–ಲಿಂಗಪತಿ, ಅನುಭಾವ, ಶಿವಯೋಗ, ಇತರಯೋಗಗಳು ಲಿಂಗಾಂಗ–ಸಾಮರಸ್ಯ ಮುಂತಾದವುಗಳನ್ನು ವಿವರವಾಗಿ ನಿವೇದಿಸುತ್ತಾ ಶರಣರು ಸಾರಿದ ಧರ್ಮವನ್ನು ವಿವರಿಸುವರು.

ತಾನು ಒಳ್ಳೆಯವನಾಗಿದ್ದರೆ, ಎಲ್ಲರೂ ತನಗೆ ಒಳ್ಳೆಯವರಾಗುತ್ತಾರೆ. ತಾನು ಕೆಟ್ಟವನಾದರೆ ತನಗೆ ಎಲ್ಲರೂ ಕೆಟ್ಟವರಾಗುತ್ತಾರೆ. ತಾನು ಒಳ್ಳೆಯವನಾಗಿ ಜನರು ಕೆಟ್ಟವರಾದರೆ ಅದು ತನ್ನ ದುರ್ದೈವ,ತಾನು ಕೆಟ್ಟವನಾಗಿ ಜನರು ತನಗೆ ಒಳ್ಳೆಯವರಾದರೆ ಅದು ತನ್ನ ಸುದೈವ ಎಂದು ಅಖಂಡೇಶ್ವರ ವಚನದ ಕರ್ತೃ ಷಣ್ಮುಖಸ್ವಾಮಿ ವಚನದ ಆಧಾರದಿಂದ ವಿವರಿಸಿರುವರು.

ಕೊನೆಗೆ ವೀರಶೈವದ ಇಂದಿನ ಸ್ಥಿತಿಯನ್ನು ಮನನಂಬುಗುವಂತೆ ನಿವೇದಿಸಿರುವರು. ವೀರಶೈವರು ಇಂದು ಕರ್ನಾಟಕದಲ್ಲಿ $1\frac{1}{2}$ ಕೋಟಿ, ಮಹಾರಾಷ್ಟ್ರದಲ್ಲಿ 65 ಲಕ್ಷ, ಆಂಧ್ರದಲ್ಲಿ 60 ಲಕ್ಷ, ತಮಿಳುನಾಡಿನಲ್ಲಿ 45 ಲಕ್ಷ, ಕೇರಳದಲ್ಲಿ 22 ಲಕ್ಷ ಹೀಗೆ ಸುಮಾರು ನಾಲ್ಕು ಕೋಟಿ ಜನ ಇರುವರು ಆದರೆ,

ಸಮಾಜವಿದೆ, ಸಂಘಟನೆಯಿಲ್ಲ,
ಇತಿಹಾಸವಿದೆ, ಅಧ್ಯಯನವಿಲ್ಲ,
ಸಂಸ್ಕೃತಿ ಇದೆ, ಸಂಹನವಿಲ್ಲ,
ಪರಂಪರೆಯಿದೆ, ಪರಿಣಾಮವಿಲ್ಲ,
ದರ್ಶನವಿದೆ, ಮಾರ್ಗದರ್ಶನವಿಲ್ಲ,
ಅನುಭವವಿದೆ, ಅನುಷ್ಠಾನವಿಲ್ಲ,
ಸಿದ್ಧಾಂತವಿದೆ, ಸಾಧನೆ ಸಿದ್ಧಿಯಿಲ್ಲ,

ಎಂದು ನೈಜ ಸ್ಥಿತಿಯನ್ನು ಧೈರ್ಯದಿಂದ ಹೇಳಿರುವರು, ಇದು ಮಹತ್ವದ ಗ್ರಂಥ. ಶ್ರೀ ಪಾಟೀಲರಿಗೆ ಅಭಿನಂದನೆ ಸಲ್ಲಿಸಿ ವಿರಮಿಸುತ್ತೇನೆ.

ಕೆಲಗೇರಿ ರೋಡ, ಸಪ್ತಾಪೂರ, ಡಾ| ಆರ್. ಸಿ. ಹಿರೇಮಠ
ಧಾರವಾಡ–೮ ವಿಶ್ರಾಂತ ಕುಲಪತಿ.
ದಿ: 27–6–1994. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

“ವೀರಶೈವ ದರ್ಶನ ಸಾರ” ವನ್ನು ಹೀರುವ ಮೊದಲು-

ಒಂದು ಪರಿಪೂರ್ಣ ಧರ್ಮ ಅಥವಾ ವಿಶ್ವಮಾನ್ಯ ಧರ್ಮವೆಂದರೆ ಹೇಗಿರಬೇಕೆಂಬುದನ್ನು ತಿಳಿದುಕೊಳ್ಳಬೇಕಾದರೆ ವೀರಶೈವ ಧರ್ಮದ ತತ್ವ ಹಾಗೂ ಸಿದ್ಧಾಂತಗಳನ್ನು ಆಳವಾಗಿ ಅಭ್ಯಸಿಸಿ ತಿಳಿದುಕೊಳ್ಳಬೇಕು. ಅದೊಂದು ಆಚಾರ ಪ್ರಧಾನವಾದ ಹಾಗೂ ಹೃದಯ ಪ್ರಧಾನವಾದ ಮಾನವ ಧರ್ಮ. ಆಚಾರ-ಕ್ರಿಯೆ-ಜ್ಞಾನಗಳ ಸುಂದರ ಸಮನ್ವಯವನ್ನು ಅಲ್ಲಿ ಕಾಣಬಹುದು. ಅನೇಕ ದೇಶಗಳ ಸಂವಿಧಾನಗಳ ಆಧಾರದ ಮೇಲೆ ನಮ್ಮ ದೇಶಕ್ಕೆ ಹೀಗೆ ಒಂದು ಒಳ್ಳೆಯ ಸಂವಿಧಾನ ರಚಿಸಲ್ಪಟ್ಟಿದೆಯೋ ಹಾಗೆ ವಿಶ್ವದ ಮುಖ್ಯ ಧರ್ಮಗಳಲ್ಲಿಯ ಸತ್ವಪೂರ್ಣ ಅಂಶಗಳನ್ನೆತ್ತಿಕೊಂಡು ಅನುಭಾವಿಗಳಿಂದ ಈ ಧರ್ಮ ರೂಪಿಸಲ್ಪಟ್ಟಿದೆ. ಅದರ ತತ್ವ ಹಾಗೂ ಸಿದ್ಧಾಂತಗಳು ಸಮಗ್ರ ಜಗತ್ತಿಗೆ ಸರ್ವ ಕಾಲದಲ್ಲಿ ಅನ್ವಯಿಸುವಂಥವುಗಳಿವೆ.

ವೀರಶೈವ ಸಿದ್ಧಾಂತದ ಪ್ರಮುಖ ತತ್ವಗಳೆಂದರೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು. ಇವುಗಳ ಸಾಧನೆಯ ಸುಲಭ ಮಾರ್ಗವನ್ನು ಅರಿಯತಬೇಕು- ಮತ್ತು ನನ್ನಂತಹ ಇತರ ಜಿಜ್ಞಾಸುಗಳಿಗೆ ಸರಳ ಹಾಗೂ ಸಂಕ್ಷಿಪ್ತ ರೀತಿಯಲ್ಲಿ ತಿಳಿಸಬೇಕು ಎನ್ನುವ ಇಚ್ಛೆ ಬಹಳ ದಿನಗಳಿಂದ ಇತ್ತು. ಅದರ ಜೊತೆಗೆ ವೀರಶೈವರು ತಿಳಿದುಕೊಂಡು ಸಾಧಿಸಬೇಕಾದ ಇನ್ನಿತರ ಕೆಲವು ವಿಷಯಗಳನ್ನು ಸಂಗ್ರಹಿಸಿ ಈ ಗ್ರಂಥದಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ.

ಬೇರೆ ಸಮಾಜದಿಂದ ವೀರಶೈವರನ್ನು ಬೇರ್ಪಡಿಸಿ ಗುರುತಿಸಲಿಕ್ಕೆ ಇರುವ ಲಾಂಛನಗಳೇ ಅಷ್ಟಾವರಣಗಳು. ಅವು ಮನುಷ್ಯನನ್ನು ದುಶ್ಚಟ,ದುರ್ಗುಣ ಹಾಗೂ ದುರಾಸೆಗಳಿಂದ ದೂರವಿರಿಸಿ ಅಂತರಂಗದ ಆಧ್ಯಾತ್ಮಿಕ ತೇಜಸ್ಸನ್ನು ರಕ್ಷಿಸುವವು. ಅಷ್ಟಾವರಣಗಳ ಕಾರ್ಯಾಚರಣೆಯಿಂದ ವ್ಯಕ್ತಿಯ ಅಂತರಂಗ ಬಹಿರಂಗಗಳು ಶುದ್ಧಿಗೊಳ್ಳುವವು. ಇವು ಹುಟ್ಟಿನಿಂದ ಬರುವಂಥವುಗಳಲ್ಲ. ಸಂಸ್ಕಾರಗತ ಸಾಧನೆಯಿಂದ ರೂಪುಗೊಳ್ಳುವಂಥವುಗಳು. ಪಂಚಾಚಾರಗಳು, ಸಾಮಾಜಿಕ ತತ್ವಗಳಷ್ಟೇ ಅಲ್ಲ, ವೀರಶೈವನ ಧ್ಯೇಯಗಳಾಗಿವೆ. ನೀತಿ ಧರ್ಮಗಳೆರಡರ ಅವಿನಾಭಾವ ಸಂಬಂಧವನ್ನು ಬೆಳೆಸಲು ಅನುವು ಮಾಡಿಕೊಡುತ್ತವೆ. ಪಂಚಾಚಾರಗಳಿಂದ ಪಂಚ ಅಂಗಗಳು, ಪಂಚಪಾತಕಗಳು, ಪಂಚ ಸೂತಕಗಳು ಪರಿಹಾರವಾಗುತ್ತವೆ. ಆದ್ದರಿಂದ ಪಂಚಾಚಾರಗಳನ್ನರಿಯದಿದ್ದರೆ ಮಾನವನಿಗೆ ಮೋಕ್ಷವಿಲ್ಲವೆಂದು ಹೇಳುತ್ತಾರೆ. ತಾತ್ವಿಕ ಸಿದ್ಧಾಂತ, ಧಾರ್ಮಿಕ ಆಚರಣೆಯ ಮಾರ್ಗ ಎರಡನ್ನೂ ಷಟ್‌ಸ್ಥಲಗಳು ಸಮಾವೇಶಗೊಳಿಸುತ್ತವೆ. ಜನನ ಮರಣದ ಜಂಜಾಟದಿಂದ ಪಾರಾಗಿ ನಿತ್ಯ ಸುಖ ಪಡೆಯಲಿಕ್ಕೆ

ಅಂದರೆ ಮುಕ್ತಿಯನ್ನು ಹೊಂದುವುವಕ್ಕೆ ಆರು ಹಂತಗಳನ್ನು ದಾಟಿ ಬರಬೇಕಾಗುತ್ತದೆ. ಅವೇ ಷಟ್‌ಸ್ಥಲಗಳು.

ಈ ಜಗತ್ತೇ ಒಂದು ಪ್ರಯೋಗ ಶಾಲೆ. ಧಾರ್ಮಿಕ ಆಚರಣೆ ಸತ್ವಶಾಲಿಯಾಗಬೇಕಾದರೆ ತಾತ್ವಿಕ ಸಿದ್ಧಾಂತದ ಬುನಾದಿಯಿರಬೇಕು. ಮತ್ತು ತತ್ವವೆನ್ನುವದು ಆಚರಣೆಯೊಡನೆ ಬೆರೆತು ಜೀವನದಲ್ಲಿ ಹಾಸು ಹೊಕ್ಕಾಗಬೇಕು. ವೀರಶೈವನಾದವನು ಮೂರು ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ನಿಜವಾದ ವೀರಶೈವನಾಗುವನು. ಧರ್ಮ ಸಂಸ್ಕಾರವಿಲ್ಲದೆ ಯಾರೂ ಇರಬಾರದೆಂದು ವೀರಶೈವ ಧರ್ಮ ಹೇಳುತ್ತದೆ.

ವೀರಶೈವ ಧರ್ಮದ ಕಡ್ಡಾಯ ನಿಯಮವೆಂದರೆ ವಿಶ್ವದಾಕಾರವನ್ನು ಪ್ರತಿನಿಧಿಸುವ ಇಷ್ಟಲಿಂಗ ಧಾರಣೆ. ಅದನ್ನು ಹೇಗೆ ಪಡೆಯಬೇಕು ಹಾಗೂ ಹೇಗೆ ಪೂಜಿಸಬೇಕು, ಯಾವ ಯಾವ ತತ್ವ ಸಿದ್ಧಾಂತಗಳನ್ನು ಹೇಗೆ ಪಾಲಿಸಬೇಕು ಎಂದು ಇಲ್ಲಿ ತಿಳಿಸುವದರ ಜೊತೆಗೆ ಅನುಭಾವ, ಶಿವಯೋಗ ಮತ್ತು ಇತರ ಯೋಗಗಳ ಬಗ್ಗೆ ವಿವೇಚಿಸಲಾಗಿದೆ. ಶರಣಸತಿ ಲಿಂಗ ಪತಿ, ಸಾಮರಸ್ಯ ಮತ್ತು ವೀರಶೈವತ್ವ ಇವುಗಳ ಪರಿಕಲ್ಪನೆ ನೀಡಲಾಗಿದೆ. ಮತ್ತು ಧೃತಿ, ಕ್ಷಮೆ, ದಮೆಗಳಿಗೆ ಧರ್ಮದಲ್ಲಿ ಯಾವ ವಿಶಿಷ್ಟ ಸ್ಥಾನ ಇದೆ,ಧ್ಯಾನ-ಮೌನ,ಪ್ರಾರ್ಥನೆಗಳಿಗೆ ಅದರಲ್ಲೂ ಸಮುದಾಯ ಪ್ರಾರ್ಥನೆಗೆ ಎಷ್ಟು ಮಹತ್ವ ಇದೆ ಎಂಬುದನ್ನು ಸಂಕ್ಷಿಪ್ತದಲ್ಲಿ ವಿವರಿಸಲಾಗಿದೆ.

ಪ್ರತಿಯೊಂದು ಧರ್ಮವೂ ಸ್ವತಂತ್ರವಾಗಿದೆ. ಅವರವರ ಧರ್ಮವನ್ನು ಅವರ-ವರು ಪಾಲಿಸಲಿಕ್ಕೆ ಯಾವ ಅಭ್ಯಂತರವೂ ಇಲ್ಲ. ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆ ಇರಬೇಕೆಂಬುದು ವೀರಶೈವ ಧರ್ಮದ ಪ್ರತಿಪಾದನೆ. ಇಂದಿನ ಕಾಲದ ಬಹುತೇಕ ವೀರಶೈವರ ಆಚರಣೆ ನೋಡಿದರೆ ಆ ಧರ್ಮದ ಶ್ರೇಷ್ಠತೆ ಕನಸುಮನಸ್ಸಿನಲ್ಲಿಯೂ ಸುಳಿಯಲಾರದು. ಯಾವುದೇ ಧರ್ಮದ ಶ್ರೇಷ್ಠತೆಯನ್ನು ಮೆರೆಯಬೇಕಾದರೆ, ಸಮಾಜ ಎಚ್ಚರಗೊಳ್ಳಬೇಕಾದರೆ ಅದರ ತತ್ವ ಹಾಗೂ ಸಿದ್ಧಾಂತಗಳ ಅರಿವು-ಆಚರಣೆಯಿರಬೇಕಾಗುತ್ತದೆ.

ಧರ್ಮವಿರುವುದು ಬೋಧಿಸಲಿಕ್ಕಷ್ಟೆ ಅಲ್ಲ, ಆಚರಿಸಲಿಕ್ಕೆಯೂ ಇದೆ.ಆದರೆ ಇಂದು ನಾವು ಸಾಮಾನ್ಯವಾಗಿ ಕಾಣುತ್ತಿರುವದೇನು ? ಧರ್ಮ ಆಚರಿಸುವವರಿಗಿಂತ ಬೋಧಿಸುವವರೇ ಹೆಚ್ಚಾಗಿದ್ದಾರೆ..ಧರ್ಮದ ಬಗ್ಗೆ ಮಾತನಾಡುವದು ಮತ್ತು ಅದನ್ನು ಕೇಳುವದು ಜನರಿಗೆ ಒಂದು ಚಟವಾಗಿ ಪರಿಣಮಿಸಿದೆ. ಇದು ಒಳ್ಳೇ ಪ್ರವೃತ್ತಿಯಲ್ಲ, ಇದರಿಂದ ತಾವೂ ಕೆಡುತ್ತಾರೆ ಇತರರನ್ನೂ ಕೆಡಿಸುತ್ತಾರೆ. ವ್ಯಕ್ತಿಯು ಎಷ್ಟೇ ದೊಡ್ಡವನಿರಲಿ, ಸಮಾಜಕ್ಕಿಂತ ದೊಡ್ಡವನಲ್ಲ. ನೈತಿಕ ಹಾಗೂ ಸಾಮಾಜಿಕ

ರಂಗದಲ್ಲಿ, ಸಮಾಜದ ಸ್ಥಿತಿ ಅವನತಿಯತ್ತ ನಡೆದದ್ದನ್ನು ಎಲ್ಲೆಲ್ಲೂ ಕಾಣಬಹುದು. ಸಮಾಜೋದ್ಧಾರ ಮಾಡಬೇಕಾದ ಎಷ್ಟೋ ಜನ ಸಮಾಜದ ವಿಧ್ವಂಸಕರಾಗಿರುವದು ಒಂದು ವಿಪರ್ಯಾಸ.

ಸಾಮಾನ್ಯರಿಗೂ ವೀರಶೈವ ಧರ್ಮದ ತತ್ವ ಸಿದ್ಧಾಂತಗಳ ಜ್ಞಾನವಿರಲಿ ಅನ್ನುವ ಉದ್ದೇಶದಿಂದ ಅವುಗಳ ಆಚರಣೆ ಹಾಗೂ ಮಹತ್ವ ಕುರಿತು ಸ್ಥೂಲ ಹಾಗೂ ಸಂಕ್ಷಿಪ್ತವಾಗಿ ಈ ಗ್ರಂಥದಲ್ಲಿ ಬರೆಯಲಾಗಿದೆ. ಅನ್ಯ ಸಮಾಜಗಳೊಡನೆ ಹೋಲಿಸಿ ನೋಡಿದರೆ ವೀರಶೈವರಲ್ಲಿ ಸಂಘಟನೆಯಿಲ್ಲದಿರುವದು ಎದ್ದು ಕಾಣುತ್ತದೆ. ಸಾಮೂಹಿಕ ಭಜನೆ, ಪ್ರಾರ್ಥನೆ, ಧ್ಯಾನ, ಗೋಷ್ಠಿ, ಚಿಂತನೆ ಇವು ಕಡಿಮೆ. ಈ ಬಗೆಯ ವ್ಯಾಪಕ ಕಾರ್ಯಾಚರಣೆಗೆ ಪ್ರಾಶಸ್ತ್ಯವನ್ನೀಯಬೇಕೆಂದೂ ಸಹ ಇದರಲ್ಲಿ ಪ್ರತಿಪಾದಿಸಲಾಗಿದೆ. ವ್ಯಕ್ತಿ–ಪ್ರೇಮ ಬೇಡ, ತತ್ವ–ಪ್ರೇಮವಿರಲಿ, ಶಬ್ದ–ಪ್ರಮಾಣ ಬೇಡ ಆಳವಾದ ಅನುಭಾವ ಪ್ರಮಾಣವಿರಲಿ. ಹಾಗೂ ವೀರಶೈವರಿಗೆ ವೈಚಾರಿಕತೆಯೇ ಪ್ರಾಮುಖ್ಯವಾಗಿರಲಿ ಎಂಬುದಕ್ಕೆ ಭಿನ್ನಾಭಿಪ್ರಾಯವಿರಲಾರದು. ಈ ಒಂದು ಹಿನ್ನೆಲೆಯಲ್ಲಿ ವಿಷಯ ವಿವೇಚನೆಯನ್ನು ವೈಚಾರಿಕ ಹಾಗೂ ವಿವರಣಾತ್ಮಕ ಆದರೆ ಸಂಕ್ಷಿಪ್ತ ರೀತಿಯಲ್ಲಿ ಮಾಡಲಾಗಿದೆ.

ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ ಅನೇಕ ಶ್ರೇಷ್ಠ ಕೃತಿಗಳನ್ನು ರಚಿಸಿ ಘನ–ವಿದ್ವಾಂಸರೆಂದು ಖ್ಯಾತಿ ಪಡೆದ ಶ್ರೀ ಮ|ನಿ|ಪ್ರ|ಜ| ಅನ್ನದಾನೀಶ್ವರ ಮಹಾಸ್ವಾಮಿಗಳು, ಸಂಸ್ಥಾನಮಠ ಮುಂಡರಗಿ ಇವರು ಈ ಗ್ರಂಥದ ಪ್ರಕಟಣೆ ಹಾಗೂ ಪ್ರಕಾಶನದ ಜವಾಬ್ದಾರಿ ತೆಗೆದುಕೊಂಡದ್ದಕ್ಕೆ ಮತ್ತು ಆಶೀರ್ವಚನ ನೀಡಿದ್ದಕ್ಕೆನಾನುಅತ್ಯಂತ ಭಕ್ತಿ ಪೂರ್ವಕವಾಗಿ ಪ್ರಣಾಮಗಳನ್ನುಸಲ್ಲಿಸುತ್ತೇನೆ.

ನನ್ನ ಇಚ್ಛೆಯ ಮೇರೆಗೆ ನಾಡಿನ ಖ್ಯಾತ ಸಾಹಿತಿಗಳೂ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆದ ಡಾ: ಆರ್.ಸಿ. ಹಿರೇಮಠ ಅವರು ವಿದ್ವತ್ಪೂರ್ಣ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥದ ಮೊದಲನೇ ಅವೃತ್ತಿಗಾಗಿ ಗ್ರಂಥಕರ್ತನಿಗೆ ಸಲ್ಲಬೇಕಾದ ಪ್ರತಿಫಲವನ್ನು ಶ್ರೀ ಮಠದ ಸಾಹಿತ್ಯಾಭಿವೃದ್ಧಿ ಕಾರ್ಯಕ್ಕೆ ಬಿಟ್ಟುಕೊಡಲಾಗಿದೆ.

ಈ ಗ್ರಂಥವನ್ನು ಹೊರ ತರಲು ಯಾರಿಂದ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ನೆರವು ಪಡೆಯಲಾಗಿದೆಯೋ ಅವರಿಗೆಲ್ಲ ತುಂಬು ಹೃದಯದ ಕೃತಜ್ಞತೆಗಳು.

ಓದುಗರ ಯೋಗ್ಯ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ಬೆಳಗಾಂವಿ. ಬಿ. ಎಸ್. ಪಾಟೀಲ

ದಿನಾಂಕ : 5–7–94.

.... ಅನುಕ್ರಮಣಿಕೆ ....

ಶ್ರೀ ವಾಣಿ ೪-೫

ಮುನ್ನುಡಿ 6-9

ವೀರಶೈವ ದರ್ಶನಾಸಾರವನ್ನು ಹೀರುವ ಮೊದಲು 10-12

೧. ವೀರಶೈವ ಧರ್ಮ ಸಾಗಿ ಬಂದ ದಾರಿ. 1- 4

೨. ತತ್ವ ಮತ್ತು ಸಿದ್ಧಾಂತಗಳು. 5- 6

೩. ಅಷ್ಟಾವರಣ :— 6

ಗುರು. 7- 9

ಲಿಂಗ. 9-13

ಜಂಗಮ. 13-15

ವಿಭೂತಿ. 15-18

ರುದ್ರಾಕ್ಷ. 18-22

ಮಂತ್ರ. 22-24

ಪಾದೋದಕ. 24-27

ಪ್ರಸಾದ. 27-30

೪. ಪಂಚಾಚಾರ :— 31

ಲಿಂಗಾಚಾರ. 31-32

ಸದಾಚಾರ. 33-35

ಶಿವಾಚಾರ. 35-37

ಗಣಾಚಾರ. 37-39

ಭೃತ್ಯಾಚಾರ. 40-42

೫. ಷಟ್‌ಸ್ಥಲ :— 43-44

ಭಕ್ತ. 44-45

ಮಹೇಶ. 46-48

ಪ್ರಸಾದಿ. 48-51

ಪ್ರಾಣಲಿಂಗಿ. 52-53

ಶರಣ. 53-56

ಐಕ್ಯ. 56-60

೬.	ಅನುಭಾವ.	61–64
೭.	ಇತರ ಯೋಗಗಳು :—	65
	ಮಂತ್ರಯೋಗ.	„
	ಲಯಯೋಗ.	66
	ಹಠಯೋಗ.	„
	ರಾಜಯೋಗ.	67
	ಪೂರ್ಣಯೋಗ.	67–68
೮.	ಶಿವಯೋಗ.	69–73
೯.	ಶರಣರು ಸಾರಿದ ಧರ್ಮ.	74–79
೧೦.	ಶರಣಸತಿ ಲಿಂಗಪತಿ.	80–84
೧೧.	ಲಿಂಗಾಂಗ ಸಾಮರಸ್ಯ.	85–87
೧೨.	ಇಷ್ಟಲಿಂಗ.	88–92
೧೩.	ಧೃತಿ, ಕ್ಷಮೆ, ದಮೆ.	93–98
೧೪.	ವೀರಶೈವತತ್ವ.	99–103
೧೫.	ಧ್ಯಾನ, ಮೌನ, ಪ್ರಾರ್ಥನೆ	104–114
೧೬.	ವೀರಶೈವ ಧರ್ಮದ ಲೋಕ ಸಂಗ್ರಹ ದೃಷ್ಟಿ.	115–119
	ಗ್ರಂಥ ಋಣ	120

....

ವೀರಶೈವ ದರ್ಶನ ಸಾರ

.... ಪ್ರಸ್ತಾವನೆ ....

ವೀರಶೈವ ಧರ್ಮ ಶೈವ ಧರ್ಮದಂತೆ ನಿಸರ್ಗ ಸಹಜವಾಗಿ ಹುಟ್ಟಿ ಬಂದಿದೆ. ಮೂಲ ಸ್ಥಾಪಕನಾರು ಎಂಬುವದನ್ನು ತಿಳಿದುಕೊಳ್ಳುವ ಗೋಜಿಗೆ ಹೋಗದೆ ಅನುಭಾವಿಗಳ ಅನುಭವದಿಂದ ಹುಟ್ಟಿದೆ ಎಂದು ಭಾವಿಸಿದರೆ ತಪ್ಪೇನಿಲ್ಲ. ಬೌದ್ಧ, ಜೈನ, ಕ್ರೈಸ್ತ, ಸಿಖ್ ಮತ್ತು ಮಹಮ್ಮದೀಯ ಧರ್ಮಗಳ ಹಾಗೆ ಅದು ಏಕ ವ್ಯಕ್ತಿಯಿಂದ ಸ್ಥಾಪಿತವಾದ ಧರ್ಮವಲ್ಲ ಎಂಬುದರಲ್ಲಿ ಮಾತ್ರ ಎಳ್ಳಷ್ಟೂ ಸಂಶಯವಿಲ್ಲ.

ಭಾರತವು ಅಧ್ಯಾತ್ಮ ಭೂಮಿ ಎಂದು ಖ್ಯಾತಿ ಪಡೆದಿದೆ. ಭಾರತದ ಸಂಸ್ಕೃತಿ ಧರ್ಮದ ರೂಪ ತಳೆದು ಸಾರ್ವತ್ರಿಕ ಸತ್ವದಿಂದ ವೀರಶೈವ ಧರ್ಮದ ಉಗಮಕ್ಕೆ ಅನುವು ಮಾಡಿಕೊಟ್ಟಿದೆ. ಈ ಧರ್ಮದಲ್ಲಿ ಸಾಧಕನು ದೇವರೇ ಆಗುತ್ತಾನೆ. ಈ ಕಾರಣದಿಂದಲೇ ಪಂಚಾಚಾರ್ಯರು ಬಸವಾದಿ ಪ್ರಮಥರು, ವಿರಕ್ತರು, ಶಿವಯೋಗಿಗಳು, ಶರಣರು ಹಾಗೂ ಮಹಾಪುರುಷರು ಕಾಲಕಾಲಕ್ಕೆ ಈ ಧರ್ಮದಲ್ಲಿ ಜನ್ಮಿಸುತ್ತಲೇ ಬಂದಿದ್ದಾರೆ. ಆತ್ಮ ಸಾಕ್ಷಾತ್ಕಾರದ ಸಿದ್ಧಿಯನ್ನು ತೋರಿಸುತ್ತಲೇ ಬಂದಿದ್ದಾರೆ.

ವೀರಶೈವ ಧರ್ಮದಲ್ಲಿ ತನ್ನ ಸ್ವಸ್ವರೂಪದ ಜ್ಞಾನ ಮಾಡಿಕೊಳ್ಳುವದಕ್ಕಾಗಿ ಇಷ್ಟಲಿಂಗ ಅರ್ಚನೆ ಮೊದಲ ಪ್ರಾರಂಭವಾಯಿತು. ಅದನ್ನು ಅರ್ಚಿಸುತ್ತಾ ಅಂತರಂಗದ ಅರಿವನ್ನು ದರ್ಶನ ಮಾಡಿಕೊಂಡು ತನ್ನಲ್ಲಿರುವ ದೇವರಂತೆ ತಾನಾಗುವ ಘನ ಉದ್ದೇಶ ಹೊಂದಿದವನೇ ಲಿಂಗವಂತನೆಂದೆನಿಸಿಕೊಂಡನು. ಅಂದರೆ ವ್ಯಕ್ತಿತ್ವದ ಆತ್ಮ ವಿಕಾಸದ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳುವುದೇ ವೀರಶೈವ ಧರ್ಮದ ಗುರಿ. ಬಹುಶಃ ಅದಕ್ಕೆಂದೇ ವೀರಶೈವರಿಗೆ ಲಿಂಗವಂತ ಎಂದು ಹೇಳುತ್ತಿರಬಹುದು.

ಮನುಷ್ಯನ ಭವರೋಗವನ್ನು ಪರಿಹರಿಸಿ ಅವನನ್ನು ದಿವ್ಯ ಜೀವಿಯನ್ನಾಗಿ ಮಾಡುವ ಶಕ್ತಿ ವೀರಶೈವ ಧರ್ಮಕ್ಕೆ ಹೇಗೆ ಇದೆಯೋ ಹಾಗೆ ಅವನು ಊಟ ಮಾಡುವ ಅನ್ನಕ್ಕೆ ಪ್ರಸಾದ ರೂಪ ತಂದು ಕೊಟ್ಟು ಅವನಿಗೆ ದೈಹಿಕ ಸಂಪತ್ತನ್ನೂ ಹಾಗೂ ಮಾನಸಿಕ ಶಾಂತಿ ಸಮಾಧಾನಗಳನ್ನು ದೊರಕಿಸಿಕೊಡುವ ಶಕ್ತಿಯೂ ಅದಕ್ಕಿದೆ. ಜನ್ಮ ಜನ್ಮಾಂತರದ ಪಾಪಗಳನ್ನುಳಿದು ನಿರ್ಮಲನನ್ನಾಗಿ ಮಾಡುವ ಸಾಮರ್ಥ್ಯವೂ ಇದೆ.

ಇಂಥದನ್ನೆಲ್ಲ ಸಾಧಿಸಬೇಕಾದರೆ ಮನುಷ್ಯನು ಮೊದಲು ಸಾಧಕನಾಗಬೇಕು. ನಂತರ ತನ್ನೊಳಗೆ, ತನ್ನ ಸಲುವಾಗಿಯೇ, ಗುಪ್ತವಾಗಿ ಹುದುಗಿಕೊಂಡಿರುವಂಥ ಆದಿ ಶಕ್ತಿಯ ಪರಿಚಯ ಮಾಡಿಕೊಳ್ಳಬೇಕು. ಇದಕ್ಕಾಗಿಯೇ ಕಾಲಕಾಲಕ್ಕೆ ಅವತರಿಸಿದ ಮಹಾತ್ಮರು ನಿರೂಪಿಸಿದ ವೀರಶೈವ ಧರ್ಮದ ತತ್ವ ಹಾಗೂ ಸಿದ್ಧಾಂತಗಳನ್ನು ತನ್ನ ಬಾಳಿನಲ್ಲಿ ಅಳವಡಿಸಿಕೊಂಡು ಆಚರಿಸುತ್ತಾ ಹೋಗಬೇಕು.

ಲೌಕಿಕ ವ್ಯವಹಾರಗಳಲ್ಲಿ ಮಗ್ನರಾಗಿರುವ ಜನರು ವೀರಶೈವ ಧರ್ಮದ ಗಹನವಾದ ತತ್ವ ಹಾಗೂ ಸಿದ್ಧಾಂತಗಳನ್ನು ಸುಲಭವಾಗಿ ತಿಳಿದುಕೊಂಡು ತಮ್ಮ ಬಾಳಿನಲ್ಲಿ ಅವುಗಳನ್ನು ಅಳವಡಿಸಿಕೊಂಡು ದಿವ್ಯಾನಂದವನ್ನು ಅನುಭವಿಸುತ್ತಾ ಪರಹಿತಕ್ಕಾಗಿ ಬಾಳುವಂತಹ ಪರಿಸ್ಥಿತಿಯನ್ನು ನಿರ್ಮಿಸಿಕೊಳ್ಳಬೇಕು.

ಭಕ್ತನಾದವನಿಗೆ ತನು, ಮನ, ಧನ, ಪರಸತಿ, ಪರರೊಡವೆಯ ಮೇಲೆ ಆಸೆ ಇರಕೂಡದು. ಅವನು ಸುಖದುಃಖಗಳನ್ನು ಸಮನಾಗಿ ಕಂಡು ಸ್ಥಿತಪ್ರಜ್ಞನಾಗಿರಬೇಕು. ಪ್ರತಿ ಪದಾರ್ಥವನ್ನು ಪ್ರಸಾದವೆಂದು ಕಾಣಬೇಕು. ಲಿಂಗನಿಷ್ಠ, ಸದಾಚಾರಿ, ಕಾಯಕಯೋಗಿ, ದಯಾಮಯಿ ಆಗಿರಬೇಕು. ನಿರಹಂಕಾರಿಯೂ ಏಕದೇವೋಪಾಸಕನೂ ಆಗಿರಬೇಕು. ಈ ಎಲ್ಲಾ ನೀತಿ ನಿಯಮಗಳನ್ನು ಸಮಸ್ತ ಮಾನವ ಕುಲ-ಕೋಟಿ ಅನುಸರಿಸಿ ಮುಕ್ತಿ ಪಡೆಯಬಹುದು. ಹೀಗೆ ವೈಚಾರಿಕ ಪರಿವರ್ತನೆಯಿಂದ, ವಿನೂತನ ನಿಯಮ ನಿಷ್ಠೆಗಳಿಂದ, ನವೀನ ಜೀವನ ಮೌಲ್ಯಗಳಿಂದ ಸಮಾಜದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲು ಶ್ರಮಿಸಿದವರು ಬಸವಾದಿ ಪ್ರಮಥರು. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ತತ್ವಗಳು ಸಾಮಾಜಿಕ, ಧಾರ್ಮಿಕ ಹಾಗೂ ನೈತಿಕ ರಂಗಗಳಲ್ಲಿ ಕ್ರಾಂತಿಯ ಕಿಡಿಗಳನ್ನು ಹೊತ್ತಿಸಿದವು. ಕಾರಣ ಅವು ವಿಶ್ವವ್ಯಾಪಕ ತತ್ವಗಳೆನಿಸಿಕೊಂಡು ಸಾಮಾಜಿಕ ಶುದ್ಧೀಕರಣಕ್ಕೆ ಮೂಲ ಮಂತ್ರಗಳಾಗಿವೆ. ಎಲ್ಲ ಯೋಗಗಳ ಅರಸು ಶಿವಯೋಗದ ಮೂಲ ಉದ್ದೇಶವಾದರೂ ಶುದ್ಧ ಸಮಾಜ ಸ್ಥಾಪನೆಯೇ ಆಗಿದೆ.

ಅಷ್ಟಾವರಣಗಳಿಂದ ರಕ್ಷಿತನಾದ ಶಿವಶರಣನು ಪಂಚಾಚಾರದ ನೀತಿಯಿಂದ ಸಂಪದ್ಭರಿತನಾಗಿ ಷಟ್‌ಸ್ಥಲ ಮಾರ್ಗದಲ್ಲಿ ಧೀರನಾಗಿ ನಡೆಯುತ್ತಾನೆ.ಮತ್ತು ಪರಮ ಗುರಿಯಾದ ಲಿಂಗಾಂಗ ಸಾಮರಸ್ಯ ರೂಪದ ಮೋಕ್ಷವನ್ನು ಪಡೆಯುವಲ್ಲಿ ಸಫಲನಾಗುತ್ತಾನೆ.

ಚನ್ನಬಸವಣ್ಣನವರು ಅಷ್ಟಾವರಣವು ಜೀವನದ ಅವಿಭಾಜ್ಯ ಅಂಗ ಎಂದು ಪ್ರತಿಪಾದಿಸಿದ್ದಾರೆ. ವೀರಶೈವ ಸಿದ್ಧಾಂತದಲ್ಲಿ ಜ್ಞಾನಕ್ಕೆ ಮಹತ್ವವಿರುವಂತೆ ಆಚರಣೆಗೂ ವಿಶಿಷ್ಟ ಸ್ಥಾನವಿದೆ. ತತ್ವಾಚರಣೆಯಿಂದ ತತ್ವ ಪುರುಷನಾಗುವ ಭಾಗ್ಯ ವೀರಶೈವರಿಗಲ್ಲದೆ ಇತರರಿಗೆ ಇಲ್ಲ. ಪಂಚಾಚಾರಗಳು ವೀರಶೈವನ ಧ್ಯೇಯವಾಗಿವೆ.

ಬಂಗಾರದಿಂದಾದ ಆಭರಣಗಳು ಬಂಗಾರವೇ ಆಗಿರುವಂತೆ ಆತ್ಮನಿಂದಾದ ಪ್ರಪಂಚವು ಆತ್ಮ ಸ್ವರೂಪವೇ ಆಗಿದೆ. ಪಂಚಾಚಾರಗಳು ಜೀವನದ ಸಂಪತ್ತು ಇದ್ದಂತೆ ಅವು ದೇಹದ ಪ್ರಾಣಯೆನಿಸಿವೆ. ಜೀವಾತ್ಮನ ಪ್ರಾಣ ಆಚಾರಗಳು, ಆಚಾರದ ಕಟ್ಟಳೆ, ಶರಣರು ನಿರೂಪಿಸಿದ್ದು, "ಆಚಾರವೆಂಬುದು ಅಗೋಚರ ನೋಡಯ್ಯ" ಎಂದು ಚನ್ನಬಸವಣ್ಣನವರು ಹೇಳುವಾಗ ಆಚಾರ ಅನಾಚಾರಗಳ ಅರ್ಥವನ್ನು ವಿವರಿಸಿದ್ದಾರೆ. ಮಾನವನನ್ನು ಉನ್ನತ ಸ್ಥಿತಿಗೆ ತರುವುದೇ ಆಚಾರವೆಂದು ಸ್ಪಷ್ಟಪಡಿಸಿದ್ದಾರೆ. ಆಚಾರ-ವಿಚಾರಗಳಿಲ್ಲದವನು ಮನುಷ್ಯನಾಗಿ ಬಾಳಲೂ ಸಹ ಅಯೋಗ್ಯ.

ಭೌತಿಕ ವಿಸ್ತೀರ್ಣತೆಯನ್ನು ಅರಿಯಲು ಮಾನವನು ಮನ, ಬುದ್ಧಿ, ಶರೀರಗಳನ್ನು ಪಳಗಿಸುವಂತೆ ಆಧ್ಯಾತ್ಮಿಕ ವಿಸ್ತೀರ್ಣತೆಯನ್ನು ಅರಿಯಲು ಆತ್ಮನನ್ನು ಪಳಗಿಸಬೇಕಾಗುತ್ತದೆ. ಈ ಕಾರ್ಯವನ್ನು ಅಷ್ಟಾವರಣ, ಪಂಚಾಚಾರ ಷಟ್‌ಸ್ಥಲಗಳು ಮಾಡುತ್ತವೆ. ಇದರಿಂದ ಧಾರ್ಮಿಕ ಮೌಲ್ಯಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಸಾಮಾಜಿಕ ಮೌಲ್ಯಗಳೊಡನೆ ಸುಸಂಗತ ರೀತಿಯಲ್ಲಿ ಸಾಗಿ ಪರಿಪೂರ್ಣ ಜೀವನ ದೃಷ್ಟಿಯ ಮಹತ್ತರ ಸಾಧನೆ ಗೈಯಲು ಅನುಕೂಲವಾಗುತ್ತದೆ.

೧. ವೀರಶೈವ ಧರ್ಮ ಸಾಗಿಬಂದ ದಾರಿ

ಯಾವುದೇ ಒಂದು ಸಮಾಜದ ಶ್ರೇಷ್ಠತೆಯನ್ನು ಅಳೆಯಬೇಕಾದರೆ ಆ ಸಮಾಜದಲ್ಲಿಯ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಿಕ್ಕೆ ಬರುವದಿಲ್ಲ. ಅದರಲ್ಲಿ ಅಡಕವಾಗಿರುವ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಪಾಶ್ಚಿಮಾತ್ಯರು ಭಾರತದೆಡೆಗೆ ಆಕರ್ಷಿತರಾಗಿರುವದು ಇಲ್ಲಿನ ಶ್ರೀಮಂತಿಕೆಗಾಗಿ ಅಲ್ಲ, ಭವ್ಯ ಸಂಸ್ಕೃತಿಯ ಸಂಪತ್ತಿಗಾಗಿ, ಆಧ್ಯಾತ್ಮಿಕತೆಯ ಆನಂದಕ್ಕಾಗಿ.

ವೀರಶೈವ ಧರ್ಮ ಜೀವಂತ ಪ್ರವಾಹವಿದ್ದಂತೆ. ಹರಿಯುವ ನದಿ ಎಲ್ಲ ಕಾಲಕ್ಕೂ ಎಲ್ಲ ಮಾರ್ಗದಲ್ಲಿಯೂ ಒಂದೇ ಸಮನಾಗಿ ಪ್ರವಹಿಸುವದು ಸಾಧ್ಯವಿಲ್ಲ. ರಭಸವಾಗಿ, ಸೌಮ್ಯವಾಗಿ, ಗುಪ್ತಗಾಮಿನಿಯಾಗಿ ಹರಿಯುತ್ತದೆ. 12 ನೇ ಶತಮಾನದ ವರೆಗೆ ಸುಪ್ತವಾಗಿ ಗುಪ್ತವಾಗಿ ಹರಿದು ಬಂದಂತೆ ಕಾಣುವ ವೀರಶೈವ ಧರ್ಮ ಬಸವಾದಿ ಪ್ರಮಥರ ಕಾಲದಲ್ಲಿ "ಜನರ, ಜನರಿಂದ, ಜನರಿಗಾಗಿ ಧರ್ಮ ಎನ್ನುವ ಹೊಸರೂಪ ಧರಿಸಿ ಉಚ್ಛ್ರಾಯ ಸ್ಥಿತಿ ತಲುಪಿತು. ವಿಶ್ವದ ಸಕಲ ಜೀವಿಗಳಿಗೆ ಸಮತೆಯನ್ನು ಬೋಧಿಸಿ ಧರ್ಮದ ದ್ವಾರವನ್ನು ತೆರೆದಿರಿಸಿತು.

ಅಲ್ಪ ಕಾಲದಲ್ಲಿ ಅಸಂಖ್ಯಾತ ಅನುಭಾವಿಗಳು ಜಾತಿ, ಮತ, ಕುಲ ಪಂಥ ಗಳೆನ್ನದೆ ದೇಶದ ಮೂಲೆ ಮೂಲೆಗಳಿಂದ ಹರಿದು ಬಂದು ಒಂದೆಡೆ ಸೇರಿ ಅನುಭಾವದ ವಿನಿಮಯ ಮಾಡಿಕೊಂಡು ಕ್ಷೀಣಿಸುತ್ತಾ ಹೊರಟಿದ್ದ ಧರ್ಮವನ್ನು ಸಮೃದ್ಧ-ಗೊಳಿಸಿದ್ದು ವಿಶ್ವದ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡ ಬೇಕಾದದ್ದು. ವರ್ಣಾಶ್ರಮವನ್ನು ರದ್ದುಗೊಳಿಸಿ ಜಾತೀಯತೆಯನ್ನು ತೊಡೆದು ಹಾಕಿ ಕಾಯಕ ದಾಸೋಹ ತತ್ವಗಳಂತಹ ಅನರ್ಘ್ಯ ರತ್ನಗಳನ್ನು ವಿಶ್ವಕ್ಕೆ ಧಾರೆ ಯೆರೆದ ವೀರಶೈವ ಧರ್ಮದ ಸಂಸ್ಕೃತಿಯನ್ನು ಕಡಿಮೆಯೆನ್ನಲಾದಿತೇ ?

ಮುಂದೆ ಸುಮಾರು 300 ವರ್ಷ ಸುಪ್ತವಾಗಿದ್ದ ಧರ್ಮ 15 ನೇ ಶತಮಾನದ ವಿಜಯನಗರದ ಅರಸ ಪ್ರೌಢದೇವರಾಯನ ಕಾಲಕ್ಕೆ ಮತ್ತೆ ಪುನರುತ್ಥಾನ ಪಡೆಯಿತು. ಪುನಃ ನೂರೊಂದು ವಿರಕ್ತರು ಉದಯಿಸಿ ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಮುಖಂಡತ್ವದಲ್ಲಿ ವೀರಶೈವ ಧರ್ಮವನ್ನು ತೇಜೋಜ್ವಲವಾಗಿ ಬೆಳಗಿದರು. ಅಂದಿನಿಂದ ಇಂದಿನವರೆಗೆ ಅದು ಸಮಪಾತಳಿಯಲ್ಲಿ ಪ್ರವಹಿಸುತ್ತಿದೆ ಎಂದು ಹೇಳಬಹುದು.

ತಮಿಳುನಾಡು, ಕೇರಳ, ಆಂಧ್ರ, ಮಹಾರಾಷ್ಟ್ರಗಳಲ್ಲಿಯೂ ಸಹಿತ ಹೆಚ್ಚಿನ ಸಂಖ್ಯೆಯ ವೀರಶೈವರಿದ್ದಾರೆ. ಕರ್ನಾಟಕದಲ್ಲಿ 1—1:2 ಕೋಟಿ, ಮಹಾರಾಷ್ಟ್ರದಲ್ಲಿ 65 ಲಕ್ಷ, ಆಂಧ್ರದಲ್ಲಿ 60 ಲಕ್ಷ, ತಮಿಳುನಾಡಿನಲ್ಲಿ 45 ಲಕ್ಷ ಮತ್ತು ಕೇರಳದಲ್ಲಿ 22 ಲಕ್ಷ ವೀರಶೈವರಿದ್ದಾರೆ. ಇದಲ್ಲದೆ ಬೇರೆ ಬೇರೆ ರಾಜ್ಯಗಳಲ್ಲಿ ಇನ್ನೂ ಕೆಲವು ಲಕ್ಷ ವೀರಶೈವರು ಹರಿದು ಹಂಚಿ ಹೋಗಿದ್ದಾರೆ. ಪರದೇಶಗಳಲ್ಲಿ ಅಂದರೆ ಇಂಗ್ಲಂಡ, ಅಮೇರಿಕಾ, ಕ್ಯಾನಡಾ, ಫ್ರಾನ್ಸ, ಜರ್ಮನಿ, ಇಟಲಿ, ಆಸ್ಟ್ರೇಲಿಯಾಗಳಲ್ಲಿಯೂ ಸಹಿತ ವೀರಶೈವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಬೇರೆ ಬೇರೆ ರಾಜ್ಯ, ಬೇರೆ ಬೇರೆ ದೇಶಗಳಲ್ಲಿರುವ ವೀರಶೈವರ ಭಾಷೆ, ನಡತೆ, ಆಹಾರ-ವಿಹಾರ ಬೇರೆ ಬೇರೆಯಾಗಿರಬಹುದು. ಆದರೆ ಮೂಲಭೂತ ಸಂಸ್ಕೃತಿಯಲ್ಲಿ ಮಾತ್ರ ಬಹುಮಟ್ಟಿಗೆ ಸಾಮ್ಯತೆಯನ್ನು ಕಾಣಬಹುದು ಭಕ್ತಿ ಪರಂಪರೆ ಆರಂಭವಾದದ್ದು ತಮಿಳುನಾಡಿನಲ್ಲಿ. ಅಲ್ಲಿಯ 63 ಪುರಾತನರ ಭಕ್ತಿಯ ಬುನಾದಿ ಭಾರತದ ಭಕ್ತಿ ಪಂಥಕ್ಕೆ ಅಡಿಪಾಯವೆಂದು ಹೇಳಬಹುದು. ತೆಲುಗಿನಲ್ಲಿ ಅನೇಕ ಕವಿಗಳು ವೀರಶೈವ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದಾರೆ. ಕರ್ನಾಟಕಕ್ಕೆ ಮಹಾರಾಷ್ಟ್ರದ ಸಂಬಂಧ ಪುರಾತನವಾದದ್ದು. 12 ನೇ ಶತಮಾನದ ಶಿವಶರಣರ ಭಕ್ತಿ ಪರಂಪರೆಯ ಗಾಢವಾದ ಪ್ರಭಾವ ಮಹಾರಾಷ್ಟ್ರದ ಸಂತ ಸಾಹಿತ್ಯದ ಮೇಲಾಗಿರುವುದನ್ನು ಗುರುತಿಸಬಹುದು. ಮಹಾರಾಷ್ಟ್ರದಲ್ಲಿರುವ ಬಹುಪಾಲು ವೀರಶೈವರು ಕನ್ನಡ ಮೂಲದವರು.

ದ್ರಾವಿಡ ಜನಾಂಗ ವಿಶ್ವದಲ್ಲಿಯೇ ಅತ್ಯಂತ ಪ್ರಾಚೀನ ಜನಾಂಗವೆಂಬುದಕ್ಕೆ ಎರಡು ಮಾತಿಲ್ಲ. ಅವರ ಜೀವನದ ತತ್ವಜ್ಞಾನ, ಸಂಸ್ಕೃತಿ, ಆಚರಣೆಗಳೇ ಶೈವ ಧರ್ಮಕ್ಕೆ ಹರಿದು ಬಂದಿರುವ ಸಾಧ್ಯತೆಯನ್ನು ಅಲ್ಲಗಳೆಯಲಿಕ್ಕಾಗುವದಿಲ್ಲ. ಹೀಗಾಗಿ ವೀರಶೈವ ಧರ್ಮ ಬಹಳ ಪ್ರಾಚೀನವಾದದ್ದು. ಹೊರಗಿನಿಂದ ಬಂದ ಆರ್ಯರು ಮತ್ತು ಇಲ್ಲಿಯ ಮೂಲ ಪುರುಷರಾದ ದ್ರಾವಿಡರಲ್ಲಿಯ ಒಡನಾಟದಿಂದ ಆರ್ಯ ಭಾಷೆಯಾದ ಸಂಸ್ಕೃತದಲ್ಲಿ ಶೈವ ಮತ್ತು ವೀರಶೈವ ಪರವಾದ ಸಾಹಿತ್ಯವನ್ನು ಕಾಣಬಹುದಾಗಿದೆ. ಶಿವಪುರಾಣ, ಶಿವಾಗಮಗಳಂತಹ ಸಂಸ್ಕೃತ ಗ್ರಂಥಗಳನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು.

ಹೀಗೆ ವೀರಶೈವ ಧರ್ಮ ಸಾಂಸ್ಕೃತಿಕವಾಗಿ ಬಹು ದೊಡ್ಡ ಪರಂಪರೆಯನ್ನು ಹೊಂದಿದೆ. ಅದರ ಬಗ್ಗೆ ವೀರಶೈವರಿಗೆಲ್ಲ ಹೆಮ್ಮೆಯಿರಬೇಕು. ಮತ್ತು ಅದನ್ನು ಅನುಸರಿಸುವಲ್ಲಿ ಅವರು ಅಭಿಮಾನ ಪಡಬೇಕು.

ಆದರೆ ನಾವು ಇಂದು ಕಾಣುತ್ತಿರುವುದೇನು ? ಕೆಲವರು ವಿದ್ಯಾವಂತರು, ಸುಶಿಕ್ಷಿತರು ಮತ್ತು ವಿಚಾರ ಶೀಲರು ಎನ್ನುವ ನೆಪದಲ್ಲಿ ಮೂಲ ಸಂಸ್ಕೃತಿಯನ್ನು ನಾಶ ಮಾಡುತ್ತಲಿದ್ದಾರೆ. ಯಾರು ತಮ್ಮ ಧರ್ಮವನ್ನು ತಾವು ರಕ್ಷಿಸುತ್ತಿಲ್ಲವೋ

ಅವರೆನ್ನು ಅವರೆ ಧರ್ಮ ರಕ್ಷಿಸಲಾರದಂತಾಗಿದೆ. ಯುವ ಜನಾಂಗವಂತೂ ತಮ್ಮ ಸಂಸ್ಕೃತಿಯ ಹಿರಿಮೆಯನ್ನು ರಕ್ಷಿಸಿ ಪ್ರಸಾರಗೊಳಿಸುವಲ್ಲಿ ಬಹಳ ಹಿಂದುಳಿದಿವೆ. ಕೆಲವೊಂದು ಧರ್ಮಕ್ಕೆ ಸಂಬಂಧಪಟ್ಟವರು ತಮ್ಮ ಧರ್ಮಲಾಂಛನಗಳನ್ನು ಹೇಗೆ ಕಾಯ್ದುಕೊಂಡು ಬಂದಿದ್ದಾರೆ ಎನ್ನುವದನ್ನು ಕಾಣಬಹುದಾಗಿದೆ. ವೀರಶೈವ ಧರ್ಮದ ಮೂಲ ಭೂತ ತತ್ವ "ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆ" ಇದನ್ನು ಅರಿತುಕೊಳ್ಳಬೇಕು. ಪ್ರತಿಯೊಬ್ಬರೂ ಸ್ವಧರ್ಮ ನಿಷ್ಠೆಯುಳ್ಳವರಾಗಬೇಕು.

ಇಲ್ಲಿ ಇನ್ನೊಂದು ನ್ಯೂನ್ಯತೆಯನ್ನು ಕಾಣುತ್ತೇವೆ. ಧರ್ಮಬೋಧನೆಯ ವ್ಯವಸ್ಥೆ ಬೇರೆ ಮತೀಯರಲ್ಲಿರುವ ಅಥವಾ ಪ್ರಾಚೀನ ವೀರಶೈವ ಮಠಮಾನ್ಯಗಳಲ್ಲಿದ್ದ ಧರ್ಮಾನುಭವವನ್ನು ಬೋಧಿಸುವ ವ್ಯವಸ್ಥೆ ಮಾಡಬೇಕಾದುದು ಅವಶ್ಯ. ಅದೇ ವೇಳೆಗೆ ವೀರಶೈವ ಸಾಹಿತ್ಯವನ್ನು ಗುರುತಿಸುವದು, ಮಾನ್ಯ ಮಾಡುವುದು ಮತ್ತು ಪ್ರಚಾರ ಮಾಡುವುದೂ ಸಹ ತುರ್ತ ನಡೆಯಬೇಕು. ಅಂದರೆ ಮಾತ್ರ ವೀರಶೈವ ಧರ್ಮ ಸರಿಯಾದ ಹಳಿಯ ಮೇಲೆ ಓಡಬಲ್ಲದು.

ವೀರಶೈವಕ್ಕೊಂದು ಇತಿಹಾಸವಿದೆ, ಆದರೆ ಅಧ್ಯಯನವಿಲ್ಲ. ಅದರದೇ ಒಂದು ವಚನ ಶಾಸ್ತ್ರವೆಂಬ ಸಂಹಿತೆ ಇದೆ, ವ್ಯವಸ್ಥೆ ಇಲ್ಲ. ಸಂಸ್ಕೃತಿ ಇದೆ, ಸಂಹವನ ಸಾಧ್ಯತೆಗಳು ಸಾಕಷ್ಟು ಇಲ್ಲ. ದರ್ಶನವಿದೆ, ಮಾರ್ಗದರ್ಶನವಿಲ್ಲ. ಪರಂಪರೆ ಇದೆ, ಪರಿಣಾಮವಿಲ್ಲ. ಅನುಭಾವವಿದೆ, ಅನುಷ್ಠಾನವಿಲ್ಲ. ಸಿದ್ಧಾಂತವಿದೆ, ಸಾಧನೆ ಸಿದ್ಧಿಗಳಿಲ್ಲ. ಸಮಾಜ ಇದೆ, ಸಂಘಟನೆ ಇಲ್ಲ. ಈ ಎಲ್ಲ ಇಲ್ಲಗಳನ್ನು ಇದೆ ಎಂದಾಗಿಸಬೇಕೆಂಬ ಹಂಬಲ ಮಾತ್ರ- ಇಂದಿನ ವೀರಶೈವ ಸಮಾಜಕ್ಕೆ ಬೆಳೆದು ಬರಬೇಕಾಗಿದೆ.

ವೀರಶೈವ ಮಠಗಳು ನಮ್ಮ ಸಂಸ್ಕೃತಿಯ ನೆಲೆಗಳು. ನಮ್ಮ ವಿಶಿಷ್ಟ ವಿದ್ಯಾ ಕೇಂದ್ರಗಳು. ಸೇವೆಯ ತರಬೇತಿ ತಾಣಗಳು. ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಅನ್ನದಾನ ಮಾಡಿ ಎಲ್ಲ ಧರ್ಮೀಯರು ವಿದ್ಯಾವಂತರಾಗುವಂತೆ ಶ್ರಮಿಸಿದ, ಶ್ರಮಿ ಸುತ್ತಿರುವ ಪವಿತ್ರ ಕ್ಷೇತಗಳು. ಅನ್ನ ದಾಸೋಹ, ಜ್ಞಾನ ದಾಸೋಹ ಇವುಗಳ ಬಗ್ಗೆ ಭಾರತದಲ್ಲಷ್ಟೇ ಏಕೆ ವಿಶ್ವದಲ್ಲೇ ವೀರಶೈವ ಮಠಗಳಿಗೆ ಹೋಲುವ ಸಂಸ್ಥೆ ಇನ್ನೊಂದು ಹುಟ್ಟಿಲ್ಲ.

ಮನುಕುಲದ ಬಾಹ್ಯ ಬದುಕಿನಲ್ಲಿ ಭೇಧವೇನೇ ಇರಲಿ, ಅಂತರಿಕವಾಗಿ ಅವನ ಆತ್ಮ ಒಂದೇ ಬಗೆಯ ಚೈತನ್ಯವನ್ನು ಪಡೆದಿರುತ್ತದೆ. ಅದೇ ಮಾನವತೆ. ಆ ಮಾನವತೆಯ ಮೌಲ್ಯವನ್ನು ಎತ್ತಿ ಹಿಡಿದಾಗಲೇ ಲೋಕ ಕಲ್ಯಾಣವಾಗುತ್ತದೆ. ಇಂದು ಅರ್ಥಂಬರ್ಥ ತಿಳಿದ ವೀರಶೈವರು ಹೆಚ್ಚಾಗಿದ್ದರಿಂದ ಆತ್ಮೋದ್ಧಾರಕ್ಕಾಗಿ

ಅನುವಾಗಬೇಕಿದ್ದ ಧರ್ಮ ಆತ್ಮ ವಿನಾಶಕ್ಕೆ ದಾರಿ ಮಾಡಿಕೊಡುತ್ತಿರುವಂತೆ ಕಾಣುತ್ತಿದೆ. ಗತ ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ವೀರಶೈವದ ಭವ್ಯ ಸಂಸ್ಕೃತಿ ಅರ್ಥವಾಗುತ್ತದೆ. ಮಾನವನ ಹೃದಯದಲ್ಲಿ ಮಹಾದೇವನನ್ನು ಕಂಡು ಗುರುತಿಸಿದ, ಗೌರವಿಸಿದ, ಪೂಜಿಸಿದ, ಪುಣ್ಯ-ಪುನೀತ ಸಂಸ್ಕೃತಿ ವೀರಶೈವ ಸಂಸ್ಕೃತಿ. ಮಾನವನನ್ನು ಮಾನವನನ್ನಾಗಿ ಗುರ್ತಿಸಿದ ಏಕೈಕ ವಿಶ್ವ-ಮಾನವ-ಧರ್ಮ ವೀರಶೈವ ಧರ್ಮ. ಇದರ ಅರಿವು ಎಲ್ಲ ವೀರಶೈವರಲ್ಲಾಗಬೇಕಾದ ಅಗತ್ಯ ಇಂದು ಇದೆ. ಇದು ಅನಿವಾರ್ಯವೂ ಹೌದು.

ವೀರಶೈವ ಧರ್ಮದ ಇತಿಹಾಸವನ್ನು ನೋಡಿದರೆ ಮೊದಲಿನ ಒಗ್ಗಟ್ಟು ಸ್ವಾಭಿಮಾನ ಈಗ ಉಳಿದಿಲ್ಲವೇನೋ ಅನಿಸುತ್ತದೆ.ಮಠ ಮಠಗಳಲ್ಲಿ ವೈಷಮ್ಯ, ಸ್ವಪ್ರತಿಷ್ಠೆ, ಸಲ್ಲದ ದುರಭಿಮಾನ ಬೆಳೆದು ಬಂದಂತೆ ಕಾಣುತ್ತದೆ. ಗುರು ವಿರಕ್ತ ಎಂಬ ಭೇದ, ಭಿನ್ನ-ಭಾವನೆ ಮೊದಲು ಹೊರಟುಹೋಗಬೇಕು. ಗುರುವಿರಕ್ತರು-ವೀರಶೈವರೆಂಬವರು ಒಂದೇ ಬಳ್ಳಿಯ ಎರಡು ಹೂಗಳೆಂದು ಭಾವಿಸಬೇಕು. ವೀರಶೈವ, ಗುರುಲಿಂಗ ಜಂಗಮ ಈ ಮೂವರನ್ನು ಒಂದೇ ಸ್ಥಾನದಲ್ಲಿಟ್ಟು ಗೌರವಿಸಿದೆ. ಬಸವಣ್ಣನವರು ತುಂಬು ವಾಸ್ತವವಾಗಿ ಮತ್ತು ಮಹಾ ಮಾನವತಾವಾದಿಯಾಗಿ ಕಂಡು ಬರುತ್ತಿರುವುದರಿಂದ ಆದಿಜಗದ್ಗುರು ರೇಣುಕಾಚಾರ್ಯರು ಸಂಸ್ಥಾಪಿಸಿದ ಒಂದು ವಿಶಿಷ್ಟ ಧರ್ಮವನ್ನು ಅವರು ವಿಶ್ವಧರ್ಮವನ್ನಾಗಿ ಪರಿವರ್ತಿಸಿದರು ಎಂದು ಭಾವಿಸಿದರೆ ತಪ್ಪೇನಿಲ್ಲ.

ಇಂದು ದೇಶದ ಯುವ ಜನದಿಂದ ಮಾತ್ರ ಸಮಾಜದ ಸುಧಾರಣೆ, ಸಂಘಟನೆ ಸಾಧ್ಯ. ಯುವಕರು ಯಾವುದೇ ಕಂದಾಚಾರಕ್ಕೆ ಬಲಿಯಾಗದೇ ಸಮಾಜ ಸುಧಾರಣೆಗಾಗಿ ತಮ್ಮೆಲ್ಲ ಸ್ವಾರ್ಥವನ್ನು ಬದಿಗಿರಿಸಿ ಪ್ರಾಂಜಲ ಮನಸ್ಸಿನಿಂದ ದುಡಿಯುವ ಮನೋಧರ್ಮದ ನಿಷ್ಠಾವಂತ ಪಟುಗಳಾಗಬೇಕು.

ಬಸವಣ್ಣನಂತಹ ಶ್ರೇಷ್ಠ ಸಮಾಜ ಸುಧಾರಕ, ದಾರ್ಶನಿಕನನ್ನು ವಿಶ್ವದ ಇತಿಹಾಸ ಹಿಂದೆ ಕಂಡಿಲ್ಲ ಮುಂದೆ ಕಾಣುತ್ತದೆಂಬ ವಿಶ್ವಾಸವಿಲ್ಲ. ಅವನ ಕನಸನ್ನು ನನಸಾಗಿಸುವುದು ಜನ್ಮ ಸಾರ್ಥಕ್ಯವನ್ನು ತಂದು ಕೊಡುತ್ತದೆ. ಕಾರಣ ಅವನ ತತ್ವಗಳನ್ನು ಅರ್ಥೈಸುವಲ್ಲಿ ಮತ್ತು ಅನುಷ್ಠಾನಕ್ಕೆ ತರುವಲ್ಲಿ ಯುವಜನಾಂಗ ಕಂಕಣ ಬದ್ಧವಾಗಬೇಕು. ವೀರಶೈವ ಮಠಾಧಿಪತಿಗಳು ಯಾರೇ ಆಗಿರಲಿ ಭೇದ ಭಾವ ತೋರದೆ ಗುರು ಜಗದ್ಗುರು, ಸ್ವಾಮಿ ಮಹಾಸ್ವಾಮಿ, ಶಿವಯೋಗಿ-ಶಿವಾಚಾರ್ಯ ಎಲ್ಲರಲ್ಲೂ ಭಕ್ತಿ ಗೌರವಗಳನ್ನು ಸಮರ್ಪಿಸಬೇಕು. ಅಂದರೆ ವೀರಶೈವ ಧರ್ಮ ಯೋಗ್ಯ ರೀತಿಯಲ್ಲಿ ಮುಂದೆ ಸಾಗುತ್ತದೆ.

೨. ತತ್ವ ಮತ್ತು ಸಿದ್ಧಾಂತಗಳು

ವೀರಶೈವ ಧರ್ಮ, ತತ್ವಗಳಿಂದ ಶ್ರೇಷ್ಠತೆಯನ್ನು ಕಾಲದಿಂದ ಜೇಷ್ಠತೆಯನ್ನು ಪಡೆದಿದೆ ಎಂದು ತಿಳಿದು ಬರುತ್ತದೆ.

ಒಬ್ಬ ವ್ಯಕ್ತಿಯು ಬಗೆಗೆ ವಿಚಾರ ಮಾಡಬೇಕಾದರೆ ಅವನ ದೇಹ, ಪ್ರಾಣ, ಆತ್ಮ, ಇವುಗಳ ಸಮಗ್ರ ಪರಿಚಯು ಮಾಡಿಕೊಳ್ಳಬೇಕಾಗುತ್ತದೆ. ಇವುಗಳಲ್ಲಿ ಒಂದು ಕಡಿಮೆಯಾದರೂ ವ್ಯಕ್ತಿತ್ವದ ಪೂರ್ಣ ಜ್ಞಾನವಾಗುವದಿಲ್ಲ. ಹಾಗೆಯೇ ವೀರಶೈವ ಧರ್ಮವನ್ನು ಅರಿಯಬೇಕಾದರೆ ಅಷ್ಟಾವರಣ, ಪಂಚಾಚಾರ, ಷಟಸ್ಥಲ ಇವುಗಳ ಮಹತ್ವವನ್ನು ಅರಿಯಬೇಕಾಗುತ್ತದೆ. ಇವುಗಳ ಮೂಲಕ ಜೀವನದಲ್ಲಿ ಸ್ವೀಕರಿಸಬೇಕಾದ ಸದಾಚಾರ, ತ್ಯಜಿಸಬೇಕಾದ ದುರಾಚಾರಗಳ ಕಲ್ಪನೆ ಬರುತ್ತದೆ.

ವೀರಶೈವವು ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟಸ್ಥಲವೇ ಆತ್ಮವಾಗಿದ್ದ ಧರ್ಮವೆಂದು ಅನುಭಾವಿಗಳು ಹೇಳುತ್ತಾರೆ. ಈ ಮೂರರಲ್ಲಿ ಯಾವುದಾದರೊಂದು ಅಗಲಿದ್ದರೆ ಅದು ಪರಿಪೂರ್ಣ ಧರ್ಮವೆನಿಸದು. ವೀರಶೈವರ ಧರ್ಮ-ನೀತಿ-ತತ್ವ ಈ ಮೂರೂ ಕ್ರಮವಾಗಿ ಅಷ್ಟಾವರಣ, ಪಂಚಾಚಾರ, ಷಟಸ್ಥಲ ಇವುಗಳಲ್ಲಿ ಅಡಗಿರುವವೆಂದು ಹೇಳುತ್ತಾರೆ. ಅರ್ಥಾತ್ ಅಷ್ಟಾವರಣಾಂಗನು, ಪಂಚಾಚಾರಗಳನ್ನು ಪ್ರಾಣವನ್ನಾಗಿಸಿದರೇನೇ ಆತ್ಮನ ಸಂದರ್ಶನವಾಗುತ್ತದೆ.

ವೀರಶೈವದಲ್ಲಿ ಎರಡು ವಿಭಾಗಗಳು. ಒಂದು ತರ್ಕ ಪ್ರಧಾನ, ಮತ್ತೊಂದು ಭಾವನಾ ಪ್ರಧಾನ. ಮೊದಲನೆಯದು ಶಕ್ತಿ ವಿಶಿಷ್ಟಾದ್ವೈತ, ಎರಡನೆಯದು ಷಟಸ್ಥಲ. ಆದರೆ ಎರಡರ ಗುರಿಯೂ ಒಂದೇ. ಅಂಗಾಂಗ ಸಾಮರಸ್ಯವನ್ನು ಪಡೆಯುವದು. ಶಿವದೀಕ್ಷೆಯಿಂದ ಷಟಸ್ಥಲ ಮಾರ್ಗದಲ್ಲಿ ನಡೆವುದೇ ಮೋಕ್ಷೋಪಾಯು. ಶಿವನು ಲಿಂಗ-ಅಂಗ ಹೀಗೆ ಎರಡು ವಿಧವಾಗಿ ಪರಿಣಮಿಸಿದಾಗ ಅವನಲ್ಲಿದ್ದ ಶಕ್ತಿಯೂ ಸಹಿತ ಎರಡು ಪ್ರಕಾರದ್ದಾಯಿತು. ಒಂದು ಶಕ್ತಿ, ಇನ್ನೊಂದು ಭಕ್ತಿ. ಈ ಶಕ್ತಿ ಲಿಂಗ ರೂಪದಲ್ಲಿ ಅಧಿಕವಾಗಿ ಅಂಗ ರೂಪದಲ್ಲಿ ಸಂಕೋಚ ಭಾವವನ್ನು ಹೊಂದಿತು. ಈ ಸಂಕೋಚ ಭಾವವನ್ನು ಕಳೆದು ವಿಕಾಸ ಭಾವವನ್ನುಂಟು ಮಾಡುವದಕ್ಕಾಗಿ ಲಿಂಗ ರೂಪನಾದ ಶಿವನು ಮೂರು ಬಗೆಯಾದನು. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ. ಅನೇಕ ಜನ್ಮಗಳ ಸತ್ಕರ್ಮಾಚರಣೆಗಳಿಂದ ಜೀವನದಲ್ಲಿ ಶಿವಭಕ್ತಿ ಉದಯವಾದಾಗ ಶಿವನಿಂದ ಈ ಮೂರು ಲಿಂಗಗಳು ಸ್ಥಾಪಿಸಲ್ಪಡುವವು.

ಇನ್ನು ಜ್ಞಾನ-ಕ್ರಿಯೆಗಳ, ಸಮನ್ವಯವೇ ವೀರಶೈವ ಸಿದ್ಧಾಂತ. ಜ್ಞಾನವಿಲ್ಲದ ಕ್ರಿಯೆ ನಿಷ್ಫಲ. ಕ್ರಿಯೆಯಿಲ್ಲದ ಜ್ಞಾನ ನಿಷ್ಪ್ರಯೋಜಕ. ಜ್ಞಾನ-ಹೀನವ,

ಕ್ರಿಯೆ–ಕುರುಡು. ಅವೆರಡರಲ್ಲಿಸಮನ್ವಯವಾದರೇನೇ ಮುಕ್ತಿ ಸಾಧ್ಯವಾಗಬಲ್ಲದು. ಜ್ಞಾನ ಕ್ರಿಯೆಗಳ ಸಂಗಮವನ್ನು ಚನ್ನಬಸವಣ್ಣನವರು ಸುಂದರವಾಗಿ ಹೇಳಿದ್ದಾರೆ.

''ಕ್ರಿಯೆಯೆ ಜ್ಞಾನ, ಆ ಜ್ಞಾನವೇ ಕ್ರಿಯೆ,
ಜ್ಞಾನವೆಂದಡೆ ತಿಳಿಯುವುದು,
ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು,
ಪರಸ್ತ್ರೀಯ ಭೋಗಿಸಬಾರದೆಂಬುದೇ ಜ್ಞಾನ,
ಅದರಂತೆ ಆಚರಿಸುವುದೇ ಕ್ರಿಯೆ,
ಅರಿತು ಆಚರಿಸದಿದ್ದಡೆ, ಅದೇ ಅಜ್ಞಾನ ನೋಡಾ,
ಕೂಡಲ ಚನ್ನ ಸಂಗಮ ದೇವಾ''.

ಜ್ಞಾನ ಕ್ರಿಯೆಗಳು ಇಲ್ಲದೆ ಅಂಗಾಂಗ ಸಾಮರಸ್ಯದ ಸುಖ ಸಮನಿಸುವದಿಲ್ಲ. ಜ್ಞಾನ ಕ್ರಿಯೆಗಳ ಸಮನ್ವಯವೇ ಬೆಳಕು, ಆ ಬೆಳಕೇ ಅನುಭಾವ.

ಆಧ್ಯಾತ್ಮ ಜ್ಞಾನ ಸುಲಭವಾದುದಲ್ಲ. ಗಹನವಾಗಿರುವುದರಿಂದಲೇ ಬಹಳ ಜನರು ಅತ್ತ ಗಮನ ಹರಿಸುವುದಿಲ್ಲ. ಆದರೆ ವೀರಶೈವ ಧರ್ಮದ ತತ್ವ ಸಿದ್ಧಾಂತಗಳು ಒಮ್ಮೆ ಮನದಟ್ಟಾದರೆ ಆಚರಣೆಯು ಸುಲಭವಾಗುತ್ತದೆ. ಮನುಷ್ಯನಿಗೆ ಅಹಂಕಾರ ಸಲ್ಲ, ಅಹಂಕಾರ ನಿರಹಂಕಾರನಾಗಬೇಕಾದರೆ ಅಷ್ಟಾವರಣಗಳನ್ನು ಅರಿತು ಅರ್ಚನ, ಅರ್ಪಣ ಅನುಭವದಿಂದ ಚಿದೈಶ್ವರ್ಯವನ್ನು ಪಡೆಯಬೇಕು.

೩. ಅಷ್ಟಾವರಣ

ಅಷ್ಟಾವರಣವು ವೀರಶೈವನಿಗೆ ಪರಮ ಪಾವನವಾಗಿದೆ. ರಕ್ಷಾಕವಚವೆನಿಸಿದೆ. ಯೋಧನು ಒಂದೇ ಕವಚವನ್ನು ಧರಿಸಿದರೆ ವೀರಶೈವನು ಎಂಟು ಕವಚಗಳನ್ನು ತೊಟ್ಟಿರುತ್ತಾನೆ. ವೀರಶೈವನಿಗೆ ಮರಣದ ಅಂಜಿಕೆಯೂ ಇರುವದಿಲ್ಲ. ಅಷ್ಟಾವರಣವು ಸರ್ವಸಿದ್ಧಿಗಳನ್ನು ಕರುಣಿಸುತ್ತದೆ. ಅಷ್ಟಾವರಣಗಳನ್ನು ಮೈಗೂಡಿಸಿಕೊಳ್ಳುವ ವೀರಶೈವನಿಗೆ ಅಷ್ಟಸಿದ್ಧಿಗಳು ಸಿಕ್ಕುತ್ತವೆ. ಅಂತೆಯೇ ಶರಣರ ಮನೆಯಂಗಳದಲ್ಲಿಯ ಹಸುವು ಕಾಮಧೇನುವೆನಿಸುತ್ತದೆ. ಕಲ್ಲು ಪರುಷ ಮಣಿ ಎನಿಸುತ್ತದೆ. ಮರ ಕಲ್ಪವೃಕ್ಷವಾಗುತ್ತದೆ.

ಇಷ್ಟಲಿಂಗ ಧಾರಣೆಯಿಂದ ಅಷ್ಟಾವರಣವನ್ನು ಅಳವಡಿಸಿಕೊಳ್ಳುವ ಅಧಿಕಾರ ಬರುತ್ತದೆ. ದೇಹದಲ್ಲಿ ಪ್ರಾಣವಿರುವ ವರೆಗೆ ಇಂದ್ರಿಯಗಳು ಕೆಲಸ ಮಾಡುತ್ತವೆ. ಅದರಂತೆ ಲಿಂಗವಂತನಾಗುವುದರಿಂದ ಅಷ್ಟಾವರಣದ ಸಂಬಂಧ ಬರುತ್ತದೆ.

ಅಷ್ಟಾವರಣಗಳು ಯಾವವೆಂದರೆ : ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ.

(i) ಗುರು

ಮಾನವ-ಜನ್ಮ ಸಫಲತೆಯನ್ನು ಪಡೆಯಬೇಕಾದರೆ ಗುರುವಿನ ಅನುಗ್ರಹ ಬೇಕೇಬೇಕು. ಅಜ್ಞಾನವೆಂಬ ಕತ್ತಲೆಯಿಂದ ಸುಜ್ಞಾನವೆಂಬ ಬೆಳಕಿಗೆ ಕೊಂಡೊಯ್ಯುವವನೇ ಗುರು. ''ಮಾತೃ ದೇವೋಭವ, ಪಿತೃ ದೇವೋಭವ'' ಎನ್ನುವುದಕ್ಕೆ ''ಗುರು:ದೇವೋಭವ'' ಎನ್ನುವದನ್ನೂ ಸೇರಿಸಿದ್ದು ಗುರುವು ದೇವರಿಗೆ ಸಮಾನವೆನ್ನುವದನ್ನು ತೋರಿಸಿಕೊಡುತ್ತದೆ ಹಾಗೇಯೇ :

''ಗುರುಃಬ್ರಹ್ಮಾ ಗುರುಃವಿಷ್ಣುಃ
ಗುರುಃದೇವೋ ಮಹೇಶ್ವರಃ,
ಗುರುಸ್ಸಾಕ್ಷಾತ ಪರಬ್ರಹ್ಮ
ತಸ್ಮೈ ಶ್ರೀ ಗುರವೇನಮಃ''.

ಎನ್ನುವದೂ ಸಹ ಗುರುವನ್ನು ಬ್ರಹ್ಮ ವಿಷ್ಣು ಮಹೇಶ್ವರರಿಗೆ ಸರಿಸಮನಾಗಿ ಕಂಡದುದನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ ''ಗುರು'' ಎಂದರೆ ಕೇವಲ ಶಿಕ್ಷಕನೆಂದಾಗಲಿ, ಆಚಾರ್ಯನೆಂದಾಗಲಿ ತಿಳಿಯಬಾರದು. ಗುರುವಿನ ವೇಷ ಹಾಕಿದ ಮಾತ್ರ ಗುರುತ್ವ ಬರುವುದಿಲ್ಲ. ಗುರುವಿನ ಕಾಯಕ ಮಾಡಿದಾಗ ಗುರುತ್ವ ಬರುವದು. ''ಹರ ಮುನಿದರೆ ಗುರುಕಾಯ್ವನು'' ಎನ್ನುವುದರ ಅರ್ಥವೂ ಇದೆ.

''ಸುರ ತರುವು ವೃಕ್ಷದೊಳಗಲ್ಲ,
ಸುರಧೇನು ಪಶುವಿನೊಳಗಲ್ಲ,
ಪರುಷ ಪಾಷಾಣದೊಳಗಲ್ಲ
ಶಿಷ್ಯನ ಭಾವಕ್ಕೆ ಗುರುಸರನಲ್ಲ,
ಗುರುವೇ ಪರಶಿವನೆಂದು ಭಾವಿಸಬಲ್ಲಡೆ
ಶಿಷ್ಯನೆಂಬೆನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ''

ಎಂದು ತೋಂಟದ ಶ್ರೀ ಸಿದ್ಧಲಿಂಗೇಶ್ವರರು ಹೇಳಿದ್ದಾರೆ. ಕಲ್ಪವೃಕ್ಷವು ವೃಕ್ಷವೆಂದು, ಕಾಮಧೇನು ಪಶುವೆಂದು, ಪರುಷಮಣಿ ಕಲ್ಲೆಂದು ಭಾವಿಸಲಾಗದು. ಶಿಷ್ಯನ ಭಾವನೆಯಲ್ಲಿ ಗುರುವು ನರನಾಗಿ ಕಾಣಲಾರ. ಯಾವನು ಗುರುವೇ ಪರಶಿವನೆಂದು ಭಾವಿಸುವನೋ ಅವನನ್ನು ಗುರುವು ಶಿಷ್ಯನೆಂದು ಭಾವಿಸುತ್ತಾನೆ. ಶಿಕ್ಷಕನು ವಿದ್ಯಾರ್ಥಿಯನ್ನು ಶಾಲೆಯಲ್ಲಿ ನಿಲ್ಲಿಸಿ ಬಿಡಬಹುದು. ಅಲ್ಲಿ ಗುರು ಶಿಷ್ಯರ ಸಂಬಂಧ

ವನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ಯಾಕಂದರೆ ಗುರುವಾದವನು ಶಿಷ್ಯನನ್ನು ಜ್ಞಾನ ಮಂದಿರದ ಗರ್ಭಗುಡಿಯಲ್ಲಿಯೇ ಹೊಗಿಸಿಬಿಡುವ ಸಾಮರ್ಥ್ಯ ಪಡೆದಿರುತ್ತಾನೆ-

ಬಾವಿಯಲ್ಲಿ ಬೇಕಾದಷ್ಟು ನೀರು ತುಂಬಿಕೊಂಡಿರಲಿ, ಅಲ್ಲಿ ಬಿಟ್ಟ ಕೊಡವು ಬಾಗದಿದ್ದರೆ ಅದರಲ್ಲಿ ಒಂದು ಹನಿ ನೀರು ಕೂಡ ಒಳಗೆ ಹೋಗುವುದಿಲ್ಲ. ತುಂಬ ಬೇಕಾದರೆ ಬಾಗಬೇಕು. ಬೆಳೆಯಬೇಕಾದರೆ ನಮಸ್ಕರಿಸಬೇಕು. ಇದನ್ನು ನೆನಪಿನಲ್ಲಿಟ್ಟುಕೊಂಡು ನಡೆಯುವ ಶಿಷ್ಯನಿಗೆ ಗುರುವಿನ ಕೃಪೆಯಾಗುತ್ತದೆ. ಮತ್ತು ಅಂಥವನೇ ಆಧ್ಯಾತ್ಮ ಮಾರ್ಗದಲ್ಲಿ ನಡೆದು ತನ್ನ ಇಷ್ಟವನ್ನು ಸಾಧಿಸಬಲ್ಲ.

ಶಿಷ್ಯನು ಎಷ್ಟೆಷ್ಟು ಹೆಚ್ಚಾಗಿ ಜ್ಞಾನ ಸಂಪಾದನೆಯ ಇಚ್ಛೆಯನ್ನು ತೋರುವನೋ ಅಷ್ಟಷ್ಟು ಗುರುವಿಗೆ ಸಂತೋಷವಾಗುತ್ತದೆ. ತಾಯಿಗೆ ಮಗು ಉಂಡಷ್ಟು ಆನಂದವಾದಂತೆ ! ಆದರೆ ದುರ್ದೈವವಶಾತ್ ಇಂದು ಕಲಿಯುವ, ಕಲಿಸುವ, ಕಾರ್ಯ ಉಪಜೀವನದ ಮಾರ್ಗವಾಗಿದೆ.

ಗುರು ಕಾರುಣ್ಯದಿಂದ ಆಸೆ, ಅಜ್ಞಾನ, ಅವಿಚಾರ, ಸಂಚಿತ ಪ್ರಾರಬ್ಧ ಎಲ್ಲವೂ ಬಿಟ್ಟು ಹೋಗುತ್ತವೆ. ಅಂಗ ಲಿಂಗದ ಮೂಲ ಶ್ರೀ ಗುರು ಮತ್ತು ಶ್ರೀ ಗುರುಕಾರುಣ್ಯ.

ವೀರಶೈವ ಧರ್ಮದ ಮೂರು ಪೂಜ್ಯ ವಸ್ತುಗಳಾದ ಗುರು, ಲಿಂಗ, ಜಂಗಮ ಗಳಲ್ಲಿ ಗುರುವಿನ ಪಾತ್ರ ಮೊದಲು.

ನರಜನ್ಮದಿಂದ ಹರಜನ್ಮ ಪದವಿಯನ್ನಿತ್ತ ಗುರುವಿನ ಗುಣಗಾನ, ಅಕ್ಕಮಹಾದೇವಿಯ ವಚನದಲ್ಲಿ ಹೀಗೆ ಬಂದಿದೆ.

> ''ನರಜನ್ಮ ತೊಡೆದು, ಹರಜನ್ಮ ಮಾಡಿದ ಗುರುವೆ,
> ಭವ ಬಂಧನವ ಬಿಡಿಸಿ, ಪರಮ ಸುಖವ ತೋರಿದ ಗುರುವೆ,
> ಭವಿ ಎಂಬುದ ತೊಡೆದು, ಭಕ್ತನೆಂದೆನಿಸಿದ ಗುರುವೆ
> ಚೆನ್ನ ಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ ಶರಣು"

''ಶಿವಪಥವನರಿವೊಡೆ ಗುರುಪಥವೇ ಮೊದಲು''. ವೀರಶೈವ ಸಮುದಾಯಕ್ಕೆ ಲಾಂಛನವಾದ ಶಿವದೀಕ್ಷೆ, ಇಷ್ಟಲಿಂಗ ದೀಕ್ಷೆ, ಗುರು ಕಾರುಣ್ಯದಿಂದಲೇ ಲಭ್ಯ. ಇಷ್ಟಲಿಂಗ, ಶಿವಯೋಗ ಸಾಧಕರಿಗೆ ಅನಿವಾರ್ಯ ಸಾಧನ. "ಶ್ರೀ ಗುರು ಪ್ರಾಣ ಲಿಂಗವನು ಕರತಳಾಮಳಕವ ಮಾಡಿ ಎನ್ನ ಕರಸ್ಥಲದಲ್ಲಿ ತಂದು ಕೊಟ್ಟನಾಗಿ ಒಳ ಹೊರಗು ಸರ್ವಾಂಗದಲ್ಲಿ ಧರಿಸಿ ಆ ಲಿಂಗವ ನೆಚ್ಚಿ ಮೆಚ್ಚಿ ಹರುಷದೊಳೋಲಾಡುವೆ" ಎಂದು ಗುರುವಿನ ಕರುಣೆಯ ಕೂಸಾದ ಬಸವಣ್ಣನವರು ತಮ್ಮ ಮನದ ಭಾವವನ್ನು ವ್ಯಕ್ತ ಮಾಡಿದ್ದಾರೆ.

ಹೀಗೆ ಗುರು ಕರುಣವನ್ನು ಪಡೆದು ಅಂಗದ ಮೇಲೆ ಲಿಂಗ ಸಂಬಂಧನಾಗಿ ವಿಭೂತಿ ರುದ್ರಾಕ್ಷಿಯನ್ನು ಧರಿಸಿ ಪ್ರಣವ ಪಂಚಾಕ್ಷರಿಯನ್ನು ಸ್ಮರಿಸಿ ನಿತ್ಯ ಲಿಂಗಾರ್ಚನೆಯನ್ನು ಮಾಡುವ ಶರಣನಲ್ಲಿ ಶ್ರದ್ಧೆ ನೆಲೆಗೊಳ್ಳುತ್ತದೆ.

ದೇವರದಾಸೀಮಯ್ಯನು ಗುರುಕರುಣೆಯಿಂದಾದ ತನ್ನ ಸ್ವಾನುಭಾವವನ್ನು :

''ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವನಾ ಕೆಂಡ ನುಂಗಿದಂತೆ,
ಗುರುಚರಣದ ಮೇಲೆ
ತನುವೆಂಬ ತೃಣವ ತಂದಿರಿಸಿದರೆ
ಸರ್ವಾಂಗವೆಲ್ಲ ಲಿಂಗ ಕಾಣಾ ರಾಮನಾಥಾ"

ಎಂದು ತನು, ಮನ, ಭಾವ, ತುಂಬಿ ಹಾಡಿದ್ದಾರೆ.

(ii) ಲಿಂಗ

ಶಿಷ್ಯನು ಗುರುವಿನ ಅನುಗ್ರಹಕ್ಕೆ ಪಾತ್ರನಾಗಿದ್ದಾನೆ ಅನ್ನುವುದಕ್ಕೆ ಆತನು ದೇಹದ ಮೇಲೆ ಧರಿಸಿದ ಲಿಂಗವೇ ಸಾಕ್ಷಿ. ಕನ್ನಡಿಯಲ್ಲಿ ಮುಖವನ್ನು ನೋಡಿ ನಲಿ ವಂತೆ ಲಿಂಗದಲ್ಲಿ ನಿನ್ನನ್ನು ಕಣ್ತುಂಬ ನೋಡಿ ಕೈತುಂಬ ಪೂಜಿಸಿ ನಲಿನಲಿದಾಡು ಎಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ಗುರುವಿನಿಂದ ಅನುಗ್ರಹಿಸಲ್ಪಟ್ಟ ಲಿಂಗ ಹೊರಗೆ ಇಷ್ಟಲಿಂಗವಾಗಿ, ಒಳಗೆ ಪ್ರಾಣ ಲಿಂಗವಾಗಿ, ಭಾವದಲ್ಲಿ ಭಾವಲಿಂಗ ವಾಗಿ ಶೋಭಿಸುತ್ತದೆ.

"ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮಲಿಂಗವ ತಂದುಕೊಟ್ಟನಯ್ಯ ಶ್ರೀಗುರು ಎನ್ನ ಕರಸ್ಥಲಕ್ಕೆ! ಇನ್ನು ನಾ ಬದುಕಿದೆನು, ನಾ ಬಯಸುವ ಬಯಕೆ ಕೈ ಸಾರಿತಿಂದು ಕೂಡಲ ಸಂಗಮ ದೇವಾ"ಎಂದು ಬಸವಣ್ಣನವರು ಹೇಳಿದ್ದಾರೆ.

ಲಿಂಗಾಯತ ಧರ್ಮದ ಜೀವಾಳವೇ ಇಷ್ಟಲಿಂಗ. ಜಗದಗಲ, ಮುಗಿಲಗಲ, ಮಿಗೆಯಗಲ; ಅಗಮ್ಯ ಅಗೋಚರ ಅಪ್ರಮಾಣವಾಗಿರುವ ಪರಮಾತ್ಮನ ಸಂಕೇತವೇ ಇಷ್ಟಲಿಂಗ. ಶರಣರು ಯಾವ ಮದ್ದು, ಗುಂಡು ತೋಪುಗಳಿಲ್ಲದೇ ಕೇವಲ ಇಷ್ಟ ಲಿಂಗದ ಅನುಗ್ರಹದಿಂದ ಜಾತಿ ವಾದವೆಂಬ ಕೋಟೆಯನ್ನು ಸ್ಫೋಟಗೊಳಿಸಿದರು. ಬಂದೂಕು ಬಳಸದೆ ಸಮಾನತೆ ಸಾಧಿಸಿದರು. ವಿಶ್ವದ ಕುರುಹಾದ ಇಷ್ಟಲಿಂಗವು ವಿಶ್ವಬಾಂಧವ್ಯವನ್ನು ಬೆಳೆಸುವ ಸೂತ್ರವಾಯಿತು. ಇದು ಗಮನಿಸಬೇಕಾದ ಸಂಗತಿ.

ಪರಶಿವ ಮತ್ತು ಚಿತ್‌ಶಕ್ತಿಯ ಸಂಬಂಧವನ್ನು ಮಹಾಜ್ಞಾನಿ ಚೆನ್ನ ಬಸ ವಣ್ಣನು ''ಲಿಂಗ'' ಎಂಬ ಪದದಿಂದ ಹೀಗೆ ನಿರೂಪಿಸಿದ್ದಾನೆ.

"ಲಿ ಕಾರವೇ ಶೂನ್ಯ, ಬಿಂದುವೇ ಲೀಲೆ, 'ಗ' ಕಾರವೇ ಚಿತ್ತ, ಈ
ತ್ರಿವಿಧದೊಳೊಗೆದ ಲಿಂಗವೆಂಬ ಸಕೀಲ
ಅದರ ಸಂಚವನಾವಾತಬಲ್ಲ ಆತನೆ ಲಿಂಗಸಂಗಿ,
ಇದು ಕಾರಣ ಕೂಡಲ ಚೆನ್ನ ಸಂಗವು ದೇವ
ಲಿಂಗಾನುಭವಿಗಳ ಶ್ರೀ ಚರಣಕ್ಕೆ ನಮೋ ನಮೋ ಎಂಬೆನು"

ಸಾಧಕನ ಸಾಧನೆಗೆ ಅನುಕೂಲವಾಗಲೆಂದು ಪರಶಿವನು ಸಾಕಾರ ಸ್ವರೂಪನಾಗಿ ವಿಶ್ವದಾಕಾರದಲ್ಲಿ ತೋರಿ, ಹಸ್ತಕ್ಕೆ ಬಂದು "ಇಷ್ಟಲಿಂಗವೆಂಬ" ನಾಮವನ್ನು ಧರಿಸಿ ಕಾಣಿಸುವನು. ಕಾಣುವದು ಸಾಧಕನ ಸಾಧನ ದೃಷ್ಟಿಗೆ ಸೇರಿದುದು. ಸಾಧಕನು ಸಾಧನೆಯ ಆರಂಭಕಾಲದಲ್ಲಿ ಪರಶಿವನು ತನ್ನನ್ನು ಬಿಟ್ಟು ಎಲ್ಲಿಯೋ ದೂರ ಇದ್ದಾನೆ ಎಂದು ಭಾವಿಸಿ ಸಾಧನೆಯನ್ನು ಮಾಡುತ್ತಿರುವಾಗಲೇ ಆತನ ಅಸ್ತಿತ್ವ ತನ್ನಲ್ಲಿ, ತನ್ನ ಅಂಗದ ಮೇಲೆ, ತನ್ನ ಅಂಗೈಯಲ್ಲಿ, ತನ್ನ ಅಂತರಂಗದಲ್ಲಿ, ಮನ, ಹೃದಯ, ಭಾವದಲ್ಲಿ ಇದ್ದಾನೆಂಬ ವಿಶ್ವಾಸ ತಾಳುವನು. ಅಕ್ಕಮಹಾದೇವಿಯು ಈ ವಿಚಾರವಾಗಿ ಹೀಗೆ ಹೇಳುತ್ತಾಳೆ.

"ದೂರದಲ್ಲಿರ್ದನೆಂದು ಆನು ಬಾಯಾರಿ ಬಳಲುತ್ತಿರ್ದೆನಯ್ಯ
ಸಾರಿ ಬೆರೆಸಿ ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ
ಎನ್ನ ಆರತವೆಲ್ಲವೂ ಲಿಂಗ, ನಿಮ್ಮನ್ನಷ್ಟವು ನೋಡಯ್ಯ
ಚೆನ್ನ ಮಲ್ಲಿಕಾರ್ಜುನಯ್ಯ,
ನಿಮ್ಮನ್ನು ಕರಸ್ಥಲದಲ್ಲಿ ನೋಡಿ ಕಂಗಳೇ ಪ್ರಾಣವಾಗಿರ್ದೆನಯ್ಯ"

ಜ್ಞಾನವು ಆತ್ಮನಲ್ಲಿ ಅಡಗಿಕೊಂಡಿರುತ್ತದೆ. ಬಾವಿಯು ನೀರನ್ನು ಹಗ್ಗದ ಸಹಾಯದಿಂದ ಮೇಲೆತ್ತಿ ತರುವಂತೆ ಪರಶಿವನ ಕುರುಹಾಗಿ ಅಂಗೈಯಲ್ಲಿರುವ ಇಷ್ಟಲಿಂಗದ ಸಹಾಯದಿಂದ ಜ್ಞಾನದ ಸೊಬಗು ಕಾಣಬೇಕು ಎನ್ನುವುದನ್ನು ಅರಿವಿನ ಮಾರಿ ತಂದೆ ಹೀಗೆ ಚಿತ್ರಿಸಿದ್ದಾನೆ.

"ಪಾತಾಳದ ನೀರ ಹುರಿ ಸಂಚದಿಂದ ಧರೆಗೆ ತಾಹಂತೆ
ಅರಿವು ಆತ್ಮನಲ್ಲಿ ಅಡಗಿದ್ದುದ ತಂದೆಯಲ್ಲಾ
ಕರದ ಕೈಯ ಕುರುಹಾಗಿ ಅಡಗಿದೆಯಲ್ಲಾ
ಶೃಂಗಾರದ ನಿಳಯದ ಮುಚ್ಚಳ ಕೀಲಿನಿಂದ
ಕಡೆಗಾಣಿಸಿದಂತೆ ಅಡಗಿದೆಯಲ್ಲಾ
ಕುರುಹು ಭಿನ್ನವಿಲ್ಲದೇ ಎನ್ನೊಡಗೂಡು
ಸದಾಶಿವ ಮೂರ್ತಿ ಲಿಂಗವೇ"

ಇಷ್ಟಲಿಂಗವೆಂಬುದು ಜ್ಞಾನಶಕ್ತಿಗಳ ಒಂದು ಸಾಮರಸ್ಯ. ಮನಸ್ಸನ್ನು ಒಂದೆಡೆ ನಿಲ್ಲಿಸಲು ಇಷ್ಟಲಿಂಗ ಒಂದು ಅನಿವಾರ್ಯ ಸಾಧನ. ಲಿಂಗ ಧಾರಣೆಯಿಂದ ಸರ್ವಾಂಗವೆಲ್ಲ ಲಿಂಗಮಯವಾಗುವದು ಎಂದರಿತ ಶಿವಭಕ್ತನು ಲಿಂಗ ಸ್ವರೂಪನಾದ ಅಷ್ಟಾವರಣವನ್ನು ತಿಳಿಯುತ್ತಾನೆ. ಲಿಂಗ ನಿಷ್ಠೆಯಿಂದ ದುರಿತಗಳನ್ನೋಡಿಸಲು ಸಮರ್ಥನಾಗುತ್ತಾನೆ. ಪೂರ್ವಾಶ್ರಮವನ್ನಳಿಯುತ್ತಾನೆ.

ಈ ಸೃಷ್ಟಿಯು ಯಾವುದರಿಂದ ಹೊರಹೊಮ್ಮಿ, ಯಾವುದರಲ್ಲಿ ಬಾಳಿ, ಯಾವು ದರಲ್ಲಿ ಅಡಗುವುದೋ ಅದು ಲಿಂಗವೆಂದು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಲ್ಪಟ್ಟಿದೆ.

ಲಿಂಗ ಪೂಜೆಯೇ ಶಿವಯೋಗವೆಂತಲೂ ಅದಿಲ್ಲದೆ ಮುಕ್ತಿ ದೊರೆಕದೆಂದೂ ಬಾಲಲೀಲಾ ಮಹಾಂತೇಶ್ವರರು ಹೇಳಿದ್ದಾರೆ. ಲಿಂಗಪೂಜೆಯಲ್ಲಿ ಯಾವ ಫಲಾಪೇಕ್ಷೆ ಯಾಗಲೀ ಇರುವದಿಲ್ಲ. ಆದರೂ ಅಷ್ಟಾವರಣದ ಪ್ರತ್ಯಕ್ಷ ಫಲಗಳೆನಿಸಿದ ಪಾದೋ ದಕ ಪ್ರಸಾದಗಳು ಕೈಮೇಲೆಯೇ ದೊರೆಯುವವು. ಭಗವದ್ಗೀತೆ ಯಾವುದೇ ಕರ್ಮ ವನ್ನು ಕರ್ತವ್ಯ ದೃಷ್ಟಿಯಿಂದ ಮಾಡು, ಆದರೆ ಫಲದಲ್ಲಿ ಮಾತ್ರ ನಿನಗೆ ಅಧಿಕಾರ ವಿಲ್ಲವೆಂದು ತಿಳಿಸಿದೆ. ಆದರೆ ಶರಣ ಸಿದ್ಧಾಂತವು

> ''ಕೂಡಲ ಸಂಗಮದೇವರನ್ನು ಪೂಜಿಸಿದ ಫಲ
> ಕೈಯ ಮೇಲೆ'' ಎಂದು ಬಣ್ಣಿಸಿದೆ.

ಇಷ್ಟಲಿಂಗಾರ್ಚನೆಯು ಜೀವನದ ಅಮೃತ ಸಮಯವೆನಿಸಿದೆ. ಅಂತೆಯೇ 16 ವರ್ಷದ ಮಾರ್ಕಂಡೇಯನು ಸ್ಥಾವರ ಲಿಂಗವನ್ನು ಪೂಜಿಸಿ ಚಿರಂಜೀವಿಯಾದನು.

ಲಿಂಗವನ್ನು ಧ್ಯಾನಿಸಿ ನಮಿಸಿ ನಿದ್ರೆಗೈದರೆ ಸ್ವಪ್ನಾವಸ್ಥೆಯ ದೋಷಗಳು ದೂರವಾಗುತ್ತವೆ, ಬೆಳಿಗ್ಗೆ ಏಳುವಾಗ ಲಿಂಗದೇವನಿಗೆ ಕೇವಲ ಶರಣೆಂದರೂ ಸಾಕು" ''ಹೊತ್ತಾರೆ ಎದ್ದು ಲಿಂಗವ ನೆನೆದರೆ ಅಪಮೃತ್ಯುಗಳು ಕಾಲಕರ್ಮಂಗಳು ತಪ್ಪುವವು'' ಎಂದಿದ್ದಾರೆ ಪ್ರಮಥರು. ಲಿಂಗ ಭಕ್ತನು, ಭಕ್ತಿ, ಶೀಲ, ನೇಮಗಳಿಂದ ಮಾಡುವ ಶಿವಪೂಜೆಗೆ ಸಮನಾದುದು ಯಾವುದೂ ಇಲ್ಲ.

> ''ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು,
> ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?
> ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ
> ತಾ ಮಾಡಬೇಕಲ್ಲದೆ
> ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ?

ಎಂದು ಕೇಳುತ್ತಾರೆ ಬಸವಣ್ಣನವರು.

ಲಿಂಗದಲ್ಲಿ ಮೂರು ಲೋಕಗಳ ವ್ಯಾಪಕತೆ ಇರುವಂತೆ ಮೂರು ಲೋಕಗಳಲ್ಲಿ ಲಿಂಗದ ವ್ಯಾಪಕತೆ ಪಸರಿಸಿದೆ. ಅಂದರೆ ಲಿಂಗವಿಲ್ಲದ ಸ್ಥಾನವೇ ಇಲ್ಲ. ಎಂದು ಸರ್ವಜ್ಞ ಹೇಳುತ್ತಾನೆ.

"ಲಿಂಗಕ್ಕೆ ಕಡೆಯೆಲ್ಲಿ ? ಲಿಂಗಿಲ್ಲದೆಡೆಯೆಲ್ಲ ?
ಲಿಂಗದೊಳು ಜಗವು ಅಡಗಿಹುದು, ಲಿಂಗವನು
ಹಿಂಗಿದವರುಂಟೆ ಸರ್ವಜ್ಞ ?"

ಈಶಾವಾಸ್ಯೋಪನಿಷತ್ತು ಲಿಂಗದ ಪರಿಪೂರ್ಣತೆಯನ್ನು ಹೀಗೆ ಘೋಷಿಸಿರುತ್ತದೆ:—

"ಓಂ ಪೂರ್ಣ-ಮದಃ ಪೂರ್ಣಮಿದಂ,
ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವ ಶಿಷ್ಯತೇ"

ಓಂಕಾರ ರೂಪದ ಮಹಾಲಿಂಗವು ಪೂರ್ಣವಾಗಿದೆ. ಆದರಿಂದಾದ ಈ ಜಗವೂ ಪರಿಪೂರ್ಣವೇ ಆಗಿದೆ. ಪೂರ್ಣದರಲ್ಲಿ ಪೂರ್ಣವಸ್ತು ಬೆರೆತರೆ ಪೂರ್ಣವೇ ತಾನೇ ಉಳಿಯುವಂತೆ ಮಹಾಲಿಂಗ ಹಾಗೂ ಇಷ್ಟಲಿಂಗಕ್ಕೂ ಅಂತರವಿಲ್ಲ. ಆಚಾರಾದಿ ಲಿಂಗಗಳ ಆರಾಧನೆಯಿಂದ ಮಹಾಲಿಂಗದಲ್ಲಿ ಕೂಡಿ ಮಹಾಲಿಂಗವೇ ತಾನಾದ ಶರಣನು ಪೂರ್ಣವೆನಿಸುವನು.

ಸರ್ವ ಕಾರಣಕ್ಕೆ ಕಾರಣವಾದ ಓಂಕಾರವೇ ಲಿಂಗವು, ಅದುವೇ ಪರಬ್ರಹ್ಮ ನಾಗಿರುವುದರಿಂದ ಪುಣ್ಯಪ್ರದವಾದ ಪಂಚಾಕ್ಷರ ಮಹಾಮಂತ್ರದ ಸ್ತೋತ್ರವನ್ನು ಪಠಿಸುತ್ತಾ ಲಿಂಗಪೂಜೆಯನ್ನು ಮಾಡಿ ಲಿಂಗಾಂಗ ಸಾಮರಸ್ಯವನ್ನು ಪಡೆಯುವ ವನು ಸಕಲ ಸೌಭಾಗ್ಯವನ್ನು ಪಡೆಯುವನು.

ಇಷ್ಟಲಿಂಗದ ಅನುಪಮ ಚರಿತ್ರೆಯನ್ನರಿತು ಲಿಂಗಧಾರಣೆ ಮಾಡಬೇಕು. ಇಲ್ಲದಿದ್ದರೆ ಯಾವ ಪ್ರಯೋಜನವೂ ಎನಿಸದು. ಅದರ ಮರ್ಮವನ್ನರಿತು ಧರಿಸು ವವು ಪ್ರತಿಯೊಬ್ಬ ವೀರಶೈವನ ಕರ್ತವ್ಯವೇ ಆಗಿದೆ. ಇಷ್ಟಲಿಂಗವು ಹೊಳಪಿನ ಆವರಣ ಹೊಂದಿ ತ್ರಾಟಕ ಯೋಗಕ್ಕೆ ಏಕಾಗ್ರತೆಗೆ ಸಹಾಯಕವಾಗದಿದ್ದರೆ ಅದು ಕೇವಲ ಶಿಲೆಯೇ ಹೊರತು ಲಿಂಗವೆನ್ನಿಸಿಕೊಳ್ಳದು.

ಆದರೆ ನಾವು ಇಂದು ಕಾಣುತ್ತಿರುವುದೇನು ? ಕೆಲವರು ವಿದ್ಯಾವಂತರು, ಸುಶಿಕ್ಷಿತರು ಮತ್ತು ವಿಚಾರಶೀಲರು ಎನ್ನುವ ನೆಪದಲ್ಲಿ ಮೂಲ ಸಂಸ್ಕೃತಿಯನ್ನು ನಾಶಮಾಡುತ್ತಿದ್ದಾರೆ. ಯಾರು ಧರ್ಮವನ್ನು ರಕ್ಷಿಸುವದಿಲ್ಲವೋ ಅವರನ್ನು ಧರ್ಮ ರಕ್ಷಿಸುವುದಿಲ್ಲ. ನಮ್ಮ ಯುವ ಜನಾಂಗವಂತೂ ತಮ್ಮ ಸಂಸ್ಕೃತಿಯ ಹಿರಿಮೆಯನು

ರಕ್ಷಿಸುವಲ್ಲಿ, ಪ್ರಸಾರಗೊಳಿಸುವಲ್ಲಿ ಬಹಳ ಹಿಂದುಳಿದಿದೆ. ಕೆಲವೊಂದು ಧರ್ಮಗಳಿಗೆ ಸಂಬಂಧ ಪಟ್ಟವರು ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವರು. ತಮ್ಮ ಧರ್ಮಲಾಂಛನವನ್ನು ಹೇಗೆ ರಕ್ಷಿಸಿಕೊಂಡು ಬಂದಿದ್ದಾರೆ ಎನ್ನುವದನ್ನು ಕಾಣಬಹುದಾಗಿದೆ. ಎಷ್ಟೋ ವೀರಶೈವ ವಿದ್ಯಾವಂತ ಯುವಕರು ಕೊರಳೊಳಗೆ ಲಿಂಗ ಧರಿಸುವುದಿಲ್ಲ. ವಿಭೂತಿ ಧರಿಸಲು ನಾಚುತ್ತಾರೆ. ವೀರಶೈವರಿಗೆ ಲಿಂಗ, ವಿಭೂತಿ, ರುದ್ರಾಕ್ಷಿಗಳು ಶಿವನ ಸಂಕೇತಗಳು. ಅವು ಆತ್ಮೋನ್ನತಿಗೆ ಸಾಧಕವೆನಿಸುತ್ತವೆ. ವೀರಶೈವ ಧರ್ಮದ ಲಾಂಛನಗಳನ್ನು ಧರಿಸಲು ನಾಚಿಕೆ ಪಡುವ ವೀರಶೈವರು ರೋಟರಿ, ಲಾಯನ್ಸ್ ಮುಂತಾದ ಕ್ಲಬ್‌ಗಳ ಚಿನ್ಹೆಗಳನ್ನು ಹೆಮ್ಮೆಯಿಂದ ಧರಿಸಿಕೊಂಡು ಮೆರೆದಾಡುತ್ತಾರೆ. ಇನ್ನು ಕೆಲವು ವೀರಶೈವರಿಗೆ ಲಿಂಗ ಹಾಕಿಕೊಳ್ಳುವದು ನಾಚಿಕೆ. ಅದನ್ನು ದೇವರ ಜಗುಲಿಯ ಮೇಲೋ ಅಥವಾ ಮನೆಯ ಗೂಟಕ್ಕೋ ತೂಗು ಹಾಕುತ್ತಾರೆ. ಮತ್ತೆ ಕೆಲವರು ಶೋಭೆಗೆಂದು ಧರಿಸುತ್ತಾರೆ.

ಇಂಥ ಲಿಂಗವಂತರಿಗೆ ಅಥವಾ ವೀರಶೈವರಿಗೆ ಲಿಂಗವಂತಿಕೆಯಾಗಲಿ, ಲಿಂಗ ಗುಣಗಳಾಗಲಿ ಯಾವ ಕಾಲದಲ್ಲಿಯೂ ಬರುವದಿಲ್ಲ. ಅವರು ಲಿಂಗವಂತರೆಂದೆನ್ನಿಸಿಕೊಳ್ಳಲೂ ಯೋಗ್ಯರಲ್ಲ.

ಲಿಂಗವೇ ಪ್ರಾಣ, ಪ್ರಾಣವೇ ಲಿಂಗವೆಂಬ ಭಾವ ಬಲಿಯಬೇಕು. ಆಗ ಪ್ರಾಣ ಲಿಂಗದ ಸಂಬಂಧವಾಗುವದು. ಲಿಂಗವು ಹೋದರೆ ಪ್ರಾಣವೇ ಹೋದಂತೆನಿಸಬೇಕು. ಆಗ ಭಾವಲಿಂಗ ಸಂಗಿಯೆನಿಸುವನು. ಅಂಥವನಿಗೆ ಭಾವಲಿಂಗದ ಸಾಕ್ಷಾತ್ಕಾರ ಸುಲಭವಾಗುವದು. ಅವನು ನಿಜಲಿಂಗಮಯನಾಗುವನು.

(iii) ಜಂಗಮ

ಪರಿಪೂರ್ಣ ಜ್ಞಾನಿಯಾದವನೇ ಜಂಗಮ, ಲಿಂಗಮುಖವೇ ಜಂಗಮ ಎಂದು ಹೇಳಲಾಗುವದು. ವಸಂತ ಮಾಸದಲ್ಲಿ ಸೃಷ್ಟಿಗೆ ಹೊಸ ಚೈತನ್ಯ ಬರುವಂತೆ ಜಂಗಮನು ಅತಿಥಿ ರೂಪದಲ್ಲಿ ಸಂಚರಿಸ ಹತ್ತಿದಾಗ ಜನಾಂಗದಲ್ಲಿ ಶಿವಕ್ರಿಯೆಗಳು ತಮ್ಮಿಂದ ತಾನೇ ವಿಕಾಸ ಪಡೆಯಹತ್ತುವವು. ವೀರಶೈವದ ಮೂರು ಮುಖಗಳಾದ ಗುರು, ಲಿಂಗ, ಜಂಗಮಗಳಲ್ಲಿ ಜಂಗಮನ ಪಾತ್ರ ಹಿರಿದು ಎಂದು ಹೇಳಲಾಗುತ್ತದೆ. ವೀರಶೈವ ಧರ್ಮದ ಆಚರಣೆ–ಅರಿವುಗಳ ಸಮನ್ವಯವನ್ನು ಜೀವನದಲ್ಲಿ ಮಾಡಿಕೊಂಡ ಬಗ್ಗೆ ಅವರು ಎದುರಿಸುವ ಸಮಸ್ಯೆಗಳ ಪರಿಹಾರದ ಬಗ್ಗೆ ಜಂಗಮರೇ ಹೊಣೆ.

ಭಕ್ತನು ಗುರು ಲಿಂಗಕ್ಕೆ ತನ್ನ ತನುಮನಗಳನ್ನು ಅರ್ಪಿಸಿ ಪರಿಶುದ್ಧಿಯನ್ನು ಹೊಂದಬೇಕು. ಕಾಯಕದಿಂದ ಸಂಪಾದಿಸಿದ ಧನವನ್ನು ತನ್ನ ಬದುಕಿಗೆ ಬೇಕಾಗು

ವಷ್ಟನ್ನು ವಿನಿಯೋಗಿಸಿ ಉಳಿದದ್ದನ್ನು "ಜಂಗಮಕ್ಕೆ" ಅರ್ಪಿಸುವುದರ ಮೂಲಕ ಜಂಗಮ ದಾಸೋಹ ಮಾಡಬೇಕು. ಅನ್ನ ದಾಸೋಹದ ಜೊತೆಗೆ ಜನತೆಗೆ ಸನ್ಮಾರ್ಗ ಬೋಧಿಸಲು ಶರಣರು ಜ್ಞಾನದಾಸೋಹವನ್ನೂ ಪ್ರಾರಂಭಿಸಿದರು. ಅದು ಬೇರೆ ವಿಷಯ.

ಜಂಗಮ ದಾಸೋಹವನ್ನು ಬಸವಣ್ಣನವರು ಮಧ್ಯಾಹ್ನದ ಉರಿಬಿಸಿಲಿಗೆ ಹೋಲಿಸಿದ್ದಾರೆ; ಬಹುಶಃ ಅದರ ಆಚರಣೆಯಲ್ಲಿರುವ ಕಠಿಣತೆಯನ್ನು ಸೂಚಿಸಲು. ಆದರೂ ಶಿವ-ಶರಣರು ಇದನ್ನು ನಿಷ್ಠೆಯಿಂದ ಆಚರಿಸಿದರು. "ಜಂಗಮ ದಾಸೋಹ ವಿಲ್ಲದೆಡೆ ಲಿಂಗ ತೃಪ್ತಿಯಿಲ್ಲ" ಎಂದು ಹೇಳುವಲ್ಲಿ ಜಂಗಮ ದಾಸೋಹದ ಹಿರಿಮೆ ಕಂಡು ಬರುತ್ತದೆ.

ಶರಣರ ಅರ್ಥದಲ್ಲಿ "ಜಂಗಮ" ಜಾತಿ ವಾಚಕ ಪದವಾಗಿರಲಿಲ್ಲ. ಇಡೀ ಸಮಾಜವನ್ನೇ ಅವರು ಜಂಗಮ ಪದದಲ್ಲಿ ಅಳವಡಿಸಿರುವುದು ಕಾಣುತ್ತದೆ. ಅವರು ಮಾಡಿದ ದಾಸೋಹ ಸಮಾಜದ ಹಿತಕ್ಕಾಗಿ, ಸಮಾಜದ ಉನ್ನತಿಗಾಗಿ, ಲಿಂಗಕ್ಕೆ. ಜಂಗಮಕ್ಕೆ ಮಾಡಿದ ಸೇವೆಯನ್ನು ಎತ್ತಿ ತೋರಿಸಬಾರದು. ಅಷ್ಟೆ ಏಕೆ ಅದು ಮನಸ್ಸಿನಲ್ಲಿಯೂ ಸಹಿತ ಮೂಡಬಾರದು.

"ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ,
ಮಾಡಿದೆನೆನ್ನದಿರು ಲಿಂಗಕ್ಕೆ, ಮಾಡಿದೆನೆನ್ನದಿರು ಜಂಗಮಕ್ಕೆ,
ಮಾಡಿದೆನೆಂಬುದು ಮನದಲ್ಲಿಲ್ಲದಿರೆ ಬೇಡಿದ್ದನೀವ ನಮ್ಮ ಕೂಡಲ ಸಂಗಮದೇವ"

ಎಂದು ಬಸವಣ್ಣನವರು ಹೇಳಿದ್ದಾರೆ. ಇಲ್ಲಿಯೂ ಸಹಿತ ಜಂಗಮಕ್ಕೆ ವ್ಯಾಪಕಾರ್ಥ ವನ್ನು ಕೊಟ್ಟಿದ್ದು ಕಂಡು ಬರುತ್ತದೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಸೂತ್ರ ಈ ದಿಸೆಯಲ್ಲಿ ಪೂರಕವಾಗಬಲ್ಲದು. ಸ್ಥಾವರ ಎಂದರೆ ಜಡವಾದದ್ದು. ಜಂಗಮವಾದರೋ ಚೈತನ್ಯತೆಯ, ಚಲನಶೀಲತೆಯ, ಬೆಳವಣಿಗೆಯ ನಿರಂತರತೆಯ ದ್ಯೋತಕ. ಈ ದೃಷ್ಟಿಯಿಂದ ಜಂಗಮತೆ ಸಮಾಜದ ಲಕ್ಷಣವಾಗಿದೆ.

ಸುಡುವ ಗುಣ ಹೊಂದಿದ್ದಕ್ಕೆ ಒಂದು ವಸ್ತುವು ಬೆಂಕಿ ಎನ್ನಿಸಿಕೊಳ್ಳುತ್ತದೆ. ಹಸಿವು ಹಿಂಗಿಸುವ ಗುಣ ಹೊಂದಿದ್ದಕ್ಕೆ ಆಹಾರವೆನ್ನಿಸಿಕೊಳ್ಳುತ್ತದೆ. ಹಾಗೆ ಜ್ಞಾನವನ್ನು ನೀಡುವ ಗುಣದಿಂದ, ಜನರಿಗೆ ಉತ್ತಮ, ನೈತಿಕ–ಧಾರ್ಮಿಕ ಸಂಸ್ಕಾರ ವನ್ನು ನೀಡುವ ಕರ್ತವ್ಯದಿಂದ ಒಬ್ಬ ವ್ಯಕ್ತಿ ಗುರು ಎನ್ನಿಸಿಕೊಳ್ಳುತ್ತಾನೆ. ಅವನು ಸೀಮಿತವಾದ ಒಂದು ಕ್ಷೇತ್ರವನ್ನು ಆರಿಸಿಕೊಂಡು ತನ್ನ ಸುತ್ತಲಿನ ಜನರಿಗೆ ಜ್ಞಾನ, ಸಂಸ್ಕಾರ ನೀಡುತ್ತಾ ಅವರನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಮುನ್ನಡೆಸಿದರೆ ಜಂಗಮನದು ವ್ಯಾಪಕ ಕ್ಷೇತ್ರ. ಅವನ ವ್ಯಕ್ತಿತ್ವವೂ ಹಿರಿದು. ಪ್ರತಿಭಾತ್ಮಕವಾದುದು.

ತನ್ನ ಅಪೂರ್ವ ವಿದ್ವತ್ತು, ಅನುಭಾವಗಳಿಂದ ಸದಾ ಸಂಚರಿಸಿ ಜ್ಞಾನ ಬೋಧೆ ಮಾಡುವನು. ಆತನ ಸಂಚಾರ ''ಬಿರುಗಾಳಿ ಬೀಸಿ ಮರ ಮುರಿವಂತೆ ಇರಬಾರದು. ತಂಗಾಳಿ ಪರಿಮಳದೊಡನೆ ಮಧುರವಾಗಿ ಬೀಸುತ್ತ ಸುಳಿವಂತೆ ಇರಬೇಕು'' ಜಂಗಮ ಒಬ್ಬ ನ್ಯಾಯಾಧೀಶನಿದ್ದಂತೆ, ನಿಸ್ವಾರ್ಥಿಯೂ ಸಮಷ್ಟಿಯಲೇಸು ಬಯಸುವವನಾಗಿ ಸಂಚರಿಸುವ ನಡೆಲಿಂಗ, ಜ್ಞಾನ ದೇಗುಲ. ಗುರು ಮತ್ತು ಜಂಗಮ ಈ ಉಭಯತರೂ ತಮ್ಮ ತಮ್ಮ ಕಾಯಕ ನಿರ್ವಹಿಸಬೇಕು. ಆಗ ಮಾತ್ರ ಅವರ ವೇಷದ ಪಾಶ ಹರಿದು ಹೊಟ್ಟೆ ಪಾಡಿನ ವೇಷಧಾರಿ ಎಂಬ ಅಪವಾದ ತೊಲಗುವುದು.

ಜಂಗಮನ ಜಂಗಮತ್ವವು ಅತ್ಯುನ್ನತ ಮಾನಸಿಕ, ಯೌಗಿಕ ಸ್ಥಿತಿ ಎಂದು ಹೇಳುತ್ತಾರೆ. ಆ ಸ್ಥಿತಿಯನ್ನು ತಲುಪಿದವರು ಲಕ್ಷಕ್ಕೊಬ್ಬರು ಸಿಗುವುದು ಕಠಿಣ. ಭಕ್ತನು ಸದಾಚಾರಿ. ಗುರುವು ಸದ್ವಿಚಾರಿ. ಜಂಗಮನು ಶಿವಾನುಭವಿ.

ಪ್ರಸಕ್ತ ಸನ್ನಿವೇಶದಲ್ಲಿ ಸಮಷ್ಟಿಯ ಲೇಸು ಬಯಸಿ ಜ್ಞಾನ ದೇಗುಲಗಳನ್ನು (ಶಿಕ್ಷಣ ಸಂಸ್ಥೆಗಳನ್ನು) ನಡೆಸುತ್ತಿದ್ದೇವೆ ಎದು ಕೆಲ ಜಂಗಮರು (ಮಠಾಧೀಶರು) ಹೇಳಿಕೊಳ್ಳಬಹುದು. ಆದರೆ ಅವರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಎಷ್ಟರ ಮಟ್ಟಿಗೆ ಧಾರ್ಮಿಕ ತರಬೇತಿ ನೀಡಲಾಗುತ್ತಿದೆ, ಅಲ್ಲಿ ತಯಾರಾಗಿ ಬಂದವನು ಎಷ್ಟು ಧರ್ಮಾಭಿಮಾನಿಯಾಗಿರುವನು ಎಂಬುದನ್ನು ಗಮನಿಸಬೇಕು. ಮತ್ತು ಅಂಥವರು ನಡೆಸುವ ಯಾವುದೇ ಸಂಸ್ಥೆಗಳು ಧರ್ಮದ ಜಾಗೃತಿಗೆ, ನಶಿಸಿದ ಮಾನವೀಯ ಮೌಲ್ಯಗಳ ಪುನರುತ್ಥಾನಕ್ಕೆ ಎಷ್ಟು ಸಹಕಾರ ನೀಡಿವೆ ಎಂಬುದು ಚಿಂತನಾರ್ಹ.

"ಜಂಗಮ'' ಒಂದು ಅದ್ಭುತ ಕ್ರಾಂತಿಕಾರಿ ಕಲ್ಪನೆಯಾಗಿ ಬಹು ವಿಧದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ, ಮತ್ತು ಬೋಧಿಸಲ್ಪಟ್ಟಿದೆ ಕಾಲಾಂತರದಲ್ಲಿ ಅದು ಶಿಥಿಲಗೊಂಡುದು ನಿಜ. ಸಮಾನತೆಯ ಸಾಧನವನ್ನಾಗಿ ಬಳಸಿದ ಅಸ್ತ್ರವು ಸಮಾನತೆಯನ್ನೇ ಧೂಳಿಪಟ ಮಾಡಿತು ಎನ್ನುವುದು ಉಚಿತವಲ್ಲ. ಧರ್ಮದ ಉಳಿವಿಗಾಗಿ ತಪ್ಪು ಕಲ್ಪನೆ, ತಪ್ಪು ಆಚರಣೆ ಬಿಡಲು ಹೇಳಬೇಕೇ ವಿನಾ ಮೂಲ ತತ್ವವನ್ನೇ ನಿಂದಿಸಬಾರದು.

(iv) ವಿಭೂತಿ

ಅಷ್ಟಾವರಣದಲ್ಲಿ ಗುರು-ಲಿಂಗ-ಜಂಗಮಗಳನ್ನು ಪೂಜಿಸುವ ಸಾಧನಗಳೇ ಭಸ್ಮ, ರುದ್ರಾಕ್ಷಿ ಮಂತ್ರಗಳು.

ಶಿವನ ಮೈ ಬೆಳಕೇ ದಿವ್ಯ ಭಸಿತವೆಂದು ಹೇಳುತ್ತಾರೆ. ಅಂಥ ಪರಂಜ್ಯೋತಿ ಪ್ರಕಾಶವನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಧಾನ ಸಾಧನವಾದ ವಸ್ತುವೇ ವಿಭೂತಿ.

ಗುರು-ಲಿಂಗ ಜಂಗಮರ ಅಂತರಂಗದೊಳಗೆ ನೆಲೆಸಿರುವ ಶಾಂತಿ ಚಿತ್ಕಳೆಯಿಂದ ಅವರ ಅನುಗ್ರಹಪೂರ್ವಕ ಪ್ರಾಪ್ತವಾಗುವುದೇ ದಿವ್ಯ ವಿಭೂತಿ. ಇದು ಯಾವ ಉಪಾಧಿಗಳಿಲ್ಲದೇ ದೊರೆಯುವ ಕಾರಣ ನಿರುಪಾಧಿಕವೆನಿಸಿದೆ.

ವೀರಶೈವ ಸಿದ್ಧಾಂತದ ಪ್ರಕಾರ ಗೋಮಯದಲ್ಲಿ ದಿವ್ಯ ಶಕ್ತಿಯಿಂದ ಇದು ಪಂಚಗವ್ಯಗಳಲ್ಲಿ ಒಂದಾಗಿದೆ. ಗೋಮಯದಿಂದ ಮನೆಯನ್ನು ಸಾರಣೆ ಮಾಡುವ ಪದ್ಧತಿ ಹಿಂದಿನಿಂದಲೂ ಬೆಳೆದು ಬಂದಿದೆ. ಅದು ಮನೆಯ ಸೊಬಗನ್ನು ಹೆಚ್ಚಿಸುವು ದಲ್ಲದೇ ಕ್ರಿಮಿನಾಶಕ ಶಕ್ತಿಯೂ ಇದರಲ್ಲಿದೆ. ಮತ್ತು ಗೋಮಯ ಆರೋಗ್ಯವರ್ಧಕ ವಾಗಿದೆ. ಯಾಕಂದರೆ ಗೋವು ಪವಿತ್ರ ಪ್ರಾಣಿ. ಅದು ಪೂಜೆಗೊಳ್ಳುತ್ತದೆ. ಕಾರಣ ಅದಕ್ಕೆ ಗೋಮಾತೆಯೆನ್ನುತ್ತಾರೆ. ಆಕಳು ಅನೇಕ ವನಸ್ಪತಿಗಳನ್ನು ತಿಂದು ಕರಗಿಸಿಕೊಂಡು ಗೋಮಯವನ್ನು ಕೊಡುತ್ತದೆ. ಒಕ್ಕಲಿಗನಿಗೆ ಉತ್ತಮ ಗೊಬ್ಬರ ವಾದರೆ ಶಿವಭಕ್ತನ ನೊಸಲಿಗೆ ವಿಭೂತಿಯಾಗುತ್ತದೆ.

ಹಿಮಾಲಯದ ಮೈಕೊರೆಯುವ ಚಳಿಯಲ್ಲಿಯೂ ದಿಗಂಬರ ಸನ್ಯಾಸಿಗಳು ಸರ್ವಾಂಗಕ್ಕೆ ಭಸ್ಮ ಧಾರಣ ಮಾಡಿಕೊಂಡೇ ತಮ್ಮ ಜೀವನ ನಿರ್ವಹಿಸುತ್ತಾರೆ. ಭಸ್ಮದ ಪ್ರಭಾವದಿಂದಲೇ ಆರೋಗ್ಯವಾಗಿರುತ್ತಾರೆ. ಹೀಗೆ ಭಸ್ಮವು ಶೀತಬಾಧೆ ಯನ್ನು ಕಳೆಯುತ್ತದೆ, ಚರ್ಮವ್ಯಾಧಿಯನ್ನು ಗುಣಪಡಿಸುತ್ತದೆ. ಶಿವಕಳೆಯನ್ನು ತಂದು ಕೊಡುತ್ತದೆ, ಮತ್ತು ಶಿವಭಾವನೆಯನ್ನು ತುಂಬುತ್ತದೆ. ಇಂಥ ಅಗಣಿತ ಮಹಿಮೆಯುಳ್ಳ ಭಸ್ಮವನ್ನು ಧರಿಸುವಲ್ಲಿ ಸದ್ಭಾವನೆ ಹಾಗೂ ಸಾವಧಾನತೆಗಳು ಅವಶ್ಯ. ತ್ರಿಕಾಲದಲ್ಲಿ ಪವಿತ್ರ ಭಸ್ಮವನ್ನು ಧರಿಸಿದರೆ ಅಂಗವೂ ಪಾವನಗೊಳ್ಳುವದು. ಭಸ್ಮದಂತೆ ದಿವ್ಯ ಶಿವಕಳೆಯೂ ಬರುವದು. ಭಸ್ಮದ ಕಣಗಳು ಕೆಳಗೆ ಬೀಳಬಾರದು. ಯಾಕಂದರೆ ಕಣಕಣಗಳಲ್ಲಿದ್ದ ದಿವ್ಯಶಕ್ತಿಯನ್ನು ಕಳೆದುಕೊಂಡಂತಾಗುವದು. ಚಲ್ಲಿದ ದೋಷಕ್ಕೂ ಗುರಿಯಾಗಬೇಕಾಗುವದು. ಮತ್ತು ನಿರ್ಲಕ್ಷ್ಯತನದಿಂದ ಭಸ್ಮದಲ್ಲಿಯ ಶ್ರದ್ಧೆಯೂ ಅಳಿದು ಹೋಗುವದು.

ಭಸ್ಮವನ್ನು ಧರಿಸುವಾಗ ಮಾನಿಯಾಗಿರಬಾರದು. ಮಂತ್ರಧ್ಯಾನ ಮಾಡುತ್ತಾ ಅಥವಾ ಭಸ್ಮದ ಮಹತ್ವವನ್ನು ನೆನೆಯುತ್ತಾ ಭಸ್ಮಧಾರಣ ಮಾಡಬೇಕು.

ಬಸವಣ್ಣನವರು:—

"ನೀರಿಂಗೆ ನೈದಿಲೆಯೆ ಶೃಂಗಾರ, ಸಮುದ್ರಕ್ಕೆ ತೆರೆಯೇ ಶೃಂಗಾರ,
ನಾರಿಗೆ ಗುಣವೇ ಶೃಂಗಾರ, ಗಗನಕ್ಕೆ ಚಂದ್ರಮನೇ ಶೃಂಗಾರ,
ನಮ್ಮ ಕೂಡಲ ಸಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ"

ಎಂದು ಭಸ್ಮಧಾರಣೆಯ ಮಹತ್ವವನ್ನು ಮನದುಂಬಿ ಹಾಡಿದ್ದಾರೆ.

ಭಸ್ಮವನ್ನು ಹಣೆಯ ಮೇಲೆ ಧರಿಸಿದರೆ ದೈವದ ದುರ್ಲಿಪಿಯು ಅಳಿಯುತ್ತದೆ. ಮೂರು ರೇಖೆಗಳು ಸ್ಪಷ್ಟವಾಗಿ ಕಾಣುವಂತೆ ಧರಿಸಬೇಕು. ಈ ತ್ರಿಪುಂಡ್ರಗಳು ಸತ್ವ–ರಜ–ತಮೋಗುಣಗಳನ್ನು ಮೀರಿನಿಂತ ವ್ಯಕ್ತಿತ್ವವನ್ನು ಸೂಚಿಸುವ ಸಂಕೇತಗಳಾಗಿವೆ. ಭಕ್ತಿ–ಜ್ಞಾನ–ವೈರಾಗ್ಯ ಸಂಪನ್ನನೆಂಬ ಕುರುಹನ್ನು ತೋರಿಸುತ್ತವೆ. ಮತ್ತು ಹೊನ್ನು–ಹೆಣ್ಣು–ಮಣ್ಣುಗಳಿಂದ ಮುಕ್ತನಾದವನೆಂಬ ಸಂಕೇತವನ್ನು ಸೂಚಿಸುತ್ತವೆ.

ಭಸ್ಮವು ವೀರಶೈವರಿಗೆ ಪರಮಾಲಂಕಾರವಾಗಿದೆ. ಮತ್ತು ಅಪಾರ ಮಹಿಮೆಯುಳ್ಳದ್ದಾಗಿದೆ. ಶೈವ ಪರಂಪರೆಯಲ್ಲಿ ಯಜ್ಞದ ಬೂದಿಯು ಭಸ್ಮವೆಂದು ಬಳಕೆಯಲ್ಲಿ ಬಂದಿರಬಹುದು. ಆದರೆ ಶರಣರ ಪರಂಪರೆಯಲ್ಲಿ ವಿಭೂತಿಯು ಪೃಥ್ವಿ, ಜಲ, ಅಗ್ನಿ, ತತ್ವಗಳ ಸತ್ಯವನ್ನು ಪಡೆಯುತ್ತಾ ವಾಯುತತ್ವದ ಶುದ್ಧ ಸ್ವರೂಪವನ್ನು ಪಡೆಯುವದು. ಕಾಷ್ಟ ಹಾಗೂ ಗೋಮಯವನ್ನು ಸುಟ್ಟು ಬೂದಿ ಮಾಡಿದಾಗ ಅದರ ಪೃಥ್ವಿ ತತ್ವದ ಕಾಠಿಣ್ಯವು ದೂರವಾಗುವದು. ಅದಕ್ಕೆ ಪವಿತ್ರ ಜಲ ಮಿಶ್ರಣ ಮಾಡಿದರೆ ಆ ಬೂದಿಯು ಜಲ ತತ್ವದ ದೈವೀಕರಣವನ್ನು ಹೊಂದುವದು. ಪವಿತ್ರ ಜಲದಿಂದ ದೈವೀಕರಣಗೊಂಡ ಈ ಬೂದಿಯನ್ನು ಅಗ್ನಿ ಪುಟಕ್ಕೆ ಹಾಕಲು ಜಲ–ಸ್ಥೂಲ ಸ್ವರೂಪವನ್ನು ಕಳೆದುಕೊಂಡು ಅಗ್ನಿ ತತ್ವದ ಕೆಂಪು ವರ್ಣವನ್ನು ಪಡೆಯುವದು. ಈ ಕೆಂಪು ಭಸ್ಮವನ್ನು ಮತ್ತೆ ಮತ್ತೆ ಪುಟಕ್ಕಿಕ್ಕಲು ಅಗ್ನಿ–ತತ್ವದ ರಜೋಗುಣವನ್ನು ಕಳೆದುಕೊಂಡು ವಾಯುತತ್ವದ ಶ್ವೇತವರ್ಣವನ್ನು ಪಡೆಯುವದು. ಹೀಗೆ ಗೋಮಯ ಕಟ್ಟಿಗೆಯಿಂದ ಅಂಟಿಬಂದಿದ್ದ ತಮೋ ಗುಣವನ್ನು ಕಳೆದುಕೊಂಡು ಸತ್ವ ಗುಣದ ಬಿಳಿ ರೂಪವನ್ನು ಪಡೆದು ಅದಕ್ಕೆ ಪಾದೋದಕ ಮಂತ್ರಗಳ ಸಂಸ್ಕಾರ ಕೊಟ್ಟಾಗ ವಿಭೂತಿಯು ಪೂರ್ಣ ಸ್ವರೂಪ ಪಡೆದು ಧರಿಸಲು ಯೋಗ್ಯವೆನಿಸುವದು. ಇದನ್ನು ದೇಹದ ಮೇಲೆ ಧರಿಸಿದರೆ ಬಾಹ್ಯ ಮತ್ತು ಅಂತರ ವಲಯಗಳು ಶುದ್ಧಿಗೊಂಡು ಸುಮನಸ್ಸು ಪ್ರಾಪ್ತವಾಗಿ ಅದರ ಪ್ರಭೆಯೇ ಚಿದ್ಭಸಿತವಾಗಿ, ಚಿತ್ಪ್ರಕಾಶವಾಗಿ ಕಾರಣ–ಶರೀರಕ್ಕೆ ಆವರಣವಾಗುವದು. ಲಿಂಗವಂತರು ಜ್ವರ ಮೊದಲಾದ ಅನಾರೋಗ್ಯಕ್ಕೊಳಗಾದಾಗ ಜಲಸ್ನಾನ ಬಿಟ್ಟು ಭಸ್ಮಸ್ನಾನ ಮಾಡಿ ಲಿಂಗಾರ್ಚನೆಯನ್ನು ಮಾಡಿಕೊಳ್ಳಬಹುದು.

"ಅಷ್ಟಾವರಣ" ಧಾರ್ಮಿಕ ತತ್ವಗಳು, ''ಪಂಚಾಚಾರ''ಗಳು ನೈತಿಕ ತತ್ವಗಳು ಹಾಗೂ "ಷಟ್‌ಸ್ಥಲ"ಗಳು ಆಧ್ಯಾತ್ಮಿಕ ತತ್ವಗಳು ಎಂದು ವಿಂಗಡಿಸಲಾಗುತ್ತಿದೆ. ಈ ಮೂರು ತತ್ವ ಸಮುಚ್ಚಯಗಳ ಮುಪ್ಪುರಿಯೇ ಲಿಂಗವಂತ ಧರ್ಮವೆನ್ನಬಹುದು.

ಅಷ್ಟಾವರಣಗಳಲ್ಲೊಂದಾದ ವಿಭೂತಿ ಕುರಿತು ಬಸವಾದಿ ಶರಣರು ತಮ್ಮ ವಚನಗಳಲ್ಲಿ ಅನುಭಾವ ಪದ್ಯಗಳಿಂದ ಚಿಂತನ ಮಾಡಿದ್ದಾರೆ. "ವಿಭೂತಿ" ಭೂತ

ಗುಣಗಳನಳಿದುದೇ ವಿಭೂತಿ. ಪರಶಿವನ ದಿವ್ಯ ತೇಜಸ್ಸು ಎಂದು ಶರಣರು ತಿಳಿಸುತ್ತಾರೆ.

ವಿಭೂತಿಯನ್ನು ಎರಡು ಬಗೆಯಾಗಿ ವಿಂಗಡಿಸಲಾಗಿದೆ 1) ಸೋಪಾಧಿಕ 2) ನಿರುಪಾಧಿಕ. "ಸೋಪಾಧಿಕ" ವಿಭೂತಿಯನ್ನು ಸಿದ್ಧ ಮಾಡುವ ವಿಧಾನಗಳು ನಾಲ್ಕು ಪ್ರಕಾರವಾಗಿವೆ. ಕಲ್ಪ, ಅನುಕಲ್ಪ, ಉಪಕಲ್ಪ, ಅಕಲ್ಪ. ಮೊದಲನೆಯ ವಿಧಾನವೇ ಬಹಳ ಶ್ರೇಷ್ಟ. ಬಲ್ಲವರು ಈ ವಿಧಾನಗಳನ್ನರಿತು ವಿಭೂತಿಯನ್ನು ಮನಿಯಲ್ಲಿಯೂ ತಯಾರಿಸಬಹುದು. ವಿಭೂತಿಯನ್ನು ಧಾರಣೆಯ ಪದ್ಧತಿ ಹಾಗೂ ಮಹಾತ್ಮೆಯನ್ನರಿತು ಧರಿಸಿದರೆ ಆ ವ್ಯಕ್ತಿಯ ಬಾಳು ಪಾವನವಾಗುತ್ತದೆ. "ಲಲಾಟ ದಲ್ಲಿ ವಿಭೂತಿಯ ಧರಿಸಲಿಕ್ಕೆ ಪಾಪ ಪಲ್ಲಟವಾಗದೇ, ಮುನ್ನ ಮಾಡಿದ ಪಾಪವೆಂತು ಹೋಹುದು ಎಂದು ಚಿಂತಿಸಬೇಡ'' ಎಂದು ಬಸವಣ್ಣನವರು ನುಡಿದಿದ್ದಾರೆ.

ಹಣೆಯ ತ್ರಿಪುಂಡ್ರ ಅಂದರೆ ಮೂರು ಬೆರಳುಗಳಿಂದ ವಿಭೂತಿ ಧರಿಸುವ ಉದ್ದೇಶ, ಅದು ಅರಿವು ಆಚಾರ ಅನುಭಾವಗಳ ದ್ಯೋತಕ.

(v) ರುದ್ರಾಕ್ಷ

ಗುರು-ಲಿಂಗ-ಜಂಗಮಾರಾಧನೆಯ ಸಾಧನೆಗಳಲ್ಲಿ ಎರಡನೆಯದು, ಅಷ್ಟಾ-ವರಣದಲ್ಲಿ ಏಳನೆಯದು, ರುದ್ರಾಕ್ಷ. ರುದ್ರನ ನೇತ್ರದಿಂದ ಹೊರಹೊಮ್ಮಿದ್ದರಿಂದ ರುದ್ರಾಕ್ಷವೆಂಬ ಹೆಸರು ಬಂದಿದೆ. ಭಕ್ತಿಯ ಬಾಳನ್ನು ಬಾಳುವ ಶರಣ ಸಂತತಿಗೆ ರುದ್ರಾಕ್ಷವೇ ದಿವ್ಯಾಭರಣ, ಲೌಕಿಕ ಮಾನವರಿಗೆ ಬಂಗಾರದೊಡವೆಯಿದ್ದಂತೆ. ಶಿವನೂ ಸಹಿತ ರುದ್ರಾಕ್ಷವನ್ನೇ ತನ್ನ ಮೈದೊಡಿಗೆಯನ್ನಾಗಿ ಮಾಡಿಕೊಂಡಿದ್ದಾನೆ. ಯಾರು ರುದ್ರಾಕ್ಷವನ್ನು ತಮ್ಮ ಮೈ ಮೇಲೆ ಧರಿಸಿಕೊಂಡಿರುವರೋ ಅವರ ಮೇಲೆ ಶಿವನ ಕೃಪಾದೃಷ್ಟಿ ಇದ್ದೇ ಇರುತ್ತದೆ. ಇಂಥವರೇ ಗುರುಲಿಂಗ ಜಂಗಮರ ಕರುಣೆ ಯನ್ನು ಪಡೆಯಲು ಸಮರ್ಥರಾಗುತ್ತಾರೆ.

ವಿಭೂತಿ ಶೈತ್ಯದೋಷ ನಿವಾರಣೆ ಮಾಡಿದರೆ ರುದ್ರಾಕ್ಷ ಉಷ್ಣಾಂಶವನ್ನು ನಾಶ ಮಾಡುತ್ತದೆ. ಇದು ವೈಜ್ಞಾನಿಕ ಸತ್ಯ.

ಶಿವನು ರಾಕ್ಷಸರ ಕೈಸೇರಿದ್ದ ತ್ರಿಪುರಗಳನ್ನು ನಾಶ ಮಾಡಲು ರುದ್ರಾವತಾರ ವನ್ನು ತಾಳಿದನು. ತದೇಕ ಧ್ಯಾನದಿಂದ, ಏಕದೃಷ್ಟಿಯಿಂದ ತ್ರಿಪುರಗಳನ್ನು ನಾಶ ಮಾಡಲು ಗುರಿ ಹಚ್ಚಿದ್ದರಿಂದ ಅವನ ಕಣ್ಣಿನಲ್ಲಿ ನೀರು ತುಂಬಿ, ಕಣ್ಣೀರಿನ ಹನಿ ಗಳು ಹಿಮಾಲಯದ ಸಾನು ಪ್ರದೇಶದಲ್ಲಿ ಬಿದ್ದುದರಿಂದ ಅಲ್ಲಿ ಮರಗಳಾಗಿ ಹುಟ್ಟಿ ದವು. ಆ ಮರದ ಕಾಯಿಗಳೇ ರುದ್ರಾಕ್ಷಗಳು. ರುದ್ರನ ಅಕ್ಷಿಯ ಕಂಬನಿಗಳೇ

ಕಾರಣವಾದುದರಿಂದ ರುದ್ರಾಕ್ಷವೆಂಬ ಹೆಸರು ಸ್ಥಿರವಾಯಿತು. ಈ ಸ್ಥೂಲ ಮಣಿ ಯಿಂದ ಜನಿಸಿದ ರುದ್ರಾಕ್ಷ ಮಣಿಗಳನ್ನು ಭಕ್ತಿಯಿಂದ ಧರಿಸಿದರೆ ಶಿವನ ಕೃಪಾದೃಷ್ಟಿ ಅವಶ್ಯವಾಗಿ ಉಂಟಾಗುವದು.

"ರುದ್ರಾಕ್ಷದಲ್ಲಿ ಎಲ್ಲ ಔಷಧಗಳಿಗಿಂತಲೂ ಮಿಗಿಲಾದ ಗುಣವಿದೆ. ವಾಯು ಶುದ್ಧಿಯನ್ನು ಮಾಡುವುದರಲ್ಲಿ ರುದ್ರಾಕ್ಷವನ್ನು ಬಿಟ್ಟರೆ ಇನ್ನೊಂದಿಲ್ಲ. ಜ್ವರಬಂದ ಬಾಯಿ ನಾಲಿಗೆಗಳ ವಿಷವನ್ನು ರುದ್ರಾಕ್ಷದ ಗಂಧ ಪರಿಹರಿಸುತ್ತದೆ. ಅಂತ್ಯ ಕಾಲ ದಲ್ಲಿ ಅದರ ಗಂಧವನ್ನು ಕುಡಿಸಿದರೆ ಪವಿತ್ರವಾಗಿ ಕೈಲಾಸ ಪ್ರಾಪ್ತಿಯಾಗುತ್ತದೆ. ಯಾವಾಗಲೂ ರುದ್ರಾಕ್ಷವನ್ನು ಎದೆಯ ಮೇಲೆ ಧರಿಸಿದರೆ ವಾಯು ಶುದ್ಧವಾಗಿ ಆರೋಗ್ಯವುಂಟಾಗುತ್ತದೆ. ಮತ್ತು ಜ್ವರ, ತಲೆನೋವುಗಳು ಖಚಿತವಾಗಿ ವಾಸಿ ಯಾಗುತ್ತವೆ" ಎಂದು ರುದ್ರಾಕ್ಷದ ಸದುಪಯೋಗವನ್ನು ಜ. ಚ. ನಿ. ಯವರು ಅಷ್ಟಾವರಣದ ಬಗ್ಗೆ ಕೃತಿಯಲ್ಲಿ ವಿವರಿಸಿದ್ದಾರೆ. ಈ ಭೂಮಿಯಲ್ಲಿ ಕೋಟಿ ಆಕಳು ಗಳನ್ನು ದಾನ ಮಾಡುವದರಿಂದ ಯಾವ ಫಲವು ಪ್ರಾಪ್ತವಾಗುವದೋ ಅಂಥ ಫಲ ವನ್ನು ಪ್ರತಿನಿತ್ಯದಲ್ಲಿ ರುದ್ರಾಕ್ಷಧಾರಣ ಮಾಡುವದರಿಂದ ಮಾನವನು ಪಡೆಯಬಲ್ಲ ನೆಂದು ಭಗವತ್ಪಾದರಾದ ಶ್ರೀ ರೇಣುಕಾರ್ಯರು ಅಗಸ್ತ್ಯರಿಗೆ ಬೋಧಿಸಿದರು.

ಸಾಮಾನ್ಯವಾಗಿ ಪಂಚಮುಖ ಪರಶಿವನ ಪ್ರತೀಕವಾದ ಪಂಚಮುಖದ ರುದ್ರಾಕ್ಷಿಗಳನ್ನು ಧರಿಸುವದು ಮೇಲು. ಕಂಠದಲ್ಲಿ ೩೨ ಮಣಿಯ ಮಾಲೆ ಧರಿಸಬೇಕು. ಎದೆಯ ಮೇಲೆ ಸುತ್ತುವರಿದು 57 ರುದ್ರಾಕ್ಷಿಗಳ ಸರವನ್ನು ಧರಿಸಬೇಕು. ಸಾಧ್ಯ ವಾದರೆ ಒಂದಕ್ಕೊಂದು ಕೂಡಿಕೊಂಡಿರುವ "ಗೌರೀಶಂಕರ" ಎಂಬ ದಿವ್ಯ ರುದ್ರಾಕ್ಷ ವೊಂದನ್ನು ಯಾವಾಗಲೂ ಎದೆಯ ಮೇಲೆ ಧರಿಸಬೇಕು. ಇದು ಶಿವಾದ್ವೈತ ತತ್ವ ಸೂಚಕವಾಗಿದೆ. ಮತ್ತು ಅಪೂರ್ವ ಶಕ್ತಿದಾಯಕವೆನಿಸಿಕೆ ಎಂದು ಹೇಳುತ್ತಾರೆ. ಭವನೆಂಬ ಕರಕಿಯ ಬೇರಿಗೆ ರುದ್ರಾಕ್ಷಮಾಲೆಯು ಧಾರಣವೇ ಗುದ್ದಲಿಯಾಗಿದೆ ಅಂದರೆ ರುದ್ರಾಕ್ಷ ಧಾರಣೆಯಿಂದ ಭವನಾಶವಾಗುತ್ತದೆ. ಅದು ಸಕಲ ಸುಖಗಳನ್ನು ಒದಗಿಸಿ ಕೊಡುವಲ್ಲಿ ಅನುಕೂಲವಾದ ಸಾಧನವಾಗಿದೆ.

"ಘನಕ್ಕೆ ಘನಮಹಿಮೆಯು ಪಡೆವಡೆ. ಶ್ರೀ ರುದ್ರಾಕ್ಷಿಯನೆ ಧರಿಸುವುದು
ರುದ್ರಾಕ್ಷಿಯ ಧರಿಸಿರ್ಪಾತನು ಮರ್ತ್ಯನಲ್ಲ" ಎಂದು ಉರಿಲಿಂಗ ಪೆದ್ದಿಗಳು ಹೇಳಿದ್ದಾರೆ.

"ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವ ಪಾವನವು, ಕಾರಣವು, ಸಾಧನವು ಪಾಪಕ್ಷಯವು"

"ಅಯ್ಯಾ ರುದ್ರಾಕ್ಷಿಯಿಂದೆ:—

ಹರಿದೆನು ಭವಪಾಶಂಗಳ, ಮುರಿದೆನು ತನುಗುಣಾದಿಗಳ,

ಒರಸಿದೆನು ಮಹಾ ಮಾಯೆಯ, ಕಳೆದೆನು ಪಂಚಮಹಾಪಾತಕವ

ಗೆಲಿದೆನು ಸಕಲ ದುರಿತಂಗಳನು"

ಎಂದು ಬಸವಣ್ಣನವರು ರುದ್ರಾಕ್ಷಧಾರಣದ ಮಹತ್ವವನ್ನು ಸ್ವಾನುಭಾವದಲ್ಲಿ ಅರಿತುಕೊಂಡು ಹೇಳಿದ್ದಾರೆ.

ಹೀಗೆ ಪರಮ ಪಾವನವಾದ ರುದ್ರಾಕ್ಷಿಯು ಮುಕ್ತಿಯ ಪಥಕ್ಕೆ ಸಾಧನ ವಾಗಿದೆ. ಇದರ ಪ್ರಭಾವದಿಂದ ಸಕಲ ದುರಿತಗಳನ್ನು ಪರಿಹರಿಸಿ ಇಹ–ಪರ–ಗತಿ–ಮತಿ–ಮೋಕ್ಷವನ್ನು ಹೊಂದಬಹುದೆಂದೂ ಸದ್ಯೋನ್ಮುಕ್ತನಾಗಬಹುದೆಂದೂ ಮಹಾ ನುಭಾವಿಗಳು ಮನವರಿಕೆ ಮಾಡಿಕೊಟ್ಟಿದ್ದಾರೆ. ಸಾಧಕರಿಗೆ ಮಾರ್ಗದರ್ಶನ ನೀಡಿ ದ್ದಾರೆ. ಸಕಲ ಭೂಷಣಗಳಿಗೆ ಮೇರು ಮಣಿಯೆನಿಸಿದ ರುದ್ರಾಕ್ಷ ಮಣಿಗಳನ್ನು ಪರಮ ಗುರುವಿನ ಕೃಪಾಶೀರ್ವಾದದಿಂದ ಪಡೆದು ಅದರ ಮಹಿಮೆಯನ್ನು ಮನನ ಮಾಡಿಕೊಂಡು ಧರಿಸಿದರೆ ಸಕಲ ಸಿದ್ಧಿಗೆ ಕಾರಣವಾಗುವದು.

ರುದ್ರಾಕ್ಷಿಯ ದರ್ಶನ ಮಾಡಿದರೆ ಲಕ್ಷ ಫಲವು, ಸ್ಪರ್ಶ ಮಾಡಿದರೆ ಕೋಟಿ ಫಲವು, ಧರಿಸುವುದರಿಂದ ಸಾವಿರ ಕೋಟಿ ಫಲವು, ದೊರೆಯುವುದೆಂದು ಪರಮ ಜ್ಞಾನಿಗಳೆಲ್ಲ ತಿಳಿಸುತ್ತ ಬಂದಿದ್ದಾರೆ. ರುದ್ರಾಕ್ಷಿಯನ್ನು ಮನದಲ್ಲಿ ನೆನೆದರೆ ಅಧಿಕ ಪುಣ್ಯ ಪ್ರಾಪ್ತಿಯಾಗುವುದೆಂದು ಲಕ್ಕಣ್ಣ ದಂಡೇಶನು ತನ್ನ ಶಿವತತ್ವ ಚಿಂತಾಮಣಿ ಯಲ್ಲಿ ಬಣ್ಣಿಸಿದ್ದಾನೆ.

ರುದ್ರಾಕ್ಷೆಗಳನ್ನು ದಿನಂಪ್ರತಿ ಧರಿಸುವದರಿಂದ ಘನತರವಾದ ಜ್ಞಾನೋದಯ ವಾಗುವದು. ಧರಿಸುವುದಕ್ಕಿಂತ ಮೊದಲು ಮಾಡಿದ ಪಾಪಕರ್ಮಗಳ ಲೋಪ ನಿವಾರಣೆಯಾಗುವುದೆಂಬ ಪ್ರತೀತಿಯುಂಟು. ಅವನಲ್ಲಿಯ ಸರ್ವ ದುರ್ಗುಣಗಳು ನಾಶವಾಗುವವು. ಅವನು ಪುಣ್ಯ ಜೀವಿಯಾಗುವನು. ಲೋಕ ಮಾನ್ಯನಾಗುವನು. ದಿನನಿತ್ಯ ನಿಯಮಾನುಸಾರ ರುದ್ರಾಕ್ಷಿಗಳನ್ನು ಧರಿಸಿ ಪೂಜಿಸುವವನಿಗೆ ಮೂರು ಕೋಟಿ ಹಸುಗಳನ್ನು ದಾನ ಮಾಡಿದ ಪ್ರತಿಫಲ ದೊರೆಯುವದೆಂದು ನಾಡಿಕೆಯುಂಟು.

ರುದ್ರಾಕ್ಷಿ ಧಾರಣ ಮಾಡಿದವನು ತನ್ನ ತಂದೆ–ತಾಯಿಗಳೊಡನೆ ಕುಲ ಸಹಿತ ಸ್ವರ್ಗಕ್ಕೆ ಕೊಂಡೊಯ್ಯುತ್ತಾನೆ. ನಾಯಿಯ ಕೊರಳಲ್ಲಿ ಕಟ್ಟಿದರೆ ಅದು ಸಹಿತ ಶಿವಪುರ ಮುಟ್ಟುವದೆಂದು ಕೆರೆಯ ಪದ್ಮರಸನು ಹೇಳುತ್ತಾನೆ. ಪದ್ಮರಸನು ಹೇಳು ವದನ್ನು ನೋಡಿದರೆ ರುದ್ರಾಕ್ಷಿ ಧಾರಣದಿಂದ ಶ್ವಾನದಿಂದ ಮಾನವನ ವರೆಗೆ ಎಲ್ಲ ಪ್ರಾಣಿಗಳು ಮುಕ್ತಿ ಪಡೆಯುತ್ತವೆ ಎಂದು ಅರ್ಥವಾಗುತ್ತದೆ. ಧಾರಣ ಮಾಡಿದವರಿ ಗಷ್ಟೇ ಅಲ್ಲ, ಧರಿಸಿದವರನ್ನು ದರ್ಶಿಸುವದರಿಂದಲೂ ಲಾಭವಿದೆಯೆಂದಿದ್ದಾರೆ ಬಲ್ಲವರು.

ಆದಿ ಕಾಲದಿಂದಲೂ ಋಷಿಮುನಿಗಳು ರುದ್ರಾಕ್ಷಿಗೆ ಹೆಚ್ಚಿನ ಮಹತ್ವ ಕೊಟ್ಟು ಧರಿಸುತ್ತ ಬಂದಿದ್ದರೂ ವೀರಶೈವ ಸಿದ್ಧಾಂತದಲ್ಲಿ ಮಹತ್ವವಾದ ಸ್ಥಾನದಲ್ಲಿರಿಸಲಾಗಿದೆ. ಪರಿಪೂರ್ಣತ್ವದ ಜ್ಞಾನ ಪ್ರತೀಕವಾದ ನೇತ್ರವೆಂದು ಪರಿಗಣಿಸಲಾಗಿದೆ. ಆದ್ದರಿಂದ ರುದ್ರಾಕ್ಷಿ ವಿಶೇಷವಾಗಿ ವೀರಶೈವರಿಗೆ ಹೆಚ್ಚು ಪೂಜ್ಯನೀಯವಾಗಿದೆ. ಶರಣರು ರುದ್ರಾಕ್ಷಿಯನ್ನು ಪರಮ ಪಾವನವೆಂದು ಪರಿಗಣಿಸಿ ಪೂಜಿಸಿ, ಧರಿಸಿದುದಲ್ಲದೆ ಅದರ ಮಹತಿಯನ್ನು ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ. ಬಸವಣ್ಣನವರು ರುದ್ರಾಕ್ಷಿ ಧಾರಣದಿಂದ ಕರಣ–ಗುಣ ನಾಸ್ತಿಯಾಗುವದು ಎಂದು ಹೇಳಿದ್ದಾರೆ. ಹಾವಿನಾಳ ಕಲ್ಲಯ್ಯನವರು ತಾವು ರುದ್ರಾಕ್ಷಿಯಿಂದ ಪಾವನವಾದುದನ್ನು ಹೇಳಿಕೊಂಡಿದ್ದಾರೆ. ಊರಿಲಿಂಗ ಪೆದ್ದಿಗಳು, ತೋಂಟದ ಸಿದ್ಧಲಿಂಗ ಸ್ವಾಮಿಗಳು ತಮ್ಮ ವಚನಗಳಲ್ಲಿ ರುದ್ರಾಕ್ಷಿಯನ್ನು ಕುರಿತು ಅನುಭವ ಪೂರ್ಣ ವಿಚಾರಗಳನ್ನು ಬಿತ್ತರಿಸಿದ್ದಾರೆ. ನಿಷ್ಠುರ ಕವಿ ಸರ್ವಜ್ಞನೂ ಕೂಡ

"ರುದ್ರಾಕ್ಷಿ ಭಸಿತವನು ಹೊದ್ದಿರಲು ದೇಹದೊಳಗಿದ್ದ ಪಾಪಗಳು ಬಯಲಾಗಿ,
ಶಿವನು ತಾನಿದ್ದಲ್ಲಿ ಬರುವ ಸರ್ವಜ್ಞ".

ಎಂದು ಹಾಡಿದ್ದಾನೆ.

ವೇದ ಕಾಲದಿಂದಲೂ ರುದ್ರಾಕ್ಷಿಗೆ ಉತ್ತಮ ಮಟ್ಟದ ಜಾನಪದ ಮದ್ದು ಎಂದು ಕರೆಯಲಾಗಿದೆ. ಆಯುರ್ವೇದ ಔಷಧಿಯ ಪರಿಣಿತರು ಅದರಲ್ಲಿಯ ರೋಗ ನಿವಾರಣಾ ಶಕ್ತಿಯನ್ನು ಜನರ ಮನಕ್ಕೆ ಮುಟ್ಟಿಸಿದ್ದಾರೆ. ವಾಯು ಶುದ್ಧಿಯನ್ನು ಮಾಡುವದರಲ್ಲಾಗಲಿ, ರಕ್ತದ ಒತ್ತಡವನ್ನು ಕಡಿಮೆ ಮಾಡುವದರಲ್ಲಾಗಲಿ, ಕೆಮ್ಮು ದಮ್ಮು ಕಡಿಮೆ ಮಾಡುವದರಲ್ಲಾಗಲಿ, ಚರ್ಮರೋಗ ನಿವಾರಣೆ ಮಾಡುವದರಲ್ಲಾಗಲಿ ಇದರ ಉಪಯುಕ್ತತೆ ಕಡಿಮೆಯೆಂದು ಹೇಳಲಿಕ್ಕಾಗದು. ಇತ್ತೀಚೆಗೆ ಪರದೇಶಗಳಲ್ಲಿ ರುದ್ರಾಕ್ಷಿಯ ಪ್ರಯೋಗದಿಂದ ಕ್ಯಾನ್ಸರದಂತಹ ಅಸಾಧ್ಯ ರೋಗವನ್ನು ಹಿಡಿತಕ್ಕೆ ತಂದು ಗುಣಪಡಿಸಲು ಸಾಧ್ಯವೆಂದು ಹೇಳುತ್ತಿದ್ದಾರೆ.

ಹೀಗೆ ರುದ್ರಾಕ್ಷಿಯನ್ನು ಮಂತ್ರಶಕ್ತಿ ಮತ್ತು ಮನಸ್ಸನ್ನು ಶಾಂತಗೊಳಿಸುವ ನಿಯಂತ್ರಣ ಶಕ್ತಿಯನ್ನು ಹೊಂದಿದೆ ಎಂದು ಮಾತ್ರ ಉಪಯೋಗಿಸುತ್ತಿಲ್ಲ, ಆಯುರ್ವೇದಿ ಔಷಧಿ ತಯಾರಿಕೆಗಾಗಿ ಆಭರಣಗಳನ್ನು ತಯಾರಿಸುವಾಗ ವಿವಿಧ ಬಗೆಯ ಬಳಕೆಗಾಗಿಯೂ ಸಹಿತ ಉಪಯೋಗಿಸುತ್ತಿದ್ದಾರೆ. ಹೀಗಾಗಿ ಇದೂ ಸಹಿತ ಪರದೇಶಕ್ಕೆ ರವಾನೆಯಾಗುವ ಒಂದು ಮಹತ್ವದ ಸರಕಾಗಿದೆ. ಈ ಕಾರಣಕ್ಕಾಗಿ ಮಿಶ್ರಣ ರೋಗದ ಹಾವಳಿ ಇದಕ್ಕೂ ಅಂಟಿಕೊಂಡಿದೆ. ಮತ್ತು ಶುದ್ಧವಾದದ್ದು ಉನ್ನತಮಟ್ಟದ ಬೆಲೆಗೆ ಮಾರಾಟವಾಗುತ್ತಿದೆ.

ಅದೇನೆ ಇರಲಿ, ರುದ್ರಾಕ್ಷಿಯ ಪಾವಿತ್ರ್ಯತೆ ವೇದ, ಪುರಾಣ ಕಾಲದಿಂದಲೂ ಒಂದೇ ರೀತಿಯಲ್ಲಿ ಮುನ್ನಡೆದಿದೆ. ಮಾನವ ಜನಾಂಗಕ್ಕೆ ಸರ್ವ ರೀತಿಯಿಂದ ಫಲದಾಯಕವಾಗಿದೆ. ಆದಕಾರಣ ಅಷ್ಟಾವರಣಗಳಲ್ಲಿ ಇದಕ್ಕೆ ವಿಶಿಷ್ಟ ಸ್ಥಾನವಿದೆ.

(vi) ಮಂತ್ರ

"ಮನಸಾ ತ್ರಾಯತೇ ಇತಿ ಮಂತ್ರಃ" ಮನಸ್ಸಿನಿಂದ ಗೌಪ್ಯವಾಗಿ ರಕ್ಷಿಸಲ್ಪಡು ವಂಥಹುದೇ ಮಂತ್ರವೆನಿಸುತ್ತದೆ. ಮಂತ್ರವು ಅಷ್ಟಾವರಣದಲ್ಲಿ ಎಂಟನೆಯದು. ಸಾಧನ ಸಂಪತ್ತಿಯಲ್ಲಿ ಕೊನೆಯದು. ಇದು ಹೊರಗಿನ ಯಾವ ಪದಾರ್ಥವೂ ಅಲ್ಲ. ತಮ್ಮ ಇಷ್ಟದೇವತೆಯ ನಾಮವೇ ಮಂತ್ರವೆನಿಸುವದು. ಆದರೆ ವೀರಶೈವರ ಇಷ್ಟ ದೇವರು ಹೊರಗಿನದಲ್ಲ, ಅಂತರಂಗದ ದಿವ್ಯ ಚೈತನ್ಯ— ಇಷ್ಟಲಿಂಗ, ಇಂಥ ಅನುಪಮ ಲಿಂಗದ ನಾಮವೇ ಷಡಕ್ಷರ ಮಹಾಮಂತ್ರ.

ಸತಿಯು ಪತಿಯ ನಾಮವನ್ನು ಭಯಭಕ್ತಿಯಿಂದ ಹೇಳುವಂತೆ ಲಿಂಗ ಪತಿಯ ಹೆಸರಾದ ಮಂತ್ರವನ್ನು ಶರಣ ಸತಿಯು ವ್ಯಕ್ತವಾಗಿ ಪ್ರಕಟಮಾಡದೇ ಮನಸ್ಸಿ ನಲ್ಲಿಯೇ ತುಂಬಿಕೊಂಡಿರಬೇಕು. ವ್ಯಕ್ತವಾಗಿ ಪ್ರಕಟವಾದರೆ ಅದು ಭಜನೆಯಾಗು ವದು.

ಮಂತ್ರ ಗುರುಮುಖದಿಂದಲೇ ಉಪದೇಶಿಸಲ್ಪಡಬೇಕು. ಪುಸ್ತಕದಲ್ಲಿದ್ದುದನ್ನು ಕಲಿತು ಪಠಿಸಿದರೆ ಫಲವಿಲ್ಲ. ದೀಕ್ಷಾಬದ್ಧನಾಗಿಯೇ ಮಂತ್ರಾನುಷ್ಠಾನವನ್ನು ಮಾಡಬೇಕು. ಪ್ರಾಣವಾಯುವಿನ ಶ್ವಾಸೋಚ್ಛಾಸದಿಂದ ಮನಸ್ಸು ಚಂಚಲವಾಗು ತ್ತದೆ. ಚಂಚಲ ಮನಸ್ಸನ್ನು ಸ್ಥಿಮಿತಕ್ಕೆ ತರಲು ಸಾಧನ ಜಪ, ಜಪ ಮಾಡಲಿಕ್ಕೆ ಮಹಾಮಂತ್ರದ ಧ್ಯಾನ ಅವಶ್ಯವಿದೆ. ಓಂಕಾರಯುಕ್ತವಾದ 'ನಮಃ ಶಿವಾಯ'ವು ಷಡಕ್ಷರ ಮಹಾಮಂತ್ರವೆನಿಸಿದೆ. ಶಿವಪೂಜೆಗೆ ಕುಳಿತಕಾಲಕ್ಕೆ ಅವಯವಗಳಲ್ಲಿ ಮಂತ್ರ ಗಳನ್ನು ಸಂಬಂಧ ಮಾಡಿಕೊಳ್ಳಬೇಕು. ಅಂದರೆ ಅನಂತ ಶಕ್ತಿಗಳು ಅಂತರಂಗದಲ್ಲಿ ಹುಟ್ಟಿ ಅಂಗಾಂಗದಲ್ಲಿ ದಿವ್ಯಚೇತನ ಸಂಚಾರವಾದ ಅನುಭವವಾಗುತ್ತದೆ.

ಯಾವನೇ ಒಬ್ಬ ವ್ಯಕ್ತಿಯು ತನ್ನತ್ತ ಬರಬೇಕಾದರೆ ಅವನ ಹೆಸರನ್ನು ಹಿಡಿದು ಕೂಗಬೇಕು. ಹಾಗೆ ಷಡಕ್ಷರ ಮಂತ್ರವನ್ನು ಅನವರತವೂ ಮನದಲ್ಲಿ ನೆನೆದರೆ ಅಂತ ರಂಗದಲ್ಲಿ ವಾಸ ಮಾಡಿದ ಲಿಂಗ-ದೇವನ ಸಾಕ್ಷಾತ್ಕಾರವಾಗುವದು. ಹೊರಗಿನ ವ್ಯಕ್ತಿಯನ್ನು ಘಟ್ಟಿಯಾದ ಧ್ವನಿಯಿಂದ ಕೂಗಿ ಕರೆಯಬೇಕಾಗುತ್ತದೆ. ಆದರೆ ಹೃದಯದಲ್ಲಡಗಿದ ಮಹಾದೇವನನ್ನು ಹೃದಯವಾಣಿಯಿಂದಲೇ ಕರೆದರೆ ತೀವ್ರವಾಗಿ ಕೇಳಿಸುವದು. ಮನೆಯೊಳಗೆ ಇರುವವನಿಗೆ ಹೊರಗೆ ಹೋಗಿ ಕೂಗಬೇಕಾಗಿಲ್ಲ.

ಶ್ರೀ ರೇಣುಕರು ಅಗಸ್ತ್ಯನಿಗೆ :

"ಷಡಕ್ಷರ ಮಂತ್ರವು ಶಿವನ ಹೆಸರಾಗಿರುವುದರಿಂದ ಅದರ ಉಚ್ಚಾರದಿಂದ ಶಿವನು ಪ್ರಕಾಶಿತನಾಗುವನು" ಎಂದು ಬೋಧಿಸಿದ್ದಾರೆ. ಮುಂದುವರೆದು ಅದನ್ನು ಜಪಿಸುವ ವಿಧಾನವನ್ನೂ ಬೋಧಿಸುತ್ತಾ ಶಿವಪೂಜಾಪರಾಯಣನಾದ ವೀರಶೈವನು ಏಕಾಗ್ರಚಿತ್ತನಾಗಿ ಷಡಕ್ಷರ ಮಹಾ ಮಂತ್ರವನ್ನು ಜಪಿಸಬೇಕೆಂದು ತಿಳಿಸಿರುವರು.

ಅನುದಿನವೂ ತಪ್ಪದೇ ಆ ಮಂತ್ರವನ್ನು ಪಠಿಸುವುದರಿಂದ ಅಜ್ಞಾನವಳಿದು ಮೂರ್ಖತನ ಮಾಯವಾಗುವಂತೆ ಪಾಪತಾಪಗಳು ಪರಿಹಾರವಾಗುವವು. ಜಪವು ಜೀವನವನ್ನು ಪಾವನಗೊಳಿಸಿ ಮುಕ್ತನನ್ನಾಗಿಸುವದು. ಜಪ ಮಾಡುವ ವಿಧಾನ ವನ್ನು ಚೆನ್ನಾಗಿ ಅರಿತು ಮಾಡಬೇಕು. ಅರಿತು ಮಾಡುವ ಜಪವು ಶ್ರೇಷ್ಠವೆನಿಸು ವದು. ಅಧಿಕ ಫಲ ದೊರೆಯುವದು. ತಾನು ಮಾಡುವ ಜಪ ತನ್ನ ಕಿವಿಗೆ ಕೇಳು ತ್ತಿರಬೇಕು. ಏಕಚಿತ್ತದಿಂದ ಲಿಂಗದಲ್ಲಿ ದೃಷ್ಟಿಯನ್ನಿರಿಸಿ ಏಕ ಲಕ್ಷ್ಯವಾಗಿ ಮಹಾ ಮಂತ್ರದ ಅರ್ಥವನ್ನು ಗ್ರಹಿಸುತ್ತಾ ಸಾವಧಾನವಾಗಿ ಪುನಃ ಪುನಃ ಸ್ಮರಿಸುವದೇ ಜಪ. ಆದರೆ ಅದು ತನ್ನ ಕಿವಿಗಳಿಗೆ ಕೇಳಬೇಕಲ್ಲದೆ ಮಗ್ಗುಲು ಕುಳಿತವರಿಗೆ ಕೇಳಬಾರದೆಂದು ಗುರುಗಳು ಅಪ್ಪಣೆ ಮಾಡುವದು ಗಮನಿಸಬೇಕಾದ ಸಂಗತಿ. ಇದುವೇ ಜಪದ ಪದ್ಧತಿಯೆಂದು ಕಾಣುತ್ತದೆ.

ಬಾಯಿಂದ ಹೊರಹೊಮ್ಮಿದ ಪ್ರಣವನಾದವು ಬಾಹ್ಯಾಕಾಶದಲ್ಲಿ ಬೆರೆತು ಹೋಗುವದು. ತನ್ನ ಕಿವಿಗಳಲ್ಲಿ ಮಾತ್ರ ಮಂತ್ರನಾದ ಪ್ರತಿಧ್ವನಿಸಿದರೆ ಅಂಗವನ್ನು ಸಂಪೂರ್ಣವಾಗಿ ವ್ಯಾಪಿಸಿ ಸರ್ವಾಂಗವೂ ಲಿಂಗಮಯವಾಗಿ ಮಂತ್ರದ ದಿವ್ಯನಾದದಲ್ಲಿ ಮುಳುಗಿ ಹೋಗುವದು.

"ಓಂ" ಜಗದ್ವಾಚಕವಾಗಿಯೂ,

"ನಮಃ" ಎಂಬುದು "ನ ಮಮ ಇದಂ" ಈ ಜಗತ್ತು ನನ್ನದಲ್ಲ ಎಂದು ಬೋಧಿಸುವದಾಗಿಯೂ

"ಶಿವಾಯ" ಎಂಬುದು ಇದೆಲ್ಲ ಶಿವನಿಗೋಸ್ಕರವಾಗಿರುವದೆಂಬುದಾಗಿಯೂ ಸೂಚಿಸುತ್ತದೆ.

ಅರ್ಥಾತ್ ಉಪಭೋಗಕ್ಕಾಗಿ ಇರುವ ಜಗತ್ತೆಲ್ಲಾ ನನಗಾಗಿ ಅಲ್ಲ ಶಿವನಿಗಾಗಿ ಎಂದು ತಿಳಿದು ಸಮಸ್ತವನ್ನು ಶಿವನಿಗೆ ಸಮರ್ಪಣ ಮಾಡುವ ಅರ್ಥವನ್ನು ಬೋಧಿಸುವ ಮಂತ್ರರಾಜನಾದ ಈ ಷಡಕ್ಷರ ಮಂತ್ರವು ಸರ್ವೋತ್ಕೃಷ್ಟವಾದದ್ದು. ಇದು ಸಕಲ ಸಿದ್ಧಿಗಳನ್ನು ಕರುಣಿಸುವ ಕಾಮಧೇನು.

“ಶಿವಶಿವ” ಎಂಬ ಶಿವನಾಮ ಸ್ಮರಣೆಯು ಭವದುರಿತ ದೋಷಗಳನ್ನು ಕಳೆಯುತ್ತದೆ. ‘‘ಹರಹರಾ’’ ಎಂಬುದು ಪ್ರಾಣಕ್ಕೆ ಕಂಟಕಪ್ರಾಯವಾದ ಮರಣಭೀತಿಯನ್ನು ತೊಡೆದು ಹಾಕುವದೆಂದು ತೋಂಟದ ಸಿದ್ಧಲಿಂಗೇಶ್ವರರು ತಿಳಿಸಿದ್ದಾರೆ. ಈ ಮಂಗಲಕರ ನಾಮವನ್ನು ವ್ಯಕ್ತವಾಗಿ ಅನ್ನುತ್ತಾ ಪ್ರಣವ ಪಂಚಾಕ್ಷರಿ ಮಂತ್ರವನ್ನು ಮನದಲ್ಲಿ ಅನ್ನಬೇಕು ಎನ್ನುವದು ಅವರ ಅಭಿಪ್ರಾಯ.

ಮನ ಮತ್ತು ಮಾತು ಇವೆರಡರಿಂದಲೇ ಜೀವನ. ಇವೆರಡರಲ್ಲಿ ಸಮರಸವಾಗದಿದ್ದರೆ ಮಾನವನು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕುವನು. ಮನ ಮಾತುಗಳು ಒಂದಾದರೆ ಶರಣನಾಗುವನು. ಭಕ್ತನು ನಡೆನುಡಿಗಳಲ್ಲಿ ಏಕಾರ್ಥತೆ ಅವಶ್ಯ. ಅದನ್ನು ಸಾಧಿಸಲೆಂದೇ ಶ್ರೀ ಗುರುವು ಮನವನ್ನು ಮಂತ್ರ ಧ್ಯಾನದಲ್ಲಿ ತೊಡಗಿಸು ಎಂದು ಬೋಧಿಸುತ್ತಾನೆ. ಅನವರತವೂ ಮನವನ್ನು ಎಚ್ಚರವಾಗಿ ಮಂತ್ರಧ್ಯಾನದಲ್ಲಿ ಮುಳುಗಿಸುವ ಸತ್ಕಲೆಯನ್ನು ಕಲಿಸುತ್ತಾನೆ. ಆಗ ಮಾತು ಜ್ಯೋತಿರ್ಲಿಂಗವಾಗಿ ಮಂತ್ರ ಇಷ್ಟಲಿಂಗವಾಗುತ್ತದೆ.

(vii) ಪಾದೋದಕ

ಮೈಲಾರ ಶರಣರು ಹೀಗೆ ಹೇಳಿದ್ದಾರೆ:—

‘‘ವೀರಶೈವರ ಆರಾಧ್ಯ ವಸ್ತುಗಳೆನಿಸಿದ ಗುರು ಲಿಂಗ ಜಂಗಮರ ಆರಾಧನೆಯಿಂದ ಪ್ರತ್ಯಕ್ಷವಾಗಿ ದೊರೆಯುವ ಫಲಗಳು ಪಾದೋದಕ, ಪ್ರಸಾದಗಳು.

ಪೂಜ್ಯರ ಪಾದಗಳನ್ನು ತೊಳೆದು ಬಂದ ಉದಕವೇ ಪಾದೋದಕವೆನಿಸುವದು. ಜಡವಾದ ಜಲವು ಗುರು ಜಂಗಮರ ಪಾದ ಸಂಸ್ಕಾರದಿಂದ ಪಾದೋದಕವಾಗುವದು. ಇದು ಗುರುಪಾದೋದಕ, ಲಿಂಗ ಪಾದೋಟಕ, ಜಂಗಮ ಪಾದೋದಕ ಎಂದು ಮೂರು ಬಗೆಯಾಗಿದೆ. ಸದ್ಗುರುವಿನ ಪಾದ ಪೂಜೆಯಿಂದ ಪ್ರಾಪ್ತವಾಗುವದೇ ಗುರು ಪಾದೋದಕವೆನಿಸುವದು. ಲಿಂಗವನ್ನು ಪೂಜಿಸಿ ಪಡೆಯುವದು ಲಿಂಗ ಪಾದೋದಕ. ಜಂಗಮನ ಪಾದ ಪೂಜೆಯಿಂದ ಲಭ್ಯವಾಗುವದು ಜಂಗಮ ಪಾದೋದಕ.

‘‘ಗುರುಪಾದೋದಕವನ್ನು ಇಷ್ಟಲಿಂಗಕ್ಕೆ,
ಲಿಂಗ ಪಾದೋದಕವನ್ನು ಪ್ರಾಣಲಿಂಗಕ್ಕೆ,
ಜಂಗಮ ಪಾದೋದಕವನ್ನು ಭಾವಲಿಂಗಕ್ಕೆ ಸಮರ್ಪಿಸಿ ಸೇವಿಸುವದು
ವೀರಶೈವನ ಮಹಾ ಕರ್ತವ್ಯ.

ವೀರಶೈವರು ಜೀವನಾವಶ್ಯಕಗಳಾದ ಅನ್ನ, ನೀರುಗಳಿಗೆ ಸಂಸ್ಕಾರವಿತ್ತು ದಿವ್ಯ ಚೇತನ ಪಡೆಯುತ್ತಾರೆ. ಅನ್ನ, ನೀರುಗಳು ಪ್ರಸಾದ ಪಾದೋದಕವಾಗಲು ಗುರು–ಲಿಂಗ–ಜಂಗಮರೇ ಕಾರಣ ಕರ್ತೃಗಳು. ಇವುಗಳನ್ನು ಲಿಂಗಕ್ಕೆ ಅರ್ಪಿಸಿ ಅನುಭವಿಸುವ ಆನಂದವೇ ಶಿವಾನುಭವ.

"ಪಾದೋದಕ" ಶಬ್ದದಲ್ಲಿ ನಾಲ್ಕು ಅಕ್ಷರಗಳಿವೆ. "ಪಾ" ಎಂದರೆ ಪರಮ ಜ್ಞಾನ ಉದಯವಾಗುವದು.

"ದೋ" ಎಂದರೆ ಸಕಲ ದೋಷಗಳು ನಾಶವಾಗುವವು.

"ದ" ಎಂದರೆ ದರ್ಪದ ಹುಟ್ಟಡಗುವದು.

"ಕ" ಎಂದರೆ ಕರ್ಮ ನಾಶವಾಗುವದು.

ಶಿವ ರೂಪಿ ಜಂಗಮನ ಪಾದೋದಕ ಅಕಾಲ ಮೃತ್ಯು ಭಯವನ್ನು, ಸಕಲ ರೋಗಗಳನ್ನು ಸಮಸ್ತ ಪಾಪಗಳನ್ನು ಕಳೆಯುತ್ತದೆ—ಎಂದು ಬ್ರಹ್ಮ ಗೀತೆಯಲ್ಲಿ ಹೇಳಿದೆ. ಮತ್ತು ಸಕಲ ಕಲ್ಯಾಣವನ್ನುಂಟು ಮಾಡುವ ಈ ಪಾದೋದಕ ಸಮಸ್ತ ಬಯಕೆಗಳನ್ನು ಪೂರೈಸುವದಲ್ಲದೇ ಸರ್ವಸಿದ್ಧಿಗಳ ಫಲವನ್ನು ದೊರಕಿಸುತ್ತದೆ. ಅಷ್ಟೇ ಏಕೆ ಸರ್ವಶಕ್ತನಾದ ಪರಶಿವನನ್ನು ಸಾಕ್ಷಾತ್ಕಾರ ಮಾಡಿಸುತ್ತದೆ. ಅಂಗಾಂಗ ಸಮರಸ ಮುಕ್ತಿಯನ್ನು ಕರುಣಿಸುವದು, ಪರಶಿವನನ್ನು ತೋರಿಸುವ ಅಥವಾ ಪರಶಿವಸ್ವರೂಪಿಯನ್ನಾಗಿಸುವ ಈ ಪಾದೋದಕವು ಪರಬ್ರಹ್ಮರೂಪಿಯಾಗಿದೆ ಎಂದು ಗುರುವು ಶಿಷ್ಯನಿಗೆ ಬೋಧಿಸುತ್ತಾನೆ.

ಈ ಪಾದೋದಕವು ಸದ್ಭಕ್ತನ ಸತ್ಕ್ರಿಯೆಯಿಂದ ಹಾಗೂ ಜಂಗಮನ ಸುಜ್ಞಾನಗಳ ಮಂಥನದಿಂದ ಉದ್ಭವಿಸುತ್ತದೆ. ಪರಬ್ರಹ್ಮರೂಪಿ ಪಾದೋದಕವು ಗುರುವಿಗೂ ಬೇಕು. ಜಂಗಮನಿಗೂ ಬೇಕು, ಲಿಂಗಕ್ಕೂ ಬೇಕು, ಪಾದೋದಕ ಪ್ರಸಾದಗಳೇ ತ್ರಿವಿಧಕ್ಕೆ ಚೇತನ, ಪ್ರಾಣಸ್ವರೂಪ. ಅವಿಲ್ಲದೇ ಗುರು-ಲಿಂಗ ಜಂಗಮ ಬದುಕಲಾರವು.

ಅಂತೆಯೇ ಚನ್ನ ಬಸವಣ್ಣನವರು—

"ಗುರುವಾದಡೆಯೂ ಆಗಲಿ
ಲಿಂಗವಾದಡೆಯೂ ಆಗಲಿ
ಜಂಗಮವಾದಡೆಯೂ ಆಗಲಿ
ಪಾದೋದಕ ಪ್ರಸಾದವಿಲ್ಲದ
ಪಾಪಿಯ ಮುಖವ ನೋಡಲಾಗದು"

ಎಂದಿದ್ದಾರೆ.

ಮೈಲಾರ ಶರಣರು ಗುರು-ಜಂಗಮರ ಪಾದವನ್ನು ತೊಳೆದು ಧೂಳ ಪಾದೋದಕವನ್ನು ಸಂಗ್ರಹಿಸಿಟ್ಟುಕೊಂಡು ಪ್ರತಿನಿತ್ಯವೂ ಸ್ನಾನ, ಅಡಿಗೆ, ಅಭಿಷೇಕಗಳಿಗೂ ಉಪಯೋಗಿಸಬೇಕು ಎಂದು ಹೇಳುತ್ತಾರೆ. ಅಂಗಾಲಿನಿಂದ ಬಂದ ಉದಕಕ್ಕಿಂತ, ಅಂಗುಷ್ಟದ ಸಂಬಂಧ ಹೊಂದಿ ಬಂದ ಉದಕ ಹೆಚ್ಚು ಸತ್ವವುಳ್ಳದ್ದು ಎಂದು ಹೇಳುತ್ತಾರೆ.

ವೀರಶೈವ ಧರ್ಮ ತತ್ವದಲ್ಲಿ ಕಾಣಬರುವ ಪಾದೋದಕ ಪ್ರಸಾದಗಳ ಸಮರಸ ಭಾವವು ಇನ್ನಾವ ಧರ್ಮ ತತ್ವಗಳಲ್ಲಿ ಕಾಣಬರುವದಿಲ್ಲ.

ಜಲವನ್ನು ಪಾದೋದಕ ತತ್ವಕ್ಕೆ ಅಳವಡಿಸಲು ಇನ್ನೊಂದು ಕಾರಣವಿದೆ. ಗುರು ಲಿಂಗ ಜಂಗಮ ತತ್ವದ ಕರುಣೆ, ವಿನಯ, ಸಮತಾ ಗುಣಗಳನ್ನು ಹಿಡಿದಿಟ್ಟು ಕೊಳ್ಳುವ ಶ್ರೇಷ್ಟ ಮಾಧ್ಯಮವಾಗಿದೆ. ಜಲತತ್ವದಲ್ಲಿ ಸ್ಥೂಲ ಪಂಚೀಕರಣದ ಪ್ರಕಾರ ದ್ರವೀಕರಣವು ಅದರ ಧರ್ಮವಾದರೆ ಪಿಂಡೀಕರಣವು ಅದರ ಕರ್ಮವಾಗಿದೆ. ಪೃಥ್ವಿಯ ಕಾಠಿಣ್ಯಮಯ ವಸ್ತುಗಳಲ್ಲಿ ಜಲವು ಪ್ರವೇಶವಾದರೆ ಆ ವಸ್ತುಗಳ ಕಾಠಿಣ್ಯತೆ ಕಡಿಮೆ ಯಾಗುತ್ತದೆ. ದ್ರವೀಕರಣ ತತ್ವಕ್ಕನುಗುಣವಾಗಿ ಮೃದುವಾಗುತ್ತವೆ. ಹಾಗೆಯೇ ಅಸಮಾನ ಪಾತಳಿಯಲ್ಲಿ ಜಲವನ್ನು ಹರಿಸಿದರೂ ಕೂಡ ಸಮಪಾತಳಿಯಲ್ಲಿ ನಿಲ್ಲುತ್ತದೆ. ಅಲ್ಲದೆ ಹೊಲಸಾದ ವಸ್ತುಗಳನ್ನು ತೊಳೆದರೆ ಶುದ್ಧವಾಗುತ್ತವೆ. ಹೀಗೆ ದ್ರವೀಕರಣ ಹಾಗೂ ಕರುಣಾಮಯವಾಗಿ ಶುದ್ಧ ಪಡಿಸುವ ಗುಣ ವಿನಮ್ರವಾಗಿ, ಸಮಾನಗೊಳಿ ಸುವ ಗುಣ ಸಮತಾಮಯವಾಗಿ ಕರುಣೆ ವಿನಯ ಸಮತೆ ಈ ಗುಣಗಳನ್ನು ಹೊತ್ತು ತರುವ ಮಾಧ್ಯಮವಾಗಿ ಜಲವನ್ನು ಪಾದೋಧಕ ತತ್ವದಲ್ಲಿ ಅಳವಡಿಸಲಾಗಿದೆ.

ಜಲವು ಅಧೋಮುಖವಾಗಿ ಸಂಚರಿಸಿದರೆ ಬೇರು, ಬತ್ತಿ, ದಾರ, ನಾಳ ಮುಂತಾದವುಗಳಲ್ಲಿ ಉರ್ಧ್ವಮುಖವಾಗಿ ಸಂಚಿರಿಸುವದು. ಉರ್ಧ್ವಮುಖವಾಗಿ ಸಂಚರಿಸುವ ಗುಣಧರ್ಮಕ್ಕಾಗಿ ಜಲಕ್ಕೆ ಉದಕವೆಂದು ಸಂಭೋದಿಸುತ್ತಾರೆ. ಆಧ್ಯಾತ್ಮ ತತ್ವದ ಪದವು ನಾದ ಮೂಲಕವಾಗಿ ಕರ ಹಾಗೂ ಪಾದಾಂಗಲೆಗಳ ತುದಿಗಳಲ್ಲಿ ಹೊರ ಚಿಮ್ಮುತ್ತಿರುವ ಅಲೆಗಳನ್ನು ಈ ಉದಕವು ಮಂತ್ರಾಕ್ಷರಗಳ ಸಂಸ್ಕಾರದ ಮೂಲಕ ಗರ್ಭೀಕರಿಸಿಕೊಳ್ಳುತ್ತದೆ. ಹೀಗೆ ಗರ್ಭೀಕರಿಸಿಕೊಂಡ ಜಲವೇ ಪಾದೋದಕವಾಗುವುದು ಎಂದು ಹೇಳುತ್ತಾರೆ.

ಸಹಸ್ರಾದಿ ಚಕ್ರಗಳಲ್ಲಿ ಪಾದೋದಕವು ಸತ್ ಚಿತ್ ಆನಂದಾದಿ ಭಾವದ ಅಲೆಗಳ ರೂಪದಲ್ಲಿರುವದು ಈ ಭಾವದ ಅಲೆಗಳನ್ನು ಚಿದ್ರಸವೆಂದು ಕರೆಯುತ್ತಾರೆ. ಈ ಅಲೆಗಳು ವಿದ್ಯುನ್ಮಾನ ರೀತಿಯಲ್ಲಿ ಸುಷುಮ್ನಾದಿ ನಾಡಿಗಳ ಮೂಲಕ ಇಳಿದು ಬಂದು ನೇತ್ರ, ಪಾಣಿ. ಹಸ್ತಂಗುಲೆ ಪಾದಾಂಗಲೆಗಳ ಮೂಲಕ ಸಂಜರಿಸತೊಡಗಿದಾಗ ನೇತ್ರ ದೃಷ್ಟಿಯು ಕರುಣಾ ದೃಷ್ಟಿಯಾಗಿಯೂ ಪಾಣಿಯು ಅನುಭವಾಮೃತ ಗಿಯೂ ಹಸ್ತ ಪದಾಂಗುಲೆಗಳ ಸ್ಪರ್ಶದಿಂದ ಜಲವು ಪಾದೋದಕಾಮೃತವಾಗಿಯೂ ಪರಿವರ್ತನೆಗೊಳ್ಳುವದು. ಇಂತಹ ಪಾದೋಕವು ಸ್ಥೂಲದಲ್ಲಿ ಪಂಚ ವಿಷಯಗಳನ್ನು (ಗಂಧ, ರಸ, ರೂಪ, ಸ್ಪರ್ಶ, ಶಬ್ದ) ಶುದ್ಧಗೊಳಿಸುವದು. ಇದಕ್ಕೆ ಗುರು ಪಾದೋ ದಕವೆನ್ನುವರು. ಹೀಗೆ ಶುದ್ಧಗೊಂಡ ಪಂಚ ವಿಷಯಗಳು ಭಕ್ತನ ಸ್ಥೂಲ ಕಾಯದಲ್ಲಿ ಅಂಗರೂಪವಾಗಿ ಪಿಂಡೀಕರಣಗೊಳ್ಳುವವು. ಪಿಂಡೀಕರಣಗೊಂಡ

ಶುದ್ಧಾಂಗನ ಪ್ರಭಾವವು ಸೂಕ್ಷ್ಮ ತನುವಿನ ಮೇಲೆ ಲಿಂಗ ಪಾದೋದಕದ ಮೂಲಕ ಆಗುವುದು. ಈ ಲಿಂಗ ಪಾದೋದಕದಿಂದ ಸೂಕ್ಷ್ಮ ಪಂಚೀಕರಣಕ್ಕನುಗುಣವಾಗಿ ಗುಹ್ಯ, ರಸ, ಜಿಹ್ವೆ, ಅಪಾನ, ಬುದ್ಧಿ, ಇವುಗಳ ಶುದ್ಧೀಕರಣವಾಗುವದು. ಈ ಶುದ್ಧೀಕರಣಗೊಂಡ ಸೂಕ್ಷ್ಮ ತತ್ವಗಳು ಸೂಕ್ಷ್ಮ ತನುವಿನ ಮೇಲೆ ಜ್ಞಾನ ಪಾದೋದಕವಾಗಿ ಆವರಣಗೊಳ್ಳುವವು. ಕಾರಣ ಶರೀರದಲ್ಲಿರುವ ಬುದ್ಧಿಯ ಮೇಲೆ ಜಂಗಮ ಪಾದೋದಕವು ತನ್ನ ಪ್ರಭಾವವನ್ನು ಬೀರಿ ಬುದ್ಧಿ ತತ್ವಗಳನ್ನು ಶುದ್ಧಗೊಳಿಸುವದು.

ಗೃಹಿಸುವದು, ಆಲೋಚಿಸುವದು ಮತ್ತು ನಿಶ್ಚಯಿಸುವದು ಇವು ಬುದ್ಧಿಯ ಗುಣಧರ್ಮಗಳು. ಬುದ್ಧಿಯು ಈ ಗುಣಧರ್ಮಕ್ಕನುಸಾರವಾದ ಜ್ಞಾನ ಶಕ್ತಿಯನ್ನು ಮೂಲ ಸ್ವರೂಪದಲ್ಲಿ ಹೊಂದಿರುವದು. ಜಲತತ್ವದ ಅಂತಿಮ ಶುದ್ಧ ಸಾರವೇ ಜ್ಞಾನ ಶಕ್ತಿಯು. ಈ ಜ್ಞಾನ ಶಕ್ತಿಯನ್ನು ಎಚ್ಚರಿಸುವ ಕಾರ್ಯವನ್ನು ಜಂಗಮ ಪಾದೋದಕವು ನೆರವೇರಿಸುವುದು. ಹೀಗೆ ಎಚ್ಚರಗೊಂಡ ಜ್ಞಾನ ಶಕ್ತಿಯೇ ಸುಬುದ್ಧಿಯಾಗಿ ವರ್ತಿಸುವದು. ಇಂತಹ ಜಂಗಮ ಪಾದೋದಕ್ಕೆ ಚಿದ್ರಸವೆಂದು ಕರೆಯುತ್ತಾರೆ. ಈ ಚಿದ್ರಸವು ಕಾರಣ ಶರೀರದ ಆವರಣವಾಗಿ ಕಾರ್ಯ ಮಾಡುವುದು,

ಗುರು ಪಾದೋದಕವು ಸಂಚಿತ ಕ್ರಮದ ಒತ್ತಡವನ್ನು ತೆಗೆದು ಹಾಕುವದು. ಲಿಂಗ ಪಾದೋದಕವು ಪ್ರಾರಬ್ಧ ಕರ್ಮದ ಒತ್ತಡವನ್ನು ತೆಗೆದು ಹಾಕುವದು. ಜಂಗಮ ಪಾದೋದಕವು ಆಗಾಮಿ ಕರ್ಮದ ಒತ್ತಡವನ್ನು ತಡೆದು ನಿಲ್ಲಿಸುವದು. ಕಾರಣ ಶರೀರ ಜಂಗಮ ಪಾದೋದಕದಿಂದ ಸುಬುದ್ಧಿಯಾದಾಗ, ಬುದ್ಧಿಯು ಕರ್ಮಾನುಸಾರಿಯಾಗಿ ನಡೆಯದೆ ಸುಬುದ್ಧಿಯನುಸಾರವಾಗಿ ಕ್ರಿಯೆಗಳು ಜರಗುತ್ತವೆ. ಹೀಗಾಗಿ ಆಗಾಮಿ ಕರ್ಮಗಳು ಅಂಟುವದಿಲ್ಲ.

ಗುರು ಲಿಂಗ ಜಂಗಮ ಪಾದೋದಕಗಳಿಗೆ ಕ್ರಮವಾಗಿ ಕ್ರಿಯಾ ಪಾದೋದಕ, ಜ್ಞಾನ ಪಾದೋದಕ, ಭಾವ ಪಾದೋದಕ ಎಂದೂ ಕರೆಯುತ್ತಾರೆ. ಧಾರ್ಮಿಕವಾಗಿ ಕೆಲವರು ಇವುಗಳನ್ನು ದೀಕ್ಷಾ ಪಾದೋದಕ, ಶಿಕ್ಷಾ ಪಾದೋದಕ, ಮೋಕ್ಷಾ ಪಾದೋದಕ ಎಂದು ಕರೆಯುತ್ತಾರೆ,

ಗುರು ಲಿಂಗ ಜಂಗಮರು ಲಭ್ಯವಿಲ್ಲದಿದ್ದಾಗ ಸದಾಚಾರಿ ಭಕ್ತ ಪ್ರತಿನಿತ್ಯ ತನ್ನ ಲಿಂಗಾರ್ಚನೆಯಲ್ಲಿಯೇ ಗುರುಲಿಂಗ ಜಂಗಮ ಪಾದೋದಕ ನಿರ್ಮಿಸಿಕೊಂಡು ಸೇವಿಸಬಹುದು. ಇದಕ್ಕೇನು ಅಭ್ಯಂತರವಿಲ್ಲ.

(viii) ಪ್ರಸಾದ

ಗುರು–ಲಿಂಗ–ಜಂಗಮ ಪೂಜ್ಯರನ್ನು ಆರಾಧಿಸಿ ಪಾದೋದಕವನ್ನು ಪಡೆದು ಪರಿಶುದ್ಧ ಮನಸ್ಸುಳ್ಳವನಾದ ಶರಣನು ಪ್ರಸಾದ ಸ್ವೀಕರಿಸಲು ಪಾತ್ರನಾಗುವನು.

ಪ್ರಸಾದವು ಭಕ್ತನಿಗೆ ವರವಾಗಿ ಬಂದ ಕಾರಣ ಇದನ್ನು ಶ್ರದ್ಧೆಯಿಂದ ಪಡೆದುಕೊಳ್ಳಬೇಕು. ಅನುಗ್ರಹ ಪ್ರಸಾದವನ್ನು ಪಡೆದುಕೊಂಡವನ ಜೀವನವು ಪರಮ ಪಾವನವಾಗುವದು.

ಕಾಯಕ ಮಾಡಿ ಗುರು-ಲಿಂಗ-ಜಂಗಮರಿಗೆ ಪದಾರ್ಥವನ್ನು ಅರ್ಪಿಸಿ ತೃಪ್ತಿ ಪಡಿಸಿ ತಾನು ಸ್ವೀಕರಿಸುವಲ್ಲಿ ಶುದ್ಧ ಪ್ರಸಾದ, ಸಿದ್ಧ ಪ್ರಸಾದ, ಪ್ರಸಿದ್ಧ ಪ್ರಸಾದಗಳು ತನಗೆ ಪ್ರಾಪ್ತವಾಗುವವೆಂಬುದನ್ನು ಗುರು ದೇವನು ಭಕ್ತನಿಗೆ ಹೇಳಿದ್ದಾನೆ.

"ನಿಮ್ಮ ಶರಣರು ಉಂಡುಳಿದುದ ಕೊಂಡು ಮಿಕ್ಕಿದ ಪರಮ ಪ್ರಸಾದಕ್ಕೆ ಯೋಗ್ಯನ ಮಾಡಿ ಬದುಕಿಸಯ್ಯ ಅಖಂಡೇಶ್ವರ" ಎಂದು ಷಣ್ಮುಖ ಶಿವಯೋಗಿಗಳು ಹೇಳಿದ್ದಾರೆ.

ಶುದ್ಧ ಪ್ರಸಾದ ಇಷ್ಟಲಿಂಗಕ್ಕೆ ಸಿದ್ಧ ಪ್ರಸಾದ ಪ್ರಾಣಲಿಂಗಕ್ಕೆ ಪ್ರಸಿದ್ಧ ಪ್ರಸಾದವು ಭಾವಲಿಂಗಕ್ಕೆ ಸಮರ್ಪಿಸಬೇಕು. ದೃಢನಿಷ್ಠೆಯಿದ್ದರೆ ಪದಾರ್ಥ ಪ್ರಸಾದವೆನಿಸುತ್ತದೆ. ಪ್ರಸಾದ ಕ್ರಿಯೆಯಿಂದ ಪ್ರಸಾದ ಕಾಯ ಲಭ್ಯವಾಗುತ್ತದೆ. ಪ್ರಸಾದ ಕಾಯ ಲಭ್ಯವಾದವನು ಯಾವಾಗಲೂ ಪ್ರಸನ್ನ ಚಿತ್ತವುಳ್ಳವನಾಗುತ್ತಾನೆ. ಒಂದು ವೇಳೆ ದೃಢ ನಿಷ್ಠೆ ಇಲ್ಲದಿದ್ದರೆ ಪ್ರಸಾದವೂ ವಿಷವಾಗಬಹುದು. ಅಂದರೆ ನಂಬಿಕೆಯಲ್ಲಿಯೇ ಪ್ರಸಾದದ ಸಿದ್ಧಿಯಿದೆ. ನಂಬಿಕೆಯುಳ್ಳವನಿಗೆ ವಿಷವೂ ಪ್ರಸಾದವಾಗಿ ಪರಿಣಾಮ ಬೀರುತ್ತದೆ.

ಸಾಂಪ್ರದಾಯಕ ಹಿಂದೂ ಹಾಗೂ ಕ್ರೈಸ್ತ ಧರ್ಮಗಳಲ್ಲಿ ದೇವಾಲಯ ಅಥವಾ ಚರ್ಚುಗಳಲ್ಲಿ ಪೂಜೆಗೆಂದೇ ನೇಮಕಗೊಂಡ ಪೂಜಾರಿಯು ಮಾತ್ರ ಪ್ರಸಾದವನ್ನು ಕೊಡುತ್ತಾನೆ. ಅಲ್ಲಿಗೆ ಪೂಜೆಗೆಂದು ಹೋದ ಭಕ್ತರು ಅವನಿಂದ ಮಾತ್ರ ಅದನ್ನು ಸ್ವೀಕರಿಸತಕ್ಕದ್ದು. ಆದರೆ ವೀರಶೈವ ಧರ್ಮದಲ್ಲಿ ಯಾವ ಇಷ್ಟಲಿಂಗ ಪೂಜಕನೇ ಇರಲಿ, ತನ್ನ ಪ್ರಸಾದವನ್ನು ತಾನೇ ಮಾಡಿಕೊಳ್ಳಬಹುದು. ಮತ್ತು ಬೇರೆಯವರಿಗೂ ಕೊಡಬಹುದು. ಪ್ರಸಾದ ಸ್ವೀಕರಿಸಲಿಕ್ಕೆ ದೇವಾಲಯ ಚರ್ಚುಗಳಿಗೆ ಹೋಗಬೇಕಾಗಿಲ್ಲ. ಪ್ರಸಾದಕ್ಕೆಂದೇ ವಿಶೇಷ ರೀತಿಯ ಭಕ್ಷ್ಯಗಳನ್ನು ತಯಾರಿಸುತ್ತಾರೆ. ಆದರೆ ವೀರಶೈವರಿಗೆ ಯಾವ ದೈನಂದಿನ ಆಹಾರವಾದರೂ ಪ್ರಸಾದವಾಗಬಹುದು. ಪೂಜೆ ಮುಗಿದ ತಕ್ಷಣ ಹಾಲು, ಹಣ್ಣು, ಅನ್ನ ಮುಂತಾದ ಆಹಾರ ವಸ್ತುಗಳನ್ನು ನೈವೇದ್ಯ ಮಾಡುತ್ತಾರೆ. ಅಂತಹ ವಸ್ತುಗಳಿಗೆ ಪದಾರ್ಥ ಅಥವಾ ದ್ರವ್ಯಗಳೆಂದೂ, ಅರ್ಪಣೆಯ ನಂತರ ಅವು ಪ್ರಸಾದವೆಂದೂ ಕರೆಯಲ್ಪಡುತ್ತವೆ. ಭಕ್ತನು ಈ ಪ್ರಸಾದ ಸ್ವೀಕರಿಸಿದರೆ ಶುದ್ಧನಾಗುತ್ತಾನೆಂಬ ನಂಬಿಕೆ ಇದೆ.

ನೈವೇದ್ಯ ಮಾಡಿದಾಕ್ಷಣ ಅದು ಹೇಗೆ ಪ್ರಸಾದವಾಗುತ್ತದೆ ? ಅದನ್ನು ತಿಂದ ಕೂಡಲೇ ಭಕ್ತನು ಹೇಗೆ ಶುದ್ಧನಾಗುತ್ತಾನೆ ? ಎಂದು ಕೇಳಬಹುದು. ಇದರಲ್ಲಿ ಅಡಗಿದ ಮುಖ್ಯವಾದ ಅಂಶವೆಂದರೆ ಭಕ್ತಿ, ನಿಷ್ಠೆ, ಯಾಂತ್ರಿಕವಾಗಿ ಪೂಜಿಸುವದು, ಕಳ್ಳತನದಿಂದ ಸಂಪಾದಿಸಿದ್ದನ್ನು ಅರ್ಪಿಸುವದು ಖಂಡನಾರ್ಹ.

ಪ್ರಭು ದೇವರು ಹೀಗೆ ಹೇಳುತ್ತಾರೆ :—

"ಲಿಂಗಾರ್ಪಿತ ಲಿಂಗಾರ್ಪಿತವೆಂಬುರು ನಾನಿದನರಿಯೆನಯ್ಯಾ
ನಿತ್ಯ ತೃಪ್ತ ಲಿಂಗಕ್ಕೆ ಹಸಿವೆಂಬುದುಂಟೆ ?
ಶಿವ ಶಿವಾ ತಮ್ಮ ತಮ್ಮ ಹಸಿವ ಅಂಗದ ಮೇಲಿಟ್ಟು
ಉಣ್ಣದ ಲಿಂಗಕ್ಕಾಗಿ ಅರ್ಪಿತವನೆಂಬರು"

ಆದ ಕಾರಣ ನಿಜವಾದ ಪ್ರಸಾದವೆಂದರೆ ಪ್ರಪಂಚದಲ್ಲಿರುವ ಸಕಲ ವಸ್ತುಗಳು. ಎಲ್ಲವೂ ಪರಶಿವನ ಪ್ರಸಾದ. ಪರಶಿವನು ಲಿಂಗದಲ್ಲಷ್ಟೇ ಅಲ್ಲ ಎಲ್ಲೆಲ್ಲಿಯೂ ಇದ್ದಾನೆ; ಎಂದು ಚನ್ನಬಸವಣ್ಣನವರು ಹೇಳುತ್ತಾರೆ. ಇಲ್ಲಿ ಸ್ಪಷ್ಟವಾಗುವ ಅಂಶವೆಂದರೆ ಪ್ರಸಾದದ ಆಚರಣೆಯಲ್ಲಿ, ಭಕ್ತನು ಪ್ರಸಾದ ಸ್ವೀಕರಿಸುವ ಅಂಶ ಮಹತ್ವದ್ದಲ್ಲ, ಅವನು ಅರ್ಪಿಸುವ ಅಂಶ ಮಹತ್ವದ್ದು. ಅದರ ಮೇಲೆ ಅವನಿಗೆ ಆಶೆ ಇರಬಾರದು.

ವೀರಶೈವರಿರಲಿ ಬಿಡಲಿ ಪ್ರತಿಯೊಬ್ಬರೂ ಪ್ರಸಾದ ಭಾವನೆಯನ್ನು ಹೊಂದ ಬೇಕು. ಅನ್ನ ದೇವರ ಮುಂದೆ ಇನ್ನು ದೇವರಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಊಟ ಮಾಡುವಾಗ ಹೆಚ್ಚಾಗಿ ನೀಡಿಸಿಕೊಳ್ಳಬಾರದು, ನೀಡಿಸಿಕೊಂಡು ಕೆಡಿಸ ಬಾರದು. ಅಥವಾ ಅತಿ ಆಶೆಯಿಂದ ಹೆಚ್ಚು ಊಟ ಮಾಡಿ ಅಜೀರ್ಣ ಮಾಡಿ ಕೊಂಡು ರೋಗಿಯಾಗಬಾರದು.

ಶ್ರೀಮಂತರ ಮನೆಯಲ್ಲಿ ಒಂದು ಥರದ (ದುಷ್ಟ) ಸಂಸ್ಕೃತಿ ಬೆಳೆದದ್ದನ್ನು ಅಲ್ಲಲ್ಲಿ ಕಾಣಬಹುದು. ಮದುವೆ ಮತ್ತು ಹುಟ್ಟುಹಬ್ಬ, ಇಂತಹ ವಿಶೇಷ ಸಮಾ ರಂಭಗಳಲ್ಲಿ ಬಹಳಷ್ಟು ನೀಡಿಸಿ ಅರ್ಧ ಸಹ ತಿನ್ನದೇ ಹಾಗೇ ಚೆಲ್ಲುವದು. ಚೆಲ್ಲಿದ ಎಲೆಗಳನ್ನು ನಾಯಿಗಳ ಜೊತೆಗೆ ಬಡವರ ಮಕ್ಕಳು ಹಂಚಿಕೊಳ್ಳುವದು, ಇಂತಹ ಅಮಾನುಷ ದೃಶ್ಯಗಳು ಕಾಣಬರುತ್ತವೆ. ಇಂತಹ ಸನ್ನಿವೇಶ ಸಮಾಜಕ್ಕೆ ಅವ ಹೇಳನಕಾರಿ, ನಾಗರಿಕತೆಗೆ ಕುಂದು, ಪ್ರಜಾ ಪ್ರಭುತ್ವಕ್ಕೆ ಕಲಂಕಪ್ರಾಯ.

ಇಂದಿನ ದಿನಮಾನಗಳಲ್ಲಿ ಸುಸಂಸ್ಕೃತನೆನಿಸಿಕೊಂಡ ಮಾನವನು ಉನ್ನತ ಮಟ್ಟದ ಆದರ್ಶಗಳನ್ನು ಕೇವಲ ಘೋಷಣೆಗಳಲ್ಲಿ ಮಾತ್ರ ಅಳವಡಿಸಿದ್ದಾನೆ. ಆಚರಣೆಯಲ್ಲಿ ಅಲ್ಲ.

ಪ್ರಸಾದದ ಪಾವಿತ್ರ್ಯತೆಯನ್ನು ಕಾಯ್ದುಕೊಂಡು ಹೋದರೆ ಅನ್ನದ ಅಭಾವ ತಪ್ಪೀತು. ಸಮಾಜವಾದದ ಸಿದ್ಧಾಂತಕ್ಕೂ ಬೆಲೆ ಬಂದೀತು.

ಪ್ರಸಾದದ ಬಾಹ್ಯ ರೂಪ ಪದಾರ್ಥವೆಂದೆನಿಸಿಕೊಂಡರೆ ಆಂತರಿಕ ರೂಪ ಶುದ್ಧ ಭಾವದ ಪ್ರಸನ್ನತೆಯಾಗಿದೆ. ಪ್ರಸನ್ನತೆಯನ್ನುಂಟು ಮಾಡುವದೇ ಪ್ರಸಾದವು. ಈ ಪ್ರಸನ್ನತೆಯೇ ಆನಂದವು. ಈ ಆನಂದವು ಚಿತ್‌ಸ್ವರೂಪವಾದರೆ ಚಿದಾನಂದ ವಾಗುವದು, ಜ್ಞಾನಮಯವಾದರೆ ಸುಖ ಸ್ವರೂಪವಾಗುವದು, ಕ್ರಿಯಾಮಯ ವಾದರೆ ಅನ್ನದ ಸ್ವರೂಪವನ್ನು ತಾಳುವದು. ಹಸಿವು ಹಾಗೂ ಆನಂದ ಪ್ರವೃತ್ತಿಗಳ ಮಧ್ಯದಲ್ಲಿ ಪ್ರಸಾದ ತತ್ವ ಪ್ರಥ್ವಿತತ್ವವಾಗಿ ಸೇತುವೆಯಾಗಿ ನಿಂತಿದೆ. ಈ ಮರ್ತ್ಯವು ಸಕಲ ಜೀವರಾಶಿಗಳಿಗೆ ಅನ್ನ ಹಾಗೂ ಆನಂದ ಪ್ರಸಾದದ ತವರುಮನೆಯಾಗಿದೆ. ಅನ್ನದ ಮೂಲಕ ಆನಂದ ಪ್ರಸಾದವನ್ನು ವಿತರಣೆ ಮಾಡುವ ವ್ಯವಸ್ಥೆಯು ಈ ಮರ್ತ್ಯವನ್ನು ಬಿಟ್ಟು ಬೇರಾವ ಗೃಹಗಳಲ್ಲಿಲ್ಲ, ಲೋಕದಲ್ಲಿಲ್ಲ, ಆದ್ದರಿಂದ ಹಸಿವಿಗೆ ಅನ್ನವನ್ನು ಆತ್ಮಕ್ಕೆ ಆನಂದವನ್ನು ಉಣಿಸಿ ತೃಪ್ತಿ ಪಡಿಸುವ ಈ ಮರ್ತ್ಯವು ದೇವ ದೇವನ ಪ್ರಸಾದ ಗೃಹವಾಗಿದೆ. ಆದ್ದರಿಂದಲೇ ಈ ಜಗತ್ತು ಸತ್ ಚಿತ್ ಆನಂದ ಮಯವಾಗಿದೆ. ಇಲ್ಲಿ ಸಲ್ಲಬೇಕಾದರೆ "ಪ್ರಸಾದ ತತ್ವದ" ಆಚರಣೆಯನ್ನು ಮಾನ ವನು ಆದ್ಯಂತವಾಗಿ ಆಚರಿಸಬೇಕು.

ಪ್ರಸಾದದ ಸಂತೃಪ್ತಿ ಹಾಗೂ ಅಖಂಡ ಆನಂದ ಸ್ಥಿತಿಯೇ ಲಿಂಗಾಂಗ ಸಾಮರಸ್ಯದ ಸ್ಥಿತಿಯು. ಇಂತಹ ಸ್ಥಿತಿಯನ್ನು ಪಡೆದ ಜಂಗಮನು ಭಕ್ತ ಸ್ಥಲಕ್ಕೆ ಇಳಿದು ತನ್ನ ಆನಂದಾನುಭವವನ್ನು, ಸಕಲ ಜೀವರಾಶಿಗಳಿಗೆ ದಾಸೋಹ ಮಾಡು ವದೇ ಪ್ರಸಾದ ತತ್ವದ ಅಂತಿಮ ನಿಲುವು ಎಂಬುದನ್ನು ಸ್ಪಷ್ಟವಾಗಿ ಗಮನಿಸಬೇಕು. "ತೇನ ತ್ಯಕ್ತೇನ ಭುಂಜೇಥಾಃ ಮಾ ಗೃಧಃ ಕಸ್ಯಸ್ವಿದ್ಧನಂ'' ಎಂಬ ಉಪನಿಷತ್ ವಾಕ್ಯವು ಇದನ್ನೇ ಸೂಚಿಸುವದಲ್ಲವೇ ?

೪. ಪಂಚಾಚಾರ

ಪಂಚಾಚಾರಗಳ ಪರಿಧಿಯಲ್ಲಿ ಬರುವ ಮಹೋನ್ನತ ಗುಣಗಳೆಂದರೆ, 1) ಲಿಂಗಾಚಾರ, 2) ಸದಾಚಾರ, 3) ಶಿವಾಚಾರ, 4) ಗಣಾಚಾರ ಮತ್ತು 5) ಭೃತ್ಯಾಚಾರ ಇವುಗಳ ಮಹತ್ವವನ್ನು ಕುರಿತು ಚನ್ನ ಬಸವಣ್ಣನವರು ಹೀಗೆ ಹೇಳಿದ್ದಾರೆ.

''ಲಿಂಗವನಲ್ಲದೆ ಅನ್ಯವನು ಅರಿಯದಿಹುದೆ ಲಿಂಗಾಚಾರ,
ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗ ಜಂಗಮಕ್ಕೆ ನೀಡಿ,
ಸತ್ಯ ಶುದ್ಧನಾಗುವದು ಸದಾಚಾರ, ಶಿವಭಕ್ತರಲ್ಲಿ
ಕುಲಗೋತ್ರ ಜಾತಿ—ವರ್ಣಾಶ್ರಮವನರಸದೆ ಅವರೊಕ್ಕುದ
ಕೊಂಬುದೇ ಶಿವಾಚಾರ, ಶಿವಾಚಾರದ ನಿಂದೆಯ ಕೇಳದಿಹುದೇ
ಗಣಾಚಾರ, ಶಿವ ಶರಣರೆ ಹಿರಿಯರಾಗಿ ತಾನೇ ಕಿರಿಯನಾಗಿ,
ಭಕ್ತಿಯಿಂದ ಆಚರಿಸುವದೇ ಭೃತ್ಯಾಚಾರ''.

ಈ ಪಂಚಾಚಾರಗಳ ಆಚರಣೆ ಪ್ರತಿಯೊಬ್ಬ ಅನುಭಾವಿಯ ಕರ್ತವ್ಯ, ಅವುಗಳನ್ನು ಪ್ರಾಣವನ್ನಾಗಿಸಿದರೆ ಆತ್ಮನ ಸಂದರ್ಶನವಾಗುವದು.

(i) ಲಿಂಗಾಚಾರ

ಲಿಂಗವಿಲ್ಲದವನಿಗೆ ಶರಣರು ''ಭವಿ'' ಎನ್ನುತ್ತಿದ್ದರು. ಲಿಂಗವಿಲ್ಲದೆ ಬಂದ ಸಿದ್ಧರಾಮನಿಗೆ ಅನುಭವ ಮಂಟಪದಲ್ಲಿ ಲಿಂಗದೀಕ್ಷೆ ನೀಡಿದರು. ''ಗುರುಕರುಣವ ಪಡೆದುದಕ್ಕೆ ಚಿನ್ಹೆಯಾವುದೆಂದರೆ ಅಂಗದ ಮೇಲೆ ಲಿಂಗ ಸ್ವಾಯತನಾಗಿರಬೇಕು'' ಎಂದು ಕಿನ್ನರಿ ಬೊಮ್ಮಯ್ಯ ಹೇಳುತ್ತಾನೆ. ಲಿಂಗಾಚಾರದಿಂದ ಭೂತಕಾಯವು ಲಿಂಗ ಕಾಯವಾಗುವದು.

ಸದ್ಗುರುವಿನಿಂದ ಅನುಗ್ರಹಿಸಲ್ಪಡುವ ಲಿಂಗದ ವ್ಯಾಪ್ತಿ ಎತ್ತರ ಬಿತ್ತರಗಳನ್ನು ಸರಿಯಾಗಿ ಅರಿತುಕೊಳ್ಳಬೇಕು. ಅದರಲ್ಲಿಯೂ ತ್ರಿವಿಧಾಂಗಗಳಲ್ಲಿ ತ್ರಿಲಿಂಗಗಳನ್ನು ಧರಿಸಿಕೊಳ್ಳುವ ಆಚಾರಕ್ರಮವನ್ನು ಚೆನ್ನಾಗಿ ಅರಿತುಕೊಳ್ಳಬೇಕು. ನವಚಕ್ರಗಳ ನವಬ್ರಹ್ಮರು ನವಲಿಂಗಗಳಾಗಿ ತನ್ನ ಇಷ್ಟಲಿಂಗದಲ್ಲಿ ಕಾಣಿಸಿಕೊಂಡ ಮೇಲೆ ಅಷ್ಟಾಂಗ ಯೋಗ, ಹಠಯೋಗ ಹಾಗೂ ಕಷ್ಟ ಸಾಧ್ಯವೆನಿಸಿದ ಮುದ್ರೆಗಳ ವಿಡಂಬನೆಯನ್ನರಿತ ಶರಣನು ಸುಲಭಸಾಧ್ಯವಾದ ಲಿಂಗಾಂಗಯೋಗವನ್ನು ಸಾಧಿಸುವ ಕ್ರಮವಂತೂ ಸರಳ ಮತ್ತು ಸುಂದರವಾಗಿದೆ. ಅದೇ ಪ್ರಕಾರ ಲಿಂಗಪೂಜಾಸಕ್ತನಾದ ಶಿವಭಕ್ತನು

ಲಿಂಗದ ಪ್ರಾಣವಾದ ಜಂಗಮ ಲಿಂಗವನ್ನು ತೃಪ್ತಿ ಪಡಿಸಲು ಕಾಯಕ ಶೀಲನಾಗ ಬೇಕೆಂಬ ವಿಧಾನವೂ ಅಂದವಾಗಿದೆ.

ಪಂಚಪ್ರಾಣಗಳೂ ಶರೀರದಲ್ಲಿ ಅವ್ಯಕ್ತವಾಗಿರುವಂತೆ ಪಂಚಾಚಾರಗಳು ಆಳವಟ್ಟಿವೆ.

ಮಾನವನನ್ನು ದೇವನನ್ನಾಗಿ ಮಾಡಲು ಆತಂಕಗಳಾಗಿರುವ ಪಾಪಗಳನ್ನು ದೇಹದಿಂದ ಹೊರಪಡಿಸಿ, ಹೊಸಪಾಪಗಳನ್ನು ದೇಹದೊಳಗೆ ಬಿಟ್ಟುಕೊಳ್ಳದಂತೆ ಅಷ್ಟಾವರ್ಣಗಳು ಅವನಿಗೆ ರಕ್ಷಾಕವಚವೆನಿಸಿವೆ. ಇಂತಹ ಕವಚವನ್ನು ತೊಟ್ಟು ಪಂಚಾಚಾರಗಳಿಂದ ಶುದ್ಧಿಹೊಂದಿ ಷಟ್‌ಸ್ಥಲಾತ್ಮಕವಾದ ಉಪಾಸನ ಮಾರ್ಗದಿಂದ ಸಾಧಕನ ಆತ್ಮಶಕ್ತಿಯು ವಿಕಾಸಗೊಳ್ಳಬೇಕಾಗಿದೆ. ಅವನ ಸರ್ವತೋಮುಖವಾದ ಕಲ್ಯಾಣವು ಈ ದಿಸೆಯಲ್ಲಿ ನಿರ್ವಿಘ್ನವಾಗಿ ಮುಂದುವರಿದು ಅವನು ಭವ ಭಾದೆಯಿಂದ ಪಾರುಗಾಣಬೇಕಾಗಿದೆ. ಇದನ್ನು ಸಾಧಿಸಲಿಕ್ಕಾಗಿ ಸಾಧಕನು ತನ್ನೊಳಗೆ ತನಗಾಗಿ ಗೋಪ್ಯವಾಗಿ ನೆಲೆಸಿರುವ ದಿವ್ಯ ಶಕ್ತಿಯ ಪರಿಚಯವನ್ನು ಅವಶ್ಯವಾಗಿ ಪಡೆಯ ಬೇಕಾಗಿದೆ. ಇದುವೇ ಮಾನವನು ನಿತ್ಯ ಜೀವನದಲ್ಲಿ ಸಾಧಿಸಿ ಪಡೆಯಬೇಕಾದ ಧರ್ಮವೆನಿಸಿದೆ.

ಲಿಂಗಾಚಾರದಿಂದ ಆತ್ಮಸಂತೋಷವುಂಟಾಗುತ್ತದೆ. ಆತ್ಮೋದ್ಧಾರವಾಗುತ್ತದೆ.

ನಿಜವಾದ ವೀರಶೈವನು ಹೇಗಿರಬೇಕೆಂಬುದನ್ನು ಹೇಳುತ್ತಾ ಶರಣೆ ರೇಕಮ್ಮ ಹೇಳುತ್ತಾಳೆ—ಲಿಂಗಾಚಾರ ತಪ್ಪಿದವನನ್ನು ಕಂಡವರು ತಮ್ಮಲ್ಲಿ ಶಕ್ತಿಯಿದ್ದರೆ ಆ ಸ್ಥಳದಲ್ಲಿಯೇ ಸಂಹರಿಸಬೇಕು. ಆ ಧೈರ್ಯವಿಲ್ಲದಿದ್ದರೆ ನಿಜವಾದ ಶರಣನು ಕಿವಿ ಮುಚ್ಚಿಕೊಂಡು ಶಿವಮಂತ್ರ ಜಪಿಸುತ್ತಾ ಆ ಸ್ಥಳವನ್ನು ತ್ಯಜಿಸುವದು ಒಳ್ಳೆಯದು. ಇವಳದು ಮಾಹೇಶ್ವರ ನಿಷ್ಠೆ. ವೀರಶೈವ ಧರ್ಮದ ಪಂಚಾಚಾರದ ಆಚರಣೆಗೆ ಒಂದಿನಿತು ಕುಂದಾದರೂ ಅವಳ ಹೃದಯ ಸಹಿಸದು. ಹೆಣ್ಣಾದರೂ ಅವಳ ನಿಯಮ ಪಾಲನೆಯ ಮನಸ್ಸು ಕಠೋರ.

ನಡೆ ನುಡಿ, ಆಚಾರ ವಿಚಾರ, ವ್ರತ ನಿಯಮಗಳಿಗೆ ಶರಣರು ಕೊಟ್ಟ ಸ್ಥಾನ ಹಿರಿದಾದುದು. ಆದರೆ ಶರಣರಿಗಿಂತ ಶರಣೆಯರು ಒಂದು ಕೈಮೇಲಾಗಿಯೇ, ಹೇಳಿ ದುದನ್ನು ಆಚರಣೆಯಲ್ಲಿ ತಂದು ಜೀವನ ಹಸನಾಗಿಸಿಕೊಂಡಿದ್ದಾರೆ. ಆಚಾರ ಹೀನತೆ ಪಾಪ ಎನ್ನುವದನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದರು.

ಹೀಗೆ ಲಿಂಗಾಚಾರದ ಆಚರಣೆಯಿಂದ ಮನಸ್ಸಿನಲ್ಲಿದ್ದ ಕಲ್ಮಷ ದೂರವಾಗಿ ಆತ್ಮ ಜಾಗೃತಗೊಳ್ಳುತ್ತದೆ. ಅದರಿಂದ ಶಿವನ ಕೃಪೆ ದೊರೆಯುತ್ತದೆ. ಅರ್ಥಾತ್ ಶಿವನಲ್ಲಿ ಲೀನವಾಗುತ್ತಾನೆ.

(ii) ಸದಾಚಾರ

ಸತ್ಯ ಶುದ್ಧ ಕಾಯಕ ಮಾಡುತ್ತಾ ಸಚ್ಚಾರಿತ್ರ್ಯವುಳ್ಳವನಾಗಿರುವವನೇ ಸದಾಚಾರಿಯೆನಿಸಿಕೊಳ್ಳುತ್ತಾನೆ.

ಸದಾಶಿವನನ್ನು ಒಲಿಸುವ ಆಚಾರವೇ ಶರಣರ ದೃಷ್ಟಿಯಲ್ಲಿ ಸದಾಚಾರವಾಗಿತ್ತು. ಮೇಲೆ ತೋರಿಸಿಕೊಳ್ಳುವುದಕ್ಕಾಗಿ ಅಥವಾ ಹೊಗಳಿಕೆ ಪಡೆಯುವುದಕ್ಕಾಗಿ ಮಾಡುವ ಡೊಂಬರಾಟವನ್ನು ಬಸವಣ್ಣನವರು ಖಂಡಿಸಿದ್ದಾರೆ.

"ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ ?
ಅಘೋರ ತಪವ ಮಾಡಿದೊಡೇನು
ಅಂತರಂಗ ಆತ್ಮ ಶುದ್ಧವಿಲ್ಲದವರನು
ಎಂತು ನಂಬುವನಯ್ಯ ಕೂಡಲ ಸಂಗಮದೇವಾ"!

ಆಗ ವಿಚಾರ ಆಚಾರಗಳಲ್ಲಿ ಬಿಡಿಸಿದ ಹೊಂದಾಣಿಕೆ, ಮೃದುವಚನವ ನುಡಿವುದು, ನುಡಿದಂತೆ, ಸದಾಚಾರದಲ್ಲಿ ನಡೆಯುವುದು, ಅನುಭಾವಿಗಳ ಬದುಕಿನ ದಾರಿಯಾಗಿತ್ತು. ಆತ್ಮವಿಮರ್ಶೆ ಮಾಡಿಕೊಳ್ಳುವ ಗುಣ ಬಹುದೊಡ್ಡ ಗುಣ. ತಮ್ಮಲ್ಲಿಯ ದೋಷಗಳನ್ನು ಹುಡುಕಿ ತಿದ್ದಿಕೊಳ್ಳಲು ಪ್ರಯತ್ನಿಸಬೇಕು. ತಾನು ಎಲ್ಲಿಯವರೆಗೆ ದೋಷಮುಕ್ತನಾಗಿರುವನೋ ಅಲ್ಲಿಯವರೆಗೆ ಅವನಿಗೆ ಅನ್ಯರಿಗೆ ಉಪದೇಶ ಮಾಡುವ ಅಧಿಕಾರ ಇದೆ.

"ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂದು ಹೇಳುವಲ್ಲಿ ಆಚಾರದ ಮಹತ್ವ ತಿಳಿದು ಬರುತ್ತದೆ. ಆಚಾರವೆಂದರೆ ಸದಾಚಾರ. ಪರಮಾತ್ಮನ ಅನುಗ್ರಹ ಪಡೆಯಬೇಕಾದರೆ ಶುದ್ಧವಾದ ಜ್ಞಾನ ಸಂಪಾದನೆಯೂ ಅವಶ್ಯವಿದೆ. ಇಂಥ ಜ್ಞಾನ ಸಂಪಾದನೆಗೆ ಸದಾಚಾರದ ಅವಶ್ಯಕತೆ ಇದೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಭೌತಿಕ ಸುಖಕ್ಕಾಗಿ ಜನರು ಹಾತೊರೆಯುತ್ತಾರೆ. ಆದರೆ ಅದು ಶಾಶ್ವತ ಸುಖವಲ್ಲ. ಧರ್ಮ, ಸದಾಚಾರಗಳಿಂದ ಶಾಶ್ವತ ಸುಖ ದೊರೆಯುತ್ತದೆ. ವಿಚಿತ್ರವೆಂದರೆ ಕೆಲವರು ಧಾರ್ಮಿಕ ಸದಾಚಾರಗಳಿಗೆ ಮೂಢ ನಂಬಿಕೆ ಎಂದು ಕರೆದು ತಮ್ಮ ಮೂಢ ತನವನ್ನು ಪ್ರದರ್ಶಿಸುತ್ತಾರೆ. ಇನ್ನೂ ಕೆಲವರು ದೇವರನ್ನು ಒಲಿಸಲು ಶುದ್ಧ ಮನಸ್ಸಿದ್ದರೆ ಸಾಕು ಎನ್ನುತ್ತಾರೆ. ಆದರೆ ಶುದ್ಧ ಮನಸ್ಸು ಪಡೆಯಲು ವೈರಾಗ್ಯ ಮತ್ತು ಸತತ ಅಭ್ಯಾಸ ಬೇಕಾಗುತ್ತದೆ ಎನ್ನುವದು ಅವರಿಗೆ ಗೊತ್ತಿರುವುದಿಲ್ಲ. ಮತ್ತೆ ಕೆಲವರು ಕಾಲ ಬದಲಾಗಿದೆ. ವೇಳೆಯೇ ಸಿಗುವುದಿಲ್ಲ ಎಂದು ಹೇಳಿ 10 ನಿಮಿಷ ಸಹಿತ ಪೂಜೆ ಪ್ರಾರ್ಥನೆಗೆ ಕಳೆ

ಯದೆ ಕುಂಟು ನೆಪ ಮುಂದೆ ಮಾಡಿ ಜಾರಿಕೊಳ್ಳುತ್ತಾರೆ ಹೀಗೆ ಸದಾಚಾರದಿಂದ ದೂರ ಸರಿದು ಲೌಕಿಕ ಸುಖದ ಬೆನ್ನುಹತ್ತಿದವರ ಜೀವನ ಪಶು ಜೀವನವಾಗಿದೆ ಎನ್ನುವುದನ್ನು ಎಲ್ಲೆಲ್ಲಿಯೂ ಕಾಣಬಹುದು.

ಒಳ್ಳೆಯ ಆಚರಣೆ ಇಲ್ಲದೆ ದುರಾಚಾರದಲ್ಲಿ ಕಾಲ ಕಳೆಯುವವನನ್ನು ಯಾವ ವೇದ ಮಂತ್ರಗಳು ಶುದ್ಧೀಕರಿಸಲು ಸಾಧ್ಯವಿಲ್ಲ. ಪಶ್ಚಾತಾಪದಿಂದ ಶುದ್ಧಿ ಮಾಡಿ ಕೊಳ್ಳಬಹುದು ಎನ್ನುವ ಪಾಶ್ಚಿಮಾತ್ಯರ ವಾದವನ್ನು ವೀರಶೈವಧರ್ಮ ಒಪ್ಪುವ ದಿಲ್ಲ. ಯಾಕಂದರೆ ಪ್ರಾಯಶ್ಚಿತ್ತದ ಭರವಸೆ ಮೇಲೆ ಮಹಾಪರಾಧವನ್ನು ಮಾಡಲು ಯಾರೂ ಹಿಂದು ಮುಂದು ನೋಡಲಿಕ್ಕಿಲ್ಲ. ದೇವರು ಪ್ರತಿಯೊಬ್ಬರಿಗೆ ಸಾರಾಸಾರ ವಿಚಾರ ಮಾಡುವ ಬುದ್ಧಿಯನ್ನು ಕೊಟ್ಟಾಗ ಅದರ ಸದುಪಯೋಗ ಮಾಡಿಕೊಳ್ಳದೇ ಮಾಡಿದ ತಪ್ಪನ್ನೇ ಮಾಡುತ್ತಾ ಹೋದರೆ ದುಃಖವನ್ನು ಅನುಭವಿಸಬೇಕಾಗುತ್ತ ದಯೇ ವಿನಃ ಅನ್ಯಮಾರ್ಗವಿಲ್ಲ. ಆದ್ದರಿಂದ ಸದಾಚಾರದಿಂದ ದೂರಸರಿದು ದುಃಖ ಕ್ಕೀಡಾದ ವ್ಯಕ್ತಿಯು ಮತ್ತೆ ಒಳ್ಳೆಯ ಆಚರಣೆಯಿಂದಲೇ ತನ್ನ ಕಷ್ಟ ಪರಿಹರಿಸಿ ಕೊಳ್ಳಬೇಕು. ಇದನ್ನು ಬಿಟ್ಟು ಬೇರೆಯಾವ ದಾರಿಯೂ ಇಲ್ಲ. ಆದ ಕಾರಣ ಜೀವನದಲ್ಲಿ ಸದಾಚಾರಕ್ಕೆ ಬಹಳ ಮಹತ್ವ ಕೊಟ್ಟಿದ್ದಾರೆ.

ಇಂದಿನ ಯುವ ಪೀಳಿಗೆಯಲ್ಲಿ ಬಹುತೇಕವಾಗಿ ಅನೇಕ ದುಶ್ಚಟಗಳು ಮನೆ ಮಾಡಿಕೊಂಡಿದ್ದನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಕುಡಿಯುವದು, ತಿನ್ನುವದು, ಜೂಜು ಆಡುವದು, ಮಾದಕ ದ್ರವ್ಯ ಸೇವಿಸುವದು, ಇತ್ಯಾದಿ ಇತ್ಯಾದಿ. ಇಂಥವು ವುಗಳಿಂದ ದೂರ ಉಳಿಯಬೇಕಾದರೆ ದಿನನಿತ್ಯ ಪೂಜೆ ಪುನಸ್ಕಾರ, ಪ್ರಾರ್ಥನೆ ನೈವೇದ್ಯದಿಂದ ಪವಿತ್ರವಾದ ಅನ್ನವನ್ನು ಊಟ ಮಾಡುವದು ಇತ್ಯಾದಿಗಳನ್ನು ಮಾಡುವುದರಿಂದ ಸಾತ್ವಿಕತೆ ಹೆಚ್ಚುತ್ತಾ ಹೋಗಿ ಮಾನಸಿಕ ಪಾವಿತ್ರ್ಯತೆ ಉಂಟಾ ಗುತ್ತದೆ. ಅದರಿಂದ ಶುದ್ಧ ವಿಚಾರಗಳು ಬರುತ್ತವೆ. ಸದಾಚಾರದ ಸಾರ್ಥಕತೆಯೇ ಜೀವನದ ಸಾರ್ಥಕತೆಯ ಮೂಲ ರಹಸ್ಯ.

"ತಾನು ಒಳ್ಳೇಯವನಾಗಿದ್ದರೆ ಎಲ್ಲರೂ ತನಗೆ ಒಳ್ಳೆಯವರಾಗುತ್ತಾರೆ, ತಾನು ಕೆಟ್ಟವನಾದರೆ ತನಗೆ ಎಲ್ಲರೂ ಕೆಟ್ಟವರಾಗುತ್ತಾರೆ. ತಾನು ಒಳ್ಳೆಯವನಾಗಿ ಜನರು ಕೆಟ್ಟವರಾದರೆ ಅದು ತನ್ನ ದುರ್ದೈವ. ತಾನು ಕೆಟ್ಟವನಾಗಿ ಜನರು ತನಗೆ ಒಳ್ಳೇ ಯವರಾದರೆ ಅದು ತನ್ನ ಸುದೈವ".

ಹೀಗೆ ಶ್ರೀ ಷಣ್ಮುಖದೇವರು ಅಖಂಡೇಶ್ವರ ವಚನದಲ್ಲಿ ಹೇಳಿದ್ದಾರೆ. ಮನುಷ್ಯನು ತಾನು ಎಲ್ಲರ ಪ್ರಶಂಸೆಗೆ ಪಾತ್ರನಾಗಬೇಕೆಂಬುವ ಇಚ್ಛೆ ಇದ್ದರೆ ತಾನು ತನ್ನ ನಡೆನುಡಿ ರೀತಿ ನೀತಿ ಕಾರ್ಯಪದ್ಧತಿ ಮೊದಲಾದವುಗಳನ್ನು ತಿದ್ದಿಕೊಳ್ಳಬೇಕು.

ಮಾನವತೆ ಎಲ್ಲಿದ್ದರೂ ಅರಿತು ಆಚರಿಸಬೇಕಾದ ಆಚಾರ, ಸದಾಚಾರ, ಯಾಕೆಂದರೆ ಇದರಲ್ಲಿ ನೀತಿ ಧರ್ಮಗಳ ಅವಿನಾಭಾವ ಸಂಬಂಧವಿದೆ.

(iii) ಶಿವಾಚಾರ

ಸಾಮಾಜಿಕ ಜೀವನದ ಶುದ್ಧಿಕರಣಕ್ಕೆ ಆಚಾರಗಳ ಅನುಷ್ಠಾನ ಅತ್ಯಗತ್ಯ. ಪಂಚಾಚಾರಗಳ ಆಚರಣೆಯಿಂದ ಅಷ್ಟಾವರಣಗಳ ಪೂರ್ವಾಶ್ರಯವು ಅಳಿಯುವದು ಮತ್ತು ಅಂತರ್ ಬಾಹ್ಯ ಜೀವನ ಶುದ್ಧಿಗೆ ಸಹಾಯಕವಾಗುವದು.

ಶಿವಭಕ್ತರಲ್ಲಿ ಕುಲಗೋತ್ರ ಜಾತಿ, ವರ್ಣ, ಆಶ್ರಮವನ್ನರಸದೇ ಅವರೊಕ್ಕುದ ಕೊಂಬುದೇ ಶಿವಾಚಾರ.

ಗುರು ಮಾರ್ಗಾಚಾರದಲ್ಲಿ ನಿಂದ, ಶಿವಲಾಂಛನಧಾರಿಗಳೆಲ್ಲಾ
ಪರಶಿವಲಿಂಗವೆಂದು ಭಾವಿಸಿ ಅರ್ಥಪ್ರಾಣ ಅಭಿಮಾನವನರ್ಪಿಸುವುದೇ
ಶಿವಾಚಾರವೆಂಬೆನಯ್ಯ" ಎಂದು ಚನ್ನ ಬಸವಣ್ಣನವರು ಶಿವಾಚಾರದ ಸೂಕ್ಷ್ಮತೆಯನ್ನು ಸಾರಿದ್ದಾರೆ.

ಶಿವಲಿಂಗವನ್ನು ಭಕ್ತಿಯಿಂದ ಆಚರಿಸುವದು ಬಹಳ ಸೂಕ್ಷ್ಮವಾದುದು ಮತ್ತು ಅತ್ಯಂತ ರಹಸ್ಯವಾದುದು. ಹೀಗೆ ಒಪ್ಪುವಂತಹ ನಿಜವಸ್ತುವನ್ನು ಸಹಜ ವಸ್ತುವನ್ನು ಘನವಸ್ತುವೆಂದು ಅರಿದು ಆಚರಿಸುವುದೇ ವಿಶೇಷವಾದ ಜ್ಞಾನವು ಎಂದು ಶಾಂತದೇವರು ವಿವರಿಸುತ್ತಾರೆ. ಇನ್ನೊಂದು ರೀತಿಯಲ್ಲಿ ಹೀಗೆ ವಿವರಿಸುತ್ತಾರೆ. ''ಮಹಾಲಿಂಗವು ಪರಾಶಕ್ತಿಯನೊಡಗೂಡಿದಲ್ಲಿ ಪಂಚ ಸಾದಾಖ್ಯವಾಗಿ ಪಂಚಕಲೆಯನೊಡಗೂಡಿ, ಪಂಚಬ್ರಹ್ಮವಾಗಿ ಪಂಚಮುಖವನುಳ್ಳ ಶಿವನಾದದಲ್ಲಿ ಸದಾಶಿವ ನಾದನು''.

ಇದನ್ನೇ ಅಲ್ಲಮ ಪ್ರಭುಗಳು "ಮರದೊಳಗಣ ಪತ್ರ ಫಲಂಗಳು, ಮರಕಾಲನ
ವಶದಲ್ಲಿ ತೋರುವವು, ಹರನೊಳಗಣ ಲೀಲಾ
ಪ್ರಕೃತಿ ಹರಲೀಲಾವಶದಲ್ಲಿ ತೋರುವವು
ಲೀಲೆಯಾದೊಡೆ ಉಮಾಪತಿ,
ಲೀಲೆನಿಂದೊಡೆ ಸ್ವಯಂಭೂ ನಮ್ಮ ಗುಹೇಶ್ವರ"
ಎಂದು ಬಹಳ ಸೊಗಸಾಗಿ ಶಿವಾಚಾರದ ರಹಸ್ಯವನ್ನು ತಿಳಿಸಿದ್ದಾರೆ.

ಆಶೆಯನ್ನು ಸರ್ವತ್ರ ತ್ಯಜಿಸಬೇಕು. ದುರ್ಗುಣಗಳಿಂದ ದೂರವಿರಬೇಕು. ಎಂದೂ ಯಾರಲ್ಲಿಯೂ ಕೈಯೊಡ್ಡಬಾರದು. ಯಾಕೆಂದರೆ ಯಾಚನೆ ಮೃತ್ಯು, ಬೇಡುವದು ಕುಲಗೇಡಿತನದ ಲಕ್ಷಣ. ಅನಪೇಕ್ಷ ಭಾವನೆಯಿಂದ ಶಿವನ ಕೃಪೆಯಿಂದ ಬಂದುದನ್ನು ಅನುಭವಿಸಬೇಕು. ಇದೇ ಶಿವಾಚಾರ ಎಂದು ಹೇಳುತ್ತಾರೆ.

ಪಂಚೇಂದ್ರಿಯಗಳನ್ನು ಗೆಲ್ಲಬೇಕು, ಷಡ್ರಿಪುಗಳನ್ನು ಕೊಲ್ಲಬೇಕು, ನಿರ್ಮಲ ಮನಸ್ಸಿನಿಂದ ನಿಜತತ್ವವನರಿಯಬೇಕು, ಮೋಹದ ಕಳವಳ ಅಡಗಬೇಕು, ಕರ್ಮ ವಿಮೋಚನೆ ಆಗಬೇಕು. ಇದುವೇ ಶಿವಾಚಾರದ ಮಹತ್ವ ಎಂದು ಎತ್ತಿ ತೋರಿಸಿ ದ್ದಾರೆ.

ಅಜ್ಞಾನದ ಜಂಜಡದಿಂದ ಹೊರಬಂದು ಸುಜ್ಞಾನದ ಮಟ್ಟಕ್ಕೆ ತಲುಪಿಸುವ ಸಾಧನ ಶಿವಾಚಾರ. ಅಂಥ ಶ್ರದ್ಧೆಗಳು ಮೊದಲು ಕಳಚಿ ಬೀಳಬೇಕು. ಆಗ ಸುಜ್ಞಾನ ತನ್ನಷ್ಟಕ್ಕೆ ತಾನೇ ಸ್ಫುರಿಸುತ್ತದೆ. ಇದನ್ನೇ ವಿಚಾರ ಶೀಲತೆ ಎಂದು ಕರೆಯುತ್ತಾರೆ.

ನಮ್ಮನ್ನು ಪರರು ಪ್ರೀತಿಸಬೇಕು, ಗೌರವಿಸಬೇಕು, ಮೇಲಾಗಿ ನಮಗೆ ಆದರ ಭಾವ ತೋರಿಸಬೇಕು ಎಂದು ನಾವು ಹೇಗೆ ಬಯಸುತ್ತೇವೆಯೋ ಹಾಗೆಯೇ ನಾವು ಪರರ ಜೊತೆ ನಡೆದುಕೊಳ್ಳಬೇಕು. ಸಕಲ ಜೀವಾತ್ಮರಲ್ಲಿ ಲೇಸನ್ನೇ ಬಯಸಬೇಕು.

ಶರಣರು ವ್ಯಕ್ತಿಯ ಪರಿಶುದ್ಧತೆಗೆ ಅಪಾರ ಪ್ರಾಮುಖ್ಯತೆಯನ್ನು ಕೊಟ್ಟರು. ಅಂತರಂಗ ಬಹಿರಂಗ ಶುದ್ಧಿ ಸ್ವವಿಮರ್ಶೆ, ಪ್ರಾಮಾಣಿಕತೆಗಳ ಬಗೆಗೆ ರಾಜಮಾರ್ಗ ರಚಿಸಿದರು. ಆಚರಣೆಯ ವಚನಗಳನ್ನು ನೋಡಿದರೆ ಶರಣರಾದವರು ದೂರಗೊಳಿಸ ಬೇಕಾದ ದುರಾಚಾರಗಳನ್ನು ಸ್ವೀಕರಿಸಬೇಕಾದ ಸದಾಚಾರಗಳನ್ನು ವಿವರಿಸಿದ್ದು ಎದ್ದು ಕಾಣುತ್ತದೆ.

ಆಚಾರವೆಂಬುದು ಅಗೋಚರ ನೋಡಯ್ಯ
ಮಾಡಿದಲ್ಲದೇ ಇಲ್ಲ———

ಎಂದು ಹೇಳುವಲ್ಲಿ ಸುಜ್ಞಾನ ಸತ್ಕ್ರಿಯೆಗಳ ಸರಸ ಸಂಗಮವನ್ನು ಅರಿತು ಆಚರಿಸ ಬೇಕೇ ಹೊರತು ಇಂದ್ರಿಯಗಳಿಂದ ಗ್ರಹಿಸಲು ಸಾಧ್ಯವಿಲ್ಲ ಎಂಬುದು ಎದ್ದು ಕಾಣು ತ್ತದೆ. ಆದ್ದರಿಂದ ಉತ್ತಮ ವಿಚಾರಗಳನ್ನು ಹೊಂದಿದ ಮನುಷ್ಯ ಉತ್ತಮ ಆಚಾರ ಹೊಂದಬಲ್ಲ.

ಶಿವಾಚಾರದ ವೈಶಿಷ್ಟ್ಯ ಸಾಮಾಜಿಕ ಸಂಘಟನಾ ಶಕ್ತಿಯಲ್ಲಿ ಅಡಗಿದೆ. ಸಮಾಜ ರಚನೆ, ಸಮಾಜ ಸ್ಥಿರತೆ ಸಮಾಜ ಸಂಘಟನೆಗಳಿಗೆ ಅಡಿಗಲ್ಲಾಗಿದೆ. ವ್ಯಕ್ತಿ ಸಮಾಜಗಳಿಗೂ ರೀತಿ ನೀತಿಗಳಿಗೂ ಧರ್ಮ ಧ್ಯೇಯಗಳಿಗೂ ಉತ್ತೇಜಕವಾಗಿ ವಜ್ರ ಕವಚವಾಗಿದೆ. ಶಿವಾಚಾರದಲ್ಲಿ ಸಾಮಾಜಿಕ ಸ್ವಾತಂತ್ರ್ಯ, ಸರ್ವ ಸಮಾನತೆ, ಅನ್ಯೋನ್ಯ ಸಹೋದರತ್ವ ಇವು ಮುಖ್ಯ ಆಧಾರಸ್ಥಂಭಗಳಾಗಿವೆ. ಶಿವಾಚಾರ–ಸ್ಥಿರ ನಡೆನುಡಿ ಒಂದಾಗಿರಬೇಕು. "ಶಿವ'' ತತ್ವಕ್ಕೆ ಶರಣು ಹೋದವರು ಪಾದೋದಕ ಪ್ರಸಾದ ವಿಷಯಗಳಲ್ಲಿ ಕೊಡ–ಕೊಂಬುವ ವ್ಯವಹಾರದಲ್ಲಿ ವ್ಯತ್ಯಾಸ ಕಾಣಬಾರದು.

''ದಾಸೀ ಪುತ್ರನಾಗಲಿ ವೇಶ್ಯಾ ಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್
ಶಿವನೆಂದು ವಂದಿಸಿ ಪೂಜಿಸಿ
ಪಾದೋದಕ ಪ್ರಸಾದ ಕೊಂಬುದೆ ಯೋಗ್ಯ''

ಎಂದು ಚನ್ನ ಬಸವಣ್ಣನವರು ನಿಯಮ ವಿಧಿಸಿದ್ದಾರೆ. ತಪ್ಪಿ ನಡೆಯುವವರಿಗೆ ಎಚ್ಚರಿಕೆಯನ್ನು ನೀಡಿದ್ದಾರೆ.

ಕೊನೆಯದಾಗಿ ಶಿವಾಚಾರದಲ್ಲಿರುವವರು ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿದ್ದರೂ ಸಹ ಅವರೆಲ್ಲಾ ಕೀಳೆನಿಸಲಾರರು. ವೃತ್ತಿಯಿಂದ ಜಾತಿಭೇದ ಕಲ್ಪಿಸಬಾರದು, ಸತ್ಯ ಶುದ್ಧ ಮಾರ್ಗದಿಂದ ನಡೆಯುವದೇ ಶಿವಾಚಾರ, ಸಮದರ್ಶಿಯಾಗಿ ಸಮಸುಖಿಯಾಗಿ ಬಾಳುವುದೇ ಶಿವಾಚಾರ. ಶಿವಲಿಂಗಧಾರಿಗಳೆಲ್ಲ ಸಮಾನರೆಂದು ಭಾವಿಸುವುದೇ ಶಿವಾಚಾರ. ಇದರಿಂದ ಲಿಂಗವಂತರಲ್ಲಿ ಭಾವೈಕ್ಯತೆ ಬೆಳೆಯುವದು.

(iv) ಗಣಾಚಾರ

ಶಿವಾಚಾರದ ನಿಂದೆಯನ್ನು ಕೇಳದಿರುವದೇ ಗಣಾಚಾರ ಎಂದು ಹೇಳುತ್ತಾರೆ.

"ಅಷ್ಟಾವರಣಂಗಳ ಮೇಲೆ ಅನ್ಯರಿಂದ ಕುಂದುನಿಂದೆಗಳು ಬಂದು
ತಟ್ಟಿದಲ್ಲಿ ಗಣಸಮೂಹವನೊಡಗೂಡಿ ಆ ಸ್ಥಳವ ತ್ಯಜಿಸುವುದೇ
"ಗಣಾಚಾರ'' ವೆಂಬೆನೆಯ್ಯ''

ಎಂದು ಚನ್ನಬಸವಣ್ಣನವರು ಗಣಾಚಾರದ ಮಹತ್ವವನ್ನು ಪ್ರಸ್ತಾಪಿಸಿದ್ದಾರೆ.

ಗಣಾಚಾರದಿಂದ ಸ್ವಧರ್ಮದಲ್ಲಿ ನಿಷ್ಠೆಯನ್ನು ಬೆಳೆಯಿಸಿಕೊಂಡು ಅದನ್ನು ಯಾರಾದರೂ ತಿರಸ್ಕರಿಸಿ ಮಾತನಾಡಿದರೆ ಅವರ ಬುದ್ಧಿಯನ್ನು ತಿದ್ದಿ ಸರಿಪಡಿಸಬೇಕು. ಇಲ್ಲವೇ ಆ ಸ್ಥಾನವನ್ನು ಬಿಟ್ಟು ಹೋಗಬೇಕು ಎಂಬುದೇ ತಾತ್ಪರ್ಯ.

ಷಟಸ್ಥಲ ಬ್ರಹ್ಮಮೂರ್ತಿಯಾಗಿ ಕಂಗೊಳಿಸಬೇಕಾದರೆ ಮೊದಲು ಆಚಾರವಂತನಾಗಬೇಕು. ''ಆಚಾರಃ ಪ್ರಥಮೋಧರ್ಮಃ ಎಂದು ಹೇಳಿದ್ದು ಅದಕ್ಕಾಗಿಯೇ.

ಗಣಾಚಾರದಿಂದ ನಡೆ ಶುದ್ಧವಾಗುತ್ತದೆ. ಪಂಚಾಚಾರಗಳಿಂದ ತನು, ಮನು, ಧನ ನಡೆನುಡಿಗಳು ಶುದ್ಧವಾಗಿ ಶಿವನಾಗುವುದರಲ್ಲಿ ಸಂದೇಹವಿಲ್ಲ. ಪುಷ್ಪ ಮತ್ತು ಪರಿಮಳ ಹೇಗೆ ಅಭಿನ್ನವಾಗಿರುವವೋ ಹಾಗೆ ಅಂಗಲಿಂಗಗಳ ಸಮರಸವಾಗುವದು. ಸದ್ಗುಣಾಚಾರದ ಸೌಗಂಧ ಎಲ್ಲೆಡೆಯೂ ಪಸರಿಸಬಲ್ಲದು.

ಶಕ್ತಿ ವಿಶಿಷ್ಟಾದ್ವೈತನದ ಪ್ರಕಾರ ವೀರಶೈವನು ಮೋಕ್ಷ ಹೊಂದಲು ತ್ರಿಕರಣ ಪೂರ್ವಕವಾಗಿ ಇಷ್ಟಲಿಂಗವನ್ನು ಪೂಜಿಸಬೇಕಾಗುತ್ತದೆ. ಅಂದರೆ ಅಷ್ಟಾವರಣ,

ಪಂಚಾಚಾರ ಷಟ್‌ಸ್ಥಲಗಳ ಸಿದ್ಧಾಂತಗಳ ಸಾಧನೆಯಿಂದ ಶರೀರ ಹಾಗೂ ಮನಸ್ಸಿನಲ್ಲಿದ್ದ ಕಲ್ಮಷಗಳನ್ನು ದೂರ ಮಾಡಿ, ಆತ್ಮವನ್ನು ಜಾಗೃತಗೊಳಿಸಿ ಶಿವನ ಕೃಪೆಯನ್ನು ಪಡೆಯುತ್ತಾನೆ. ಅಥವಾ ಶಿವನಲ್ಲಿ ಲೀನವಾಗುತ್ತಾನೆ. ವೀರಶೈವರಿಗೆ ಶಿವನನ್ನು ಅರಿಯುವ ಹಾಗೂ ಶಿವನಲ್ಲಿ ಲೀನವಾಗುವಂತೆ ಪರಿವರ್ತನೆಗೊಳಿಸುವದೇ ವೀರಶೈವ ಧರ್ಮದ ಧ್ಯೇಯವಾಗಿದೆ. ಅಥವಾ ಲಿಂಗವನ್ನು ಪೂಜಿಸಿ ಲಿಂಗಸ್ವರೂಪವೇ ಆಗುವಂತೆ ಪರಿವರ್ತನೆಗೊಳಿಸುವದೇ ಧ್ಯೇಯವಾಗಿದೆ. ಶಿವನು ವೀರಶೈವ ಧರ್ಮದ ಆರಾಧ್ಯ ದೈವನಾಗಿರುತ್ತಾನೆ.

ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು ಶಕ್ತಿ ವಿಶಿಷ್ಟಾದ್ವೈತದ ಸಿದ್ಧಾಂತಗಳಾಗಿರುತ್ತವೆ.

ವೀರಶೈವ ಧರ್ಮವು ತನ್ನ ಧ್ಯೇಯಕ್ಕನುಗುಣವಾಗಿ ರೂಪಿಸುವ ನೀತಿ ನಿಯಮುಗಳೇ ಪಂಚಾಚಾರಗಳಾಗಿರುತ್ತವೆ. ಪಂಚಾಚಾರಗಳು ಉಪಾಸಕನ ಮನಸ್ಸನ್ನು ಶುದ್ಧಗೊಳಿಸುತ್ತವೆ. ಅವುಗಳಲ್ಲೊಂದಾದ ಗಣಾಚಾರವು ಶಿವನಿಂದೆ, ಧರ್ಮನಿಂದೆ ಹಾಗೂ ತತ್ವನಿಂದನೆಯನ್ನು ಸಹಿಸುವುದಿಲ್ಲ.

ಆಚಾರದ ಹೆಸರಿನಲ್ಲಿ ಕೆಲವರು ವಿಚಿತ್ರವಾಗಿ ವರ್ತಿಸುತ್ತಾರೆ. ಇದನ್ನು ಮುಟ್ಟಿಸಿಕೊಳ್ಳುವದಿಲ್ಲ, ಅದನ್ನು ಹಿಡಿಯುವದಿಲ್ಲ ಮುಂತಾಗಿ ನೀತಿ ಧರ್ಮಗಳೆರಡೂ ಬೇರೆ ಬೇರೆಯಾಗಿ ಉಳಿಯದೆ ಅವಿನಾಭಾವ ಸಂಬಂಧನನ್ನು ಪಡೆದು ಗುರುತಿಸಲೂ ಆಗದಂತೆ ಒಂದೇ ಆಗಿ ಪರಿಣಮಿಸುತ್ತವೆ. ಈ ನಿಲುವನ್ನೇ ಶರಣರು ಆಚಾರ ಎಂದು ಕರೆದಿದ್ದಾರೆ. ಅಂತರಂಗದ ಅರಿವು, ಅರಿವಿನ ಆಚರಣೆ ಇವೆರಡರಿಂದ ಅಂಗಕ್ರಿಯೆ ಲಿಂಗಕ್ರಿಯೆಯಾಗಿ ಪರಿವರ್ತನೆಯಾಗುತ್ತದೆ. ಈ ಅರ್ಥದಲ್ಲಿ ನೋಡಿದರೆ ಷಟ್‌ಸ್ಥಲ ಅಷ್ಟಾವರಣಗಳೂ ಸಹಿತ ಆಚಾರಗಳೆಂದೇ ಕರೆಯಲ್ಪಡುತ್ತವೆ. "ಸರ್ವಾಚಾರ ಸಂಪತ್ತು'' ಎಂಬ ಮಾತಿನಲ್ಲಿ ''ಪಂಚಾಚಾರಗಳ ಜೊತೆಗೆ ಇವೂ ಸಮಾವೇಶಗೊಳ್ಳುತ್ತವೆ. ಇಲ್ಲಿ ಆಚಾರವೆಂಬ ಮಾತು ವಿಚಾರವನ್ನೊಳಗೊಂಡೇ ಇರುವಂತಹದು. ಆದರೆ ವಿಚಾರದಲ್ಲಷ್ಟೇ ನಿಲ್ಲದೆ ಇನ್ನು ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಶರಣರ ಆಚಾರ ಜ್ಞಾನ ಮತ್ತು ಕ್ರಿಯೆಗಳೆರಡನ್ನೂ ಗರ್ಭೀಕರಿಸಿಕೊಂಡಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ..

ಹೀಗೆ ಸತ್ಕ್ರಿಯಾಚಾರಗಳ ಮೂಲಕ ದುರ್ಗುಣಗಳನ್ನು ದೌರ್ಬಲ್ಯಗಳನ್ನು ಕಳೆದುಕೊಂಡು ಶಿವಪರವಾದ ಗುಣಗಳನ್ನು ಅಳವಡಿಸಿಕೊಳ್ಳಬೇಕು.

ಚನ್ನಬಸವಣ್ಣನವರ ಬೋಧನೆಯಲ್ಲಿ ಉದ್ದಕ್ಕೂ ಎದ್ದು ಕಾಣುವ ಅತಿ ಪ್ರಮುಖವಾದ ಒಂದು ಅಂಶವೆಂದರೆ ಅರಿವು ಆಚಾರವಾಗಬೇಕೆಂಬುದು ಮತ್ತು

ಆದರಿಂದ ಸಾಧಕನ ವ್ಯಕ್ತಿತ್ವದಲ್ಲಿ ಸಂಪೂರ್ಣವಾದ ಒಂದು ಪರಿವರ್ತನೆಯಾಗಬೇಕೆಂಬುದು. ಅದಿಲ್ಲದೆ ಕೇವಲ ಹೊರಗಡೆಯ ತೋರಿಕೆಯ ಆಚರಣೆಗಳನ್ನು ಅತ ಒಪ್ಪುವುದಿಲ್ಲ.

ಮುತ್ತಿನ ಸರಗಳನ್ನು ಹಾಕಿ ಕತ್ತೆಯನ್ನು ಅಲಂಕರಿಸಿದರೆ ಅದಕ್ಕೆ ಮುತ್ತಿನ ಬೆಲೆ ಗೊತ್ತಾಗುತ್ತದೆಯೇ ? ಬುತ್ತಿಯ ಗಂಟನ್ನು ಎಷ್ಟು ಹೊತ್ತು ತಲೆಯ ಮೇಲೆ ಹೊತ್ತುಕೊಂಡು ನಡೆದರೇನು ಅದು ತೃಪ್ತಿಯನ್ನುಂಟು ಮಾಡುತ್ತದೆಯೇ ? ಅದೇ ಪ್ರಕಾರ ನಿಷ್ಠೆಯಿಲ್ಲದ ಭಕ್ತನಿಗೆ ಇಷ್ಟಲಿಂಗವ ಕಟ್ಟಿದರೆ ಅವನೇನು ಶ್ರೇಷ್ಠ ಶಿವಭಕ್ತನಾಗಬಲ್ಲನೇ ? ಎಂದು ಕೇಳುತ್ತಾರೆ ಚನ್ನಬಸವಣ್ಣನವರು.

ನಾವು ಏನು ಮಾಡುತ್ತೇವೆ ಎನ್ನುವುದಕ್ಕಿಂತ ಅದನ್ನು ಹೇಗೆ ಮಾಡುತ್ತೇವೆ ಎನ್ನುವುದು ಮುಖ್ಯ. ಮರ್ಮವನ್ನರಿತು ಮಾಡಬೇಕು. ಮರ್ಮವನ್ನರಿತು ಮಾಡುವವನಿಗೆ ಕರ್ಮವಿಲ್ಲ.

ಹೀಗೆ ಗಣಾಚಾರವೆಂದರೆ ಒಟ್ಟಿನ ಮೇಲೆ ಧರ್ಮ ರಕ್ಷಣೆಯ ಮಹತ್ವವನ್ನು ಅರುಹುತ್ತದೆ.

ಲಿಂಗಕ್ಕೆ ಆಚಾರವೇ ಆಶ್ರಯ. ಆಚಾರವಿಲ್ಲದ ಭೂತಕಾಯ ಜಡಕಾಯವೆನ್ನಿಸಿಕೊಳ್ಳುತ್ತದೆ.

ಯಾವುದೇ ಒಂದು ವ್ಯಕ್ತಿ, ಒಂದು ಸಂಘ, ಸಂಸ್ಥೆ, ಒಂದು ಸಮಾಜದ ಮೇಲೆ ಅನ್ಯಾಯವಾಗಿ ಅತ್ಯಾಚಾರ ಮಾಡುವವನು ಪಾಪಿ. ಅದನ್ನು ಸಹಿಸತಕ್ಕವನೂ ಅಷ್ಟೇ ಪಾಪಿ. ಸಮಾಜ ದ್ರೋಹಿಗಳನ್ನು ಪ್ರಬಲರನ್ನಾಗಿ ಮಾಡುವವರು ಸಮಾಜ ದ್ರೋಹಿಗಳು. ಅಂತಹ ಸಮಾಜ ಘಾತುಕರನ್ನು ದೂರವಿಡಬೇಕು. ವ್ಯಕ್ತಿಯು ತನ್ನ ಶಕ್ತಿಯನ್ನು, ತನ್ನ ಬುದ್ಧಿಯನ್ನು, ತನ್ನ ಸಮಾಜಕ್ಕಾಗಿ ತನ್ನ ಧರ್ಮಕ್ಕಾಗಿ ಸೂರೆಗೊಳ್ಳಬೇಕು. ಇದು ತ್ಯಾಗ, ಇದು ಸುಯೋಗ, ಇದೇ ಗಣಾಚಾರ ಮರ್ಮ.

ಸಾಮಾಜಿಕ ಜೀವಿಯಾದ ಮಾನವನಿಗೆ ಸಮಾಜವೇ ಪ್ರಾಣ. ಸಮಾಜವೇ ಸರ್ವಸ್ವ ಗಣಾಚಾರದ ಗುರಿ ಅಳಿವಾದುದು. ಅಚಲವಾದುದು. ಅನ್ಯರಿಂದ ಧರ್ಮದ ಮೇಲೆ ಸಮಾಜದ ಮೇಲೆ ದಾಳಿ ಆಗಬಾರದು. ದೂರು ಜರುಗಬಾರದು. ಇದಲ್ಲದೆ ಶಿವಗುಣಗಳನ್ನು ಅನುಸರಿಸದೆ ಶಿವಾಚಾರಗಳನ್ನು ಆಚರಿಸದೆ ತಾನೂ ಶಿವ ದ್ರೋಹಿಯೇ ! ಅಂಥವನು ಇದ್ದರೇನು ? ಹೋದರೇನು ? ಸಮಾಜವೇ ಶಿವ, ಶಿವನೇ ಸಮಾಜ !

(v) ಭೃತ್ಯಾಚಾರ

ಶಿವಶರಣರೇ ಹಿರಿಯರಾಗಿ, ತಾನೇ ಕಿರಿಯನಾಗಿ ಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ.

ಮಹಾನುಭಾವಿಗಳೆಲ್ಲರೂ ಮಹಾವಿನಯಶೀಲರೇ ಇರುತ್ತಾರೆ. ''ಶರಣು', ಎಂದವರಿಗೆ ''ಶರಣುಶರಣಾರ್ಥಿ'' ಎನ್ನುವ ವಿನಮ್ರತೆ ಅವರಲ್ಲಿರುತ್ತದೆ. ಅವರು ಯಾವುದೇ ಅಧಿಕಾರ, ಸ್ಥಾನ-ಮಾನ, ಅಧಿಕಾರ-ಅಂತಸ್ತುಗಳಲ್ಲಿದ್ದರೂ ಕರಮುಗಿದು ಶಿರಬಾಗಿಸುತ್ತಾರೆ. ಎಂದೂ ತಾರತಮ್ಯ ತೋರಿಸುವುದಿಲ್ಲ. ಪಲ್ಲಕ್ಕಿಯಲ್ಲಿ ಕೂಡುವದಕ್ಕಾಗಿ ಅಲ್ಲ, ಪಲ್ಲಕ್ಕಿಯನ್ನು ಹೊರುವದಕ್ಕಾಗಿ ಮುನ್ನುಗ್ಗಿ ಬರುತ್ತಾರೆ. ಅಂತಹ ಒಂದು ವಿನಯ ಭಕ್ತಿ ಅವರಲ್ಲಿರುತ್ತದೆ. ಭಕ್ತನು, ಭಕ್ತನಿಗೆ ಕೈಮುಗಿಯುವದೇ ಶರಣರಿಗೆ ಸದಾಚಾರ-ಭೃತ್ಯಾಚಾರವೆಂದೆನಿಸುತ್ತದೆ.

ಅಂದಿನ ಕಾಲದ ಶಿವ ಶರಣರು ಧಾರ್ಮಿಕ ಪರಿಸ್ಥಿತಿಯ ಪುನರ ಸಂಘಟನೆಯಲ್ಲಿ ತೊಡಗಿದಾಗ ಗೊಡ್ಡು ಆಚಾರ-ವಿಚಾರಗಳ ಉಚ್ಚಾಟನೆಗೆ ಮೊದಲು ಪ್ರಯತ್ನಿಸಿದರು. ಜನರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ಸತ್ಯದ ಪಥಕ್ಕೆ ಅವರನ್ನು ಕೊಂಡೊಯ್ದರು. ಸದಾಚಾರ ಸದ್ವರ್ತನೆಯಿಂದ ನಡೆಯುವದೇ ನಿಜವಾದ ಧರ್ಮದ ಆಚರಣೆ ಎಂದು ಸಾಮಾನ್ಯರಿಗೆ ಉಪದೇಶಿಸಿದರು.

ತಾತ್ವಿಕ ಸಿದ್ಧಾಂತಕ್ಕೂ ಧಾರ್ಮಿಕ ಆಚರಣೆಗೂ ಸಮನ್ವಯವಿರಬೇಕು. ತಾತ್ವಿಕ ಜಿಜ್ಞಾಸೆಯಿಂದ ಪೋಷಣೆ ಲಭಿಸಬೇಕಾದರೆ ಆಚಾರದೊಡನೆ ಬೆರೆತು ಜೀವನದಲ್ಲಿ ಅಳವಡುವಂತಿರಬೇಕು. ''ಆಚಾರವೆಂಬುದು ಕೂರಲಗು, ತಪ್ಪಿ ಬಂದಡೆ ಪ್ರಾಣವ ತಗಲುವುದು'' ಎಂಬ ಮಾತಿನಲ್ಲಿ ಆಚಾರದ ಮಹತ್ವವನ್ನು ಎತ್ತಿ ತೋರಿಸಲಾಗಿದೆ.

ಕಣ್ಣು ಕಾಣುತ್ತದೆ ಎಂದರೆ ಕತ್ತಲೆಯಲ್ಲಿ ಕಾಣುವುದೇ ? ಬೆಳಕು ಬೇಕು. ಕುರುಹು ಇಲ್ಲದೇ ಅರುಹನ್ನು ಪಡೆಯಬಹುದು ಎಂಬುದನ್ನು ಒಪ್ಪಲು ಸಾಧ್ಯವಿಲ್ಲವೆಂದು ಚೆನ್ನ ಬಸವಣ್ಣನವರು ಹೇಳುತ್ತಾರೆ.

ಅಂತರಂಗದ ಅರಿವು ಕ್ರಿಯಾತ್ಮಕ ಆಚರಣೆಯಿಂದ ಏಕೈಕ ನಿಷ್ಠೆಯ ಮಾರ್ಗದಲ್ಲಿ ಮುಂದುವರಿಯುತ್ತದೆ. ಅಂದರೆ ತಾನು ನಂಬಿದ ತತ್ವಗಳಲ್ಲಿ ಏಕೈಕ ನಿಷ್ಠೆ ಇಲ್ಲದಿದ್ದರೆ ಆ ತತ್ವಗಳನ್ನು ತೋರಿಕೆಗಾಗಿ ಸಹಿತ ಆಚರಿಸುವದು ವ್ಯರ್ಥವಾಗುತ್ತದೆ. ನಿಷ್ಠೆಯಿಲ್ಲದ ಪೂಜೆಯನೆಸುಕಾಲ ಮಾಡಿದಡೇನು ? ಹಗರಣಕ್ಕೆ ಪೂಜಿಸುವವರಿಗೆ ಶರಣರ ಸುಳುಹು ಗೊತ್ತಾಗುವದಿಲ್ಲ. ಭಕ್ತಿಯಿಂದ ಪೂಜಿಸಬೇಕು. ಉದಾ—

ಆನೆಯನೇರಿದೊಡನೆ ಯಾವನೂ ಅರಸನಾಗುವದಿಲ್ಲ. ಮಾವುತನೂ ಆನೆಯನ್ನೇರುತ್ತಾನೆ.

ಮಾನವ ಕುಲ ಒಂದು ಎಂದು ನಂಬಿದ ಮೇಲೆ ಹಲವು ಜಾತಿಗಳ ಭ್ರಾಂತಿಗೆ ಒಳಗಾಗಬಾರದು. ಅದು ಮಾನವತಾ ನಿಷ್ಠೆಯಲ್ಲ. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲಾ ಒಂದೇ ಎಂದ್ಲು ಕೊಟ್ಟುಕೊಂಬುದು ಸದಾಚಾರ ಎಂದು ಬಸವ ತತ್ವ ಹೇಳುತ್ತದೆ.

ಉರಿ ಬರಲಿ ಸಿರಿ ಬರಲಿ ಎಂದು ಲೆಕ್ಕಿಸದೆ ಜೀವನ್ಮುಕ್ತ ಸ್ಥಿತಿಯಲ್ಲಿ ನಿಂತು ಲೋಕ ಕಲ್ಯಾಣಕ್ಕಾಗಿ ಮುಂದೆ ಯಾವನು ನುಗ್ಗುವನೋ ಅವನ ನಿಷ್ಠೆ ದೊಡ್ಡದು. ಅವನು ಲೋಕ ಕಲ್ಯಾಣಕ್ಕಾಗಿ ಕೈಯನ್ನು ಕೆಳಗೆ ಚಾಚಿ ಜನತೆಯನ್ನು ಮೇಲಕ್ಕೆತ್ತಿಕೊಳ್ಳಬೇಕು. ಎಷ್ಟು ದಿನ ಬದುಕಿದೆವು ಎನ್ನುವದಕ್ಕಿಂತ ಹೇಗೆ ಬದುಕಿದೆವು ಎನ್ನುವದು ಬಹು ಮುಖ್ಯ. ಬದುಕಿನ ಸಾರ್ಥಕತೆಗೆ ಬೆಲೆ ಇದೆ. ಸಾತ್ವಿಕ ಕಾರ್ಯಗಳ ಪ್ರಮಾಣ ಹೆಚ್ಚಾಗಬೇಕು. ಅದು ಸಮಾಜಕ್ಕೆ ಹಿತವಾಗಬೇಕು. ಅದುವೇ ಬದುಕು. ಆದ ಕಾರಣ ಶಿವಶರಣರು ಮನುಕುಲವನ್ನು ಕುರಿತು, ಅನಾಚಾರದಿಂದ ನಡೆದು ದುಷ್ಫಲಕ್ಕೆ ಈಡಾಗಿ ನರಕವನ್ನು ಅನುಭವಿಸದೇ ಸದಾಚಾರ ಸಂಪನ್ನರಾಗಿ ಸತ್ಫಲ ಪಡೆದು ಸ್ವರ್ಗಸುಖಿಗಳಾಗಿರಲು ಹೇಳಿದರು.

ತಾನು ಶಿವಭಕ್ತರ ಕಿಂಕರನೆಂಬ ಭಾವನೆಯನ್ನು ತಾಳಿ ಭೃತ್ಯಾಚಾರಿಯಾದಾಗ ಅಂತರಂಗ ವಿಕಾಸವಾಗಿ ಮನಸ್ಸು ಶುದ್ಧವಾಗುತ್ತದೆ. ಸುಪ್ತಶಕ್ತಿಯನ್ನು ವಿಕಸಿಸುವ ವಿವಿಧ ಯೋಗಗಳಲ್ಲಿ ಭಕ್ತಿಯೋಗವೂ ಒಂದು. ಸಾಧನೆಯ ಆರಂಭದಿಂದ ಅಂತ್ಯದವರೆಗೂ ಬಸವಣ್ಣನವರು ಭಕ್ತಿ ಶರಣಾಗತಿಯನ್ನು ಬಿಡಲಿಲ್ಲ.

"ಮಾದಾರ ಶಿವ ಭಕ್ತನಾದರೆ
ಆತನ ಹೊರೆಯಲಿಪ್ಪದು ಕರಲೇಸು ಕಂಡಯ್ಯ
ಹೊಲೆಯ ಹೊಲಬಿಗನಾದೊಡೆ
ಆತನ ಹೊರೆಯಲಿಪ್ಪುದು ಲೇಸು ಕಂಡಯ್ಯ"

ಶಿವನ ನೊಳಕೊಂಡವರೆಲ್ಲರೂ ಭಕ್ತರ್ು, ಶಿವ ಭಕ್ತರ್ು,
ದೇವರನ್ನು ಒಲಿಸಿಕೊಂಡಿರುವವನು ಯಾವ ಕನಿಷ್ಠ
ಕುಲದಲ್ಲಿಯೇ ಹುಟ್ಟಿರಲಿ ಅವನು ಶ್ರೇಷ್ಠನೇ !

ಮೇಲಿನ ವಚನಗಳಲ್ಲಿ ಶಿವ ಭಕ್ತರ ಬಗ್ಗೆ ಇದ್ದ ಬಸವಣ್ಣನವರ ಕಿಂಕರ ಭಾವನೆ ಎದ್ದು ಕಾಣುತ್ತದೆ.

ಲೋಕವೆಲ್ಲ ತನಗಾಗಿ, ತನ್ನನ್ನು ಹೊತ್ತು ಮೆರೆಸಲಿಕ್ಕಾಗಿ ಎಂದು ಭಾವಿಸು ವವರು ಒಂದು ಕಡೆ, ತಾನು ಲೋಕಕ್ಕಾಗಿ, ಅದು ತನ್ನ ಒಡೆಯ, ತಾನು ಅದರ ಭೃತ್ಯ ಎಂದು ಭಾವಿಸುವವರು ಇನ್ನೊಂದು ಕಡೆ. ಅಂದರೆ ನಿಷ್ಕಾಮಂತೆ ಸಮಾಜ ಸೇವಕರೇ ಭೃತ್ಯಚಾರಿಗಳೆನಿಸಿ ಕೊಳ್ಳುತ್ತಾರೆ.

ಸಮಾಜ ಮತ್ತು ವ್ಯಕ್ತಿಯ ನಡುವೆ ಸೇವ್ಯ-ಸೇವಕ, ಸ್ವಾಮಿ-ಭೃತ್ಯ, ಜಂಗಮ-ಭಕ್ತ, ಸಂಬಂಧ ಬೆಳೆಯಬೇಕು. ಭಕ್ತನು ಎಷ್ಟೇ ದೊಡ್ಡವನಾದರೂ ಜಂಗಮ(ಸಮಾಜ)ಕ್ಕಿಂತ ದೊಡ್ಡವನಲ್ಲ, ಭೃಹತ್ತಾದ ಆನೆಯು ಅಂಕುಶಕ್ಕೆ ಹೆದರುವಂತೆ ಸಮಾಜದ ಯಾವುದೇ ಶ್ರೇಣಿಯಲ್ಲಿ ನಿಂತವನು ತನ್ನನ್ನು ಮೀರಿದ ಸಮಾಜ, ರಾಷ್ಟ್ರಗಳಿಗೆ ಅಂಜಬೇಕು. ತನ್ನ ಹಿತಾಸಕ್ತಿಗಾಗಿ ನಾಡು — ಸಮಾಜ ಗಳನ್ನು ಬಲಿ ಕೊಡುವದೆಂದರೆ ಕೊಂಬೆಯ ತುದಿಯಲ್ಲಿ ಕುಳಿತು ಕೊಂಬೆಯ ಬುಡ ವನ್ನು ಕತ್ತರಿಸಿದಂತಾಗುವದು. ಪ್ರತಿಯೋರ್ವನು ತಾನು ವ್ಯಕ್ತಿಯೆಂದು ತಿಳಿದು, ಭಕ್ತನೆಂದು ತಿಳಿದು, ತನ್ನ ಸುತ್ತಲಿನ ಸಮುದಾಯಕ್ಕೆ ಗೌರವ ನೀಡಿ ಸೇವೆಗೈಯಲು ಕಲಿಯಬೇಕು.

ಈ ಸಮಾಜವು ತುಂಬಾ ವಿಚಿತ್ರ. ತನಗಾಗಿ ದುಡಿದವರನ್ನು, ತ್ಯಾಗ ಮಾಡಿ ದವರನ್ನು ಅರಿತುಕೊಳ್ಳದೆಯೇ ನಿಂದಿಸುವದು, ಎದೆಗುಂದಿಸುವುದು. ಕಟೂಕ್ತಿ ಗಳನ್ನು ಆಡುವದೂ ಸ್ವಾಭಾವಿಕ. ಆಗ ಈ ಭೃತ್ಯಚಾರಿಯು ನೋಯಬಾರದು, ನಲುಗಬಾರದು, ಮುಲುಗಬಾರದು.

ಸಮಾಜ ಸೇವೆಯ ಪಥದಲ್ಲಿ ಪಾದವಿಟ್ಟು ಶಿವಭಕ್ತ ಮುಂದೆ ಮುಂದೆಯೇ ಹೆಜ್ಜೆ ಇಡಬೇಕು. ಹೆದರಿ ಹಿಮ್ಮೆಟ್ಟಬಾರದು. ಯಾವುದೇ ಒಂದು ಕಾರ್ಯ, ಸಮಾಜಕ್ಕೆ ಹಿತವಾಗುವಂತಿದ್ದರೆ ಅದು ತನ್ನ ವಿವೇಕಕ್ಕೆ ಸಮಂಜಸವೆನಿಸದಿದ್ದರೂ ಭೃತ್ಯನು ಸಮಾಜದ ಇಚ್ಛೆಗೆ ತಲೆಬಾಗಬೇಕು. ಇಂತಹ ಒಂದು ಸಮಾಜ ನಿಷ್ಠೆ, ರಾಷ್ಟ್ರ ನಿಷ್ಠೆ, ಅತ್ಯವಶ್ಯಕವೆನ್ನುವದು ಭೃತ್ಯಾಚಾರವೆಂಬ ಸಿದ್ಧಾಂತದಲ್ಲಿ ಅಡಗಿದೆ.

೫. ಷಟ್‌ಸ್ಥಲ

ವೀರಶೈವ ಧರ್ಮದ ತಾತ್ವಿಕ ಸಿದ್ಧಾಂತ ಹಾಗೂ ಧಾರ್ಮಿಕ ಆಚರಣೆ ಇವೆರೆಡಕ್ಕೂ ಸಮನ್ವಯ ಕಲ್ಪಿಸುವ ಮಾರ್ಗ ಷಟ್‌ಸ್ಥಲದಲ್ಲಿದೆ. ಧಾರ್ಮಿಕ ಆಚರಣೆಗೆ ಬೆಲೆ ಬಂದು ಅದು ಶಕ್ತಿಶಾಲಿಯಾಗಿ ಕಾಣಬೇಕಾದರೆ ತಾತ್ವಿಕ ಸಿದ್ಧಾಂತದ ಬುನಾದಿಯ ಮೇಲೆ ನಿಂತಿರಬೇಕು. ಅದೇ ರೀತಿ ತಾತ್ವಿಕ ಚಿಂತನೆಯಿಂದ ಪೋಷಣೆ ದೊರೆಯಬೇಕಾದರೆ ಆಚಾರದೊಡನೆ ಬೆರೆತು ಜೀವನದಲ್ಲಿ ಅಳವಡಬೇಕು. ಷಟ್‌ಸ್ಥಲ ಸಿದ್ಧಾಂತ ಈ ಎರೆಡನ್ನೂ ಸಾಧಿಸಿರುತ್ತದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಅಂಗ ಎಂದರೆ ಜೀವಾತ್ಮ, ಲಿಂಗ ಎಂದರೆ ಪರಮಾತ್ಮ, ಐಕ್ಯ ಎಂದರೆ ಸಮರಸವಾಗುವದು ಅಥವಾ ಬೆರೆತು ಹೋಗುವದು. ಅಂಗನು ಲಿಂಗನಲ್ಲಿ ಸಮರಸವಾಗಲು ಷಟ್‌ಸ್ಥಲದಾಚರಣೆಯನ್ನು ಕಲ್ಪಿಸಲಾಗಿದೆ. ಇದು ಭವಬಂಧನವನ್ನು ಕಳೆದು ನಿತ್ಯ ಮುಕ್ತಿ ನಿತ್ಯಾನಂದ ಕೊಡುವ ಲಿಂಗಾಂಗ ಸಾಮರಸ್ಯವಾಗಿದೆ. ಇಲ್ಲಿ ವೇದಾಂತವು ಸಿದ್ಧಾಂತದೊಡನೆ ಕೂಡಿಕೊಂಡಿದೆ. ಭಕ್ತಿ ಜ್ಞಾನಗಳು ಈ ಮಾರ್ಗದ ತಿರುಳು. ಆದ್ದರಿಂದ ಇದರಲ್ಲಿ ದ್ವೈತದ ಭಕ್ತಿಯೂ ಉಂಟು. ಅದ್ವೈತದ ಜ್ಞಾನವೂ ಉಂಟು.

ಪ್ರಭು ದೇವರು ಷಟ್‌ಸ್ಥಲ ಸಿದ್ಧಾಂತದ ಸಾರ ಸರ್ವಸ್ವವನ್ನು ಈ ವಚನದಲ್ಲಿ ಹೇಳಿದಂತೆ ಕಾಣುತ್ತದೆ.

''ವಿಶ್ವಾಸದಿಂದ ಭಕ್ತನಾಗಿ
ಆ ವಿಶ್ವಾಸದೊಳಗಣ ನಿಷ್ಠೆಯಿಂದ ಮಹೇಶನಾಗಿ,
ಆ ನಿಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿಯಾಗಿ
ಆ ಸಾವಧಾನದೊಳಗಣ ಸ್ವಾನುಭಾವದಿಂದ ಪ್ರಾಣಲಿಂಗಿಯಾಗಿ
ಆ ಸ್ವಾನುಭಾವದೊಳಗಣ ಅರಿವಿನಿಂ ಶರಣನಾಗಿ
ಆ ಅರಿವು ನಿಜದಲ್ಲಿ ಸಮರಸಭಾವವ ನೈದಿದೊಡೆ
ಅದೇ ಐಕ್ಯಸ್ಥಲ ಗುಹೇಶ್ವರಾ''

ಭಕ್ತಸ್ಥಲದ ವಿಶ್ವಾಸಭಕ್ತಿಯೇ ವಿಕಾಸವಾಗುತ್ತಾ, ಮಹೇಶಸ್ಥಲದಲ್ಲಿ ನಿಷ್ಠಾಭಕ್ತಿಯಾಗಿ, ಪ್ರಸಾದಿ ಸ್ಥಲದಲ್ಲಿ ಸಾವಧಾನ ಭಕ್ತಿಯಾಗಿ, ಪ್ರಾಣಲಿಂಗಿಸ್ಥಲದಲ್ಲಿ ಸ್ವಾನುಭವ ಭಕ್ತಿಯಾಗಿ, ಶರಣಸ್ಥಲದಲ್ಲಿ ಅರಿವು ಅಥವಾ ಆನಂದ ಭಕ್ತಿಯಾಗಿ, ಐಕ್ಯ ಸ್ಥಲದಲ್ಲಿ ಸಮರಸ ಭಕ್ತಿಯಾಗುವದು.

ವೀರಶೈವ ಸಿದ್ಧಾಂತದಲ್ಲಿ "ಸ್ಥಲ"ವೆಂಬುದಕ್ಕೆ ''ಸ್ಥಾನ" ವೆಂಬುದು ರೂಢಿಯಲ್ಲಿರುವ ಅರ್ಥ. ಸಾಧಕನು ತನ್ನ ಆಂತರಿಕ ಗುರಿಯನ್ನು ಮುಟ್ಟಲು ಕಂಡು

ಹಿಡಿದ ಆರು ಪಾವಟಣಿಗೆಗಳೇ ಷಟ್‌ಸ್ಥಲಗಳು. ಈ ವಿಶ್ವವು ಯಾವುದರಿಂದ ಸೃಷ್ಟಿಗೊಂಡು ಪುನಃ ಯಾವುದರಲ್ಲಿ ಲಯವಾಗುತ್ತದೆಯೋ ಆ ಪರಶಿವ ಬ್ರಹ್ಮವೇ ಸ್ಥಲ.

ಷಟ್‌ಸ್ಥಲದಲ್ಲಿ ಆರು ಸ್ಥಲಗಳಿರುವದರಿಂದ ಭಕ್ತನು ಆರು ಹಂತಗಳ ಭಕ್ತಿಯನ್ನು ಸಂಪಾದಿಸುವ ಶಿಕ್ಷಣ ಪಡೆಯಬೇಕಾಗುತ್ತದೆ. ಭಕ್ತನು ನಿಧಾನವಾಗಿ ಏರುವ ಈ ಆರು ಹಂತಗಳಿಗೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯವೆಂಬ ಹೆಸರುಗಳಿವೆ.

(i) ಭಕ್ತ

ಭಕ್ತ ಎಂಬ ಪದಕ್ಕೆ "ಭಾಗವಾದವನು" ಎಂಬ ಅರ್ಥವೂ ಇದೆ. "ಅವಿಭಕ್ತ ಕುಟುಂಬ" ಎಂಬ ಪದದಲ್ಲಿ ಈ ಅರ್ಥ ಸ್ಪಷ್ಟವಾಗಿ ಪ್ರಕಟವಾಗಿರುವದನ್ನು ಗಮನಿಸಬಹುದು. ಭಕ್ತನು ಪರಶಿವನಿಂದ ಭಾಗವಾಗಿ ಅಥವಾ ಪ್ರತ್ಯೇಕವಾಗಿ ದೂರ ಹೋಗಿದ್ದರೆ—ಐಕ್ಯನು ಪರಶಿವನಲ್ಲಿ ಒಂದಾಗಿ ಬೆರೆತಿದ್ದಾನೆ. (ಅವಿಭಕ್ತನಾಗಿದ್ದಾನೆ) ವಾಸ್ತವಿಕವಾಗಿ ಭಕ್ತನು ಪರಶಿವನಿಂದ ಭಾಗವೂ ಆಗಿಲ್ಲ, ದೂರವೂ ಹೋಗಿಲ್ಲ. ಆದರೆ ಅವನು ಹಾಗೆ ತಪ್ಪು ಭಾವಿಸಿದ್ದಾನೆ.

ಭಕ್ತಿ ಎಂದರೆ ಮಾನವನು ಪರಮಾತ್ಮನಿಗೆ ತೋರಿಸುವ ಒಂದು ವಿಶಿಷ್ಟ ರೀತಿಯ ಪ್ರತಿ ಕ್ರಿಯೆ. ಈ ಪ್ರತಿಕ್ರಿಯೆ ಎರಡು ರೀತಿಗಳಲ್ಲಿ ವ್ಯಕ್ತವಾಗುತ್ತದೆ. ಒಂದು ರೀತಿಯ ಭಕ್ತಿ ಭಕ್ತನು ಭಕ್ತಪರವಶನಾದಾಗ, ಇನ್ನೊಂದು ರೀತಿಯು ಅರಿವಿನಿಂದ ಮೂಡುತ್ತದೆ. ಈ ಎರಡು ರೀತಿಯ ಭಕ್ತಿಯಲ್ಲಿಯೂ ಭಕ್ತನು ಪರಮಾತ್ಮನನ್ನು ನಿಷ್ಠೆಯಿಂದ ಹಾಗೂ ಶರಣಾಗತಿ ಭಾವದಿಂದ ಆರಾಧಿಸಬೇಕಾದುದು ಅವಶ್ಯಕ. ವೀರಶೈವ ಧರ್ಮದಲ್ಲಿ ಕಾಣುವ ಭಕ್ತಿ ಎರಡನೇ ರೀತಿಯದು.

ಆಧ್ಯಾತ್ಮಿಕ ಏಣಿಯಲ್ಲಿ ಮೇಲೇರಬೇಕೆನ್ನುವವನು ಮುಖ್ಯವಾಗಿ ತನ್ನಲ್ಲಿ ಏನೇನು ದೋಷಗಳಿವೆ ಎನ್ನುವದನ್ನು ಅರಿಯಬೇಕು. ನಂತರ ಅವುಗಳನ್ನು ನಿವಾರಿಸಿಕೊಳ್ಳಬೇಕೆಂಬ ದೃಢಸಂಕಲ್ಪವನ್ನು ಹೊಂದಬೇಕು,

ಭಕ್ತಸ್ಥಲ—ಗುರುವು ದೀಕ್ಷಾ ಸಮಯದಲ್ಲಿ ಹಸ್ತಮಸ್ತಕ ಸಂಯೋಗದ ಮೂಲಕ ಭಕ್ತನ ಆತ್ಮವನ್ನೇ ಇಷ್ಟಲಿಂಗವಲ್ಲಿ ಪ್ರತಿಷ್ಠಾಪಿಸಿ ಆತ್ಮವೇ ಲಿಂಗವೆಂದೂ ಇಷ್ಟಲೀಗವು ಕೇವಲ ಆ ಲಿಂಗದ ಕರುಹೆಂದೂ ಅರುಹುತ್ತಾನೆ. ಇದರ ಸಂಪೂರ್ಣ ಅರ್ಥವನ್ನು ಗ್ರಹಿಸದೇ ಇಷ್ಟಲಿಂಗವೇ ಪರಶಿವವೆಂದು ಭ್ರಮಿತರಾದವರು ಅದನ್ನು ಕೈಯಲ್ಲಿ, ಕೊರಳಲ್ಲಿ, ಮೈಯಲ್ಲಿ ಅಥವಾ ತಲೆಯಲ್ಲಿ ಕಟ್ಟಿಕೊಳ್ಳುತ್ತಾರೆ. ಆದರೆ ಇದರಿಂದ ಆ ರೀತಿ ಮಾಡುವ ಭಕ್ತರಿಗೆ ಯಾವ ಪ್ರಯೋಜನವೂ ಆಗುವದಿಲ್ಲ. ಅದಕ್ಕೆ

ಪ್ರಭುದೇವರು "ಅಂಗದ ಮೇಲೆ ಲಿಂಗ ಸ್ವಾಯತವಾದಡೇನು, ಭಕ್ತನಾಗಬಲ್ಲನೇ ?" ಎಂದು ಕೇಳುತ್ತಾರೆ. ಯಾಕಂದರೆ ನಿಜವಾದ ಲಿಂಗಧಾರಣೆಯಾಗಬೇಕಾದುದು ದೇಹದ ಯಾವ ಭಾಗದಲ್ಲೂ ಅಲ್ಲ, ಮನಸ್ಸಿನಲ್ಲಿ.

ಭಕ್ತಸ್ಥಲದ ಪ್ರಮುಖ ಲಕ್ಷಣವೆಂದರೆ ಶ್ರದ್ಧೆ. ಅಲ್ಲಿ ಶ್ರದ್ಧೆ ಜಾಗೃತವಾಗಿರುತ್ತದೆ. ಅರಿವು ಆಚಾರಗಳಿಗೆ ಸಮಾನ ಸ್ಥಾನವಿದೆ. ಭಕ್ತನಾದವನು ನಿಯಮ ನಿಷ್ಠೆಯಿಂದ ಕೂಡಿದ ಬಾಳನ್ನು ಬಾಳುತ್ತಾನೆ. ಭಕ್ತನು ಶಾಂತನೂ, ಸತ್ಯವಂತನೂ ದಯಾಮಯಿಯೂ, ತತ್ವನಿಷ್ಠನೂ, ಕಾಯಕಯೋಗಿಯೂ ಆಗಿರುತ್ತಾನೆ. ಸಕಲ ಪ್ರಾಣಿಗಳನ್ನು ತನ್ನಂತೆ ಕಾಣುತ್ತಾನೆ. ತನ್ನ ತನುಮನ ಧನಗಳನ್ನು ಗುರು ಲಿಂಗ ಜಂಗಮಕ್ಕೆ ಸಮೆಸುತ್ತಾನೆ. ಸಕಲೇಂದ್ರಿಯಗಳನ್ನು ತನ್ನ ವಶದಲ್ಲಿರಿಸಿಕೊಳ್ಳುತ್ತಾನೆ. ಅಪಾತ್ರದಾನವನ್ನು ಎಂದು ಮಾಡುವುದಿಲ್ಲ. ಲಿಂಗವೇ ತನ್ನ ಸಾರ ಸರ್ವಸ್ವವೆಂದು ಭಾವಿಸುತ್ತಾನೆ. ತನ್ನ ಆಚಾರ ವಿಚಾರಗಳಲ್ಲಿ ಲಿಂಗ ಮೆಚ್ಚುವಂತಿರುತ್ತಾನೆ. ಈ ಸ್ಥಲದಲ್ಲಿ ನಡೆನುಡಿ ಒಂದಾಗುತ್ತದೆ. ಅರಿವು ಆಚಾರವಾಗುತ್ತದೆ.

ಭಕ್ತನು ಭವಿಯ ಜೊತೆಗೆ ಬೆರೆಯುವದಿಲ್ಲ. ಅನ್ಯದೈವಕ್ಕೆರಗುವುದಿಲ್ಲ. ಅನಿಷ್ಟ ಸಂಪ್ರದಾಯಗಳನ್ನು ಅನುಸರಿಸುವುದಿಲ್ಲ. ಅವನು ಸದಾ ವಿನೀತನಾಗಿರುವನು. ಅವನು ಅಷ್ಟಾವರಣ ನಿಷ್ಠನು ಮತ್ತು ಪಂಚಾಚಾರ ಪಾರಂಗತನು ಆಗಿರುವನು. ಆಡಂಬರಕ್ಕಿಲ್ಲಿ ಇಂಬಿಲ್ಲ. ಡಾಂಭಿಕ ತನಕ್ಕಿಲ್ಲಿ ನೆಲೆಯಿಲ್ಲ. ಭಕ್ತಿಯ ಮಾಡಿ ಜನನ ಮರಣ ವಿರಹಿತನಾಗಿರುತ್ತಾನೆ. ಅವನು ಸದಾ ಕಾಯಕ ಯೋಗಿ, ಪರಮ ದಾಸೋಹಿ.

ಭಕ್ತನು "ಲಿಂಗವ ಮುಟ್ಟಿದ ಕೈ ಮೀಸಲು, ಲಿಂಗವ ಧರಿಸಿದ ದೇಹ ದೇಗುಲ" ಎಂಬ ತತ್ವದಾಚರಣೆಯಂತೆ ಪರಿಶುದ್ಧನಾಗಿರುತ್ತಾನೆ. ಭಿನ್ನ ಭಿನ್ನ ಕಾಯಕ ಮಾಡುವ ಭಕ್ತರಲ್ಲಿ ಜಾತಿ, ಕುಲ ಎಣಿಸಕೂಡದು. ಶರಣರು ಹೇಳುತ್ತಾರೆ :

> ಭಕ್ತಿ, ಶಿವನ ನಡುಗಿಸಿತ್ತು, ನುಡಿಸಿತ್ತು,
> ಭಕ್ತಿ ಶಿವನನುಣಿಸಿ ಬಡಿಸಿ ತೊಡಿಸಿತ್ತು,
> ಭಕ್ತಿ ಶಿವನ ಹಾಡಿಸಿ ಕುಣಿದಾಡಿಸಿತ್ತು,
> ಭಕ್ತಿಯಿಲ್ಲದೇ ವಿರಕ್ತಿಯಿಲ್ಲ, ಜ್ಞಾನವಿಲ್ಲ,
> ಇದು ಕಾರಣ ಭಕ್ತಿಯೇ ಮುಕ್ತಿಯ ಜನನಿ"

ಇದು ಭಕ್ತಸ್ಥಲದ ಮಹಿಮೆ.

(ii) ಮಹೇಶ

ಭಕ್ತನು ತನ್ನ ಆಧ್ಯಾತ್ಮಿಕ ಸಾಧನೆಗೆ ಅಡ್ಡಬರುವಂತಹ ದೋಷಗಳನ್ನು ದೂರ ಮಾಡಬೇಕು. ಮತ್ತು ಸಾಧನೆಗೆ ಅನುಕೂಲವಾಗುವಂತಹ ಗುಣಗಳನ್ನು ಹೊಂದಬೇಕು ಎಂದು ಪ್ರಯತ್ನ ಮಾಡಲು ಯಾವಾಗ ಪ್ರಾರಂಭಿಸುತ್ತಾನೆಯೋ ಆಗ ಅವನು ಮಹೇಶ ಸ್ಥಲಕ್ಕೆ ಬರುತ್ತಾನೆ. ತನ್ನ ತಪ್ಪುಗಳ ಬಗ್ಗೆ ಪಶ್ಚಾತ್ತಾಪ ಪಟ್ಟುಕೊಂಡು ಇನ್ನೊಮ್ಮೆ ಇಂತಹ ತಪ್ಪು ಮಾಡಲಾರೆ ಎಂದು ಪ್ರತಿಜ್ಞೆಗೈದಾಗ ಅವನು ಮಹೇಶನೆನ್ನಿಸಿಕೊಳ್ಳುತ್ತಾನೆ.

ವೀರಶೈವನಾದವನು ಇಷ್ಟಲಿಂಗದ ಹೊರತು ಮತ್ತೇನನ್ನು ಪೂಜಿಸಬಾರದೆಂಬ ಕಟ್ಟಾಜ್ಞೆಯನ್ನು ಶರಣರು ನೀಡಿದ್ದಾರೆ. ಇದಕ್ಕೆ ಮತಾಂಧತೆ ಎನ್ನಲಾಗದು. ಯಾಕಂದರೆ ಹೊರಗಡೆ ಇರುವ ದೇವರನ್ನು ಪೂಜಿಸತೊಡಗಿದರೆ ತಮ್ಮೊಳಗೇ ಇರುವ ಪರಮಾತ್ಮನನ್ನು ಗುರುತಿಸಲು ಅಸಮರ್ಥರಾಗುತ್ತಾರೆ. ಅದರಿಂದ ಆಧ್ಯಾತ್ಮಿಕ ಜೀವನದ ತಳಹದಿಯೇ ಕುಸಿದುಹೋಗುತ್ತದೆ.

ವೀರಶೈವನು ತನ್ನ ಛಲವನ್ನು ನಿಷ್ಠೆಯನ್ನಾಗಿ ಪರಿವರ್ತಿಸಿಕೊಳ್ಳುತ್ತಾನೆ. ಯಾಕಂದರೆ ನಿಷ್ಠೆಯಿಲ್ಲದ ಭಕ್ತಿಯು ಎಷ್ಟು ಕಾಲ ಮಾಡಿದರೇನು ? "ಸಿರ ಹರಿದು ಅಟ್ಟೆ ನೆಲಕ್ಕೆ ಬಿದ್ದರೂ ನಾಲಗೆ ಕೂಡಲ ಸಂಗಾ, ಶರಣು ಎನ್ನುತ್ತಿರಬೇಕು'' ಎಂದು ಬಸವಣ್ಣನವರು ಹೇಳುತ್ತಾರೆ. ಇಲ್ಲದಿದ್ದರೆ ನಮ್ಮ ಅನುಕೂಲಕ್ಕೆ ಹೊಂದಿಕೊಂಡು ಭಕ್ತಿ ಮಾಡುತ್ತಿದ್ದೇವೆ ಎಂದರ್ಥವಾಗುತ್ತದೆ. ದುರ್ಗುಣಗಳನ್ನು ಜಯಿಸದೆ ನೈತಿಕ ಮತ್ತು ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಳ್ಳದೆ ಲಿಂಗ ನಿಷ್ಠರಾಗಲು ಯಾರಿಗೂ ಸಾಧ್ಯವಿಲ್ಲ. ಗಂಡನಿಗೂ ನಿಷ್ಠೆ ತೋರಿಸುತ್ತೇನೆ ಮಿಂಡನಿಗೂ ನಿಷ್ಠೆ ತೋರಿಸುತ್ತೇನೆ ಎನ್ನುವವಳಿಗೆ ಹೇಗೆ ನಿಜವಾದ ನಿಷ್ಠೆ ಇರುವದಿಲ್ಲವೋ ಹಾಗೇ ತನು ಗುಣಗಳ ಕಡೆಗೂ ಪರಶಿವನ ಕಡೆಗೂ ಏಕಕಾಲಕ್ಕೆ ನಿಷ್ಠೆ ತೋರಿಸುತ್ತೇನೆಂದರೆ ಅದು ನಿಜವಾದ ನಿಷ್ಠೆಯಲ್ಲ ಎಂದು ಶರಣರು ಹೇಳುತ್ತಾರೆ.

ಪರಧನ ಪರಸತಿ, ಪರದೈವವನ್ನು ಒಲ್ಲೆನೆಂಬ ಛಲ ತಾನು ಪ್ರಲೋಭನೆಗಳಿಗೆ ಒಳಗಾಗುವುದಿಲ್ಲವೆಂಬ ಭಕ್ತನ ಛಲವನ್ನು ಸಾರುತ್ತದೆ.

ಮಹೇಶ್ವರ ಸ್ಥಲದಲ್ಲಿ ಭಕ್ತನ ಶ್ರದ್ಧೆ ಬಲಿತು ನಿಷ್ಠೆಯಾಗಿ ಅವನು ಮಹೇಶ್ವರನಾಗುತ್ತಾನೆ. ಅಂಗನಾದ ಮಹೇಶನೂ ನೀರಿನಂತೆ ಪರಿಶುದ್ಧನಾಗಬೇಕಾಗುವದು. ದುರಿತ ದುರ್ಗುಣಗಳನ್ನು ದೂರಗೊಳಿಸಿ ಕಾಯದಿಂದ ಕರಣಂಗಳಿಂದಲೂ ಪವಿತ್ರನಾಗಿರಬೇಕು. ಅನ್ಯ ಸ್ತ್ರೀಯರ ರತಿ, ಅನ್ಯರನ್ನು ನಿಂದಿಸುವದು, ಅನ್ಯರ ಹಿಂಸೆ,

ಅನ್ಯಥ ದ್ರವ್ಯಾಪೇಕ್ಷೆ ಮತ್ತು ತನಗಿಂತ ಭಿನ್ನವಾಗಿ ಮಹದೇವನಿದ್ದಾನೆ ಎಂದು ತಿಳಿಯುವದು ಇವೇ ದುರಿತ ಪಂಚಕಗಳನ್ನು ಸಂಪೂರ್ಣವಾಗಿ ಪರಿಹರಿಸಬೇಕು. ಭಕ್ತನು ಕಾಯಗುಣಗಳನ್ನು ಪರಿಶುದ್ಧಗೊಳಿಸಿಕೊಂಡರೆ ಮಹೇಶನು ಕರಣ ಗುಣಗಳನ್ನು ಜಯಿಸಬೇಕಾಗುವದು. ಎಲ್ಲ ಇಂದ್ರಿಯಗಳು ತನ್ನ ವಶದಲ್ಲಿರಬೇಕು, ಲಿಂಗಕ್ಕಾಗಿಯೇ ಮೀಸಲುಗೊಳಿಸಬೇಕು.

ಮಹೇಶ್ವರನು ಎಂಥವನಿರಬೇಕೆಂದು ಷಟ್‌ಸ್ಥಲ ಮಹಾಜ್ಞಾನಿ ಚನ್ನಬಸವಣ್ಣನು ಹೇಳುತ್ತಾನೆ—

"ಸಜ್ಜನ ಸದ್ಭಾವಿ ಅನ್ಯರಲಿ ಕೈಯಾಂತು ಬೇಡ,
ಲಿಂಗ ಮುಟ್ಟದ ಕೈ ಮೀಸಲು
ಕಂಗಳಲಿ ಒಸೆದು ನೋಡ ಪರವಧುವ,
ಮನದಲ್ಲಿ ನೆನೆಯ
ಮಾನವ ಸೇವೆಯ ಮಾಡ, ಲಿಂಗವ ಬೇಡ,
ಲಿಂಗದ ಹಂಗನೊಲ್ಲ,
ಕೂಡಲ ಸಂಗಮ ದೇವಾ ನಿಮ್ಮ ಶರಣ"

ಮಹೇಶ್ವರ ನೆನಿಸಿಕೊಳ್ಳುವದು ಸಾಮಾನ್ಯವಲ್ಲ, ಮಹೇಶ್ವರನು ಸಜ್ಜನ, ಸದ್ಭಾವಿ, ಅನ್ಯರ ಹಂಗಿಗೊಳಗಾಗದವ, ಲಿಂಗವನ್ನು ಕೂಡ ಅವನು ಬೇಡನು, ಪರಧನ, ಪರಸ್ತ್ರೀ, ಪರಹಿಂಸೆ, ಪರನಿಂದೆ ಮತ್ತು ಪರದೈವವನ್ನು ತ್ಯಜಿಸಿ ಸದಾ ಲಿಂಗಪೂಜಾ ನಿಷ್ಠನಾಗಿರುತ್ತಾನೆ. ಸಾತ್ವಿಕ ಮಾರ್ಗದಲ್ಲಿ ಅಂಜದೆ ಮುನ್ನಡೆಯುವ ಕಠೋರ ನಿಷ್ಠೆ ಬೇಕು, ವ್ಯಕ್ತಿ ಮತ್ತು ಸಮಾಜದ ಹಿತವನ್ನು ಏಕಕಾಲದಲ್ಲಿಯೇ ಸಾಧಿಸುವ ಸದ್ಭಾವವಿರಬೇಕು. ಆಡಂಬರಕ್ಕೆ ನಟನೆಗೆ ಅವಕಾಶವಿಲ್ಲ. ಕುಲಾಚಾರಕ್ಕೆ ಪ್ರವೇಶವಿಲ್ಲ, ಶಿವಭಕ್ತರೆಲ್ಲರೂ ಒಂದೇ. ಕುಲಗಳು ಮಾತ್ರ ಎರಡು, ಭವಿಯೊಂದು ಕುಲ-ಭಕ್ತನೊಂದು ಕುಲ. ಭವಿ ಎಂದರೆ ಒಂದು ಜಾತಿ ಅಲ್ಲ. ನೀತಿಯ ನಿಲುವಿನಿಂದ ಅಳಿದು ನೋಡಿದಾಗ ಕಾಮ. ಕ್ರೋಧಾದಿ ಅರಿಷಡ್ವರ್ಗಗಳನ್ನೊಳಗೊಂಡವನೇ ಭವಿ. ಆಸೆಯನ್ನು ಅಳಿಯದೇ ರೋಷವನ್ನು ಬಿಡದೆ ಓದಿದರೇನು, ಕೇಳಿದರೇನು, ಮಜ್ಜನಕ್ಕೆರೆದರೇನು ? ಎಂದು ಚನ್ನ ಬಸವಣ್ಣನವರು ಕೇಳುತ್ತಾರೆ. ಲಾಂಛನವ ಹೊತ್ತು ಕಾಂಚನಕ್ಕೆ ಕೈನೀಡುವ ಲಾಂಛನ ಭಂಡನು ಮಹೇಶ್ವರನಾಗಲಾರ ಎಂದು ಸ್ಪಷ್ಟಪಡಿಸುತ್ತಾರೆ.

ಹೀಗೆ ಸಾಮಾಜಿಕ ಹಿತ ವೈಯಕ್ತಿಕ ವಿಕಾಸ ಈ ಎರಡನ್ನೂ ಮಹೇಶ್ವರ ಸ್ಥಲ ಒಳಗೊಳ್ಳುತ್ತದೆ. ಸೋಲು ಸಾವುಗಳಿಗಂಜದೇ ಮುಕ್ತಿ ಪ್ರದನಾಗಿ ದೇವಾಧಿದೇವ

ನಾದ ಮಹದೇವನಲ್ಲಿ ನಿತಾಂತ ನಿಷ್ಠೆಯುಳ್ಳಾತನೇ ಮಹೇಶ್ವರನು ಎಂದು ಕೋಂಟದ ಸಿದ್ಧಲಿಂಗೇಶ್ವರರು ಸಾರಿದ್ದಾರೆ. ಅವರು ಮುಂದುವರಿದು ಅಷ್ಟಮದಗಳನ್ನು ಅಷ್ಟ ವಿಧ ಭಕ್ತಿಗಳಾಗಿ ಅಳವಡಿಸಿಕೊಳ್ಳಬೇಕು, ಕರ್ಮೇಂದ್ರಿಯಗಳ ಆವರಣವನ್ನು ನಷ್ಟ ಗೊಳಿಸಬೇಕು, ಕರ್ಮವನ್ನು ಜಯಿಸಬೇಕು. ಸತ್ವ, ರಜ, ತಮೋ ಗುಣಗಳನ್ನು ನಾಶಗೊಳಿಸಬೇಕು. ಅಂದರೆ ಮಾತ್ರ ಭಕ್ತನು ನಿತ್ಯನೂ, ನಿಶ್ಚಿಂತನೂ, ನಿರ್ಮಲನೂ ಆಗಬಹುದೆಂದು ಹೇಳಿದ್ದಾರೆ.

ಷಟ್‌ಸ್ಥಲದಾಚರಣೆಯನ್ನು ಕುರಿತು ಅವರ ಶ್ರೇಷ್ಠ ವಚನವು ಹೀಗಿದೆ—

"ಕಣ್ಣಿನಲ್ಲಿ ಕಾಮ, ಮನದಲ್ಲಿ ಕ್ರೋಧ, ಪ್ರಾಣದಲ್ಲಿ ಲೋಭ, ಬುದ್ಧಿಯಲ್ಲಿ ಮದ, ವಿವೇಕದಲ್ಲಿ ಮತ್ಸರ, ಅರುಹಿನಲ್ಲಿ ಮಾಯವುಳ್ಳನ್ನಕ್ಕರ

ಎಂತು ಭಕ್ತನೆಂಬೆ
ಎಂತು ಮಹೇಶ್ವರನೆಂಬೆ
ಎಂತು ಪ್ರಸಾದಿಯೆಂಬೆ
ಎಂತು ಪ್ರಾಣಲಿಂಗಿಯೆಂಬೆ
ಎಂತು ಶರಣನೆಂಬೆ
ಎಂತು ಐಕ್ಯನೆಂಬೆ

ಎಂತು ಷಟ್‌ಸ್ಥಲದಲ್ಲಿ ಸಂಪೂರ್ಣನೆಂಬೆ,
ಎಂತು ಧ್ಯಾನಿಗಳೆಂಬೆ
ಎಂತು ಅನುಭಾವಿಗಳೆಂಬೆ............"

(iii) ಪ್ರಸಾದಿ

ಸಾಮಾನ್ಯ ಅರ್ಥದಲ್ಲಿ, ದೇವರ ಪೂಜೆಯಾದ ನಂತರ ಅರ್ಪಿಸುವ ಹಾಲು, ಹಣ್ಣು, ಅನ್ನ ಮುಂತಾದ ಆಹಾರ ವಸ್ತುಗಳಿಗೆ ಪದಾರ್ಥವೆಂದೂ ಅರ್ಪಣೆಯ ನಂತರ ಅವೇ ಪದಾರ್ಥಗಳು ಪ್ರಸಾದವೆಂದೂ ಕರೆಯಲ್ಪಡುತ್ತವೆ. ಭಕ್ತನು ಈ ಪ್ರಸಾದ ವನ್ನು ಸ್ವೀಕರಿಸಿದರೆ ಶುದ್ಧನಾಗುತ್ತಾನೆಂದು ನಂಬಿಕೆಯಿದೆ.

ಒಂದು ಪದಾರ್ಥವನ್ನು ಲಿಂಗಕ್ಕೆ ತೋರಿಸಿದಾಕ್ಷಣ ಅದು ಹೇಗೆ ಪ್ರಸಾದವಾ ಗುತ್ತದೆ, ಅದನ್ನು ತಿಂದ ಕೂಡಲೆ ಭಕ್ತನು ಹೇಗೆ ಶುದ್ಧನಾಗಿ ಪ್ರಸಾದಿಯಾಗು ತ್ತಾನೆ ? ಎಂಬ ಒಂದು ಪ್ರಶ್ನೆ ಹುಟ್ಟಬಹುದು.

ಇಲ್ಲಿ "ಶುದ್ಧನಾಗುತ್ತಾನೆ" ಎಂದರೆ ಮೋಕ್ಷಕ್ಕೆ ಅರ್ಹನಾಗುತ್ತಾನೆ ಎಂದೇ ಅರ್ಥ. ಒಂದು ವೇಳೆ ಭಕ್ತನು ಹೀಗೆ ಮೋಕ್ಷಕ್ಕೆ ಅರ್ಹನಾಗುವುದಾದರೆ ವೀರಶೈವ

ಧರ್ಮ ಮೋಕ್ಷ ಸಂಪಾದನೆಗೆ ಬಹಳ ಸುಲಭ ಮಾರ್ಗವನ್ನು ಸೂಚಿಸಿದೆ ಎಂದು ಹೇಳಬಹುದು.

ಈ ವಿಷಯ ಶಿವ ಶರಣರಿಗೆ ಗೊತ್ತಿರಲಿಲ್ಲವೆಂದಲ್ಲ, ಪ್ರಸಾದದ ಹೆಸರಿನಲ್ಲಿ ನಾಲಿಗೆಯ ಆಶೆ ತೀರಿಸಿಕೊಳ್ಳುವವರನ್ನೂ, ಕೇವಲ ಯಾಂತ್ರಿಕವಾಗಿ ಕಳ್ಳತನದಿಂದ ಸಂಪಾದಿಸಿದ್ದುದನ್ನು ದೇವರಿಗೆ ಅರ್ಪಿಸುವವರನ್ನೂ ಅವರು ಖಂಡಿಸಿದ್ದಾರೆ.

> "ಲಿಂಗಾರ್ಪಿತವೆಂದರೇನು ? ನಿತ್ಯತೃಪ್ತ ಲಿಂಗಕ್ಕೆ
> ಹಸಿವೆಂಬುದುಂಟೆ ? ತಮ್ಮ ಹಸಿವ ಲಿಂಗದ ಮೇಲಿಟ್ಟು
> ಉಣ್ಣದ ಲಿಂಗಕ್ಕೆ ಅರ್ಪಿತವನೆರೆವರು"

ಎಂದು ಪ್ರಭುದೇವರು ಮಾರ್ಮಿಕವಾಗಿ ಪ್ರಸಾದದ ಇಂಗಿತವನ್ನು ಹೇಳುತ್ತಾರೆ. ನಿಜವಾದ ಪ್ರಸಾದವೆಂದರೆ ಕೇವಲ ಆಹಾರ ವಸ್ತುವಲ್ಲ, ಜಗತ್ತಿನಲ್ಲಿರುವ ಸಕಲ ವಸ್ತುಗಳೆಲ್ಲ ವಿವಿಧ ರೂಪದ ಪ್ರಸಾದಗಳೇ ಎಂದಿದ್ದಾರೆ. ಆದಕಾರಣ ವಿಶಾಲವಾದ ಅರ್ಥದಲ್ಲಿ, ಪರಶಿವನು ಎಲ್ಲ ಕಡೆಗೂ ಇದ್ದಾನೆಂದು ವೀರಶೈವ ಧರ್ಮ ನಂಬಿದ ಕಾರಣ ಯಾವ ಯಾವ ವಸ್ತು ಎಲ್ಲೆಲ್ಲಿದೆಯೋ ಅಲ್ಲಲ್ಲಿಯೇ ಪರಶಿವನಿಗೆ ಅರ್ಪಿಸ ಬಹುದು. ಇದೊಂದು ಬಹಳ ಪ್ರಬುದ್ಧ ಭಾವನೆ.

ಈ ಹಿನ್ನೆಲೆಯಲ್ಲಿ ವಿಚಾರಿಸಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ಏನೆಂದರೆ ಪ್ರಸಾದದ ಆಚರಣೆಯಲ್ಲಿ ಭಕ್ತನು ಪ್ರಸಾದ ಸ್ವೀಕರಿಸುವ ಅಂಶವಲ್ಲ, ಅವನು ಅರ್ಪಿಸುವ ಅಂಶ. ತಾನು ಅರ್ಪಿಸುವ ವಸ್ತುಗಳ ಬಗೆಗೆ ಅವನಿಗೆ ಆಸೆ ಇರಬಾರದು. ನಾವು ಭೋಗಿಸಬೇಕಾದ ವಸ್ತುಗಳನ್ನೆಲ್ಲ ಪರಶಿವನಿಗೆ ಅರ್ಪಿಸಿದ ನಂತರವೇ ಭೋಗಿಸ ಬೇಕು. ಪರಶಿವನಿಗೆ ಅರ್ಪಿಸುವವರೆಗೆ ಆಶೆಯನ್ನು ತಡೆ ಹಿಡಿಯಬೇಕು. ಇದು ಇಂದ್ರಿಯ ನಿಗ್ರಹ ಸಾಧಿಸುತ್ತದೆ.

ಅಕ್ಕಮಹಾದೇವಿಯು ಇವೆಲ್ಲಕ್ಕಿಂತ ಹೆಚ್ಚಿನ ಅರ್ಪಣೆ ಮಾಡಿದ್ದಾಳೆ. ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ನಿಯಂತ್ರಿಸಿ ಅವುಗಳನ್ನು ಪರಶಿವನಿಗೆ ಅರ್ಪಿಸಿದ್ದಾಳೆ.

> "ಕಾಯ ಪ್ರಸಾದವೆನ್ನೆ ಜೀವ ಪ್ರಸಾದವೆನ್ನೆ
> ಪ್ರಾಣ ಪ್ರಸಾದವೆನ್ನೆ ಭಾವ ಪ್ರಸಾದವೆನ್ನೆ"

ಎನ್ನುವಾಗ ಅರ್ಪಣಾ ಭಾವವು ಕೇವಲ ಬಾಹ್ಯ ವಸ್ತುಗಳಿಗಷ್ಟೆ ಸೀಮಿತವಾಗದೆ ಭಕ್ತನ ಇಡೀ ವ್ಯಕ್ತಿತ್ವವನ್ನೇ ಅಳವಡಿಸಿಕೊಳ್ಳುತ್ತದೆ. ಏಕೆಂದರೆ ತನ್ನತನವೊಂದನ್ನು ಅರ್ಪಿಸದೆ ಉಳಿದ ಏನೆಲ್ಲವನ್ನು ಅರ್ಪಿಸಿದರೂ ಅದು ಅರ್ಪಣೆಯಾಗಲಾರದು. ಹೀಗೆ

ತನ್ನತನವನ್ನು ಅರ್ಪಿಸಿಕೊಂಡವನೇ ನಿಜವಾದ ಪ್ರಸಾದಿ. ಅವನಿಗೆಷ್ಟೇ ಮೋಕ್ಷ ಮಾರ್ಗ ಸುಲಭ. ಎಂಬುದು ಅಕ್ಕಮಹಾದೇವಿಯ ಅಭಿಪ್ರಾಯ.

ಅದೇ ರೀತಿ, ಬಿಸಿಲು, ನೆಳಲು, ಗಾಳಿ, ಬೆಳಕು, ಸರ್ವಸ್ವವನ್ನು ಲಿಂಗಾರ್ಪಿತವ ಮಾಡಬೇಕು. ಎಂದು ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು ಸ್ಪಷ್ಟ ತೀರ್ಪು ಕೊಟ್ಟಿದ್ದಾರೆ. ಆದ್ದರಿಂದ ಪ್ರಸಾದವೆಂದರೆ ಕೇವಲ ಪೂಜಾ ಸಮಯದಲ್ಲಿ ಮಾತ್ರ ಸ್ವೀಕರಿಸುವ ವಸ್ತುವಲ್ಲ, ಯಾವಾಗ ಏನನ್ನು ತಿಂದರೂ, ಕುಡಿದರೂ, ಅದನ್ನು ಪರ ಶಿವನ ಪ್ರಸಾದವೆಂದೇ ಸ್ವೀಕರಿಸಬೇಕು. ಇಲ್ಲದಿದ್ದರೆ ಅದು ವಿಷ ಸೇವನೆಗೆ ಸಮ ಎಂದು ತಿಳಿಯಬೇಕಾಗುತ್ತದೆ.

ಇನ್ನೊಂದು ವೀರಶೈವ ಧರ್ಮದ ವೈಶಿಷ್ಟ್ಯವೆಂದರೆ ಇಷ್ಟಲಿಂಗ ಪೂಜಿಸುವವರು ತಮ್ಮ ಪ್ರಸಾದ ತಾವೇ ಮಾಡಿಕೊಳ್ಳಬಹುದು. ಮತ್ತು ಬೇರೆಯವರಿಗೆ ಕೊಡ ಬಹುದು. ಪ್ರಸಾದ ಸ್ವೀಕರಿಸಲಿಕ್ಕೆಂದು ದೇವಾಲಯಗಳಿಗೆ ಹೋಗಬೇಕಾಗಿಲ್ಲ. ಆದರೆ ಸಾಂಪ್ರದಾಯಿಕ ಹಿಂದೂ ಹಾಗೂ ಕ್ರೈಸ್ತ ದೇವಾಲಯಗಳಲ್ಲಿ ಮತ್ತು ಚರ್ಚುಗಳಲ್ಲಿ ಪೂಜೆಗೆಂದೇ ನೇಮಿಸಲ್ಪಟ್ಟ ಪೂಜಾರಿಯು ಪ್ರಸಾದ ಕೊಡುತ್ತಾನೆ. ಮತ್ತು ಅಲ್ಲಿಗೆ ಪೂಜೆಗೆಂದು ಹೋದ ಭಕ್ತರು ಅವನಿಂದ ಮಾತ್ರ ಅದನ್ನು ಸ್ವೀಕರಿಸ ತಕ್ಕದ್ದು. ಕೆಲವು ದೇವಾಲಯಗಳಲ್ಲಿ ಪ್ರಸಾದಕ್ಕೆಂದೇ ವಿಶೇಷ ರೀತಿಯ ಭಕ್ಷ್ಯ–ಭೋಜ್ಯಗಳನ್ನು ತಯಾರಿಸುತ್ತಾರೆ. ಉದಾ—ತಿರುಪತಿಯ ಲಡ್ಡುಗಳು, ಆದರೆ ವೀರಶೈವರಿಗೆ ಯಾವ ದೈನಂದಿನ ಆಹಾರವಾದರೂ ಪ್ರಸಾದ. ಪ್ರಸಾದವು ಶುದ್ಧ, ಸಿದ್ಧ, ಪ್ರಸಿದ್ಧವೆಂದು ಮೂರು ಬಗೆಯಾಗಿರುತ್ತದೆ. ಗುರುಮುಖದಿಂದ ಬಂದುದು ಶುದ್ಧ ಪ್ರಸಾದ, ಲಿಂಗ ಮುಖದಿಂದ ಬಂದುದು ಸಿದ್ಧ ಪ್ರಸಾದ, ಮತ್ತು ಜಂಗಮ ಮುಖದಿಂದ ಬಂದುದು ಪ್ರಸಿದ್ಧ ಪ್ರಸಾದ. ಅರ್ಪಣವೂ ಕೂಡ ಕಾಯಾರ್ಪಣ, ಕರಣಾರ್ಪಣ, ಮತ್ತು ಭಾವಾರ್ಪಣವೆಂದು ಮೂರು ಬಗೆಯಾಗಿದೆ. ಕರಣಂಗಳೆಲ್ಲವೂ ಲಿಂಗಕರಣಂಗಳಾಗಬೇಕು. ಪ್ರಸಾದವು ಅಂಗನ ಸರ್ವಾಂಗಗಳಲ್ಲಿಯೂ ಪ್ರವೇಶಿಸಿ ಅವುಗಳಲ್ಲಿ ಲಿಂಗ ಕಳೆಯನ್ನು ಬೆಳಗಬೇಕು. ಲಿಂಗೋಪಭೋಗವೇ ಪ್ರಸಾದ.

ಪ್ರಸಾದಿ ಸ್ಥಲದ ನಿಲುವನ್ನು ಚನ್ನಬಸವಣ್ಣ— "ಬಯಸಿ ಬಂದುದು ಅಂಗ ಭೋಗ, ಬಯಸದೇ ಬಂದುದು ಲಿಂಗಭೋಗ, ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದ, ಬೇಕೆಂಬುದು ಕಾಯಗುಣ, ಬೇಡೆಂಬುದು ವೈರಾಗ್ಯ, ಬೇಕೆಂಬುದು ಅಲ್ಲ, ಬೇಡೆಂಬುದು ಅಲ್ಲ, ಈ ಉಭಯಸ್ಥಿತಿಗಳಿದು ಭೋಗಿಸಬಲ್ಲಡೆ ಕೂಡಲ ಚೆನ್ನಸಂಗಾ, ನಿಮ್ಮ ಶರಣನೆಂಬೆ" ಎಂದು ವಿವರಿಸಿದ್ದಾರೆ.

JNANA SIMHASAN JNANAMANDAL
LIBRARY
Jangamwadi Math, Varanasi
ACC No. 8799

ಅವಿನಾಶಕ್ಕೆ ವಿನಾಶವನ್ನು ಅರ್ಪಿಸಿ ಅದನ್ನೂ ಅವಿನಾಶಿಯನ್ನಾಗಿಸುವುದು.... ನಿಜವಾದ ಪ್ರಸಾದ. ಅವನ ಕಣಕಣಗಳಲ್ಲಿಯೂ ಲಿಂಗಕಿರಣಗಳು ಬೆಳಗುತ್ತವೆ. ದಾಸೋಹವು ಅರ್ಪಣಭಾವದಿಂದ ಅರ್ಪಣ ತತ್ವದಲ್ಲಿ ಸೇರಿಹೋಗುತ್ತದೆ. ಅವನು ಯಾವಾಗಲೂ ಪ್ರಸನ್ನಚಿತ್ತನೂ ಲಿಂಗೋಪಭೋಗಿಯೂ ಆಗುತ್ತಾನೆ. ಅಂತರ್ ಬಾಹ್ಯ ಶುದ್ಧಿಯೂ ಸಾಧಿಸುತ್ತದೆ. ಮಾಡುವದೆಲ್ಲವೂ ಶಿವಾರ್ಪಣ ಬುದ್ಧಿಯಿಂದ ಮಾಡಲ್ಪಡುತ್ತದೆ. ಸೃಷ್ಟಿಯೆಲ್ಲವೂ ಅವನಿಗೆ ಶಿವಪ್ರಸಾದವಾಗುತ್ತದೆ. ಅಷ್ಟೇ ಅಲ್ಲ ತಾನೂ ಮಹಾಪ್ರಸಾದವಾಗುತ್ತಾನೆ. ಎಲ್ಲೆಲ್ಲಿಯೂ ಶಿವನ ಚೈತನ್ಯಶಕ್ತಿಯನ್ನು ಕಾಣುವ ಮನಃ ಪ್ರಸಾದ ಪಡೆಯುತ್ತಾನೆ. ಹೀಗಾಗಿ ಅವನು ಅಚ್ಚಪ್ರಸಾದಿ, ನಿಚ್ಚ ಪ್ರಸಾದಿ, ಶರಣರ ಅನುಭವದಂತೆ ಪ್ರಸಾದ ಸ್ವೀಕಾರದಿಂದ ಪಂಚೇಂದ್ರಿಯಗಳ ಮಾಲಿನ್ಯವು ಕಳೆಯುತ್ತದೆ. ಈ ಪ್ರಸಾದ ಸೇವನೆಯಿಂದ ಸಾಧಕನು ದಿವ್ಯ ಜ್ಞಾನ ವನ್ನು ಪಡೆಯುವನೆಂದು ನಂಬಲಾಗಿದೆ. ಶಿವಶರಣರ ಜೀವನ ಧನ್ಯ ಹಾಗೂ ಆದರ್ಶ ವಾಗಲಿಕ್ಕೆ ಅಚ್ಚನಿಚ್ಚ ಪ್ರಸಾದವೇ ಕಾರಣ. ಮಹಾತ್ಮಾ ಗಾಂಧಿಯವರು ದೇಶದ ಜನಹಿತಕ್ಕಾಗಿ ಸಮಸ್ತ ಸುಖ ಸಂಪತ್ತನ್ನು ತ್ಯಜಿಸಿದರು. ಪರಮಾತ್ಮನ ಹಾಗೂ ಸಮಾಜದ ಸಲುವಾಗಿ ಸರ್ವಸ್ವವನ್ನು ಸಮರ್ಪಿಸಿ ಶುದ್ಧ, ಸಿದ್ಧ, ಪ್ರಸಾದಕೊಂಡು ಪ್ರಸಿದ್ಧ ಪ್ರಸಾದ ಪುರುಷರಾದರು. ಮಹಾತ್ಮರೆಲ್ಲರೂ ಇಂಥ ವಿಶ್ವದಷ್ಟು ವಿಶಾಲ ಮನಸ್ಸನ್ನು ಹೊಂದಿ ವಿಶ್ವಾತ್ಮರಾಗಿರುತ್ತಾರೆ.

ಮಾನವತೆಯಿಲ್ಲದೆ ಅಥವಾ ಮಾನವರನ್ನು ಪ್ರೀತಿಸದೇ ದೇವರನ್ನು ಮಾತ್ರ ಪ್ರೀತಿಸುವೆನೆಂದು ಹೇಳುವವರು ಸುಳ್ಳುಗಾರರೆಂದು ಹೇಳುತ್ತಾರೆ. ಪ್ರಸಾದಿ ಸ್ಥಲದ ನಿಲುವು ಏನೆಂದರೆ ಜಗತ್ತೇ ಪ್ರಸಾದವಾಗುತ್ತದೆ, ತಾನೇ ಜಗತ್ತಿಗೆ ಪ್ರಸಾದವಾಗು ತ್ತಾನೆ. ಪ್ರಸಾದಿಯಾದಾತ "ಶೂನ್ಯಶರಣ" ಎಂದು ಹೇಳುತ್ತಾನೆ. ಅಂದರೆ ಕರ್ಮಯೋಗದ ರಹಸ್ಯ ಇದರಲ್ಲಿ ಅಳವಟ್ಟಿರುವುದು ಕಾಣುತ್ತದೆ. ಪ್ರಸಾದಿಯನ್ನು ಅಗ್ನ್ಯಂಗನಿಗೆ ಹೋಲಿಸುತ್ತಾರೆ. ಅಗ್ನಿಯು ಎಲ್ಲ ಪದಾರ್ಥಗಳನ್ನು ತನ್ನಲ್ಲಿ ಅಡಗಿಸಿ ಕೊಳ್ಳುವಂತೆ ಪ್ರಸಾದಿಯು ಸಿಹಿಕಹಿಗಳನ್ನು ಪ್ರಸಾದವನ್ನಾಗಿಸಿ ತೃಪ್ತನಾಗುತ್ತಾನೆ. ಕರಣೇಂದ್ರಿಯಗಳಿಗೆ ಕಾರಣವಾದ ಮನಸ್ಸನ್ನು ಶಾಂತಗೊಳಿಸುತ್ತಾನೆ. ಮನವನ್ನು ನಿರ್ಮಲ ಹಾಗೂ ನಿಶ್ಚಲಗೊಳಿಸುವುದೇ ಪ್ರಸಾದಿಯ ಪರಮಗುರಿಯಾಗಿದೆ.

ಹೀಗೆ ತನ್ನ ಸರ್ವಸ್ವವನ್ನೂ ಪರಮಾತ್ಮನಿಗೆ ಅರ್ಪಿಸಿಕೊಂಡ ಪ್ರಸಾದಿಯು ತನ್ನ ಪ್ರತಿಯೊಂದು ಇಂದ್ರಿಯದ ಬಾಗಿಲಿನಲ್ಲಿಯೂ ಪರಶಿವನನ್ನು ಪ್ರತಿಷ್ಠಾಪಿಸು ತ್ತಾನೆ. ಆಗ ಪರಶಿವನು ಇಂದ್ರಿಯ ವಿಷಯಗಳನ್ನು ಭೋಗಿಸಿದ ನಂತರ ನಾನು ಪ್ರಸಾದ ಭಾವದಿಂದ ಭೋಗಿಸುತ್ತೇನೆ ಎಂಬ ಭಾವ ಅವನಲ್ಲಿ ಬೆಳೆಯುತ್ತದೆ.

JNANA SIMHASAN JNANAMANDAL
LIBRARY
Jangamwadi Math, Varanasi
Acc. No.

(iv) ಪ್ರಾಣಲಿಂಗ

ಪ್ರಾಣಲಿಂಗ ಎಂದರೆ ಇಡೀ ಪ್ರಾಣವೇ ದೇಹ-ಬುದ್ಧಿ-ಇಂದ್ರಿಯಗಳಿಂದೊಡಗೂಡಿದ ವ್ಯಕ್ತಿಯೇ ಲಿಂಗವಾಗಿರುವವನು ಎಂದರ್ಥ. ಆತ್ಮನಲ್ಲಿ ತಾನು ಎಂಬ ಭಾವ ಹೋಗಿ ಆ ಸ್ಥಾನದಲ್ಲಿ ಪರಶಿವನು ನೆಲೆಸಿದಾಗ ಆತ್ಮನು ನಾನೇ ಪರಮಾತ್ಮ ಎಂದು ತಿಳಿಯುತ್ತಾನೆ. ಪ್ರಾಣವು ದೇಹದ ಎಲ್ಲೆಡೆಯಲ್ಲಿ ಹೇಗಿದೆಯೋ ಹಾಗೆ ಪರಶಿವನು ಇಡೀ ದೇಹವನ್ನೇ ಆಕ್ರಮಿಸಿಕೊಂಡಿರುತ್ತಾನೆ. ಆಗ ಪ್ರಸಾದಿಯು ಪ್ರಾಣಲಿಂಗಿ ಎನ್ನಿಸಿಕೊಳ್ಳುತ್ತಾನೆ. ಇದು ಸಾಧ್ಯವಾಗುವುದು ಅವನು ಅನುಭಾವ ಪಡೆದರೆ ಮಾತ್ರ. ಅನುಭಾವದಲ್ಲಿ ತಾನೆಂಬ ಭಾವ ನಷ್ಟವಾಗುವುದರಿಂದ ಆತ್ಮ ಪರಮಾತ್ಮಗಳ ಭೇದ ಇಲ್ಲವಾಗುತ್ತದೆ. ಆಗ ಅನುಭಾವಿಯು ತನ್ನ ಕ್ರಿಯೆಗಳೆಲ್ಲ ಲಿಂಗದ ಕ್ರಿಯೆಗಳೆಂದು ನಂಬುತ್ತಾನೆ. ಆಗ ವಸ್ತುಗಳನ್ನು ಪರಶಿವನಿಗೊಮ್ಮೆ ಅರ್ಪಿಸಿ ಬಿಟ್ಟರೆ ತೀರಿತು, ತಾನು ಸ್ವೀಕರಿಸಬೇಕಾಗಿಲ್ಲ.

"ಬಸುರೊಳಗಣ ಕೂಸಿಂಗೆ ಬೇರೆ ಊಟ ಬೇರೆ ಸ್ನಾನ ಉಂಟೆ ?
ಜ್ಞಾನವೆಂಬ ಗರ್ಭದೊಳಗೆ ಲಿಂಗವೆಂಬ ಶಿಸುವಿರಲು,
ಬೇರೆ ಕೊಡುವ, ಕೊಂಬ, ಸ್ವೀಕರಿಸುವ ಪರಿಯೆಂತು ?"

ಎಂದು ಅಲ್ಲಮ ಪ್ರಭು ಕೇಳುತ್ತಾನೆ.

ಪ್ರಾಣಲಿಂಗಿಯು ಶಿವ ಮಂತ್ರ ಪಠಣದೊಡನೆ ಲಿಂಗದಲ್ಲಿ ಏಕಾಗ್ರತಾ ದೃಷ್ಟಿಯಿಂದ ಶಿವಯೋಗ ಸಾಧಿಸುವನು. ಅನ್ಯರಿಗೆ ಮಾರ್ಗದರ್ಶಿಯಾಗುವನು. ಮೊದಲು ಬಹಿರ್ಮುಖನಾಗಿ ಇಷ್ಟಲಿಂಗ ಪೂಜಿಸಿದಂತೆ ನಂತರ ಅಂತರ್ಮುಖಿಯಾಗಿ ಪ್ರಾಣಲಿಂಗ ಪೂಜಿಸುತ್ತಾನೆ. ಇದರಿಂದ ಅವನು ಬಹಳ ಪರಿಶುದ್ಧನಾಗುತ್ತಾನೆ. ಕರಿಯು ಕನ್ನಡಿಯೊಳಡಗಿದಂತೆ ವಿಶ್ವವ್ಯಾಪಿಯಾದ ಶಿವನು ತನ್ನಲ್ಲಿ ಅಡಗಿರುವುದನ್ನು ಅನುಭವಿಸುತ್ತಾನೆ. ಇದೇ ಅನುಭಾವ ಭಕ್ತಿಯ ನಿಲವು. ಅವನಿಗೆ ಕಾಯವೇ ಪೀಠಿಕೆ, ಪ್ರಾಣವೇ ಲಿಂಗವಾಗಿರುತ್ತದೆ. ಪ್ರಾಣಲಿಂಗಿಗೆ ಬಂದುದೇ ಪರಿಣಾಮ, ನಿಂದುದೇ ನಿವಾಸ.

ನಮ್ಮಲ್ಲಿ ಪರಮಾತ್ಮನಿದ್ದರೂ ನಾವು ಪರಮಾತ್ಮನಲ್ಲಿರಲಾರದ್ದೇ ನಮ್ಮ ಬಂಧನ. ಹಾಗೂ ದುಃಖಕ್ಕೆ ಕಾರಣವಾಗಿದೆ. ಪ್ರಾಣಲಿಂಗಿ ಸ್ಥಲದ ನಿಲುವೆಂದರೆ ನಾವು ಪರಮಾತ್ಮನಲ್ಲಿ ನೆಲೆಸಿ ಸದಾ ಅವನ ಕೃಪಾಛತ್ರದಲ್ಲಿರುವುದರಿಂದ ದೇಹ, ಮನಸ್ಸು, ಭಾವ ಎಲ್ಲವೂ ಲಿಂಗಮಯವಾಗುತ್ತವೆ. ಇದಕ್ಕೋಸ್ಕರ ನಾವು ಪರಮಾತ್ಮನ ದಿವ್ಯರೂಪ, ದಿವ್ಯಗುಣ ಹಾಗೂ ದಿವ್ಯ ಪ್ರಜ್ಞೆಯ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನವನ್ನು ರೂಢಿಸಿಕೊಳ್ಳಬೇಕು.

ಒಬ್ಬನು ನಿಜವಾಗಿ ಯಾವುದನ್ನು ಆಲೋಚಿಸುತ್ತಾನೋ ಅದೇ ಆಗುತ್ತದೆ. ಯಾಕಂದರೆ ಭಕ್ತಿ, ನಿಷ್ಠೆ ಮತ್ತು ಪರಿಶುದ್ಧವಾದ ಮನಸ್ಸುಳ್ಳ ಸಾಧಕನು ಲಿಂಗಾಶ್ರಯದಲ್ಲಿರುತ್ತಾನೆ. ಧ್ಯಾನ ಸಾಧನೆಯಿಂದ ಉಚ್ಚ ಪ್ರಜ್ಞೆಯುಳ್ಳವನಾಗುತ್ತಾನೆ. ಆಗ ಒಳ ಹೊರಗಿನ ವಿಘ್ನಗಳು ದೂರಾಗಿ ಕುತ್ತುಗಳು ಮುತ್ತುಗಳಾಗುತ್ತವೆ. ಅಂದರೆ ಅನುಕೂಲ ಶಕ್ತಿಗಳಾಗಿ ಪರಿಣಮಿಸುತ್ತವೆ. ಅನುಭಾವ ಭಕ್ತಿಯಿಂದ ಮನಸ್ಸು ಲಿಂಗದೊಳಗೆ ಅಡಗಿಬಿಡುತ್ತದೆ. ಹೀಗೆ ಒಳಹೊರಗುಗಳು ಲಿಂಗರೂಪವಾಗಿ, ಲಿಂಗವೇ ಪ್ರಾಣವಾಗಿ, ಪ್ರಾಣವೇ ಲಿಂಗವಾಗಿ ಆ ಲಿಂಗವೇ ಸ್ವಯಂ ಲಿಂಗವಾಗುವದೇ ಪ್ರಾಣಲಿಂಗಿ-ಸ್ಥಳ. ವೀರಶೈವ ತತ್ವದ ಪ್ರಕಾರ ಲಿಂಗವೆಂದರೆ ಶಿವಯೋಗ ಸಾಧಕರು, ಸಾಕಾರದಿಂದ ನಿರಾಕಾರಕ್ಕೆ, ವ್ಯಕ್ತದಿಂದ ಅವ್ಯಕ್ತಕ್ಕೆ, ಸುಗುಣದಿಂದ ನಿರ್ಗುಣಕ್ಕೆ ಸಾಗುವಲ್ಲಿ ಅಂದರೆ ಸಣ್ಣ ಸತ್ಯದಿಂದ ದೊಡ್ಡ ಸತ್ಯಕ್ಕೆ ಸಾಗುವ ಕ್ರಮದಲ್ಲಿ ಸಾಧನೆ ಸಿದ್ಧಿಗಳ ಸಂಗಮದ ಕುರುಹು ಎಂದು ಭಾವಿಸಬಹುದಾಗಿದೆ.

"It is a flight of the lone to the alone",
ಇದೊಂದು ಓರ್ವನತ್ತ ಓರ್ವನದೇ ಪಯಣ'' ಎಂದು ಪ್ಲೋಟಿನಸ್ ಹೇಳುತ್ತಾನೆ.

ಪ್ರಾಣಲಿಂಗ ಮತ್ತು ಪರಶಿವನಲ್ಲಿ ಭೇದ ಮಾಡದವನೇ ಪ್ರಾಣಲಿಂಗಿ. ಪ್ರಾಣಲಿಂಗಿಯು ವಾಯ್ವಂಗನಾಗಿ ಪ್ರಾಣವಾಯು ಸರ್ವಾಂಗದಲ್ಲಿ ವ್ಯಾಪಿಸುವಂತೆ ಲಿಂಗ ಪ್ರಾಣಿಯಾಗಿ ಜಂಗಮ ಲಿಂಗವನ್ನು ಆರಾಧಿಸುತ್ತಾನೆ.

ಸಾಮಾನ್ಯವಾಗಿ ಈ ಲೋಕದಲ್ಲಿ ಮಾನವರು ಗುಡಿಗಳನ್ನು ಕಟ್ಟಿ ಗುಡಿಯೊಳಗೆ ದೇವರನ್ನು ಪ್ರತಿಷ್ಠಾಪಿಸುತ್ತಾರೆ. ನಿತ್ಯದಲ್ಲಿ ಅರ್ಚನೆ ಮಾಡಿಸಿ ನೈವೇದ್ಯವನ್ನು ತೋರಿಸುತ್ತಾರೆ. ಆದರೆ ಇದು ಮನುಷ್ಯನ ಗುರಿಯಲ್ಲ. ಕಾಯವೇ ದೇಗುಲವಾಗಬೇಕು. ಪ್ರಾಣವೇ ಲಿಂಗವಾಗಬೇಕು. ಪ್ರಾಣ ಲಿಂಗವಾದ ಪ್ರತ್ಯೇಕ ಸ್ಥಾವರ ಲಿಂಗದ ಅವಶ್ಯಕತೆ ಇಲ್ಲ. ಆದರಂತೆ ಶರೀರದ ಮೇಲೆ ಇಷ್ಟಲಿಂಗ ಧರಿಸಿದರೆ ಆಗದು. ಪ್ರಾಣವೇ ಲಿಂಗವಾಗುವಂತೆ ಪ್ರಯತ್ನಿಸಬೇಕು. ಆಗ ಪ್ರಾಣಲಿಂಗಿಯಾಗುವನು. ಲಿಂಗ ಪ್ರತಿಷ್ಟೆಯ ಮಾಡಿದವನು ತಾನು ಸತ್ತು ಲಿಂಗವನ್ನು ಅಲ್ಲಿಯೇ ಉಳಿಸಿ ಹೋಗುವನು. ಪ್ರಾಣಲಿಂಗಿಯು ತಾನೇ ಸರ್ವಾಂಗ ಲಿಂಗಿಯಾಗಿ ಹೋಗುವನು. ಇದುವೇ ಪ್ರಾಣಲಿಂಗಿಯ ಶ್ರೇಷ್ಠತೆ.

(v) ಶರಣ

ಮಹಾಜ್ಞಾನಿ ಚನ್ನಬಸವಣ್ಣ ಹೇಳಿದಂತೆ "ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ''. ಶರಣನ ಪರಿಪೂರ್ಣತೆ ಶಿವನ ಅನುಗ್ರಹ ವಿಶೇಷ. ತುಂಬಿಮದು ತುಳುಕುವದಿಲ್ಲ ಅನ್ನುವಂತೆ ಶರಣನ ನಿಲವು ಅನಂತ. ಆನಂದದ ಕುರುಹು. ಅನುಭಾವವನ್ನು ಪದೇ ಪದೇ ಪಡೆದ ಪ್ರಾಣಲಿಂಗಿಯೇ ಶರಣ.

ಶರಣ ಸ್ಥಲದ ಪ್ರಮುಖ ಲಕ್ಷಣಗಳೆಂದರೆ ಆನಂದ ಮತ್ತು ಶರಣಾಗತಿ ಭಾವ. ಶರಣನು ಪಡೆಯುವ ಆನಂದ ಯಾವ ಭೌತಿಕ ವಸ್ತುವನ್ನು ಭೋಗಿಸುವುದರಿಂದ ಬರುವುದಿಲ್ಲ, ಆಧ್ಯಾತ್ಮಿಕ ಸಿದ್ಧಿಯಿಂದ ಬರುತ್ತದೆ.

ಶರಣಸ್ಥಲದ ಭಕ್ತಿಯನ್ನು ಶರಣಸತಿ-ಲಿಂಗಪತಿ ಭಾವಕ್ಕೆ ಹೋಲಿಸಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಲೌಕಿಕ ಸತಿಪತಿಗಳ ಪ್ರೀತಿಯು ''ಶರಣಸತಿ ಲಿಂಗಪತಿ'' ಭಾವಕ್ಕೆ ಮಾದರಿಯಾಗುವದಿಲ್ಲ, ಬದಲಾಗಿ "ಶರಣಸತಿ ಲಿಂಗಪತಿ" ಪ್ರೀತಿಯೇ ಲೌಕಿಕ ಸತಿಪತಿಗಳ ಪ್ರೀತಿಗೆ ಮಾದರಿ (ಆದರ್ಶ) ಎಂದು ಭಾವಿಸುವದು ಸಮಂಜಸವಾಗಿದೆ. ಭಕ್ತ ಭಗವಂತ ಇವರುಗಳ ಪ್ರೀತಿ ಪರಿಶುದ್ಧಿಗಳ ಅಂಶಮಾತ್ರ.

ಶರಣನು ಆಚರಿಸಿದ್ದೇ ಧರ್ಮ, ತ್ಯಜಿಸಿದ್ದೇ ಅಧರ್ಮ. ಶರಣನಿಗೆ ಅನ್ಯರ ಹಿತದ ಕಡೆಗೆ ಗಮನವಿರುತ್ತದೆ. ಜಗತ್ತಿನ ದ್ವಂದ್ವಗಳಿಂದ ಆಗುಹೋಗುಗಳಿಂದ ನಿರ್ಲಿಪ್ತನಾಗಿರುತ್ತಾನೆ.

ಬಸವಣ್ಣ ಅಂದಂತೆ ''ಶರಣ ನಿದ್ರೆಗೈದರೆ ಜಪ,
ಎದ್ದರೆ ಶಿವರಾತ್ರಿ,
ನಡೆದುದು ಪಾವನ,
ನುಡಿದುದು ಶಿವತತ್ವ,
ಶರಣನ ಕಾಯವೇ ಕೈಲಾಸ"

ಇಂಥ ಶರಣ ಮನದೆರೆದು ಮಾತಾಡಿದರೆ ಲಿಂಗವ ಕಾಣಬಹುದು.

ಚನ್ನ ಬಸವಣ್ಣನೂ ಹೀಗೆ ತಿಳಿಸುತ್ತಾನೆ.
''ಶರಣ ಭೋಗಿಸಿದ್ದು ಶಿವಾರ್ಪಿತ,
ರುಚಿಸಿದ್ದು ಪ್ರಸಾದ,
ಅರಿದುದು ಪರಬ್ರಹ್ಮ,
ಮರೆದುದು ಪರಮಸುಖ,
ನುಡಿದುದು ಶಿವತತ್ವ"

ಶರಣಸ್ಥಲವು ಆನಂದ ಭಕ್ತಿಯು ಪ್ರಸಾದ ಲಿಂಗವು.

ಶರಣನ ವ್ಯಕ್ತಿತ್ವ ಹೇಗಿರುತ್ತದೆಂದರೆ ಬಳಿಗೆ ಬಂದ ಭಕ್ತರನ್ನು ಸ್ಪರ್ಶ, ಮಾತು, ದೃಷ್ಟಿ ಮಾತ್ರದಿಂದ ಉದ್ಧರಿಸಬಲ್ಲ ಸಮರ್ಥ ಸದ್ಗುರುವಿನಂತಿರುತ್ತದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ ಇವನಿಗೆ ಮಾನವ ಸೇವೆ ಎಂದರೆ ಮಾನವ ನಲ್ಲಿಯ ಮಹಾದೇವನ ಸೇವೆಯಾಗಿರುತ್ತದೆ. ದಾನವರನ್ನು ಮಾನವರನ್ನಾಗಿ

ಮಾಡಲು, ಮಾನವರನ್ನು ಮಹಾಂತರನ್ನಾಗಿ ಮಾಡಲು ಮತ್ತು ಈ ಭುವಿಯನ್ನೇ ಸಗ್ಗವನ್ನಾಗಿ ಮಾಡಲು ಅವನು ಶ್ರಮಿಸುತ್ತಾನೆ.

ಶರಣನಿಗೆ ತನ್ನದೆಂಬುವದೇನೂ ಇರುವದಿಲ್ಲ. ಅವನು ನಿಶ್ಚಿಂತನು, ನಿರಾಮಯನು, ಮತ್ಸರವಿಲ್ಲದ ಮಹಿಮನು. ಸೀಮೆ ಮೀರಿದ ನಿಸ್ಸೀಮನು. ಶರಣನು ನ್ಯಾಯನಿಷ್ಠುರಿ ದಾಕ್ಷಿಣ್ಯ ಪರನಲ್ಲ, ಲೋಕವಿರೋಧಿ, ಶರಣನಾರಿಗೂ ಅಂಜುವವನಲ್ಲ, ಅವನು ಸತ್ಯವನ್ನು ನುಡಿಯುತ್ತಾನೆ. ಧರ್ಮದಂತೆ ನಡೆಯುತ್ತಾನೆ. ಶರಣನು ಸ್ವತಂತ್ರನು, ಲೋಕದಿಚ್ಛೆಯಂತೆ ನುಡಿಯನು ಮತ್ತು ಲೋಕದಿಚ್ಛೆಯಂತೆ ನಡೆಯನು. ಅವನು ಸರ್ವಾಂಗಗಳಲ್ಲಿಯೂ ಬ್ರಹ್ಮಚಾರಿ.

ಷಟ್‌ಸ್ಥಲ ವ್ಯವಸ್ಥೆಯಲ್ಲಿ ಈ ಶರಣಸ್ಥಲ ಒಂದು ವಿಶಿಷ್ಟವಾದ ಮಾನಸಿಕ ಸಿದ್ಧಿಯ ಫಲ. ಅರವಿಂದರು ಹೇಳುವ ಪೂರ್ಣ ಯೋಗದಲ್ಲಿ ಕಾಣುವ ಅವತರಣ ಕ್ರಿಯೆಯ ಸಾಕಾರ ರೂಪ ಇಲ್ಲಿದೆ. ಭಕ್ತಸ್ಥಲದಿಂದ ಪ್ರಾಣಲಿಂಗಿ ಸ್ಥಲದವರೆಗೂ ಹಂತಹಂತವಾಗಿ ಏರುತ್ತಾ ಬಂದು ಅನುಭಾವದ ಶಿಖರವನ್ನು ಮುಟ್ಟಿದ ಸಾಧಕ ಅಲ್ಲಿಯೇ ನಿಲ್ಲುವುದಿಲ್ಲ. ಸಮಷ್ಟಿ ಹಿತಕ್ಕಾಗಿ ಆ ಶಿಖರದ ಸತ್ವವನ್ನು ಹೊತ್ತು ಕೆಳಗಿಳಿದು ಬರುತ್ತಾನೆ. ಇಲ್ಲಿ ಕೆಳಗೆ ಎನ್ನುವದು ಒಂದು ಸ್ಥಳವಲ್ಲ ಅಥವಾ ಮಾನಸಿಕ ಸ್ಥಿತಿಯ ಕೆಳಮಟ್ಟವೂ ಅಲ್ಲ, ಒಂದು ಸಂಪೂರ್ಣ ಪರಿವರ್ತನೆಯ ಪರಿಕಲ್ಪನೆ. ಅಲ್ಲಿ ಶರಣ ತನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳುತ್ತಾನೆ. ಈ ದೇಹವನ್ನು ಧರಿಸಿದ್ದರೂ ಆತ ವ್ಯಕ್ತಿಯಲ್ಲ ವ್ಯಕ್ತಿತ್ವವನ್ನು ಮೀರಿದ್ದರೂ ಈ ಜಗತ್ತನ್ನು ಬಿಟ್ಟವನಲ್ಲ.

ಅರವಿಂದರು ಹೇಳುವ Integral yoga ಅಥವಾ ಪೂರ್ಣಯೋಗದ ಎಲ್ಲಾ ಪ್ರಮುಖ ಅಂಶಗಳನ್ನು ಷಟ್‌ಸ್ಥಲ ಒಳಗೊಂಡಿದೆ. ಬಸವಣ್ಣನವರಿಗಿಂತ ಹಿಂದೆಯೇ ಷಟ್‌ಸ್ಥಲ ಅಷ್ಟಾವರ್ಣಾದಿಗಳು ಪಾರಮೇಶ್ವರ ಆಗಮದಲ್ಲಿ ಪ್ರತಿಪಾದಿಸಲ್ಪಟ್ಟಿದ್ದವು. ಅದರಲ್ಲಿ ನಿರೂಪಿಸಲ್ಪಟ್ಟ ಇಷ್ಟಲಿಂಗದ ಕಲ್ಪನೆ ಮತ್ತು ಆಚರಣೆಯ ಮಾರ್ಗಗಳಿಂದ ಬಸವಣ್ಣ ಆಕರ್ಷಿತನಾಗಿ ವರ್ಣ, ವರ್ಗ ಭೇದವಿಲ್ಲದೆ ಎಲ್ಲರೂ ಧರಿಸಬಹುದಾದ ಇಷ್ಟಲಿಂಗವನ್ನು ಧರಿಸಿ ಅದನ್ನು ಅವಲಂಬಿಸಿ ಬೆಳೆದಿದ್ದ ಷಟ್‌ಸ್ಥಲ ಮಾರ್ಗಕ್ಕೆ ಹೊಸತಿರುವು ಕೊಟ್ಟನು.

ಪ್ರಾಣಲಿಂಗಿಯು ಲಿಂಗವೇ ಪ್ರಾಣವೆಂದು ಲಿಂಗದೇವನನ್ನು ಪ್ರೀತಿಸುವ ಕನ್ಯೆಯಂತೆ. ಆದರೆ ಶರಣನು ಲಿಂಗದೇವನನ್ನು ಮನಸಾ ಮೆಚ್ಚಿ ಮದುವೆಯಾದ ಪ್ರಬುದ್ಧ ಸತಿಯಂತೆ. ಈ ರೀತಿಯಾಗಿ ಶರಣ-ಸತಿ, ಲಿಂಗದ ಸಂಗಡ ಸಂಯೋಗ ಮಾಡಿ ಸತ್-ಚಿತ್ ಆನಂದ ಪಡೆಯುತ್ತಾಳೆ. ಅಂತರಂಗದಲ್ಲಿ ಜ್ಞಾನೋದಯವಾಗಿ ಆತ್ಮಚೇತನದಲ್ಲಿ ಆನಂದದ ಸೊಬಗು ಸೂಸೆಗೊಳ್ಳುತ್ತದೆ. ಆಗ ಶರಣನ ಸಂಸಾರವು ಸಸಾರವಾಗುತ್ತದೆ.

ಶರಣನು ಮಹಾನಂದವನ್ನು ಮಹಾಪ್ರಕಾಶವನ್ನು ಪಡೆದ ಪುಣ್ಯಜೀವಿ. ಮರ್ತ್ಯ ಲೋಕದ ಮಣಿಹವನ್ನೆಲ್ಲ ಮಾಡಿ ಮುಗಿಸಿದ ತುಂಬು ಬಾಳು ಶರಣನದು.

ನದಿಯು ಮೈಯೆಲ್ಲಾ ಕಾಲಾಗಿ ಹರಿಯುತ್ತದೆ. ಅಗ್ನಿಯು ಮೈಯೆಲ್ಲಾ ನಾಲಿಗೆಯುಳ್ಳದ್ದಾಗಿ ಉರಿಯುತ್ತದೆ. ಗಾಳಿಯು ಮೈಯೆಲ್ಲಾ ಮುಖವಾಗಿ ಬೀಸುತ್ತದೆ. ಇದರಂತೆ ಶರಣನು ಸರ್ವಾಂಗಲಿಂಗಿಯೆನಿಸಿ ಬಾಳುತ್ತಾನೆಂದು ಅಲ್ಲಮ ಪ್ರಭುಗಳು ಮನನೀಯವಾಗಿ ಹೇಳಿದ್ದಾರೆ.

ಶರಣರ ಸಂಗ ಹೇಗಿರುತ್ತದೆ ಎಂದರೆ ಕರ್ಪೂರಬೆಟ್ಟಕ್ಕೆ ಬೆಂಕಿ ತಗುಲಿದರೆ ತತ್ಕಾಲ ಉರಿದು ನಿಶ್ಯೇಷವಾಗಿ ಅಗ್ನಿಯಲ್ಲಿ ಮಾಯವಾಗುವಂತೆ ಮನದಲ್ಲಿಯ ಹೀನ ಆಚಾರ ವಿಚಾರಗಳ ರಾಶಿಯೇ ನಾಶವಾಗಿ ದುಃಖಸಮುದಾಯದ ಆಗರವಾದ ಭವ ರೋಗವೇ ದೂರವಾಗುವದು—ಎಂದು ಅಕ್ಕಮಹಾದೇವಿ ಹೇಳುತ್ತಾಳೆ.

ಶರಣರನ್ನು ಫಲಭರಿತ ಮರಕ್ಕೆ ಹೋಲಿಸುತ್ತಾ ಅಕ್ಕಮಹಾದೇವಿಯು ಹಣ್ಣಿದ್ದ ಗಿಡಕ್ಕೆ ಜನ ಕಲ್ಲು ಬೀಸುತ್ತಾರೆ. ಹಣ್ಣಿಲ್ಲದ ಮರವನ್ನು ಯಾರೂ ನೋಡುವದಿಲ್ಲ. ಅದರಂತೆ ಭಕ್ತಿ ಮತ್ತು ಜ್ಞಾನ ತುಂಬಿದ ಶರಣರನ್ನು ಜನ ದೂಷಿಸಬಹುದು. ಉಳಿದವರನ್ನು ನಿಂದಿಸುವದು ಅವರಿಗೆ ವ್ಯರ್ಥಶ್ರಮ ಎಂದು ನುಡಿದಿದ್ದಾಳೆ.

ಹೀಗೆ ಶರಣ, ಶರಣಸ್ಥಲ ಹಾಗೂ ಶರಣರ ಸತ್ಸಂಗ ಕುರಿತು, ಅನುಭಾವಿಗಳು ಗಮನೀಯ ವಿಷಯಗಳನ್ನು ತಿಳಿಸಿದ್ದಾರೆ. ಶರಣನಿಗೆ ಮಾಯಾ ಬಂಧನವೇ ಇಲ್ಲ. ಭಗವದ್ಗೀತೆಯ ದೃಷ್ಟಿಯಲ್ಲಿ ಇವನೇ ಯೋಗಾರೂಢನು. ಬುದ್ಧ, ಬಸವ, ಗಾಂಧಿ, ಸ್ವಾಮಿ ವಿವೇಕಾನಂದ ಮುಂತಾದವರು ವಿಶ್ವ ಮಾನಸವನ್ನು (Cosmic mlnd) ಪಡೆದ ಜೀವನ್ಮುಕ್ತರು. ಇವರು ಶಾಂತಿಸಾಗರದಲ್ಲಿ ಮುಳುಗಬಲ್ಲಂಥ ವ್ಯಕ್ತಿತ್ವ ಹೊಂದಿದ ಶರಣರು. ಇಂಥವರಿಗೆ ಈಜಿದ್ದೇ ಆನಂದ, ಮುಳುಗಿದ್ದೇ ಶಾಂತಿ !

(vi) ಐಕ್ಯ

ಲಿಂಗದಲ್ಲಿ ಬೆರೆತು ಲಿಂಗ ಸ್ವರೂಪನಾಗುವುದಕ್ಕೆ ಐಕ್ಯ ಹೊಂದುವದು ಎನ್ನುತ್ತಾರೆ. ಲಿಂಗೈಕ್ಯವೆಂದರೆ ಬಯಲು. ಬಯಲನು ಬೆರೆಸಿ ಬಯಲು ಆದ ಸ್ಥಿತಿ, ಬೆಳಗಿನಲ್ಲಿ ಬೆಳಕು ಬೆರೆತ ಸ್ಥಿತಿ.

ಶಿವಾಂಶ ಸಂಭೂತನಾದ ಸಾಧಕನು ಷಟ್‌ಸ್ಥಲ ವಿಧಾನವನ್ನು ಅನುಸರಿಸಿ ತನ್ನ ಸಾಧನೆಯಲ್ಲಿ ಸಿದ್ಧಿಪಡೆದು ಕೊನೆಗೆ ಶಿವನಲ್ಲಿ ಐಕ್ಯನಾಗುತ್ತಾನೆ. ಪುನಃ ಶಿವನೇ ತಾನಾಗುತ್ತಾನೆ. ಇದು ನಿವೃತ್ತಿ ಮಾರ್ಗ. ಪ್ರವೃತ್ತಿ ಮಾರ್ಗದಿಂದ ಜೀವನಾಗಿ ಜನಿಸಿದವನು ನಿವೃತ್ತಿ ಮಾರ್ಗದಿಂದ ದೇವನಾಗುವ ಪಥವೇ ಷಟ್‌ಸ್ಥಲ ಮಾರ್ಗ.

ಶರಣನು ಆತ್ಮಾಂಗದಲ್ಲಿ ನಿಂತು ಚಿತ್‌ಶಕ್ತಿಯುತವಾದ ಮಹಾಲಿಂಗವನ್ನು ಭಕ್ತಿಯಿಂದ ಆರಾಧಿಸಿ ಸದ್ಭಾವ ಹಸ್ತದಿಂದ ತೃಪ್ತಪದಾರ್ಥವನ್ನು ಮನೋಮುಖ ದಲ್ಲಿ ಆ ಲಿಂಗಕ್ಕೆ ಅರ್ಪಿಸಿ ಐಕ್ಯಸ್ಥಲ ತಲುಪುವನು. ಅಂಗಲಿಂಗವೆಂಬ ಭೇದವಳಿದು ಅಂಗವು ಲಿಂಗದಲ್ಲಿ ಸಾಮರಸ್ಯವನ್ನು ಹೊಂದುತ್ತದೆ. ಆಗ ಶರಣನ ತನು, ಮನ, ಭಾವ, ಜ್ಞಾನ ಇವು ಮಹಾಲಿಂಗದಲ್ಲಿ ಲೀನವಾಗುತ್ತವೆ.

ಸಾಧಕನು ಭಗವದ್ಗೀತೆಯಲ್ಲಿ ಹೇಳಿದಂತೆ ಸ್ಥಿತಪ್ರಜ್ಞನಾಗಿದ್ದು ಆತ್ಮದಲ್ಲಿಯೇ ಆತ್ಮನಿಂದಲೇ ಸಂತುಷ್ಟನಾಗಿ ಸಮಸ್ತ ಕಾಮನಾರಹಿತನಾಗಿರುತ್ತಾನೆ. ಇವನು ಸರ್ವಾಂಗ ಲಿಂಗಿಯು ಷಟ್‌ಸ್ಥಲ ಬ್ರಹ್ಮಿಯು, ನಿರಂಜನ ಪ್ರಣವ ಸ್ವರೂಪಿಯು. ತೋಂಟದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಹೇಳಿದಂತೆ ಐಕ್ಯನು ಬಯಲು ಬಯಲಾ ಗುವನು.

"ಗಾಳಿ ಗಂಧವನಪ್ಪಿದಂತೆ ಬಯಲು ಬಯಲನಪ್ಪಿದಂತೆ
ಬೆಳಗು ಬೆಳಗನಪ್ಪಿ ಮಹಾ ಬೆಳಗಾದಂತೆ

ಶರಣಲಿಂಗವನಪ್ಪಿ ಮಹಾಲಿಂಗವೇ ತಾನುತಾನಾಗಿ ನಿರ್ವಯಲಾದನು"

ಸಮಾನ ಗುಣಧರ್ಮದ ವಸ್ತುಗಳು ಒಂದರೊಳಗೊಂದು ಅಭಿನ್ನವಾಗಿ ಬೆರೆಯುವಂತೆ ಪರಿಶುದ್ಧ ಜೀವನು ಪರಿಶುದ್ಧ ಜೀವನದಲ್ಲಿ ಬೆರೆಸಿ ಬೇರಾಗದಂತೆ ಬೆರೆಯುತ್ತಾನೆ.

ಐಕ್ಯಸ್ಥಲದ ಪರಮಸುಖವು ಅಥವಾ ಶಿವಾನಂದಾನುಭವವು ವರ್ಣನೆಗೆ ಮೀರಿದ್ದಾಗಿದೆ. ಮಾತು ಮನಗಳಾಚೆಗಿನ ಜ್ಯೋತಿಯಾಗಿದೆ.

"ನಿಮ್ಮ ನೋಟ ಅನಂತ ಸುಖ, ಕೂಟ ಪರಮ ಸುಖವಯ್ಯಾ,
ಅಷ್ಟಕೋಟಿ ರೋಮಂಗಳು ಕಂಗಾಳಾಗಿ ನೋಡುತ್ತಿದ್ದನು,
ಕೂಡಲ ಸಂಗಮದೇವಾ ನಿಮ್ಮ ನೋಡಿ ಮನದಲ್ಲಿ ರತಿ ಹುಟ್ಟಿ
ನಿಮಿರ್ದವೆನ್ನ ಕಂಗಳು".

ಹೀಗೆ ಬಸವಣ್ಣನು ಕೂಡಲ ಸಂಗಮದೇವನ ನೋಟ ಕೂಟಗಳನ್ನು ಸಾಕ್ಷಾತ್ತಾಗಿ ಅನುಭವಿಸಿ ಮನದಲ್ಲಿ ರತಿಹುಟ್ಟಿ ಅನಂತಸುಖ, ಪರಮಸುಖ ಪಡೆದನು.

ಶರಣ ಸತಿ ಲಿಂಗಪತಿ ಭಾವ ಹೊಂದಿದ ಅಕ್ಕಮಹಾದೇವಿಯು ದಿವ್ಯಸ್ವರೂಪ ನಾದ ಚನ್ನಮಲ್ಲಿಕಾರ್ಜುನನನ್ನು ಕಂಡುಕೊಳ್ಳುತ್ತಾಳೆ. ಮುಂದೆ ಹೋದಂತೆ ಸತಿ-ಪತಿ-ಭಾವ ಅಳಿದು ಸಮರಸ ಭಾವ ಹೊಂದಿ ತನ್ನ ತಾನು ಏನೆಂದರಿಯದ, ಹೇಳಲಿಕ್ಕೆ ಬಾರದ ಶಬ್ಧ ಮುಗ್ಧ ಸ್ಥಿತಿಯಲ್ಲಿ ಉಳಿದು ಬಿಡುತ್ತಾಳೆ.

"ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ,
ಆಯಿತ್ತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ, ಚೆನ್ನಮಲ್ಲಿಕಾರ್ಜುನನಲ್ಲಿ
ಲಿಂಗೈಕ್ಯವಾದ ಬಳಿಕ ಏನೂ ಅನ್ನೆ".

ಅಂಗಲಿಂಗ ಜೀವ ಶಿವನೆಂಬ ದ್ವೈತ ಭಾವದ ಸಾಧನೆಯು ಅದ್ವೈತದ ಐಕ್ಯಸ್ಥಲದಲ್ಲಿ ಮುಕ್ತಾಯವಾಗುತ್ತದೆ. ಆಗ ಎಲ್ಲವೂ ಸಚ್ಚಿದಾನಂದ ಮಹಾಸಾಗರವೇ. ಉಪ್ಪಿನ ಗೊಂಬೆ ಸಮುದ್ರವನ್ನು ಅಳೆಯಲು ಹೋದಂತೆ.

ಮಾತು ಮನಗಳ, ದೇಶಕಾಲಗಳ, ಆಚೆಗಿರುವ ನಿರುಪಾಧಿಕವಾದ ಪರಿಪೂರ್ಣವಾದ ಬಯಲಿಗೆ ಬಯಲಾದ ಚಿತ್‌ಘನ ಸ್ವರೂಪವಾದ ಅಚಿಂತ ತುರೀಯ ಅವಸ್ಥೆ ಐಕ್ಯನದು. ಇದರ ಪ್ರಾಪ್ತಿಯೇ ಇಂದ್ರಿಯ, ಮನ ಬುದ್ಧಿಗಳಿಗೆ ನಿಲುಕದ ಅಥವಾ ಶೂನ್ಯವೆನಿಸುವ ಶರಣರ ಶೂನ್ಯ ಸಂಪಾದನೆಯಾಗಿದೆ. ಯೋಗಿಗಳ ಅತಿಮಾನಸ ಅವಸ್ಥೆ ಹಾಗೂ ಬೌದ್ಧರ ನಿರ್ವಾಣ ಪ್ರಾಪ್ತಿ ಸಹ ಇದೇ ನಿಲುವನ್ನು ತೋರಿಸುತ್ತದೆ.

ನೀರಿನಲ್ಲಿ ನೀರು, ಹಾಲಿನಲ್ಲಿ ಹಾಲು, ಜ್ಯೋತಿಯಲ್ಲಿ ಜ್ಯೋತಿ, ಬಯಲಲ್ಲಿ ಬಯಲು ಬೆರಸಿದಂತೆ ನಿಜದಲ್ಲಿ ಬೆರಸಿ ಬೇರಿಲ್ಲದಂತೆ ಒಂದಾಗಿ ಮಹಾಲಿಂಗವಾದವನೇ ಐಕ್ಯನೆನಿಸುತ್ತಾನೆ. ಈ ಐಕ್ಯನು ಸರ್ವಾಂಗ ಲಿಂಗಮಯನಾದ ಸುಜ್ಞಾನಿಯೂ ಜನನ ಮರಣ ವಿರಹಿತನಾದ ನಿತ್ಯ ಮುಕ್ತನೂ ಆಗಿರುತ್ತಾನೆ. ನಿರಪೇಕ್ಷನಾದ ಸರ್ವಜೀವಿ ದಯಾಪರನೂ ಅಹುದು. "ಷಟ್‌ಸ್ಥಲ ಬ್ರಹ್ಮ"ಯೆನಿಸಿದ ನಿರಂಜನ ಪ್ರಣವ ಸ್ವರೂಪಿ ಇವನೇ.

ಅನುಭಾವದಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಯೋಗಿಯು ಧ್ಯಾನಾಸಕ್ತನಾಗಿ ತನ್ನ ಹೊರಗಿನ ಪ್ರಪಂಚವನ್ನು ಮರೆಯುತ್ತಾನೆ. ಮತ್ತು ಮಹಾಪ್ರಕಾಶವನ್ನು ಕಂಡು ಆನಂದವನ್ನು ಅನುಭವಿಸುತ್ತಾನೆ. ಎರಡನೆ ಹಂತದಲ್ಲಿ ಆತ್ಮವು ಪರಮಾತ್ಮನಲ್ಲಿ ಲೀನವಾದಂತೆ ಅನಿಸುತ್ತದೆ. ಇದನ್ನೇ ಶರಣರು ಬೆಳಕು ಬೆಳಕನ್ನು ಕೂಡಿದಂತೆ, ನದಿ ಸಮುದ್ರ ಬೆರೆತಂತೆ, ಶರಣಸತಿ–ಲಿಂಗಪತಿ ಒಂದಾದಂತೆ ವಗ್ಯೈರೆ ಹೋಲಿಕೆಗಳೊಂದಿಗೆ ವಿವರಿಸಿದ್ದಾರೆ. ಮೂರನೆ ಹಾಗೂ ಕೊನೆಯ ಹಂತದಲ್ಲಿ ಪರಮಾತ್ಮನಲ್ಲಿ ಲೀನವಾದ ಯೋಗಿಯು ಆತ್ಮಸ್ವಪ್ರಜ್ಞೆಯನ್ನೂ ಕಳೆದುಕೊಂಡು ಪರಮಾತ್ಮನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾನೆ. ಅಂದರೆ ಅವನು ಪರಶಿವನ ಪೂರ್ಣ ಅಧೀನಕ್ಕೊಳಗಾಗುತ್ತಾನೆ. ತಾನು ಯಾವ ರೀತಿಯಿಂದಲೂ ಸ್ವತಂತ್ರನಲ್ಲ, ತನಗೆ ತನ್ನತನವೇ ಇಲ್ಲ ಎಂದು ಭಾವಿಸಿದರೆ ಆಗ ಅವನು ನಿಜವಾದ ಐಕ್ಯ.

ಮಾನವ ವಿಕಾಸದಲ್ಲಿ ಹೃದಯ, ಭಾವ, ಆತ್ಮಗಳ ವಿಕಾಸವೇ ಚರಮ ಗುರಿ. ಪರಮ ಗುರಿ. ಅನೇಕದರಲ್ಲಿ ಏಕತೆಯನ್ನು ಕಾಣುವದೇ ಐಕ್ಯನ ಮುಖ್ಯ ಹೃದಯ. ರೂಪ, ಅನಂತವಾದರೂ ಸ್ವರೂಪ ಒಂದೇ. ದೇಹ ಅನೇಕವಾದರೂ ಆತ್ಮ ಒಂದೇ. ದೃಶ್ಯಗಳೂ ದೇಹಗಳೂ ಎಷ್ಟಿದ್ದರೇನು ? ದಿವ್ಯವಾದ ಚಿತ್‌ಚೈತನ್ಯ ಒಂದೇ" ಎಂದು ಜೀವನ ಸಿದ್ಧಾಂತಕಾರರು ವಿವರಿಸಿದ್ದಾರೆ.

ಷಟ್‌ಸ್ಥಲ ವಿವೇಚನೆ— ಆರು ಸ್ಥಲಗಳಲ್ಲಿ ಕಾಣುವ ಸಾಧಕನ ವಿಕಾಸದ ವಿವಿಧ ಹಂತಗಳನ್ನು ಏಕಕಾಲದಲ್ಲಿ ಕಂಡು ಅದರ ಪ್ರಮುಖ ನಿಲುವನ್ನು ಒಂದೊಂದು ಮಾತಿನಲ್ಲಿ ಗುರುತಿಸುತ್ತಾ ಇಡೀ ಷಟ್‌ಸ್ಥಲದ ಚಿತ್ರವನ್ನು ಒಟ್ಟಾಗಿ ಒಂದೇ ವಚನ ದಲ್ಲಿ ಚನ್ನಬಸವಣ್ಣ ಹೀಗೆ ನಿರ್ಣಯಿಸಿದ್ದಾನೆ.

> "ಭಕ್ತನಾದಡೆ ತನುಮನದ ಮೇಲಣಾಸೆಯುಳಿದುಳಿದಿರಬೇಕು,
> ಮಹೇಶ್ವರನಾದಡೆ, ಪರಧನ ಪರಸತಿಯಾಸೆಯುಳಿದುಳಿದಿರಬೇಕು,
> ಪ್ರಸಾದಿಯಾದಡೆ, ಪ್ರಸಾದವ ಕೊಂಡ ಕಾಯ ಅಳಿಯದುಳಿದಿರಬೇಕು,
> ಪ್ರಾಣಲಿಂಗಿಯಾದಡೆ ಸುಖದುಃಖಾದಿಗಳೆಲ್ಲ ಪ್ರಾಣಲಿಂಗದಲ್ಲಿ
> ಸುಸ್ಥಿರನಾಗಬೇಕು,
>
> ಶರಣನಾದಡೆ, ಸತಿಪತಿ ಭಾವವಳಿದುಳಿದಿರಬೇಕು,
> ಐಕ್ಯನಾದಡೆ ಬಯಲು ಬಯಲಾಗಿರಬೇಕು,
> ಕೂಡಲ ಚನ್ನಸಂಗಮ ದೇವರಲ್ಲಿ ಈ ಷಡಸ್ಥಳದ ನಿರ್ಣಯ
> ಸಾಧಕರಿಗಳವೆ ಪೂರ್ವ ಸಂಸ್ಕಾರದ ಸಹಜದೊಡೆಯರಿಗಲ್ಲದೇ ?"

ಇಲ್ಲಿರುವ ಒಂದೊಂದು ಮಾತನ್ನು ಬಿಡಿಸಿ ಹೇಳುವದು ಸಾಧ್ಯವಿಲ್ಲ. ಪ್ರತಿ ಮಾತಿನಲ್ಲಿಯೂ ಅಪಾರವಾದ ಅರ್ಥವಡಗಿದೆ. ಪೂರ್ವ ಸಂಸ್ಕಾರ ಹೊಂದಿದವರಿಗೆ ಮಾತ್ರ ಷಟ್‌ಸ್ಥಲ ನಿರ್ಣಯ ಸಾಧ್ಯ ಎಂದು ಹೇಳುತ್ತಾರೆ.

ಚನ್ನಬಸವಣ್ಣನು ಷಟ್‌ಸ್ಥಲಗಳನ್ನು ಗುರುಸ್ಥಲ, ಲಿಂಗಸ್ಥಲ ಮತ್ತು ಜಂಗಮ ಸ್ಥಲ ಎಂದು ವಿಂಗಡಿಸಿದ್ದಾನೆ. ಭಕ್ತಮಹೇಶ ಇವು ಗುರುಸ್ಥಲ. ಪ್ರಸಾದಿ ಪ್ರಾಣ ಲಿಂಗಿ ಇವು ಲಿಂಗಸ್ಥಲ. ಶರಣ ಐಕ್ಯ ಇವು ಜಂಗಮ ಸ್ಥಲ. ಭಕ್ತ ಮಹೇಶ ಪ್ರಸಾದಿ, ಇವು ಸಾಕಾರ ಸ್ಥಲಗಳೆಂದೂ, ಪ್ರಾಣಲಿಂಗಿ ಶರಣ ಮತ್ತು ಐಕ್ಯ ಇವು ನಿರಾಕಾರ ಸ್ಥಲಗಳೆಂದೂ ಚನ್ನ ಬಸವಣ್ಣ ಹೇಳಿದ್ದಾನೆ. ಇದಲ್ಲದೆ ಅವುಗಳನ್ನು ತ್ರಿವಿಧ ಸಂಪತ್ತುಗಳೆಂದು ಕರೆದಿದ್ದಾನೆ. ಮೊದಲಿನವು ಮೂರು ಕ್ರಿಯಾಪ್ರಧಾನ, ಉಳಿದ ಮೂರು ಜ್ಞಾನ ಪ್ರಧಾನವಾದವುಗಳು.

ಷಟ್‌ಸ್ಥಲ ಸಿದ್ಧಾಂತವು ಆಧ್ಯಾತ್ಮಿಕವೂ ಅಹುದು. ಸಾಮಾಜಿಕವೂ ಅಹುದು. ಷಟ್‌ಸ್ಥಲ ತತ್ವಗಳ ಅನುಷ್ಠಾನದಿಂದಲೇ ನವೀನ ಸಮಾಜದ ಉದಯ ಸಾಧ್ಯವೆಂದು ಬಸವಣ್ಣ ನಂಬಿದ್ದನು. ಗುರು, ಲಿಂಗ, ಜಂಗಮ, ಕಾಯಕ, ದಾಸೋಹ. ಈ ಮೊದಲಾದ ವಿಶ್ವ ವ್ಯಾಪಕ ತತ್ವಗಳನ್ನು ಸಂಗ್ರಹಿಸಿ ಸಂಪಾದಿಸಿ ವೀರಶೈವ ಸಂವಿಧಾನವನ್ನು ರಚಿಸುವ ಗುರುತರ ಹೊಣೆಗಾರಿಕೆಯನ್ನು ಚನ್ನಬಸವಣ್ಣನು ಹೊತ್ತುಕೊಂಡು ಬಹು ಯಶಸ್ವಿಯಾಗಿ ಅದನ್ನು ನಿರ್ವಹಿಸಿದನು. ವೀರಶೈವ ಸಂವಿಧಾನ–ಶಿಲ್ಪಿ ಚೆನ್ನ ಬಸವಣ್ಣ.

ಮಾನಸಿಕವಾಗಿ ಪರಮಾತ್ಮನೊಂದಿಗೆ ಅನುಸಂಧಾನ ಮಾಡುವ ಮಾರ್ಗವೇ ಷಟ್‌ಸ್ಥಲ ಮಾರ್ಗ. ಭಕ್ತಸಲದಿಂದ ಐಕ್ಯಸ್ಥಲದ ವರೆಗೆ ಕ್ರಿಯಾಜ್ಞಾನ ಸಾಮರಸ್ಯ ವಿರುತ್ತದೆ. ಜೀವನು ದೇವನಾಗುವ ಪಥವಿದೆ, ಆರೂ ಸ್ಥಲಗಳು ಸಮಾನವಾದವುಗಳು. ಒಂದನ್ನು ಸಾಧಿಸಿದ ನಂತರ ಇನ್ನೊಂದನ್ನು ಸಾಧಿಸಲೇಬೇಕೆಂಬ ನಿರ್ಬಂಧವಿಲ್ಲ ಯಾವ ಸ್ಥಲದಲ್ಲಿ ನಿಂತಾದರೂ ಉಳಿದ ಐದು ಸ್ಥಲಗಳನ್ನು ಸಾಧಿಸಬಹುದು. ಇದು ಸಾಧಕನ ಇಚ್ಛೆಗೆ ಸೇರಿದ ವಿಷಯ. ಅವನು ತನ್ನ ಮನೋಧರ್ಮಕ್ಕನುಸಾರವಾಗಿ ಸ್ಥಲಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಉದಾ— ಬಸವಣ್ಣ ಭಕ್ತಿಭಂಡಾರಿ. ಅವನು ಭಕ್ತಿ ಸ್ಥಲದಲ್ಲಿ ನಿಂತು ಉಳಿದ ಐದು ಸ್ಥಲಗಳನ್ನು ಸಾಧಿಸಿದನು. ಚೆನ್ನಬಸವಣ್ಣ ಮಹಾಪ್ರಸಾದಿ. ಅವನು ಪ್ರಸಾದಿ ಸ್ಥಲದಲ್ಲಿ ನಿಂತು ಉಳಿದ ಐದು ಸ್ಥಲಗಳನ್ನು ಸಾಧಿಸಿದನು.

ಹೀಗೆ ಷಟ್‌ಸ್ಥಲ ಸಿದ್ಧಾಂತವು ವೀರಶೈವ ತತ್ವಜ್ಞಾನದ ತಾಯಿ ಬೇರಾಗಿದೆ. ಲಿಂಗಾಂಗ ಸಾಮರಸ್ಯ ರೂಪವಾದ ಮುಕ್ತಿಯನ್ನು ಸಾಧಿಸಲು ಜೀವಾತ್ಮನು ಪಡೆಯಬೇಕಾದ ಒಂದು ಕ್ರಮದ ವ್ಯವಸ್ಥೆಯೇ ಷಟ್‌ಸ್ಥಲ ಸಿದ್ಧಾಂತ. ಷಟ್‌ಸ್ಥಲದ ಪರಿಕಲ್ಪನೆ ಜಗತ್ತಿನ ಆಧ್ಯಾತ್ಮಿಕ ಪ್ರಪಂಚಕ್ಕೆ ವೀರಶೈವರಿಂದ ಸಂದ ವಿಶಿಷ್ಟ ಕೊಡುಗೆ. ಈ ಪರಿಕಲ್ಪನೆ ಶಿವಾಗಮಗಳ ಕಾಲದಷ್ಟು ಹಳೆಯದಾದರೂ ಅದನ್ನು ಲೌಕಿಕದ ನೆಲೆಯಲ್ಲಿ ನಿರ್ಣಯಿಸಿಕೊಟ್ಟದ್ದು 12 ನೇ ಶತಮಾನದ ಶಿವ ಶರಣರ ಕಾಲ.

ಷಟ್‌ಸ್ಥಲ ಪಥವೇ ಆತ್ಮವಾಗಿರುವ ವೀರಶೈವ ಧರ್ಮಕ್ಕೆ ಅಷ್ಟಾವರಣಗಳು ಶರೀರವಾಗಿದ್ದರೆ ಪಂಚಾಚಾರಗಳು ಪ್ರಾಣಗಳಾಗಿವೆ. ಸರ್ವಾಂಗ ಪರಿಪೂರ್ಣವಾದ ಹಾಗೂ ವಿಶ್ವಧರ್ಮದ ಲಕ್ಷಣಗಳುಳ್ಳ ವೀರಶೈವ ಧರ್ಮ ಶಿವಶರಣರಿಂದ, ಆಧ್ಯಾತ್ಮ ಜ್ಯೋತಿಗಳಿಂದ ದಿವ್ಯಮಾನಸ ಸರೋವರದಲ್ಲಿ ಬೆಳಗುತ್ತಲಿದೆ.

೬. ಅನುಭಾವ

ವಚನ ಸಾಹಿತ್ಯದಲ್ಲಿ "ಅನುಭಾವ" ಎಂಬ ಶಬ್ಧ ಮೇಲಿಂದ ಮೇಲೆ ಉಪಯೋಗಿಸಲ್ಪಟ್ಟದ್ದು ಕಂಡು ಬರುತ್ತದೆ. "ಅನು" ಅಂದರೆ ಅನುಸರಿಸಿಕೊಂಡು "ಭೂ" ಅಂದರೆ ಭವತಿ ಆಗುವಿಕೆ. ಅನುಸರಿಸಿಕೊಂಡು ಆಗುವಿಕೆ (ಅನುಭವ) ಅಥವಾ ಅನುಸರಿಸಿಕೊಂಡು ಆಗಿಸುವಿಕೆ (ಅನುಭಾವ) ಎಂದು ಅರ್ಥವಾಗುತ್ತದೆ. ಅನುಭವ ಸ್ವಯಂ ವೇದ್ಯವಾದರೆ ಅನುಭಾವವು ಪರಪ್ರೇರಿತ. ಶಬ್ಧವನ್ನು ಅನುಸರಿಸಿಕೊಂಡು ಆಗುವದಕ್ಕೆ ಶಬ್ಧಾನುಭವವೆನ್ನುತ್ತಾರೆ. ಆತ್ಮವನ್ನು ಅನುಸಂಸಿಕೊಂಡು ಆಗುವದಕ್ಕೆ ಶಬ್ಧಾನುಭವವೆನ್ನುತ್ತಾರೆ. ಆತ್ಮವನ್ನು ಅನುಸರಿಸಿಕೊಂಡು ಆಗುವದಕ್ಕೆ ಆತ್ಮಾನುಭವವೆನ್ನುತ್ತಾರೆ.

ಅನುಭವ ಶಬ್ಧವು ಇಂಗ್ಲೀಷಿನಲ್ಲಿ Experience ಶಬ್ದಕ್ಕೆ ಮತ್ತು ಅನುಭಾವ ಇದು mysticism ಕ್ಕೆ ಸರಿಹೊಂದುತ್ತವೆ. ಅನುಭಾವ ಶಬ್ದಕ್ಕೆ ಘನತೆ, ಶಾಂತಿ ಎಂಬ ಅರ್ಥಗಳಿವೆ. ಪರಮಾತ್ಮನ ಅನುಸಂಧಾನದಿಂದ ಪ್ರಾಪ್ತವಾಗುವ ಶಾಂತಿ ಮತ್ತು ಘನತೆಗಳಿಂದ ಕೂಡಿದ ವ್ಯಕ್ತಿಯೇ ಅನುಭಾವಿ. ಅನುಭವವು ಕ್ಷಣಿಕ ಸುಖ ದುಃಖಗಳ ಮಿಶ್ರಣ. ಅನುಭಾವವು ನಿತ್ಯನಿರತಶಯ ಆನಂದ. ಅನುಭವ ಅವರವರ ಕರ್ಮಕ್ಕನುಸರಿಸಿ ತಾನಾಗಿಯೇ ಬರುತ್ತದೆ ಅನುಭಾವವು ಗುರುಕೃಪೆ, ಆಧ್ಯಾತ್ಮ ಸಾಧನೆಯ ಅಮೂಲ್ಯಫಲ. ಅದನ್ನು ಪಡೆದವರು ಧನ್ಯರು. ಅವರಿಗೆ ಶರಣರು, ಶಿವಯೋಗಿಗಳು ಅನ್ನುತ್ತಾರೆ. ಸತ್ಯದ ಜ್ಞಾನವೇ ಅನುಭಾವದ ಗುರಿ.

ಸಾಮಾನ್ಯವಾಗಿ ವಿಚಾರ ಪ್ರಾಣಿಯಾದ ಮನುಷ್ಯನು ತನ್ನ ಬುದ್ಧಿಶಕ್ತಿ ಅಥವಾ ವಿಚಾರ ಶಕ್ತಿಯನ್ನುಪಯೋಗಿಸಿ ಎಲ್ಲ ಕ್ಷೇತ್ರಗಳಲ್ಲಿ ಸತ್ಯದ ನೆಲೆಯನ್ನು ಕಂಡುಕೊಳ್ಳಬಯಸುತ್ತಾನೆ. ಇದೂ ಅಲ್ಲದೆ ಜೀವನದ ಹೋರಾಟ, ಹಂಬಲ, ಹವ್ಯಾಸಗಳ ಅನುಭವದಿಂದಲೂ ಪ್ರಾಯೋಗಿಕ ಜ್ಞಾನ ಸಂಪಾದಿಸಿ ಸತ್ಯದ ಯತಾರ್ಥ ಸ್ವರೂಪವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಸೃಷ್ಟಿ, ಸೃಷ್ಟಿಕರ್ತ, ಆತ್ಮ, ಪರಮಾತ್ಮನ ಸ್ವರೂಪ ಅರಿತು ನಿಜದಲ್ಲಿ ನೆಲೆಗೊಳ್ಳಲು ಇಂದ್ರಿಯ ಮನ, ಬುದ್ಧಿ, ಅನುಭಾವಗಳು ಅಸಮರ್ಥವಾಗುತ್ತವೆ. ಆಗ ಸತ್ಯಸ್ವರೂಪವನ್ನರಸುವ ಸಾಧಕನ ದೃಷ್ಟಿ ಅಂತರ್ಮುಖವಾಗುತ್ತದೆ. ದೀರ್ಘಕಾಲ ಧ್ಯಾನ ಸಾಧನೆ ಮಾಡುವದರಿಂದ ಚಿತ್ತದಲ್ಲಿ ದೃಢ ಅವಸ್ಥೆಯ ಅವತರಣವಾಗಿ ಅಂತರಂಗದಲ್ಲಿ ದಿವ್ಯ ಭಾವದ ಪರಿಪಾಕವುಂಟಾಗುತ್ತದೆ. ಹೃದಯದಲ್ಲಿ ಎಚ್ಚರಗೊಳ್ಳುವ ಈ ದಿವ್ಯ ಭಾವವೇ ಅನುಭಾವ ಅಥವಾ ಒಳಗಣ್ಣು. ಈ ಒಳಗಣ್ಣು ಕಲ್ಪನೆಯ ಕಣ್ಣಲ್ಲ, ಅಂತರಿಕ ಪ್ರತಿಭೆಯ ಕಣ್ಣು. ಸರ್ವ ಭೂತಗಳಲ್ಲಿ ಅಂತರ್ಯಾಮಿಯಾದ ಚೈತನ್ಯ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಲು ಶಿವರೂಪವಾಗಲು ಈ ಅನುಭಾವವು ಅಕ್ಷಯ ಸಂಪತ್ತು.

ಪಾರಮಾರ್ಥ ಪಥದಲ್ಲಿ ಮುನ್ನಡೆಯುವಾಗ ಪ್ರತಿಭೆಯ ಪ್ರಕಾಶದಿಂದ ಅಂತ ರಂಗದಲ್ಲಿ ಜನಿಸುವ ಅನುಭವವೇ ಅನುಭಾವ. ನಮ್ಮ ಸಾಮಾನ್ಯ ಅನುಭವವು ಇಂದ್ರಿಯಗಳಿಗೆ ಸಂಬಂಧಿಸಿದ್ದರೆ ಅನುಭಾವವು ಅತೀಂದ್ರಿಯವಾಗಿರುವದು. ವಾಕ್, ಮನ, ಬುದ್ಧಿಗಳಿಗೆ ಶೂನ್ಯವಾದ ಸಚ್ಚಿದಾನಂದಮಯವಾದ ಶೂನ್ಯ ಅಥವಾ ನಿರ್ಬೈಲನ್ನು ಹೊಂದುವದು ಶರಣರ ಆದರ್ಶ. ಇದುವೇ ಶೂನ್ಯ ಸಂಪಾದನೆ.

ವೀರಶೈವ ಸಾಹಿತ್ಯದಲ್ಲಿ ಅನುಭಾವ ಶಬ್ಧವು ಮುಖ್ಯವಾಗಿ ಎರಡು ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಂತೆ ಕಾಣುತ್ತದೆ. 12 ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಶಿವಾನುಭವ ಗೋಷ್ಠಿಗಳು ನಡೆಯುತ್ತಿದ್ದವು. ಇಂತಹ ಗೋಷ್ಠಿಗಳು ಕಾಲಕಾಲಕ್ಕೆ ನಡೆಯುತ್ತ ಬಂದು ಬಸವಣ್ಣನವರ ಕಾಲಕ್ಕೆ ಬೃಹತ್ ಪ್ರಮಾಣದಲ್ಲಿ ಅನುಭವ ಅಥವಾ ಅನುಭಾವ ಮಂಟಪವಾಗಿ ಪರಿಣಮಿಸಿದವೆಂಬುದು ಸಂಶೋಧಕರ ಅಭಿಪ್ರಾಯ.

ಅನುಭಾವವೆಂಬುದು ಜಗತ್ತಿನ ಧಾರ್ಮಿಕ ಸಾಹಿತ್ಯಕ್ಕೆ ಶಿವ ಶರಣರು ಕೊಟ್ಟ ವಿಶಿಷ್ಟ ಕೊಡುಗೆ. ಆತ್ಮ ಸಾಕ್ಷಾತ್ಕಾರದ ಅಥವಾ ಲಿಂಗಾಂಗ ಸಾಮರಸ್ಯದ ಪರಮೋತ್ಕೃಷ್ಟ ನಿಲುವು ಎಂಬ ಅರ್ಥದಲ್ಲಿ ಇದರ ವಿವಿಧ ಮುಖದ ವಿವೇಚನೆಗೈದವರು 12 ನೇ ಶತಮಾನದ ಶರಣ ಶರಣೆಯರು. ಉದಾಹರಣೆಗಾಗಿ ಅವರ ಕೆಲವು ವಚನಗಳನ್ನು ನೋಡಬಹುದು.

1. ಅನುಭಾವ ಅನುಭಾವವೆಂದೆಂಬಿರಿ,
ಅನುಭಾವವೆಂಬುದು ನೆಲದ ಮರೆಯ ವಿಧಾನ,
ಅನುಭಾವವೆಂಬುದು ಅಂತರಂಗದ ರತ್ನ,
ಅನುಭಾವವೆಂಬುದು ಶಿಶು ಕಂಡ ಕನಸು,
ಅನುಭಾವವೆಂಬುದು ರಚ್ಚೆಯ ಮಾತೇ ?
ಅನುಭಾವವೆಂಬುದು ಸಂತೆಯ ಸುದ್ದಿಯೇ ?
ಅನುಭಾವವೆಂಬುದು ಬೀದಿಯ ಪಸಾರವೇ ?
ಏನೆಂದೆ ಹೇಳಾ ಮಹಾಘನವನು ?

2. ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ
ಲಿಂಗಾನುಭವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲ ಸಂಗಮದೇವಾ

3. ಭಕ್ತಿಗೆ ಅನುಭಾವವೇ ಬೀಜ ಕಾಣಿರೋ
ಭಕ್ತಿಗೆ ಅನುಭಾವವೇ ಆಚಾರ ಕಾಣಿರೋ
ಅನುಭಾವವಿಲ್ಲದವನ ಭಕ್ತಿ ಎಳೆತಟಗೊಳಿಸಿತ್ತು

ಅನುಭಾವವ ಮಾಡುವಲ್ಲಿ ವಿನಯದಿಂದ
ಕೇಳದಿದ್ದಡೆ ಕೂಡಲ ಚೆನ್ನ ಸಂಗಯ್ಯ
ಘೋರನರಕದಲ್ಲಿಕ್ಕದೇ ಬಿಡುವನೇ ?

4. ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು
ಅನುಭಾವವಿಲ್ಲದ ಅಂಗ ಸಮರಸ ಸುಖವ ನೀಯದು
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು
ಅನುಭಾವವಿಲ್ಲದೇ ಏನನೂ ಅರಿಯಬಾರದು
ತನ್ನಲ್ಲಿ ತಾ ಸನ್ನಿಹಿತವುಳ್ಳರೆ ಶಿವ ಶರಣರ ಸಂಗ
ಏತಕ್ಕೆನಲುಂಟೆ ? ಕೂಡಲ ಸಂಗಮ ದೇವಯ್ಯ
ನಿಮ್ಮ ಅನುಭಾವವ ಮಾತಿನ ಮಥನವೆನಬಹುದೇ ?

5. ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭಾವದನುವಿನಲ್ಲಿ ಗುಹೇಶ್ವರಾ, ನಿಮ್ಮ ಶರಣ ಅನುಪಮ ಸುಖಿ''.

ಇವುಗಳಲ್ಲಿ ಬಂದಿರುವ ಅನುಭಾವದ ವಿವಿಧ ಅರ್ಥ ಸ್ತರಗಳನ್ನು ನೋಡಿದರೆ ಶರಣರ ಅನುಭಾವ ಮಾರ್ಗದ ಯಥಾರ್ಥ ಕಲ್ಪನೆ ಬರುವದು, ಅನುಭಾವವೇ ಭಕ್ತಿಗೆ ಅಧಾರ, ಇದು ಅಂತರಂಗದ ರತ್ನ. ಆತ್ಮ ವಿದ್ಯೆ. ಅನುಭಾವವೆಂದರೆ ತಾನು ಯಾರು ಎಂದು ಅರಿಯುವದು, ನಿಜ ನಿವಾಸದಲ್ಲಿರುವುದು. ಇದು ನುಡಿದು ಹೇಳಲಿಕ್ಕೆ ಬಾರದು. ಶಿಶು ಕಂಡ ಕನಸಿನಂತೆ. ಅನುಭಾವವೆಂಬುದು ಸಂತೆಯ ಸುದ್ದಿಯಲ್ಲ, ಬೀದಿಯ ಪ್ರಸಾರವಲ್ಲ. ರಚ್ಚೆಯ ಮಾತಂತೂ ಅಲ್ಲವೇ ಅಲ್ಲ. ಅದೊಂದು ಪವಿತ್ರವಾದ ಅಂತಃಪ್ರಜ್ಞೆ, ಅರಳಿದಾಗಿನ ಸೌಗಂಧವಿದ್ದಂತೆ. ಈ ಸ್ಥಿತಿಯೇ ಶರಣನ ಸ್ಥಿತಿ. ಅವನು ನಿದ್ರೆಗೈದರೆ ಜಪ, ಎಚ್ಚರವಿದ್ದರೆ ಶಿವರಾತ್ರಿ.

ಅನುಭಾವದ ಪರಮೋಚ್ಚವಾದ ಈ ಸ್ಥಿತಿಗೇರಬೇಕಾದರೆ ಷಟ್‌ಸ್ಥಲಗಳು ಒಂದು ರೀತಿಯಲ್ಲಿ ಆರು ಸೋಪಾನಗಳೇ ಆಗಿವೆ. ಇದರ ಇಂಗಿತವನ್ನು ಪ್ರತಿಯೊಬ್ಬ ಶರಣ ಒಂದಿಲ್ಲೊಂದು ರೀತಿಯಲ್ಲಿ ಆಚರಿಸಿ ಸ್ವಾನುಭವಕ್ಕೆ ತಂದುಕೊಂಡು ತನ್ನ ವಚನಗಳ ಮೂಲಕ ವ್ಯಕ್ತ ಪಡಿಸಿದ್ದಾನೆ. ಆಯಾ ಹಂತದಲ್ಲಿ ಅವನು ಪೂರ್ಣಾನು ಭವವಿಯೇ ಆಗಿರುತ್ತಾನೆ. ಯಾಕಂದರೆ ಪ್ರತಿಯೊಂದು ಸ್ಥಲವೂ ಸ್ವಯಂಪೂರ್ಣ ವಾಗಿದೆ. ಒಟ್ಟಾರೆ ಅನುಭಾವವೆಂದರೆ ಅರಿವು ಆಚರಣೆಗಳ ಸಮನ್ವಯದ ಫಲಶೃತಿ.

ಅನುಭಾವದಿಂದ ಶರಣನ ತನು, ಮನ, ಧನ, ಭಾವ, ಜ್ಞಾನಗಳೆಲ್ಲಾ ನಷ್ಟವಾಗಿ ತಾನು ಲಿಂಗವೇ ಆಗಿ ಕಂಗೊಳಿಸುತ್ತಾನೆ. ''ಅರಿವಿನೊಳಗೆ ಅರಿದುದಿಲ್ಲ, ಮರಹಿನೊಳಗೆ ಮರೆದುದಿಲ್ಲ ಎಂತಿರ್ದರಂತೆ ಬ್ರಹ್ಮ'' ಎನ್ನುವ ಸ್ಥಿತಿ ಬರುತ್ತದೆ. ಪುಷ್ಪ ನುಂಗಿದ ಪರಿಮಳದಂತಾಗುತ್ತಾನೆ.

ಪ್ರಪಂಚದ ಹಿರಿಯ ಅನುಭಾವಿಗಳಲ್ಲಿ ಕನ್ನಡ ಅನುಭಾವಿಗಳು ತುಂಬ ಮೇಲ್ತರಗತಿಯ ಸ್ಥಾನವನ್ನು ಆಕ್ರಮಿಸಿಕೊಂಡಿರುವವರು. ಶ್ರೀ ನಿಜಗುಣ ಶಿವಯೋಗಿ, ಶ್ರೀ ಸರ್ಪಭೂಷಣ ಶಿವಯೋಗಿ, ತೋಂಟದ ಶ್ರೀ ಸಿದ್ಧಲಿಂಗ ಶಿವಯೋಗಿ, ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿ ಮುಂತಾದವರು. ಅದರಂತೆ ಪುರಂದರದಾಸ, ಕನಕದಾಸ, ವಿಜಯದಾಸ, ಜಗನ್ನಾಥ ದಾಸ, ಮುಂತಾದವರ ದಾಸಕೂಟ. ಹಾಗೆಯೇ ಬಸವಾದಿ ಪ್ರಮಥರೂ ಜಗದ್ವಂದ್ಯರಾಗಿರುವ ಅನುಭಾವಿಗಳೇ ಎನ್ನುವದರಲ್ಲಿ ಸಂಶಯವಿಲ್ಲ.

ಚನ್ನ ಬಸವಣ್ಣನವರು ಅನುಭಾವ ಮಾಡಬೇಕಾದುದರ ಬಗ್ಗೆ ಕಟ್ಟಳೆಯನ್ನು ಹಾಕಿದ್ದಾರೆ.

''ಕಂಡ ಕಂಡಲ್ಲಿ ಗೋಷ್ಠಿ, ನಿಂದ ನಿಂದಲ್ಲಿ, ಬಂದ ಬಂದಲ್ಲಿ,
ಅನಭಾವವ ಮಾಡುವ ಘಾತಕರ ನೆನಗೊಮ್ಮೆ ತೋರದಿರಯ್ಯ ಕೂಡಲ
ಚನ್ನ ಸಂಗಮ ದೇವಾ" ಎಂದು ಅನುಭಾವದಂತಹ

ತಾತ್ವಿಕ ಚರ್ಚೆಗಳನ್ನು ಸಾರ್ವಜನಿಕ ವಿಷಯವಾಗಿ ಮಾಡಬಾರದು. ಸಾರ್ವಜನಿಕರ ಗೊಂದಲವಿಲ್ಲದ ಸ್ಥಳದಲ್ಲಿ ಅನುಭಾವ ಮಾಡಬೇಕು.

ವರ್ಣಾಶ್ರಮ ಧರ್ಮದಲ್ಲಿ ಬ್ರಾಹ್ಮಣರು ಮಾತ್ರ ಜ್ಞಾನಕ್ಕೆ ಅರ್ಹರು, ಶೂದ್ರರು ಅನರ್ಹರು ಎಂದು ತಿಳಿದಿದ್ದರು. ಈ ವಿಧಿಯನ್ನು ಶಿವ ಶರಣರು ತಿರಸ್ಕರಿಸಿದರು. ಬ್ರಾಹ್ಮಣ ಆದಿಯಾಗಿ ಅಂತ್ಯಜ ಕೊನೆಯಾಗಿ ಎಲ್ಲರೂ ಬ್ರಹ್ಮ ಜ್ಞಾನಕ್ಕೆ ಅರ್ಹರು ಎಂದು ಘೋಷಿಸಿದರು. ಶಿವಾನುಭವದಲ್ಲಿ ಶೂದ್ರರು ಅತಿ ಶೂದ್ರರು ಕೂಡ ಪಾಲ್ಗೊಂಡರು.

ಮುತ್ತು ನೀರೊಳಗೆ ಹುಟ್ಟಿ, ಮರಳಿ ಹೇಗೆ ನೀರಾಗುವದಿಲ್ಲವೋ ಹಾಗೆ ಸಂಸಾರದಲ್ಲಿ ಮುಳುಗಿ ಹೋಗದೆ ಸ್ವಯಂಪ್ರಕಾಶದ ಬೆಳಕಿನಲ್ಲಿ ಬೆಳೆದು ತಲ್ಲೀನವಾಗುವುದೇ ಅನುಭಾವದ ನುಡಿ.

ಹೀಗೆ ಕರ್ನಾಟಕದ ಅನುಭಾವದ ಐಸಿರಿಯು ಸಮೃದ್ಧವೂ, ಪ್ರಬುದ್ಧವೂ ಆಗಿರುವುದಲ್ಲದೇ ದೇಶ ಮತ್ತು ಕಾಲಾತೀತವಾಗಿದೆ.

೭. ಇತರ ಯೋಗಗಳು

ಭಗವದ್ಗೀತೆಯಲ್ಲಿ "ಯೋಗ" ಎಂಬ ಶಬ್ಧಕ್ಕೆ ವ್ಯಾಪಕವಾದ ಅರ್ಥವನ್ನು ಸೂಚಿಸಲಾಗಿದೆ. ಕರ್ಮ, ಜ್ಞಾನ, ಭಕ್ತಿಗಳ ತ್ರಿವೇಣಿ ಸಂಗಮವನ್ನು ಅಲ್ಲಿ ಕಾಣಬಹುದು. ಆದರೆ ಶಿವಸಂಹಿತೆ, ಶಿವಾಗಮಗಳು ಮುಂತಾದ ಶೈವಪರ ಗ್ರಂಥಗಳಲ್ಲಿ ಯೋಗದ ವಿವರಣೆ ಕೊಡುವಾಗ ಶಿವಯೋಗ, ಎಂಬ ಪದ ಧಾರಾಳವಾಗಿ ಬಳಸಲ್ಪಟ್ಟಿದೆ. ವೀರಶೈವ ಮತವನ್ನು ಅನುಸರಿಸುವವನಿಗೆ ಜ್ಞಾನ ಮತ್ತು ಶಿವಯೋಗಗಳು ಮುಕ್ತಿಗೆ ಸಾಧನಗಳು ಎಂದು ಆ ಗ್ರಂಥಗಳು ಹೇಳುತ್ತವೆ. ಭಕ್ತಿ, ವೈರಾಗ್ಯ, ಅಭ್ಯಾಸ, ಧ್ಯಾನ, ಏಕಾಂತವಾಸ, ಭಿಕ್ಷಾಟನ, ಲಿಂಗಪೂಜೆ—ಸ್ಮರಣ ಎಂಬ ಅಷ್ಟಾಂಗ ಯೋಗಗಳನ್ನು ಅನುಸರಿಸುವವನು ಶಿವಯೋಗಿ ಎನಿಸುತ್ತಾನೆ ಎಂದು ಆಗಮಗಳು ವಿವರಿಸುತ್ತವೆ. ಶಿವಸಾಕ್ಷಾತ್ಕಾರ ಪಡೆಯುವದು ಆಗಮ ಕಾಲದ ಶಿವಯೋಗಿಗಳ ಧ್ಯೇಯವಾಗಿತ್ತು. ಜ್ಞಾನ ಮತ್ತು ಯೋಗ ಸಿದ್ಧಿಗಾಗಿ ಅವರು ಜಪ, ತಪ, ಕರ್ಮ, ಧ್ಯಾನ, ಜ್ಞಾನ ಇವುಗಳ ಸಾಧನೆಯಲ್ಲಿ ತೊಡಗುತ್ತಿದ್ದರು.

ಚಿತ್ತವೃತ್ತಿಯನ್ನು ನಿರೋಧಗೊಳಿಸುವುದೇ ಯೋಗ ಎಂಬುದು ಪತಂಜಲಿ ಸಿದ್ಧಾಂತ. ಮನಸ್ಸನ್ನು ಸ್ಥಿರಗೊಳಿಸಿ ಅದನ್ನು ಪರಮಾತ್ಮನ ಅರ್ಚನೆ ಧ್ಯಾನಗಳಲ್ಲಿ ತೊಡಗಿಸುವದು ಮುಕ್ತಿ ಮಾರ್ಗಕ್ಕೆ ಪ್ರಥಮ ಉಪಾಯ. ವಿವಿಧ ಯೋಗಗಳ ಗುರಿ ಒಂದೇ.

ಪ್ರಾಚೀನ ಋಷಿಗಳ ಪ್ರಕಾರ ಮಂತ್ರಯೋಗ, ಲಯಯೋಗ, ಹಠಯೋಗ ಮತ್ತು ರಾಜಯೋಗಗಳು ಪ್ರಾಚೀನ ಯೋಗಗಳು ಇವು ಅನುಕ್ರಮವಾಗಿ ಶರೀರ, ಪ್ರಾಣ, ಮನ ಮತ್ತು ಬುದ್ಧಿಗಳನ್ನು ಶುದ್ಧಗೊಳಿಸಿ ಅವುಗಳಲ್ಲಡಗಿದ್ದ ಅಸಾಧಾರಣ ಶಕ್ತಿಯನ್ನು ಸ್ವತಂತ್ರವಾಗಿ ಪ್ರಕಟಗೊಳಿಸುತ್ತವೆ.

(i) **ಮಂತ್ರಯೋಗ—** ಮಂತ್ರಯೋಗವನ್ನು ಸ್ತ್ರೀ—ಪುರುಷರೆಲ್ಲರೂ ಮಾಡಬಹುದು. ಸದ್ಗುರುವಿನಿಂದ ಪಂಚಾಕ್ಷರಿ ಮಂತ್ರವನ್ನಾಗಲಿ, ಷಡಕ್ಷರಿ ಮಂತ್ರವನ್ನಾಗಲಿ ಅಥವಾ ಗಾಯತ್ರಿ ಮಂತ್ರವನ್ನಾಗಲಿ ಪಡೆದು ಅದನ್ನು ಏಕಾಗ್ರ ಚಿತ್ತದಿಂದ ಜಪಿಸಬೇಕು. ಅದಕ್ಕೂ ಮೊದಲು ಮನಸ್ಸನ್ನು ಸಂಪೂರ್ಣ ಬರಿದಾಗಿ ಮಾಡಿಕೊಂಡಿರಬೇಕು ಮತ್ತು ಇಷ್ಟ ದೇವರನ್ನು ನಿರ್ಧಿಷ್ಟ ಆಕಾರದಲ್ಲಿ ಹೃದಯದಲ್ಲಿ ಧಾರಣ ಮಾಡಿಕೊಂಡಿರಬೇಕು. ಎಲ್ಲಾ ಬಾಹ್ಯ ವೃತ್ತಿಗಳನ್ನು ನಿರೋಧಿಸಿ ಶುದ್ಧ ಭಾವದಿಂದ ಗುರುಹೇಳಿಕೊಟ್ಟ ಮಂತ್ರವನ್ನು ಜಪಿಸಬೇಕು.

ಮಂತ್ರಯೋಗಕ್ಕೆ ಪ್ರಾಣಾಯಾಮದ ಸಹಕಾರ ಅವಶ್ಯವಿದೆ. ಮೊದಲು ಅಶುದ್ಧ ವಾಯುವನ್ನು ಮೂಗಿನ ಮುಖಾಂತರ ಹೊರಗೆ ಬಿಡಬೇಕು. ನಂತರ ಶುದ್ಧ ಪ್ರಾಣವಾಯುವನ್ನು ನಿಧಾನವಾಗಿ ಒಳಗೆ ತೆಗೆದುಕೊಳ್ಳಬೇಕು. ಆಮೇಲೆ ಅದನ್ನು ನಿಲ್ಲಿಸಬೇಕು. ಹೀಗೆ ನಿಲ್ಲಿಸುವದರಿಂದ ಪ್ರಾಣ ಶಕ್ತಿ ಬೆಳೆಯುತ್ತದೆ. ಪ್ರಾಣ ಶಕ್ತಿಯನ್ನು ಬೆಳೆಸಿಕೊಳ್ಳುವದರಿಂದ ಹೃದಯ ವಿಕಾರ ಬರುವದಿಲ್ಲ ಮತ್ತು ರಕ್ತದ ಒತ್ತಡವನ್ನು ಸಮತೋಲನದಲ್ಲಿ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಶ್ವಾಸೋಚ್ಛ್ವಾಸದ ನಿಯಮಿತ ವೇಳೆ ಹಾಗೂ ಕ್ರಮ ಬದ್ಧತೆಯ ಬಗ್ಗೆ ಪೂರ್ವಭಾವಿ ಜ್ಞಾನ ಪಡೆಯುವದು ಒಳ್ಳೆಯದು.

ಮಂತ್ರಯೋಗಕ್ಕಾಗಿ ಏಕಾಂತ ಸ್ಥಲ ಆರಿಸಿಕೊಳ್ಳಬೇಕು. ಮಂತ್ರ ಯೋಗಿಯು ವಾಯು ಶುದ್ಧಿಯ ಜೊತೆಗೆ ನಾಮರೂಪಾತ್ಮಕ ಉಪಾಸ್ಯದೇವತೆಯಲ್ಲಿ ಮಗ್ನನಾಗಿ ಪರಮಾನಂದ ಸ್ವರೂಪಿಯಾದ ಪರಮಾತ್ಮನಲ್ಲಿ ಒಂದಾಗುತ್ತಾನೆ.

(ii) ಲಯಯೋಗ— ಮಂತ್ರ ಧ್ಯಾನದ ನಾದದಲ್ಲಿ ಮನವನ್ನು ಲಯಗೊಳಿಸುವ ವಿಧಾನವೇ ಲಯಯೋಗವೆನಿಸುವದು. ಮೊದಲು ಮನಸ್ಸಿನ ಸಮಾಧಾನ ಶಾಂತಿಯನ್ನು ಸಾಧಿಸಿದರೆ ಲಯಯೋಗ ಸಾಧಿಸುವದು ಸುಲಭವಾಗುವದು. ಆ ಮೇಲೆ ಪರಮಾತ್ಮನ ಅನುಗ್ರಹವನ್ನು ಹೊಂದಲು ಮಂತ್ರವನ್ನು ಜಪಿಸಬೇಕು. ನಂತರ ಹೃದಯದಲ್ಲಿ ಬಂದು ಪ್ರಕಾಶವನ್ನು ಕಂಡು ಧ್ಯಾನಿಸುತ್ತಾ ವಿವಿಧ ನಾದಗಳನ್ನು ಕೇಳಿ ಶಂಭುಲಿಂಗನ ಧ್ಯಾನವನ್ನು ಮಾಡಿ ಪರಬ್ರಹ್ಮನೊಡನೆ ಸಮರಸವಾಗಿ ಆನಂದ ಹೊಂದಿದರೆ ಅವನೇ ಮುಕ್ತನಾಗುವನು. ಇಂಥವನು ಲಯಯೋಗವನ್ನು ಅಳವಡಿಸಿಕೊಳ್ಳುವನು.

(iii) ಹಠಯೋಗ— ಹಠದಿಂದ ಸಾಧಿಸುವ ಯೋಗವೇ ಹಠಯೋಗವೆನಿಸುವದು. ಹಠಯೋಗದ ಅಭ್ಯಾಸದಿಂದ ತಮೋಗುಣಾದಿ ದೋಷಗಳು ನಾಶವಾಗಿ ಸಮ್ಯಗಜ್ಞಾನವುಂಟಾಗುತ್ತದೆ. ಸಮ್ಯಗಜ್ಞಾನದಿಂದ ಶಿವತತ್ವ ಅಭಿವ್ಯಕ್ತ ರೂಪವಾದ ನಿಜಯೋಗ ಉಂಟಾಗುತ್ತದೆ. ಶರೀರದಲ್ಲಿ ವಾತ, ಪಿತ್ತ, ಕಫಗಳ ವಿಷಮ ಸ್ಥಿತಿಯಿಂದ ಶಾರೀರಕ ರೋಗ ಬಾಧೆಯಾಗುವದು. ಬಾಧೆಗಳು ನಾಶವಾದಾಗ ಸಮ್ಯಗಜ್ಞಾನವಾಗುವದು. ನಿಜಯೋಗ ಪ್ರಾಪ್ತವಾಗುವದು ಎಂದು ಹೇಳುತ್ತಾರೆ.

ಹಠಯೋಗದಲ್ಲಿ ಅಷ್ಟಾಂಗಗಳ ಯಮ, ನಿಯಮ, ಆಸನ, ಪ್ರಾಣಯಾಮ ಪ್ರತ್ಯಾಹಾರಗಳು ಸಮಾವೇಶಗೊಳ್ಳುತ್ತವೆ. ಈ ಐದು ಯೋಗಾಂಗಗಳಿಂದ ಶರೀರವು ಕೃಶವಾಗಿ ಸುಂದರವಾಗುವದು. ಮುಖದಲ್ಲಿ ಕಾಂತಿಯುಂಟಾಗಿ ಪ್ರಸನ್ನತೆಯು

ಕಾಣಿಸುವದು. ವಾಣಿಯು ಸ್ಫುಟವಾಗುವದು. ಕಣ್ಣುಗಳು ನಿರ್ಮಲವಾಗುತ್ತವೆ. ಅಂಧತ್ವ ಇದ್ದರೆ ನಾಶವಾಗುವದು. ನಿರೋಗಿಯಾಗುವನು. "ಬಿಂದುಜಯ" ಸಿದ್ಧಿಸುವದು. ಪಚನಶಕ್ತಿ ಬಲಿಷ್ಠವಾಗುತ್ತದೆ. ನಾಡಿಗಳ ವಿಶುದ್ಧಿಯಾಗುವದು. ನಾಥ ಸಂಪ್ರದಾಯದ ಗೋರಕ್ಷನಾಥನು ಹಠಯೋಗ ಸಾಧನೆಯಿಂದ ಕಾಯವನ್ನು ವಜ್ರಕಾಯವನ್ನಾಗಿ ಮಾಡಿಕೊಂಡ ಇತಿಹಾಸ ತಿಳಿದು ಬರುತ್ತದೆ. ಅಂದರೆ ಹಠ ಯೋಗವೇ ಕೊನೆಯದಲ್ಲ ''ಕಾಯ ಬಲಿದರೆ ವಾಯು ಬಲಿಯುವದು'' ವಜ್ರಕಾಯ ನೆಂಬ ಅಹಂಕಾರ ಅಳಿಯಲಿಲ್ಲ. ಅಹಂಕಾರದಿಂದ ಚಿರಶಾಂತಿ ಲಭಿಸುವದಿಲ್ಲ. ಚಿತ್ತ ವೃತ್ತಿಗಳು, ನಿವೃತ್ತಿಯಾಗದಿರುವಾಗ ನಿಷ್ಪತ್ತಿಗೊಳ್ಳುವದಂತೂ ದೂರ ಉಳಿಯಿತು. ಶಿವಯೋಗ ಸಂಪನ್ನನಾದ ವ್ಯೋಮ ಕಾಯನಾದ ಅಲ್ಲಮ ಪ್ರಭುವಿನಿಂದ ಗೋರಕ್ಷನು ಸೋಲನ್ನಪ್ಪಿದ ಸಂಗತಿ ಪ್ರಭುಲಿಂಗ ಲೀಲೆಯಲ್ಲಿ ಬಂದಿದೆ.

(iv) **ರಾಜಯೋಗ**— ಹಠಯೋಗದಿಂದ ಶರೀರ ಶುದ್ಧಿಯಾದರೆ ಲಯ ಯೋಗದಿಂದ ಪ್ರಾಣಶುದ್ಧಿಯಾಗುವದು, ಮಂತ್ರಯೋಗದಿಂದ ಮನದ ಶುದ್ಧಿ ಯಾಗುವದು. ರಾಜಯೋಗದಿಂದ ಶರೀರ ಪ್ರಾಣಮನಗಳಿಗೆ ರಾಜನಾದ ಜೀವನ ಶುದ್ಧಿಯಾಗುವದು. ರಾಜಯೋಗದಲ್ಲಿ ಮಾನಸಿಕವಾದ ಹಾಗೂ ಆಂತರಿಕವಾದ ಭಾವನೆಯನ್ನು ಪರಿಶುದ್ಧಿಗೊಳಿಸಿ ಜೀವಾತ್ಮನನ್ನು ಮುಕ್ತಿ ಮಾರ್ಗದತ್ತ ಕಳಿಸುವ ಶಕ್ತಿಯಿಂದೆ.

ಎಲ್ಲಾ ಯೋಗಗಳಲ್ಲಿ ಶ್ರೇಷ್ಠವಾದುದು ರಾಜಯೋಗವು. ರಾಜಯೋಗ ಮಾಡುವವನು ಸುಖಕರವಾದ ಆಸನ, ಶರೀರದ ಸರಳತೆ, ಇಂದ್ರಿಯ ನಿಗ್ರಹ, ವಾಯು, ಮನಸ್ಸು ಹಾಗೂ ದೃಷ್ಟಿಗಳ ಒಂದುಗೂಡುವಿಕೆ ಇವುಗಳನ್ನು ಅಳವಡಿಸಿಕೊಂಡರೆ ಪರತರ ಮುಕ್ತಿ ಸಾಧಿಸುವನು. ಅಲ್ಲದೇ ಅವನು ಅಂತರ್ಲಕ್ಷ್ಯ, ಬಹಿರ್ಲಕ್ಷ್ಯ ಹಾಗೂ ಮಧ್ಯಲಕ್ಷ್ಯ ಇವುಗಳನ್ನು ಒಂದುಗೂಡಿಸಲು ಕಲಿತುಕೊಂಡರೆ ಅವನಿಗೆ ಬ್ರಹ್ಮ ಸಾಕ್ಷಾ ತ್ಕಾರ ಸುಲಭವಾಗುತ್ತದೆ ಎಂದು ಹೇಳುತ್ತಾರೆ.

ರಾಜನೆಂದರೆ ಚಂದ್ರ, ರಾಜಯೋಗವೆಂದರೆ ಚಂದ್ರಯೋಗ, ಪತಂಜಲಿಯೋಗ ಸೂತ್ರವು ರಾಜಯೋಗದ ರಹಸ್ಯವನ್ನು ಬೋಧಿಸುತ್ತದೆ. ಧ್ಯಾನ ಮಾಡುವ ಕ್ರಿಯೆ ಧ್ಯಾನ ಮಾಡುವವನಲ್ಲಿ ಅಡಗಿ ಅವನು ಸಮಾಧಿ ಸ್ಥಿತಿ ತಲುಪಿದಾಗ ಯಾವುದರ ಅರಿವೂ ನಿಲ್ಲದೆ ರಾಜಯೋಗದ ಫಲ ದೊರೆಯುತ್ತದೆ.

(v) **ಪೂರ್ಣಯೋಗ**— ಅರವಿಂದರು ಆಧುನಿಕ ಮಹರ್ಷಿಗಳೆನಿಸಿದ್ದಾರೆ. ಯೋಗ ಪರಂಪರೆಯಲ್ಲಿ ಅವರಿಗೆ ವಿಶಿಷ್ಟ ಸ್ಥಾನವಿದೆ. ಅವರದು ಪೂರ್ಣಯೋಗವೆಂದು ಹೆಸರು ಪಡೆದಿದೆ.

ಮಾನವನಲ್ಲಿ ವಿಶ್ವವ್ಯಾಪಕವಾದ ಮತ್ತು ಜಾಗ್ರತವಾದ ಮಹಾ ಚೈತನ್ಯದ ಅಂಶವನ್ನು ಅವರು ಕಂಡರು. ಮಾನವ ಅನೇಕ ಗುಣಗಳ ಸಮೂಹವಾಗಿದ್ದು ಪ್ರಕೃತಿಯ ಸರ್ವಸ್ತರಗಳೂ ಅವನಲ್ಲಿ ನೆಲೆಸಿರುತ್ತವೆ. ಸೃಷ್ಟಿಯ ಸಕಲ ಧಾರೆಗಳೂ ಅವನೊಳಗೆ ಹರಿಯುತ್ತವೆ.

ಅರವಿಂದರು ಶೋಧಿಸಿದ ಉತ್ಕ್ರಾಂತಿಗತಿಯಲ್ಲಿ ಮನುಷ್ಯನಲ್ಲಿಯ ಪಶುಭಾವವು ಮನುಷ್ಯ ಭಾವವಾಗಿ, ಮನುಷ್ಯ ಭಾವವು ದೇವ ಭಾವವಾಗಿ ಕ್ರಮದಿಂದ ಮೇಲೇರುವದು. ಹೀಗೆ ಪಶು ಭಾವದಿಂದ ದೇವ ಭಾವಕ್ಕೆ ಒಯ್ಯಲು ಸಮರ್ಥವಾದ ಶಕ್ತಿಯೇ ಯೋಗ ಶಕ್ತಿಯೆಂದು ಅವರು ಪ್ರತಿಪಾದಿಸಿದರು.

ಸ್ಥೂಲ ಶರೀರ ಹಾಗೂ ಪ್ರಾಣ ಶಕ್ತಿಗಳನ್ನು ಕೇಂದ್ರವಾಗಿಟ್ಟುಕೊಂಡು ಅದರೊಳಗೆ ಪರಮಾತ್ಮನ ಸ್ಪರ್ಶವನ್ನು ಅನುಭವಿಸುವದೆ ಹಠಯೋಗದ ಉದ್ದೇಶವೆಂದರು. ಜ್ಞಾನ ಭಕ್ತಿ ಕರ್ಮ ಯೋಗಗಳು, ಜ್ಞಾನ ಪ್ರೇಮ ಕರ್ಮ ಪ್ರವೃತ್ತಿಗಳಾಗಿ ಒಂದನ್ನೊಂದು ಆಶ್ರಯಿಸಿ ಮನುಷ್ಯನನ್ನು ದೇವ ಭಾವಕ್ಕೆ ತಲುಪಿಸುತ್ತವೆ ಎಂಬುದು ಅವರ ಸಿದ್ಧಾಂತ.

ಅರವಿಂದರು ವೀರಶೈವರ ಶಿವಯೋಗದ ನಿಲುವನ್ನು ಅರಿತಿದ್ದರೆ— ಬಹುಶಃ ಪೂರ್ಣಯೋಗವನ್ನು ಇನ್ನಷ್ಟು ಸುಲಭವಾಗಿ ಪ್ರತಿಪಾದಿಸಬಹುದಿತ್ತು. ಭಗವದ್ಗೀತೆಯಲ್ಲಿ ಹೇಳಿದ ಯೋಗದ ಹಿನ್ನೆಲೆಯಲ್ಲಿ ಅರವಿಂದರ ಪೂರ್ಣಯೋಗದ ಸ್ವರೂಪವನ್ನು ಅರಿಯಬೇಕಾಗಿದೆ.

"ಶರೀರ ಮಾಧ್ಯಂ ಖಲು ಧರ್ಮ ಸಾಧನಂ" ಅಂದರೆ ಧರ್ಮಸಾಧನೆಯಲ್ಲಿ ಶರೀರವೇ ಪ್ರಥಮ ಸಾಧನವು. ಶಾರೀರಿಕ ಆರೋಗ್ಯ, ಮಾನಸಿಕ ಶಾಂತಿ ಹಾಗೂ ಈಶ್ವರ ಸಾಕ್ಷಾತ್ಕಾರಗಳನ್ನು ಪಡೆಯುವಲ್ಲಿ ಯೋಗ ಸಾಧನ ಮಹತ್ವದ ಪಾತ್ರ ಹೊಂದಿದೆ. ಎಲ್ಲ ಯೋಗಗಳು ಒಂದಕ್ಕೊಂದು ಪೂರಕವಾಗಿವೆ. ಸಾಧಕನ ಸಾಧನೆಯ ಸಾಮರ್ಥ್ಯದ ಮೇಲೆ ಸಾಧನೆ ನಡೆಯುತ್ತದೆ. ಯೋಗ ಸಾಧನೆಯಲ್ಲಿ ಹಠಯೋಗವು ಪೂರ್ವ ರಂಗವಾದರೆ ರಾಜಯೋಗವು ಉತ್ತರ ಭೂಮಿಯಾಗಿದೆ. ಇನ್ನು ಲಯ ಮತ್ತು ಮಂತ್ರ ಯೋಗಗಳು ರಾಜಯೋಗಕ್ಕೆ ಪೋಷಕವಾಗಿವೆ. ಶಿವಯೋಗವು ಈ ನಾಲ್ಕನ್ನೂ ಆಕ್ರಮಿಸಿ ಮೇಲಿರುವ ಸಹಜ ಯೋಗವೆನಿಸಿದೆ. ಅದು ಚಂದ್ರರ ಯೋಗವೆನಿಸಿದೆ.

೮. ಶಿವಯೋಗ

ವೀರಶೈವ ಧರ್ಮ ಅನಾದಿ. ಇದು ಓರ್ವ ವ್ಯಕ್ತಿಯಿಂದ ಆರಂಭವಾದ ಧರ್ಮವಲ್ಲ. ಶಿವನೇ ಈ ಧರ್ಮಕ್ಕೆ ಮೂಲ. ಅನಂತರ ಬಂದ ಆಚಾರ್ಯರು, ಬಸವಾದಿ ಪ್ರಮಥರು ಮತ್ತು ಆಗಾಗ ಈ ಧರ್ಮದ ಉದ್ಧಾರಕ್ಕಾಗಿ ಉದಯಿಸಿದ ಶಿವಯೋಗಿಗಳು, ಈ ಧರ್ಮವನ್ನು ಪೋಷಿಸಿಕೊಂಡು ರಕ್ಷಿಸಿಕೊಂಡು ಬಂದರು. ಧರ್ಮವೂ ಅವರನ್ನು ರಕ್ಷಿಸಿತು.

"ಯುಜಿ'' ಧಾತುವಿನಿಂದ ''ಯೋಗ'' ಶಬ್ದ ಹುಟ್ಟಿದೆ. ಎರಡಾದರೂ ವಸ್ತುಗಳು ಕೂಡಬೇಕೆಂಬ ಸೂಚನೆ ಯೋಗಪದದಲ್ಲಿದೆ. ಶಿವನೊಡನೆ ಕೂಡಿಕೊಂಡಿರುವ ನಿಲುವನ್ನು ಶಿವಯೋಗ ತಿಳಿಸುತ್ತದೆ.

ಬಸವಾದಿ ವೀರಶೈವ ವಚನಕಾರರಲ್ಲಿ ಪ್ರತಿಪಾದಿತ ಯೋಗವನ್ನು ಸಾಮಾನ್ಯವಾಗಿ ''ಶಿವಯೋಗ" ಎಂದು ಕರೆಯುವದು ರೂಢಿಯಲ್ಲಿದ್ದರೂ ಶೈವಪರ ಗ್ರಂಥಗಳಲ್ಲಿ ಬರುವ ಶಿವಯೋಗಕ್ಕಿಂತ ಹಲವಂಗಳಲ್ಲಿ ಅದು ಭಿನ್ನವಾಗಿರುವುದರಿಂದ ಅದನ್ನು ಲಿಂಗಾಂಗ ಯೋಗ ರೂಪದ ಶಿವಯೋಗ ಎಂದು ಕರೆಯುವದು ಹೆಚ್ಚು ಸಮಂಜಸವೆನಿಸುತ್ತದೆ. ಒಟ್ಟಿನ ಮೇಲೆ ಶಿವಯೋಗಿಗಳ ಮತ್ತು ಶಿವಶರಣರ ಅನುಭಾವದ ಆಳ ಅಗಲಗಳು ಹೆಚ್ಚುತ್ತಾ ಹೋದಂತೆ ಶಿವಯೋಗವು ಪ್ರಗತಿಪರವಾಗುತ್ತಾ ನಡೆದಿರುವದು ಸ್ಪಷ್ಟವಾಗುತ್ತದೆ. ವೀರಶೈವ ಶಿವಯೋಗಿಗಳು ಹಿಂದಿನ ಯೋಗಿಗಳ ಅನುಭವವನ್ನು ತಮ್ಮ ಅನುಭವದ ಒರೆಗಲ್ಲಿಗೆ ತಿಕ್ಕಿ ತಮ್ಮ ಧ್ಯೇಯೋದ್ದೇಶಗಳಿಗೆ ಅನುಗುಣವಾದುದನ್ನು ಮಾತ್ರ ಸ್ವೀಕರಿಸಿ ಅದಕ್ಕೆ ತಮ್ಮ ಸಿದ್ಧಾಂತಕ್ಕನುಗುಣವಾಗಿ ಅರ್ಥಯಿಸಿ ಅವಶ್ಯಕವಾದವುಗಳನ್ನು ಹೊಸದಾಗಿ ಸೇರಿಸಿ ತಮ್ಮ ಶಿವಯೋಗಕ್ಕೆ ಒಂದು ಬಗೆಯ ಪರಿಪೂರ್ಣತೆ ತರಲು ಪ್ರಯತ್ನಿಸಿರುವುದನ್ನು ನೋಡಬಹುದು.

ಶಿವಯೋಗ ಸಾಧನೆಯ ಮೊದಲ ಕ್ರಮ ಎಂದರೆ ಇಷ್ಟಲಿಂಗ ಪೂಜೆ, ಕಾಯದ ಅನಿಷ್ಟ ನಿವಾರಣೆಗಾಗಿ ಇಷ್ಟಲಿಂಗ ಪೂಜೆ ಅತ್ಯಗತ್ಯ. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಪೂಜೆ ಏಕಾರ್ಥದಲ್ಲಿ ಶಿವಯೋಗವಾಗಿದೆ. ಶಿವಯೋಗದಲ್ಲಿ ಭಕ್ತಿ, ಜ್ಞಾನ, ಕ್ರಿಯೆಗಳ ಸಮನ್ವಯವಿದೆ. ಲಿಂಗಾರ್ಚನೆಯ ಮೂಲಕ ಶಿವತತ್ವದೊಡನೆ ಸಂಬಂಧ ಸಾಮರಸ್ಯಗಳುಂಟಾಗುತ್ತವೆ. ಪ್ರಪಂಚವು ಶಿವರೂಪವೆಂದು ಕಂಡುಕೊಂಡು ಆ ಶಿವನನ್ನು ತನ್ನ ಅಂತರಂಗದಲ್ಲಿ ಅನುಭವಿಸಿ ಕೊನೆಗೆ ತಾನೇ ಶಿವನಾಗಿ ಪರಿಣಮಿಸುವ ಅನುಭಾವ ಮಾರ್ಗವು ಶಿವಯೋಗವು. ಬುದ್ಧಿ ಭಾವಗಳ, ಸಮನ್ವಯವುಂಟಾಗಿ ಶಿವಭಾವದಿಂದ ಅನನ್ಯವಾಗಿ ಶಿವನಲ್ಲಿ ಬೆರೆಯುವದು ಶಿವಯೋಗವು. ಶಿವಭಕ್ತಿ,

ಶಿವಜ್ಞಾನ, ಶಿವಧ್ಯಾನ, ಶಿವವ್ರತ, ಶಿವಪೂಜೆಗಳ ನಿತ್ಯ ಅನುಷ್ಠಾನವೇ ಶಿವಯೋಗವು. ಎಡಹಸ್ತದ ಅಂಗೈಯಲ್ಲಿ ಇಷ್ಟಲಿಂಗವ ಭದ್ರಪಡಿಸಿ ಇಂದ್ರಿಯ ವ್ಯಾಪಾರ ನಿಲ್ಲಿಸಿ ಪ್ರಾಣಾಯಾಮದಿಂದ ಶ್ವಾಸೋಚ್ಛ್ವಾಸ ಸರಿ ಪಡಿಸಿ ಮನವನ್ನು ಒಂದು ಮಾಡಿ ಸ್ಥೂಲದೃಷ್ಟಿಯನ್ನು ಇಷ್ಟಲಿಂಗದಲ್ಲಿ, ಸೂಕ್ಷ್ಮ ದೃಷ್ಟಿಯನ್ನು ಪ್ರಾಣಲಿಂಗದಲ್ಲಿ, ಭಾವದೃಷ್ಟಿಯನ್ನು ಭಾವಲಿಂಗದಲ್ಲಿರಿಸಿ ಲಿಂಗದೊಳು ಕೂಡಿ ಲಿಂಗತ್ರಯವನ್ನು ಏಕಾಕಾರಗೊಳಿಸಿ ಲಿಂಗಸ್ವರೂಪವೇ ತಾನಾಗುವದು ಶಿವಯೋಗ.

ಶಿವಶಕ್ತಿಗಳ ಅವಿನಾಭಾವ ಸಂಬಂಧವನ್ನು ಶಿವಯೋಗಿಗಳು ಕಾಣುತ್ತಾರೆ. ಇದು ಲಿಂಗಾಂಗ ಸಾಮರಸ್ಯ. ಷಟ್‌ಸ್ಥಲವು ಶರಣರ ಸಾಧನ ಪಥವಾದರೆ, ಶಿವ ಯೋಗವು ಅದರ ಪರಮ ಸಿದ್ಧಿಯಾಗಿರುತ್ತದೆ. ಶಿವಯೋಗವನ್ನು ಅವಲಂಬಿಸಿದವರಿಗೆ ಮಾತ್ರ ಹಠ ಮೊದಲಾದ ಯಾವ ಯೋಗಗಳ ಅವಶ್ಯಕತೆಯೂ ಇಲ್ಲ. ಪ್ರಾಣ ಲಿಂಗಾನುಸಂಧಾನವೇ ಶಿವಯೋಗಿಯ ಅತ್ಯಂತಿಕ ಗುರಿ. ತನು, ಮನ, ಭಾವಗಳು ಬಯಲಾಗಿ ಕೂಡಲ ಚೆನ್ನ ಸಂಗಯ್ಯನೆಂಬ ನುಡಿಯೂ ಅಡಗುವುದು ಶಿವಯೋಗದಲ್ಲಿ. ಶಿವಯೋಗ ಸಾಧನೆಯಿಂದ ತಲುಪುವ ನಿರವಯ ಸ್ಥಿತಿಯು ಶಬ್ದ ಜಾಲದಲ್ಲಿ ಸಿಲು ಕುವಂತಹುದಲ್ಲ.

ಯೋಗವಿಲ್ಲದ ಜ್ಞಾನ, ಜ್ಞಾನವಿಲ್ಲದ ಯೋಗ, ಯೋಗ ಜ್ಞಾನಗಳೆರಡೂ ಇಲ್ಲದ ಜೀವನ ವ್ಯರ್ಥ. ವೈರಾಗ್ಯದಿಂದ ಜ್ಞಾನವೂ, ಜ್ಞಾನದಿಂದ ಯೋಗವೂ ಪ್ರಾಪ್ತವಾಗುತ್ತದೆ. ಯೋಗ ಶೈವನು ಅಷ್ಟಾಂಗಗಳನ್ನು ಅನುಸರಿಸಬೇಕು. ಭಕ್ತಿ, ವೈರಾಗ್ಯ, ಅಭ್ಯಾಸ, ಧ್ಯಾನ, ಏಕಾಂತವಾಸ, ಭಿಕ್ಷಾಟನೆ, ಲಿಂಗಪೂಜೆ, ಸ್ಮರಣ ಇವೇ ಆ ಅಷ್ಟಾಂಗಗಳು. ವೀರಶೈವನು ಜ್ಞಾನಯೋಗ ಸಿದ್ಧಿಗಾಗಿ ಅಂತಶ್ಶುದ್ಧಿ ಬಹಿಶ್ಶುದ್ಧಿಗಳನ್ನು ಸಂಪಾದಿಸಿ ಕರ್ಮಬಂಧನಗಳನ್ನು ಕಳಚಿಕೊಳ್ಳಬೇಕು. ಅದಕ್ಕಾಗಿ ಅವನು ತಪ, ಕರ್ಮ, ಜಪ, ಜ್ಞಾನ, ಧ್ಯಾನ, ಎಂಬ ಐದು ಬಗೆಯ ಸಾಧನಗಳ ಮೂಲಕ ತನ್ನ ಆತ್ಯಂತಿಕ ಉದ್ದೇಶವಾದ ಸರ್ವಯೋಗ ಪ್ರದ ಶಿವಸಾಯುಜ್ಯವನ್ನು ಈಡೇರಿಸಿಕೊಳ್ಳುವುದು ವೀರಶೈವನಿಗೆ ಇಷ್ಟವಾಗಿರುತ್ತಿದ್ದುದರಿಂದ ಇದಕ್ಕೋಸುಗ ಅವನು ಆರಾಧಿಸುತ್ತಿದ್ದ ಲಿಂಗವೇ ಇಷ್ಟಲಿಂಗವೆನಿಸುತ್ತಿತ್ತು. ಈ ಆರಾಧನೆ ಅವನಿಗೆ ಪ್ರಾಣದಷ್ಟು ಪ್ರಿಯವಾದುದರಿಂದ ಅದುವೇ ಅವನಿಗೆ ಪ್ರಾಣಲಿಂಗವಾಗಿಯೂ ತೋರುತ್ತಿತ್ತು. ಇಂತಹ ಶಿವಯೋಗಗಳನ್ನು ಅವರವರ ಯೋಗ್ಯತೆ ಆಧ್ಯಾತ್ಮಿಕ ನಿಲುವಿಗನುಗುಣವಾಗಿ ಅವಧೂತ, ಸನ್ಯಾಸಿ, ಯೋಗಿ, ಪಾಶುಪತಿ, ಶಿವ, ಲಿಂಗಿ, ವೀರ, ವೀರಶೈವ, ಮಹಾಮಹೇಶ್ವರ ಯತಿ, ಈ ಮುಂತಾದ ಹೆಸರುಗಳಿಂದ ಕರೆಯು ತ್ತಿದ್ದಂತೆ ಪಾರಮೇಶ್ವರ ತಂತ್ರದಲ್ಲಿ ಹೇಳಲಾಗಿದೆ.

ವೀರಶೈವರಿಗೆಲ್ಲ ಶಿವಪೂಜೆಯೇ ಶಿವಯೋಗವಾಗಿತ್ತು. ಶಿವ ಸೃಷ್ಟಿ ಜೀವರುಗಳು ಬಗೆಗಿನ ತತ್ವಜ್ಞಾನವೇ ಅವರಿಗೆ ಜ್ಞಾನವಾಗಿಯೂ ಶಿವಲಿಂಗಾಚರಣೆಯೇ ಚರ್ಯೆ, ಪೂಜಾ, ವೈಭವರೂಪವಾದ ಕ್ರಿಯೆಯೇ ಕ್ರಿಯೆಯೂ ಆಗಿರುತ್ತದೆ. ಶಿವಯೋಗಿಯು ಅಮರನಾಗಿರುವುದರಿಂದ ಅವನ ಶರೀರಕ್ಕೆ ಎಂದೂ ಕೇಡು ಸಂಭವಿಸುವುದಿಲ್ಲ.

ಯಾವುದೇ ತತ್ವ ಸಿದ್ಧಾಂತ ಸಾರ್ಥಕವಾಗಬೇಕಾದರೆ ಸಾಧಕರ ಆಚರಣೆಯಿಂದ ಅದು ಜೀವಂತಿಕೆಯನ್ನು ಪಡೆಯಬೇಕು. ಷಟ್‌ಸ್ಥಲ ಮಾರ್ಗ ಅಂತಹ ಸಾಧಕನ ಚೈತನ್ಯದಿಂದ ಶ್ರೀಮಂತವಾಗಿದೆ. ಏಕಕಾಲಕ್ಕೆ ವಿಭಿನ್ನ ಮನೋಧರ್ಮದ ನೂರಾರು ಸಾಧಕರು ನಡೆದು ಆ ಮಾರ್ಗವನ್ನು ಅನುಭಾವದ ಉಜ್ವಲ ಪ್ರಭೆಯಿಂದ ಬೆಳಗಿದ್ದಾರೆ.

ಯೋಗ ಮಾರ್ಗದಲ್ಲಿ ಮಂತ್ರ, ಲಯ, ಹಠ, ರಾಜಯೋಗಗಳು ಮುಖ್ಯವಾದ ನಾಲ್ಕು ಯೋಗಗಳು. ಆದರೆ ಶ್ರೀಕೃಷ್ಣನು ಅರ್ಜುನನಿಗೆ ಗೀತೆಯಲ್ಲಿ ಬೋಧಿಸಿದ ಯೋಗಗಳು ಹಲವಾರು. ಎಲ್ಲ ಯೋಗಗಳಲ್ಲಿ ರಾಜಯೋಗವು ಮಿಗಿಲೆನಿಸಿದರೆ ಅವೆಲ್ಲವೂಗಳಿಗೂ ರಾರಾಜಿಸುವ ಯೋಗವು ಲಿಂಗಯೋಗ ಅಥವಾ ಶಿವಯೋಗವಾಗಿದೆ. ಇದರಲ್ಲಿ ಎಲ್ಲ ಯೋಗಗಳ ಸಾರ ಅಡಕವಾಗಿದೆ. ಅಂತೆಯೇ ಶಿವಯೋಗವನ್ನು ಯೋಗರಾಜವೆಂದು ಬಣ್ಣಿಸಿದ್ದಾರೆ. ಶಿವಯೋಗದಲ್ಲಿ ಮಂತ್ರಾದಿ ನಾಲ್ಕು ಯೋಗಗಳು ಕರ್ಮ, ಭಕ್ತಿ, ಜ್ಞಾನ, ಯೋಗಗಳು ಮುಪ್ಪುರಿಗೊಂಡು ಶೋಭಿಸುವ ಶಿವಯೋಗವು ಶಿವಭಕ್ತನನ್ನು ಮುಕ್ತನನ್ನಾಗಿಸುವದು. ಶಿವಯೋಗ ಸಾಧಿಸಿದ ಮೇಲೆ ಪುನರ್ಜನ್ಮವಿಲ್ಲ, ಕರ್ಮದ ತೊಡಕಿಲ್ಲ, ಭವಬಂಧನದ ಸೋಂಕಿಲ್ಲ.

ಮಾನವನು ಶಿವಲಿಂಗದ ಸಂಪರ್ಕದಿಂದ ಶಿವಮಯನಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಶಿವನು ತನ್ನ ಸೃಷ್ಟಿಯಲ್ಲಿ ಅನಂತ ಉಪದೇಶವನ್ನು ತುಂಬಿರಿಸಿದ್ದಾನೆ. ಅದನ್ನು ತಿಳಿದುಕೊಳ್ಳುವ ಅಂತರ್‌ದೃಷ್ಟಿಯು ನಮ್ಮಲ್ಲಿ ಬೆಳೆದು ಬಂದರೆ ನಾವು ನಿಜವಾಗಿಯೂ ಸುಜ್ಞಾನಿಗಳಾಗುತ್ತೇವೆ. ಇಂಥ ಅಂತರ್ದರ್ಶನ ಮಾಡಿಸುವವನೇ ಗುರುವು. ಅರಿವನ್ನು ಕುರುಹನ್ನಾಗಿ ಕರುಣಿಸಿ ಅರಿವುಳ್ಳವನನ್ನಾಗಿಸುವನು. ಲಿಂಗದ ನೆಲೆಕಲೆಗಳನ್ನು ಅಳವಡಿಸಿಕೊಂಡರೆ ಲಿಂಗವೇ ತಾನಾಗುವದರಲ್ಲಿ ಯಾವ ನ್ಯೂನ್ಯತೆಯೂ ಇರದು.

ಲಿಂಗ ಭಕ್ತನು ಲಿಂಗಾಂಗಮಯನಾಗಲು ಲಿಂಗ ಪೂಜೆಯೇ ಸಾಧನ. ಲಿಂಗ ಪೂಜೆಯೇ ಶಿವಯೋಗವೆಂದು ಚನ್ನಕವಿಗಳು ಹೇಳಿದ್ದಾರೆ. ಲಿಂಗವಿಲ್ಲದೇ ಮಾಡುವ ಕ್ರಿಯೆಗಳು ಜಡ ಕರ್ಮಗಳಾಗುತ್ತವೆ. ಜ್ಞಾನ ಪರಿಪೂರ್ಣವಾಗುವದಿಲ್ಲ. ಲಿಂಗ

ಪೂಜೆಯಲ್ಲಿ ಸಮ್ಯಕ್ ಜ್ಞಾನವುಳ್ಳವನಾಗಿ ಸತ್ಕ್ರಿಯೆ ಮಾಡುತ್ತಿರುವುದರಿಂದ ಕರ್ಮವು ಜಡವಾಗಲಿ ಬಂಧನಕಾರಿಯಾಗಲಿ ಆಗುವದಿಲ್ಲ. ಇಲ್ಲಿ ಯಾವ ಫಲಾಪೇಕ್ಷೆಯಾಗಲಿ ಇರುವದಿಲ್ಲ. ಆದರೂ ಅಷ್ಟಾವರಣದ ಪ್ರತ್ಯಕ್ಷ ಫಲಗಳೆನಿಸಿದ ಪಾದೋದಕ ಪ್ರಸಾದ ಗಳು ಕೈಮೇಲೆಯೇ ದೊರೆಯುವವು. ಕರ್ಮವನ್ನು ಕರ್ತವ್ಯ ದೃಷ್ಟಿಯಿಂದ ಮಾಡು. ಫಲದ ಮೇಲೆ ನಿನಗೆ ಅಧಿಕಾರವಿಲ್ಲ ಎಂದು ಗೀತೆ ಹೇಳಿದರೆ ಶರಣ ಸಿದ್ಧಾಂತ ಕೂಡಲ ಸಂಗಮ ದೇವರನ್ನು ಪೂಜಿಸಿದ ಫಲ ಕೈಯಮೇಲೆ ಎಂದು ಹೇಳುತ್ತಾರೆ. ಪ್ರಾತಃ ಕಾಲದ ಶಿವನಾಮ ಸ್ಮರಣೆ ಅನಂತ ಸಮಸ್ಯೆಗಳನ್ನು ಪರಿಹರಿಸುವದಲ್ಲದೆ ಭವ ಭಯ ವನ್ನೇ ನಿವಾರಿಸುವದು. ಹೊತ್ತಾರೆ ಎದ್ದು ಲಿಂಗವ ನೆನೆದರೆ ಅಪಮೃತ್ಯುಗಳು ಕಾಲ ಕರ್ಮಂಗಳು ತಪ್ಪುವವು "ಎಂದಿದ್ದಾರೆ ಪ್ರಮಥರು.

ಶಿವಯೋಗ ಮಾಡುವವನ ಸರ್ವಾಂಗವೂ ಲಿಂಗಮಯವಾಗುತ್ತದೆ. ಪರುಷ ಮಯವೆನಿಸುತ್ತದೆ. ಸುಜ್ಞಾನ ಸತ್ಕ್ರಿಯೆಗಳ ಸಂಗಮವೇ ಶಿವಯೋಗ ಸಿದ್ಧಿಗೆ ಕಾರಣವಾಗುವದು. ಶಿವಯೋಗದಿಂದ ಪದಾರ್ಥ ಕಾಯವು ಪ್ರಸಾದ ಕಾಯೆವೆನಿಸು ವದು. ಪರಿಪೂರ್ಣವೆನಿಸುವದು. ಶಿವಪೂಜೆ ಮಾಡುವ ಶಿವಯೋಗಾನಂದದಲ್ಲಿ ಮಗ್ನರಾಗುವ ಶರಣರು ಕೈಲಾಸವನ್ನು ಬಯಸಲಿಲ್ಲ. ಕಾಮಧೇನು ಕಲ್ಪವೃಕ್ಷವನ್ನು ಬಯಸಲಿಲ್ಲ. ಯಾಕಂದರೆ ಅವರಿದ್ದ ಠಾವೇ ದೇವಲೋಕ. ಅವರ ಲಿಂಗ ವಾರಣಾಸಿ ಅವರ ಕಾಯವೇ ಕೈಲಾಸ. ಇದನ್ನರಿತೇ ಬಸವಣ್ಣನವರು ಬ್ರಹ್ಮ ಪದವಿ, ವಿಷ್ಣು ಪದವಿ, ರುದ್ರ ಪದವಿ, ಮತ್ತಾವ ಪದವಿಯೂ ಬೇಡವೆಂದರು. ಶರಣ ಪದವಿಯೇ ಘನವಾದುದು. ಅದು ಸಾಕು ಎಂದರು. ಶಿವಪೂಜೆ ಮಾಡುವವರ ಇಚ್ಛೆ ಮತ್ತು ಯೋಗ್ಯತೆಗಳಿಗನುಗುಣವಾಗಿ ಪರಮಾತ್ಮನು ತಕ್ಕ ಫಲ ಕೊಡುತ್ತಾನೆ. ಆದರೆ ಶಿವ ಶರಣರು ಶಿವನ ಹಂಗನ್ನೇ ಹರಿದಿರುತ್ತಾರೆ. ನಿನ್ನನ್ನು ನಾವು ಏನನ್ನೂ ಬೇಡುವದಿಲ್ಲ ವೆನ್ನುತ್ತಾರೆ.

ಕೇವಲ ಪುಣ್ಯ ವಿಶೇಷದಿಂದ ಲಭ್ಯವಾಗುವ ಮೋಕ್ಷವು ದೇಹ ತ್ಯಾಗದ ನಂತರ ಪ್ರಾಪ್ತವಾದರೂ ಪ್ರಯೋಜನವಿಲ್ಲ. ಅಂದರೆ ಶರಣನು ಜೀವವಿರುವಾಗಲೇ ಪ್ರತಿನಿತ್ಯ ಮುಕ್ತನಾಗುವನು. ಐಕ್ಯ ಸ್ಥಿತಿಯನ್ನು ಮುಟ್ಟಿದವನಿಗೆ ಹಿಂದಿನ ಯಾವ ಕರ್ಮ ಗಳೂ ಉಳಿದಿರುವುದಿಲ್ಲ. ಈಗ ಅವನಿಗೆ ಯಾವ ಸ್ವಾರ್ಥ ಆಸೆಗಳೂ ಇಲ್ಲವಾದುದ ರಿಂದ ಅವನಿಗೆ ಪುನರ್ಜನ್ಮವೂ ಇಲ್ಲ. ಅವನು ಪರಶಿವನೊಂದಿಗೆ ಆಗಲೇ ಐಕ್ಯವಾಗಿ ರುವುದರಿಂದ ಅವನು ಜೀವನ್ಮುಕ್ತ. ವೀರಶೈವರು ಪ್ರಕಾರ ಮುಕ್ತಿ (ಅಂದರೆ ಲಿಂಗಾಂಗ ಸಾಮರಸ್ಯ) ಪಡೆಯುವದು ಸತ್ತ ನಂತರ ಅಥವಾ ಬೇರೆ ಲೋಕದಲ್ಲಿ

ಅಲ್ಲ, ಅವನ್ನು ಪಡೆಯುವದು ಈ ಲೋಕದಲ್ಲೇ ಹಾಗೂ ಜೀವಂತವಾಗಿಯೇ ಪಡೆಯುತ್ತಾನೆ.

ಭಕ್ತಿ ಭಾವದ ಪರಾಕಾಷ್ಠೆಯ ತಂಪಿನಿಂದ ನಿರಾಕಾರ ಸ್ವರೂಪನಾದ ಶಿವನು ಸಾಕಾರ ಸ್ವರೂಪ ಧರಿಸಬಲ್ಲ. ಪ್ರತ್ಯಕ್ಷನಾಗಿ ಒಡನುಡಿಯಬಲ್ಲ. ಭಕ್ತರು ಬಯಸಿದುದನ್ನು ತಂದೀಯಬಲ್ಲ ಉನ್ನತ ಅಥವಾ ಸಿದ್ಧಾವಸ್ಥೆಯ ಸಾಧಕ ಸತ್ಪುರುಷರ ಜೀವನ ಪ್ರಸಂಗಗಳೇ ಇದಕ್ಕೆ ನಿದರ್ಶನ. ಶಿವ ಶರಣರು ಸಾಧು ಸಂತರು, ಶ್ರೀ ರಾಮಕೃಷ್ಣ ಪರಮ ಹಂಸರು, ಮಹರ್ಷಿ ಅರವಿಂದರು ಮುಂತಾದ ಮಹಾ ಪುರುಷರು ದೇವ ದೇವಿಯರನ್ನು ಪ್ರತ್ಯಕ್ಷ ಕಂಡು ಸಂಭಾಷಿಸಿದ ಉದಾಹರಣೆಗಳುಂಟು.

ಅಕ್ಕ ಮಹಾದೇವಿಯು ''ಸರ್ವಂ ಲಿಂಗಮಯಂ'' ಎಂಬ ಅದ್ವೈತಾನುಭವ ಪಡೆದು ''ತನ್ನ ತಾನರಿದು ತಾನಾದಡೆ ಚನ್ನಮಲ್ಲಿಕಾರ್ಜುನ ತಾನೇ ಬೇರಿಲ್ಲ'' ಎಂದು ಸಾರಿದಳು. "ಅರಿವು ನಿಮ್ಮಲ್ಲಿ ಸ್ವಾಯವಾದ ಬಳಿಕ ನಾನಾರನರಿವೆ ? ಚೆನ್ನ ಮಲ್ಲಿಕಾರ್ಜುನ ನಿಮ್ಮಲ್ಲಿ ನೀವಾಗಿ ನಿಮ್ಮಿಂದ ನಿಮ್ಮ ಮರೆದನಯ್ಯ" ಎಂದುಸುರವಲ್ಲಿ ತನ್ನ ಆತ್ಯಂತಿಕ ಆತ್ಮ ಸಿದ್ಧಿಯ ಸ್ವರೂಪವನ್ನೇ ಅರುಹಿರುವಳು. ಇದು ಅವಳು ಶಿವಯೋಗದಲ್ಲಿ ಪರಿಪೂರ್ಣತೆ ಸಾಧಿಸಿದ್ದನ್ನು ತೋರಿಸುತ್ತದೆ.

೯. ಶರಣರು ಸಾರಿದ ಧರ್ಮ

ವಚನ ಸಾಹಿತ್ಯಕ್ಕೂ ಉಪನಿಷತ್ ಸಾಹಿತ್ಯಕ್ಕೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಸಿದ್ಧ ಸಾಧಕ ಋಷಿಗಳೂ, ಮಹರ್ಷಿಗಳೂ ಉಪನಿಷತ್ ಕರ್ತೃಗಳಾಗಿದ್ದರೆ ಮಹಾ ಅನುಭಾವಿಗಳಾದ ಶಿವ-ಶರಣರು ವಚನ ಸಾಹಿತ್ಯ ನಿರ್ಮಾಪಕರಾಗಿದ್ದಾರೆ. ಇಬ್ಬರೂ ಆತ್ಮ ಜಿಜ್ಞಾಸೆ ಮಾಡಿಕೊಂಡು ತಮ್ಮ ತಮ್ಮ ಉದಾತ್ತ ಜೀವನದ ಧರ್ಮ ಬೋಧೆಗಳಿಂದ ಮಾನವನ ಅಂತರಂಗ ಪರಿಶುದ್ಧತೆಗೆ ಪ್ರಯತ್ನ ಪಟ್ಟಿದ್ದಾರೆ. ಆದರೆ ವಚನ ಸಾಹಿತ್ಯ ಒಂದು ಹೆಜ್ಜೆ ಮುಂದೆ ಹೋಗಿ ಆತ್ಮಜ್ಞಾನ ಸಂಪಾದಿಸ ಲಿಕ್ಕೆ ಸ್ತ್ರೀ-ಪುರುಷರ ಭೇದವಿಲ್ಲ, ಸ್ತ್ರೀಯರು ಹಾಗೂ ಶೂದ್ರರೂ ಸಹಿತ ಆದರಿಂದ ಮೋಕ್ಷ ಪಡೆಯಬಹುದು ಎಂದು ಹೇಳುತ್ತಾರೆ. ಇನ್ನೊಂದು ವ್ಯತ್ಯಾಸವೆಂದರೆ ವಚನಕಾರರು ಸ್ವತಂತ್ರವಾಗಿ ಸತ್ಯ ಶೋಧನೆಗೆ ಪ್ರಯತ್ನ ಪಟ್ಟಿದ್ದಾರೆ. ಆದ್ದರಿಂದ ವಚನ ಸಾಹಿತ್ಯದಿಂದ ವಿವಿಧ ಸಿದ್ಧಾಂತಗಳನ್ನು ಅರಿಯಬಹುದಾಗಿದೆ. ಹೃದಯ ದಿಂದ ಹೃದಯಕ್ಕೆ ನೇರವಾಗಿ ಮುಟ್ಟುವ ಸರಳ ಶೈಲಿ ವಚನಗಳಲ್ಲಿರುವದರಿಂದ ಈ ಸಾಹಿತ್ಯ ಜೀವ ಕಳೆದುಂಬಿ ಅಮೂಲ್ಯವಾದದ್ದಾಗಿದೆ.

ಪ್ರಮಥ ಪಂಚಕರೆನಿಸಿಕೊಂಡ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧಾರಾಮ ಹಾಗೂ ಅಕ್ಕ ಮಹಾದೇವಿ ಇವರುಗಳ ಸಾಧನೆಯ ಕ್ರಮಗಳಲ್ಲಿ ವಚನ ಧರ್ಮದ ಒಂದೊಂದು ಮುಖವನ್ನು ನೋಡಬಹುದಾದರೂ ಅವೆಲ್ಲ ಸಮರಸದಿಂದ ಹೊಂದಿಕೊಂಡು ಏಕ ಮೂರ್ತಿಯಾಗಿ ಸಂಪೂರ್ಣ ಸ್ವರೂಪ ದರ್ಶನ ಮಾಡಿಸುತ್ತವೆ, ಅವುಗಳಿಂದ ದೇಶ ಕಾಲಾದಿಗಳ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಅನ್ವಯಿಸುವಂಥ ವಿಶ್ವ ಧರ್ಮವೊಂದು ಹೊರಬಿದ್ದಿದೆ. ಅದನ್ನೇ ಸತ್ಯಾನ್ವೇಷಣ ಸಿದ್ಧಾಂತ ಪ್ರತಿಪಾದಿಸುವ ಧರ್ಮವೆಂದು ಕರೆಯಬಹುದು.

"ವೇದಗಳಿಗೆ ಅಭೇದ್ಯನಾದ ಶಿವನನ್ನು ಭೇದಿಸಿ ಕಂಡರು, ಶಾಸ್ತ್ರಂಗಳಿಗೆ ಅಸಾಧ್ಯವಾದ ಶಿವನನ್ನು ಸಾಧಿಸಿ ಕಂಡರು, ಆಗಮಗಳ ತರ್ಕಕ್ಕೆ ಅಸಾಧ್ಯನಾದ ಶಿವನನ್ನು ಅರಸಿಕಂಡರು, ಆಗಮ್ಯ ಅಪ್ರಮಾಣನಾದ ಪರಶಿವನನ್ನು ಪ್ರಮಾಣಿಸಿ ಕಂಡು ಒಳಹೊಕ್ಕು ಬೆರೆಸಿದರು—ನಮ್ಮ ಶರಣರು'' ಎಂದು ಅಲ್ಲಮ ಪ್ರಭುಗಳು ಹೇಳಿದ್ದಾರೆ. ಆದುದರಿಂದ ವೇದಾಗಮಗಳನ್ನು ಅನುಸರಿಸುವದಕ್ಕಿಂತ ಶರಣರನ್ನು ಅನುಸರಿಸುವದು ಮೇಲು. ಅವರು ತಮ್ಮ ಮನದ ಕೊನೆಯ ಮೇಲೆ ಅಡಗಿರುವ ಪರಮಾತ್ಮನನ್ನು ತೋರಿಸುತ್ತಾರೆ. ಮನುಷ್ಯತ್ವದಿಂದ ದೇವತ್ವಕ್ಕೇರಿಸುವ ಮಾರ್ಗ ವನ್ನು ತೋರಿಸಿ ಅದನ್ನು ಅನುಸರಿಸಿದವರಿಗೆ ಅವರಲ್ಲಿಯೇ ಅವರ ಮನದ ಕೊನೆಯ

ಮೇಲೆಯೇ ಪರಮಾತ್ಮನು ಕಾಣುವಂತೆ ಮಾಡುತ್ತಾರೆ. ಅವಲೋಹವನ್ನು ಪರುಷ ವನ್ನಾಗಿ ಮಾಡಬಲ್ಲ, ಅಂಗವನ್ನು ಲಿಂಗವನ್ನಾಗಿ ಮಾಡಬಲ್ಲ, ನಿತ್ಯ ಮುಕ್ತರನ್ನಾಗಿ ಮಾಡಿ ಎಂದೆಂದಿಗೂ ಭವಕ್ಕೆ ಬಾರದಂತೆ ಮಾಡುವ ಶಕ್ತಿ ಅನರಿಗಿದೆ.

ಶರಣರು ತಮ್ಮನ್ನಷ್ಟೇ ತಾವು ಉದ್ಧಾರ ಮಾಡಿಕೊಳ್ಳುವಷ್ಟು ಸ್ವಾರ್ಥಿಗಳಾಗಿರಲಿಲ್ಲ. ಲೋಕದ ಜನರನ್ನು ಉದ್ಧಾರ ಮಾಡಲು ವಚನ ಸೋಪಾನವನ್ನು ಒದಗಿಸಿದ್ದಾರೆ. ಅದರ ಸಹಾಯದಿಂದ ಸುಲಭವಾಗಿ ಅನುಭವಾಮೃತವನ್ನು ಪಡೆಯಬಹುದು. ''ಹಾಲ ತೊರೆಗೆ ಬೆಲ್ಲದಂತಹ ಕೆಸರು ಸಕ್ಕರೆಯಂತಹ ಮಳಲು" ಕಾರಣ ಈ ಸಾಹಿತ್ಯ ವಾಹಿನಿಯಲ್ಲಿ ಮಿಂದು ದೇಹ ರಥವನ್ನು ಶಾಶ್ವತ ಸುಖದತ್ತ ಸಾಗಿಸಬಹುದಾದಂಥ ಸತ್ಯವನ್ನು ಕಾಣಬೇಕು. ಅಂತಹ ಸತ್ಯಾನ್ವೇಷಣೆಯ ಕೆಲ ಸಿದ್ಧಾಂತಗಳನ್ನು ಇಲ್ಲಿ ಕೊಡಲಾಗಿದೆ.

ಆನೆ ಬೇಡ, ಸಿರಿ ಸಂಪತ್ತು ಬೇಡ, ರಾಜ್ಯ-ಸಿಂಹಾಸನ ಯಾವ ಪದವಿಯೂ ಬೇಡ ಕೇವಲ ಒಂದರಗಳಿಗೆ ಶರಣರ ವಚನಗಳ ಅಭ್ಯಾಸವನ್ನು ತನ್ಮಯತೆಯಿಂದ ಮಾಡಿದರೆ ಸಾಕು ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ ಎಂದು ದೇವರ ದಾಸಿಮಯ್ಯ ಹೇಳಿದ್ದಾನೆ. ವೇದಾಗಮಗಳು ಸನಾತನ; ವಚನ ಸಾಹಿತ್ಯ ನೂತನ ಸೃಷ್ಟಿ ಹೀಗಿದ್ದರೂ ಅದು ವೀರಶೈವ ಧರ್ಮ ತತ್ವ ನಿರೂಪಣೆಗೆ ಪ್ರಮಾಣವೆನಿಸಿ ಅಂಗೀಕಾರವಾಗಿದೆ. ವೀರಶೈವರ ಜೀವನಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳೂ ವಚನ ಸಾಹಿತ್ಯದಲ್ಲಿ ಅಡಕವಾಗಿ ಜ್ಞಾನ ಗುರುಗಳು ಎದುರಿಗೆ ಬಂದು ನಿಂತು ಉಪದೇಶ ಮಾಡಿದಂತೆನಿಸುತ್ತದೆ. ವೇದಾಂತ ಸೂತ್ರಗಳು, ಆಚಾರ ವ್ಯವಹಾರಗಳು, ಮತ ತತ್ವಗಳು ಎಲ್ಲವೂ ಸೇರಿ ವಚನ ಸಾಹಿತ್ಯ ವೀರಶೈವ ಧರ್ಮ ಸಾಹಿತ್ಯವಾಗಿದೆ. ಈ ಧರ್ಮದಲ್ಲಿ ದೇವರು, ಭಕ್ತಿ, ಜ್ಞಾನ, ಮೊದಲಾದ ಆಧ್ಯಾತ್ಮ ವಿಚಾರಗಳೂ ಹಾಗೂ ನೀತಿ ಸಮಾಜ ರಚನೆ ಸ್ತ್ರೀಯರ ಸ್ಥಾನಮಾನ ಮೊದಲಾದ ಲೌಕಿಕ ವಿಚಾರಗಳು ಹುದುಗಿಕೊಂಡಿವೆ.

ನೀತಿಗೆ ಸಂಬಂಧ ಪಟ್ಟಂತೆ ಶರಣರು ವ್ಯಕ್ತಿಗಿಂತ ನೀತಿಗೆ ಹೆಚ್ಚು ಬೆಲೆ ಕೊಟ್ಟಿದ್ದಾರೆ ಸಮಾಜದಲ್ಲಿಯ ಪ್ರತಿಯೊಬ್ಬನೂ ತನ್ನ ನೀತಿ ನಡವಳಿಕೆಗಳನ್ನು ಸರಿಯಾಗಿಟ್ಟುಕೊಂಡು ಧರ್ಮದಂತೆ ನಡೆಯಬೇಕು. ತನ್ನಲ್ಲಿ ದೋಷ ಪೂರಿತ ನೀತಿ ನಡವಳಿಕೆಗಳನ್ನು ಇಟ್ಟುಕೊಂಡು ಪರರ ದೋಷಗಳನ್ನು ಎಣಿಸುತ್ತಾ ಕೂಡ್ರುವದು ಪರಮಾತ್ಮನಿಗೆ ಸೇರದ ವಿಷಯ. ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮ ದೇವ ಎಂದು ಹೇಳುತ್ತಾರೆ. ನೀತಿ ಶಾಸ್ತ್ರ ಸಂಹಿತೆಯ ಸಪ್ತಸೂತ್ರಗಳನ್ನು ಪ್ರತಿಪಾದಿಸುತ್ತಾ ಕಳಬೇಡ ಕೊಲಬೇಡ ಎಂದು ಕಾಯ ಶುದ್ಧಿಯನ್ನು, ಸುಳ್ಳು ಹೇಳ

ಬೇಡ ಪರರನ್ನು ದೂಷಿಸಬೇಡ, ಹೊಗಳಿಕೊಳ್ಳಬೇಡ ಎಂದು ವಾಕ್‌ಶುದ್ಧಿಯನ್ನು ಕೋಪಿಸಿಕೊಳ್ಳಬೇಡ ಅನ್ಯರನ್ನು ಕಂಡು ಅಸಹ್ಯಪಡಬೇಡ ಎಂದು ಮನಶುದ್ಧಿಯನ್ನು ಬೋಧಿಸುತ್ತಾರೆ. ಹೀಗೆ ಕಾಯಾ ವಾಚಾ ಮನಸಾ ಶುದ್ಧಿಯನ್ನು ಬೋಧಿಸುತ್ತಾ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ, ಇದೇ ಕೂಡಲ ಸಂಗಮನನ್ನು ಒಲಿಸುವ ಪರಿ ಎಂದು ಸಾರಿ ಹೇಳುತ್ತಾರೆ.

ಈ ಎರಡೂ ವಚನಗಳಲ್ಲಿ ಆತ್ಮ ಪರಿಷ್ಕರಣ ಮತ್ತು ಪರಿಷ್ಕಾರಗಳ ಅವಶ್ಯ ಕತೆ ಎದ್ದು ಕಾಣುತ್ತದೆ. ಒಂದರಲ್ಲಿ ಪರಮಾತ್ಮನು ಹೇಗಿದ್ದರೆ ಮೆಚ್ಚುವದಿಲ್ಲ ಎಂದು ಹೇಳಿದರೆ ಮತ್ತೊಂದರಲ್ಲಿ ಹೇಗಿದ್ದರೆ ಒಲಿಯುತ್ತಾನೆ ಎನ್ನುವುದನ್ನು ಹೇಳುತ್ತಾರೆ.

ಬಸವಣ್ಣನವರು ವೀರಶೈವ ಧರ್ಮವನ್ನು ಆಚರಿಸುವವರಿಗೆ ಕೆಲವು ಆಚಾರ ಸಂಹಿತೆಗಳನ್ನು ನೀಡುತ್ತಾ ಈ ಧರ್ಮದವರು ಹೇಗಿರಬೇಕು, ಎಂತಿರಬೇಕು, ಎಂಬ ನೈಜ ಚಿತ್ರಣ ಕೊಟ್ಟಿದ್ದಾರೆ. ಪರಧನ, ಪರಸತಿ, ಪರದೈವವನ್ನು ಒಲ್ಲೆನೆಂಬ ಛಲ ಬೇಕು. ಅದೇ ಕಾಲಕ್ಕೆ ಲಿಂಗಜಂಗಮ ಒಂದೇ, ಜೀವಕೋಟಿಯ ಸುಖಸಂತೋಷವೇ ತನಗೆ ಪ್ರಸಾದ ಎಂದು ಒಪ್ಪಿಕೊಳ್ಳುವ ಛಲ ಬೇಕು ಎಂದು ಒತ್ತಾಯಿಸುತ್ತಾರೆ. ಮತ್ತು ಸಕಲ ಪ್ರಾಣಿಗಳಲ್ಲಿ ದಯೆ ಇರಬೇಕು ಇಲ್ಲದಿದ್ದರೆ ಕೂಡಲ ಸಂಗಮನಾಥನು 'ಅಂಥವರನ್ನು ಸ್ವೀಕರಿಸುವದಿಲ್ಲ ಎಂಬ ನಿರಂತರ ಸತ್ಯವನ್ನು ಮನಗಾಣಿಸಿದ್ದಾರೆ.

ಗಳಿಕೆ ಬಳಕೆಯನ್ನು ಕುರಿತು ಪಾಪಿಯಧನ ಪ್ರಾಯಶ್ಚಿತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು. ಆದರೆ ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕೆ ಅರ್ಪಿತ, ದುರಾಸೆಯಿಂದ ಬಂದುದು ಅನರ್ಪಿತ ಎಂದು ಶರಣರು ಸಾರಿದ್ದಾರೆ. ಆದ್ದ ರಿಂದ ಸತ್ಯ ಶುದ್ಧ ಕಾಯಕದಿಂದ ಗಳಿಸಿ ತನಗೆ ಬೇಕಾದಷ್ಟನ್ನು ಬಳಸಿ ಉಳಿದದ್ದನ್ನು ಸಮಾಜಕ್ಕೆ ಅರ್ಪಿಸಬೇಕು. ಈ ಸಂದೇಶವೂ ಸಹಿತ ಇತರ ಸಂದೇಶಗಳಂತೆ ದೇಶ ಕಾಲಾತೀತವಾಗಿ ಅನ್ವಯಿಸುವಂತಹದು.

ಸೌಜನ್ಯದ ನಡುವಳಿಕೆಗೆ ಯಾವ ಬಾಧೆಯೂ ಇರಕೂಡದು. ಸೌಜನ್ಯದಂತಹ ಮಾನವೀಯ ಗುಣಗಳೇ ಕಣ್ಮರೆಯಾದರೆ ಬಡವರು ಬದುಕುವುದಾದರೂ ಹೇಗೆ ಎಂಬುದೇ ಶರಣರ ಚಿಂತೆಯಾಗಿತ್ತು. ಸಿರಿವಂತರು ಸಮಾಜದಲ್ಲಿ ಸದ್ಗುಣಗಳನ್ನು ಮರೆಯಬಾರದು ಎಂದು ಕಟುಕಿ ಹೇಳಿದರು. "ಬನ್ನಿ, ಚೆನ್ನಾಗಿದ್ದೀರಾ, ಕುಳಿತು ಕೊಳ್ಳಿ'' ಎಂದು ಮಾತನಾಡಿದರೆ ನಿಮ್ಮ ಸಂಪತ್ತು ಹಾರಿಹೋಗುತ್ತದೆಯೇ, ನೆಲ ತಗ್ಗಿ ಬೀಳುತ್ತದೆಯೇ, ಗಂಟಲು ಸಿಡಿದು ಹೋಗುತ್ತದೆಯೇ ?'' ಎಂದು ಪ್ರಶ್ನಿಸಿ, ''ನೀವು ಏನೂ ಕೊಡದಿದ್ದರೂ ಚಿಂತೆಯಿಲ್ಲ ಒಳ್ಳೆಯ ಗುಣನಡವಳಿಕೆಯನ್ನಾದರೂ

ತೋರಿಸಿರಿ ಇಲ್ಲದಿದ್ದರೆ ಪರಮಾತ್ಮನು ನಿಮ್ಮನ್ನು ಕೆಡಹಿ ಮೂಗು ಕೊಯ್ಯದೇ ಬಿಡುವದಿಲ್ಲ" ಎಂದು ಎಚ್ಚರಿಸಿದರು. ಈ ಮಾತು ಅಂದು ಇಂದು ಎಂದೆಂದಿಗೂ ಶ್ರೀಮಂತಿಕೆಯ ಮಂಘರಿನಲ್ಲಿ ಓಲಾಡುವವರಿಗೆ ಅನ್ವಯಿಸುತ್ತದೆ.

ಕಾಲ್ಪನಿಕ ಸ್ವರ್ಗಲೋಕದ ಇರವನ್ನೇ ನಂಬಿ ಇಹಲೋಕದ ಜೀವನವನ್ನು ಕಡೆಗಣಿಸಬಾರದು ಕಾರಣ ''ಆಚಾರವೇ ಸ್ವರ್ಗ ಅನಾಚಾರವೇ ನರಕ'' ಎಂದು ಬೋಧಿಸಿ ಇಹಪರಗಳ ಸಮನ್ವಯವನ್ನು ಶರಣರು ಸಾಧಿಸಿದರು. "ಈಸಬೇಕು ಇದ್ದು ಜಯಿಸಬೇಕು'' ''ಮನೆಗೆದ್ದು ಮಾರು ಗೆಡೆ" ಎನ್ನುವ ತತ್ವ ಸಿದ್ಧಾಂತ ಗಳನ್ನು ವಚನರೂಪದಲ್ಲಿ ಬೋಧಿಸಿದರು. ಆದ ಕಾರಣ ಪ್ರತಿಯೊಬ್ಬನೂ ನಾಳಿನ ಕನಸಿಗಿಂತ ಇಂದಿನ ನನಸೇ ಸತ್ಯ ಎಂದು ನಂಬಬೇಕು. ಕಣ್ಣಿಗೆ ಕಾಣಲಾರದ್ದನ್ನು ಕಾಣಬೇಕೆಂಬ ವ್ಯರ್ಥ ಆಲೋಚನೆಯಲ್ಲಿ ಮಗ್ನರಾಗಿ ಕಲ್ಪನೆಯಲ್ಲಿ ಕಾಲ ಕಳೆಯದೇ ಕೇವಲ ಸತ್ಯ ದರ್ಶನ ಮಾಡಿಕೊಳ್ಳಬೇಕು.

ಯಾರಾದರೂ ತನ್ನ ಮೇಲೆ ಸಿಟ್ಟಿಗೆದ್ದರೆ ತಾನು ತಿರುಗಿ ಅವರ ಮೇಲೆ ಸಿಟ್ಟಿ ಗೇಳಬಾರದು. ಅದು ವ್ಯಕ್ತಿತ್ವದ ಘನತೆಯನ್ನು ಹಾಳು ಮಾಡುತ್ತದೆ. ಅಷ್ಟೇ ಅಲ್ಲ, ವಿಚಾರ ಶೂನ್ಯನನ್ನಾಗಿ ಮಾಡುತ್ತದೆ. ''ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನರಿವಿನ ಕೇಡು'' ಎಂದು ಹೇಳಿ ಮನೆಯೊಳಗೆ ಹತ್ತಿದ ಬೆಂಕಿ ಮೊದಲು ಮನೆಯನ್ನು ಸುಟ್ಟು ನೆರೆಮನೆಗೆ ಹೋಗುತ್ತದೆ ಎಂದು ಉದಾಹರಣೆ ನೀಡುತ್ತಾರೆ.

ಭಕ್ತಿ ಮಾರ್ಗದಿಂದ ಮುಕ್ತಿಯನ್ನು ಸಾಧಿಸಲು ತ್ರಿವಿಧ ದಾಸೋಹ ಮಾರ್ಗ ವನ್ನು ಸೂಚಿಸಿ ಗುರು, ಲಿಂಗ, ಜಂಗಮರಿಗೆ ತನು, ಮನ, ಧನವನ್ನು ಅರ್ಪಿಸುವುದೇ ತ್ರಿವಿಧ ದಾಸೋಹ. ಇದರಿಂದ ಪರಮಾತ್ಮನನ್ನು ಸುಲಭವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಎಂದು ಶರಣರು ಹೇಳಿದ್ದಾರೆ. ಒಂದು ಸೂಕ್ಷ್ಮವನ್ನು ಮಾತ್ರ ಅರಿಯಬೇಕು. ಏನೆಂದರೆ ತನು, ಮನ, ಧನಗಳ ಮೇಲೆ ನಮಗೆ ಅಧಿಕಾರವೇ ಇಲ್ಲ. ಕೈ ಎತ್ತಿ ಕೊಡುವದಕ್ಕೆ ಈ ನೆಲದ ಮೇಲೆ ನಮ್ಮದೇನೂ ಇಲ್ಲ. ಸ್ವತಃ ನಾನೇ ನನ್ನವನಲ್ಲ, ಆದ್ದರಿಂದ ಯಾರಿಗೆ ಏನೇ ಕೊಟ್ಟರೂ ಅವರವರ ವಸ್ತುವನ್ನು ಅವರಿಗೆ ಕೊಟ್ಟಂತೆ ಎಂದು ಭಾವಿಸಬೇಕು. ನಾನು ಮಾಡಿದೆನೆಂದು ಹೇಳುವದೊತ್ತಟ್ಟಿಗಿರಲಿ ಮನದಲ್ಲಿ ಹೊಳೆದರೂ ಸಹಿತ ಎಡಿಸಿ ಕಾಡುತ್ತದೆ—ಶಿವನ ಡಂಗುರ ಎಂದು ಶರಣರು ಎಚ್ಚರಿಕೆ ಇತ್ತಿದ್ದಾರೆ.

ಶಿವ ಶರಣರು ನಡೆ ಮತ್ತು ನುಡಿಗೆ ಬಹಳ ಬೆಲೆ ಕೊಟ್ಟಿದ್ದಾರೆ. ಸತ್ಯವನ್ನೇ ಮಾತನಾಡಬೇಕು. ಮಾತನ್ನಾಡಿ ತಪ್ಪಬಾರದು. ಅಷ್ಟೇ ಅಲ್ಲ, ಮಾತು ನೇರವಾಗಿ

ಸರಳವಾಗಿ ಮೃದುವಾಗಿರಬೇಕು. ಅಂದರೆ ಪರಮಾತ್ಮನು ಒಲಿಯುತ್ತಾನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿದ್ದ ಲಿಂಗ ಘಟಸರ್ಪ ನೋಡಾ ಎಂದು ಎಚ್ಚರಿಸಿದ್ದಾರೆ. ನುಡಿದದ್ದನ್ನು ನಡೆಯಲ್ಲಿ ತರಲಾಗದಿದ್ದರೆ ಅದೇ ನುಡಿಯು ವಿಷವಾಗಿ ಪರಿಣಮಿಸಿ ಅನಾಹುತಕ್ಕೆ ಅವಕಾಶ ಮಾಡಿಕೊಡುತ್ತದೆ ಇಂತಹ ಘಟನೆಗಳು ಅನೇಕರ ಜೀವನದಲ್ಲಿ ಅನುಭವಕ್ಕೆ ಬಂದಿರುತ್ತವೆ. ''ನುಡಿದಂತೆ ನಡೆ ಇದೇ ಜನ್ಮ ಕಡೆ'' ಎಂದೂ ಸಹಿತ ನುಡಿ ಮತ್ತು ನಡೆಯ ಮಹತ್ವ ಸಾರಿದ್ದಾರೆ.

ವೀರಶೈವನಾದ ಮೇಲೆ ಕುಲಮದ ಛಲಮದಗಳಿಗೆ ಬಲಿಯಾಗಿ ಜಂಗಮ ಬೇಧ ಲಿಂಗ ಬೇಧ ಮಾಡಬಾರದು. ಹಾಗೇ ಮಾಡುವವನ ನಿತ್ಯ ಲಿಂಗ ಪೂಜೆ ಒಂದು ಅರ್ಥರಹಿತ ಕ್ರಿಯೆಯಾಗುತ್ತದೆ. ಅದೇ ರೀತಿ ಒಂದಕ್ಕೆ ಒಂಭತ್ತು ಮಾತನಾಡಿ ಕಾಲು ಕೆದರಿ ಜಗಳ ತೆಗೆಯುವ ದುಷ್ಟರನ್ನು ಕಂಡರೆ ಅಂಜಿ ದೂರ ಸರಿಯಬೇಕು ಎಂದು ಶರಣರು ಹೇಳುತ್ತಾರೆ.

ಶರಣರನ್ನು ಎಂದೂ ಕೆಣಕಬಾರದು. ಯಾಕಂದರೆ ಅವರು ಸ್ವತಂತ್ರರು, ಧೀರರು. ಅವರೊಡನೆ ಅರಿತು ಆಚರಿಸಬೇಕೇ ಹೊರತು ಮರೆತು ಸರಸವಾಡಬಾರದು ಹಾಗೆ ಮಾಡಿದರೆ ಉಗ್ರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಶರಣರು ಎಚ್ಚರಿಸಿದ್ದಾರೆ.

ದೇವರ ಪೂಜೆ ಎಂಬುದು ಕೇವಲ ಮಾಂತ್ರಿಕವಾಗಿ ಅಥವಾ ಯಾಂತ್ರಿಕವಾಗಿ ಮಾಡಬೇಕಾದ ಕಾರ್ಯವಲ್ಲ. ಅದರಲ್ಲಿ ಮನದ ಅಭಿಲಾಷೆ, ವ್ಯಕ್ತಿ-ನಿಷ್ಠೆ ಇರಬೇಕಾಗುತ್ತದೆ. ಇದನ್ನು ತಿಳಿಯದೆ ಕೆಲವರು ಔಪಚಾರಿಕವಾಗಿ ಮಾಡಿದರಾಯಿತೆಂದು ಶಿವಪೂಜೆಯನ್ನು ತಮ್ಮ ಪರವಾಗಿ ಮತ್ತೊಬ್ಬರ ಕೈಯಿಂದ ಮಾಡಿಸುತ್ತಾರೆ. ತನ್ನ ಹಸಿವನ್ನು ಹಿಂಗಿಸಿಕೊಳ್ಳಲಿಕ್ಕಾಗಿ ತಾನೇ ಊಟಮಾಡುವಂತೆ ತನ್ನ ಕಾಮ ತೃಷೆಯನ್ನು ಅಡಗಿಸಲು ತಾನೇ ಸ್ವತಃ ಸಂಭೋಗ ಮಾಡುವಂತೆ ತನ್ನ ಆತ್ಮ ಸಂಬಂಧಿತವಾದ ಆಚರಣೆ ಪೂಜೆಗಳನ್ನು ತಾನೇ ಮಾಡಿ ಸಂತೃಪ್ತಿ ಹೊಂದಬೇಕು. ಇಲ್ಲದಿದ್ದರೆ ಸಂಗಮ ದೇವನು ಮೆಚ್ಚುವುದಿಲ್ಲ—ಎಂದು ಶರಣರು ಬಹಳ ನಿಷ್ಠುರವಾಗಿ ಹೇಳಿದ್ದಾರೆ. ಇಲ್ಲಿ ಅಪ್ರತ್ಯಕ್ಷವಾಗಿ ಪುರೋಹಿತ ಶಾಹಿಯನ್ನು ಖಂಡಿಸಿದ್ದು ಕಂಡು ಬರುತ್ತದೆ. ಶರಣ ಧರ್ಮದ ತತ್ವಗಳಲ್ಲಿ ಇದೂ ಒಂದು ಮಹತ್ವದ ತತ್ವವಾಗಿದೆ.

''ಅಂತರಂಗ ಆತ್ಮ ಶುದ್ಧಿಯಿಲ್ಲದವರನ್ನು ಕೂಡಲ ಸಂಗಮ ದೇವನು ನಂಬುವುದಿಲ್ಲ ಒಳಗೆ ಕುಟಿಲ ಹೊರಗೆ ವಿನಯವಾಗಿ ನಡೆದವರು ಅಧರ್ಮಿಗಳು ಎಂದು ಹೇಳಿ ಶರಣರು ಎಚ್ಚರಿಸಿದ್ದಾರೆ''.

ಹೀಗೆ ವಚನ ಶಾಸ್ತ್ರ ಸಾಹಿತ್ಯ ಧರ್ಮ ಸಂಹಿತೆಯಾಗಿ ಅನೇಕ ತತ್ವಬೋಧೆಗಳನ್ನು ಒದಗಿಸುತ್ತದೆ. ಆಡು ಮುಟ್ಟದ ಗಿಡವಿಲ್ಲವೆಂಬಂತೆ ಶರಣರು ಪ್ರತಿಯೊಂದು ಕ್ಷೇತ್ರದಲ್ಲಿಯೂ ತಮ್ಮ ಅನುಭಾವ ಸಿದ್ಧಿಯನ್ನು ತೋರಿಸಿದ್ದಾರೆ. ಪ್ರತಿಯೊಂದು ತತ್ವವನ್ನು ತಾವು ಆಚರಿಸಿ ನೋಡಿ ಮನದಟ್ಟಾದ ಮೇಲೆಯೇ ಬೋಧಿಸಿದ್ದರಿಂದ ಅದಕ್ಕೆ ಅಷ್ಟು ಮಹತ್ವವಿದೆ. ರೋಗಿಯೂ ಆಗಿದ್ದಾರೆ, ವೈದ್ಯರೂ ಆಗಿದ್ದಾರೆ. ಅವರ ಅನುಭವಾಮೃತವನ್ನು ಸವಿದು ಮೈಗೂಡಿಸಿಕೊಂಡು ಶಾಶ್ವತ ಸುಖ ಹಾಗೂ ನೆಮ್ಮದಿ ಪಡೆಯಬೇಕು. ವಚನ ಶಾಸ್ತ್ರವನ್ನು ವೀರಶೈವ ಧರ್ಮ ಗ್ರಂಥವೆಂದು ಬಗೆದು ನಿತ್ಯ ಪಠಣ ಮಾಡುವದು ಇನ್ನೂ ಸೂಕ್ತ.

————

೧೦. ಶರಣ ಸತಿ ಲಿಂಗ ಪತಿ

ಲಿಂಗದೊಡನೆ ಬೆರೆತುಹೋದಂಥ ಶಿವ ಶರಣರು "ಶರಣ ಸತಿ—ಲಿಂಗ ಪತಿ" ತತ್ವದ ಹಿನ್ನೆಲೆಯಲ್ಲಿ ತಮ್ಮನ್ನು ಸತಿಯೆಂದೇ ಕರೆದುಕೊಂಡಿರುವರು. ಪತಿಯ ಬರುವನ್ನು ನಿರೀಕ್ಷಿಸುವ ಸತಿಯಂತೆ, ದೇವರ ಬರುವನ್ನು ಹಾರೈಸಿಕೊಂಡು ನಿಂತಿರುವ ಪರಿಯನ್ನು ಬಸವಣ್ಣನವರ ವಚನದಿಂದ ಅರಿಯಬಹುದು. ''ಶರಣ ಸತಿ–ಲಿಂಗ ಪತಿ" ಭಾವ ಶರಣರ ವಚನಗಳ ಒಂದು ಪ್ರಮುಖ ಲಕ್ಷಣ.

"ಎನ್ನ ಗಂಡ ಬರಬೇಕೆಂದು
ಎನ್ನಂತರಂಗವೆಂಬ ಮನೆಯ ತೆರಹು ಮಾಡಿ
ಅಷ್ಟದಳ ಕಮಲವೆಂಬ ಓವರಿಯೊಳಗೆ
ನಿಜ ನಿವಾಸವೆಂಬ ಹಾಸುಗೆಯ ಹಾಸಿ
ಧ್ಯಾನ ಮೌನವೆಂಬ ಮೇಲು ಕಟ್ಟಂ ಕಟ್ಟಿ
ಜ್ಞಾನವೆಂಬ ದೀಪ ಬೆಳಗಿ
ನಿಷ್ಕ್ರಿಯಗಳೆಂಬುಪಕರಣಂಗಳ ಹರಹಿಕೊಂಡು
ಪಶ್ಚಿಮ ದ್ವಾರವೆಂಬ ಬಾಗಿಲ ತೆರೆದು
ಕಂಗಳೇ ಪ್ರಾಣವಾಗಿ ಹಾರುತಿರ್ದೆನಯ್ಯಾ"

ನಾನು ಬಾರೆನೆಂದು
ಉಮ್ಮಳಿಸಿಹೆನೆಂದು
ತಾನೇ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ
ಮೂರ್ತಿಗೊಂಡಡೆ ಎನ್ನ ಮನದ ಬಯಕೆ
ಸಾಧ್ಯವಾಯಿತು,
ಆನು ಬದುಕಿದೆನು ಕೂಡಲ ಸಂಗಮ ದೇವಾ".

ವೀರಶೈವ ಧರ್ಮವು ಸ್ತ್ರೀಯರನ್ನು ಪವಿತ್ರರೆಂದು ಗೌರವಕ್ಕೆ ಪಾತ್ರರಾದವರೆಂದು ಭಾವಿಸಿದ್ದರಿಂದಲೇ "ಶರಣ ಸತಿ ಲಿಂಗ ಪತಿ" ಭಾವವನ್ನು ಆಚರಣೀಯ ಸಿದ್ಧಾಂತವನ್ನಾಗಿ ಸ್ವೀಕರಿಸಿತೆಂದು ಹೇಳಬಹುದು. ಇಲ್ಲಿ ಸತಿ ಎಂದರೆ ಆಧ್ಯಾತ್ಮ ಸತಿ.

ಬಸವಣ್ಣನವರು ತಮಗೆ ಹೆಣ್ತನವನ್ನು ಆರೋಪಿಸಿಕೊಂಡು "ಶರಣ ಸತಿ ಲಿಂಗ ಪತಿ" ಭಾವವನ್ನು ಮೆರೆದು ತೋರಿದ್ದಾರೆ. ಅವರ ಬಣ್ಣನೆ ನೆನೆಯುವಂತಹುದು

"ಅರಿಷಿಣವನೆ ಮಿಂದು ಹೊಂದೊಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ
ಲಲನೆಯಂತಾಗಿರ್ದೆನಯ್ಯಾ,
ವಿಭೂತಿಯನೆ ಪೂಸಿ, ರುದ್ರಾಕ್ಷಿಯನೆ ಕಟ್ಟಿ
ಶಿವ, ನಿಮ್ಮೊಲವಿಲ್ಲದಂತಾಗಿರ್ದೆನಯ್ಯಾ,
ಕೆಟ್ಟು ಬಾಳುವದಿಲ್ಲ, ನಮ್ಮ ಕುಲದಲ್ಲಿ
ನಿನೊಲಿದಂತೆ ಸಲಹಯ್ಯಾ ಕೂಡಲ ಸಂಗಮ ದೇವಾ''.

ಒಬ್ಬ ವಧು ಅಲಂಕರಿಸಿಕೊಂಡು ಪತಿಯ ಬರುವನ್ನು ಹಾಗೂ ಅವನ ಪ್ರೀತಿಯನ್ನು ಬಯಸಿದ್ದನ್ನು ಹೋಲಿಸಿ ಶರಣನು ಪರಮಾತ್ಮನ ಒಲವನ್ನು ಹೇಗೆ ಬಯಸುತ್ತಾನೆ ಎನ್ನುವದನ್ನು ಇಲ್ಲಿ ಚಿತ್ರಿಸಲಾಗಿದೆ. ಪ್ರೇಮ ಅಥವಾ ಭಕ್ತಿಯು ಸೂಜಿಗಲ್ಲಾಗಿದ್ದು ಅದರ ಆಕರ್ಷಣೆಯಿಂದ ಭಗವಂತನು ಪಾರಾಗಲು ಸಾಧ್ಯವಿಲ್ಲಾವೆಂದು ಪರಮಹಂಸ ಯೋಗಾನಂದರು ಹೇಳುತ್ತಾರೆ. (Love is a magnet from which God cannot escape.) ಆದ ಕಾರಣ, ಶರಣನೆಂಬ ಸತಿಯ ನಿರ್ಮಲ ಪ್ರೇಮದಿಂದ ಲಿಂಗಪತಿಯು ಆಕರ್ಷಿತನಾಗುತ್ತಾನೆ, ಅದರಲ್ಲಿ ಸಂಶಯವಿಲ್ಲ. ಭಕ್ತ ಹಾಗೂ ಭಗವಂತ ಇವರೀರ್ವರ ಮಧ್ಯದಲ್ಲಿರುವ ಎಲ್ಲ ಬಗೆಯ ಭಾವ ಸಂಬಂಧಗಳಲ್ಲಿ ಶರಣಸ್ಥಲದ ''ಶರಣ ಸತಿ–ಲಿಂಗಪತಿ'' ಭಾವವು ಅತ್ಯಂತ ಮಧುರ, ಅಪ್ಯಾಯಮಾನ ಹಾಗೂ ಅವಿನಾಭಾವದ ಆನಂದ ಭಕ್ತಿಯೆಂದು ಪರಿಗಣಿತವಾಗಿದೆ.

''ಭವಿ ಸಂಗವನಳಿದು ಭಕ್ತನಾದ ಬಳಿಕ ಭಕ್ತಂಗೆ ಭವಿ ಸಂಗವು ಅತಿ ಘೋರ ನರಕ, ಶರಣ–ಸತಿ ಲಿಂಗ–ಪತಿಯಾದ ಬಳಿಕ ಶರಣಂಗೆ ಸತಿ ಸಂಗವು ಅಘೋರ ನರಕ'' ಎಂದು ಅಕ್ಕ ಮಹಾದೇವಿ ಹೇಳುವಲ್ಲಿ ಕಾಮ, ಕ್ರೋಧ ಮುಂತಾದ ಅರಿಷಡ್ವರ್ಗಕ್ಕೆ ಒಳಗಾದವರು ಭವಿಗಳು ಎಂಬ ದೃಷ್ಟಿ ಇದ್ಧಂತೆ ಕಾಣುತ್ತದೆ. ಇಂತಹ ಭವಿಗಳನ್ನು ತ್ಯೊರೆದಾಗ ಮಾತ್ರ ಶಿವನಲ್ಲಿ ನಿಜವಾದ ಭಕ್ತಿಯುಂಟಾಗುತ್ತದೆ. ನಿಜ ಭಕ್ತನಾದವನು ಭವಿಸಂಗವನ್ನೆಂದೂ ಮಾಡುವುದಿಲ್ಲ. ಮಾಡಿದ್ದಾದರೆ ಅದು ಕಪಟಿ ಭಕ್ತಯಾಗಿ ಘೋರ ನರಕಕ್ಕೆ ಬೀಳಬೇಕಾಗುತ್ತದೆ. ಅದೇ ರೀತಿ ಶರಣಸ್ಥಲದ ಆನಂದ ಭಕ್ತಿಯ ಶರಣನು ಲಾಕಿಕವಾದ ಸತಿ ಸಂಗವನ್ನೆಂದಿಗೂ ಬಯಸುವುದಿಲ್ಲ. ಬಯಸಿದರೆ ಅವನಿಗೆ ಶರಣ ಸ್ಥಲವು ಸಮನಿಸಿರುವುದಿಲ್ಲ. ಬದಲಾಗಿ ಅವನಿಗೂ ನರಕ ಪ್ರಾಪ್ತವಾಗುತ್ತದೆ. ಆದುದರಿಂದ ಭವಿಸಂಗ ತೊರೆದು ನಿಜ ಭಕ್ತನಾಗಿ ನಿಜ ಶರಣನಾಗಬೇಕೆಂಬುದೇ ''ಶರಣ ಸತಿ–ಲಿಂಗಪತಿ'' ತತ್ವದಲ್ಲಿ ಅಡಗಿದ ಮುಖ್ಯ ಉಪದೇಶವಾಗಿದೆ.

ಸತಿ–ಪತಿಗಳಿಬ್ಬರೂ ವಿಶ್ವಚೇತನದ ಎರಡು ಮುಖಗಳು. ಪ್ರೇಮದ ವಿಪರೀತತೆ

ಅವಗಿಬ್ಬರಲ್ಲಿಯ ಬೇಧವನ್ನಳಿಸುವವು. ಕೊನೆಗೆ ಕಾಮುಸ್ವರೂಪಿಯಾಗಿ ಅವರನ್ನು ಐಕ್ಯತೆಗೆ ಅಣಿಗೊಳಿಸುವದು. ಅದು ನಿಸರ್ಗದ ಸ್ವಾಭಾವಿಕ ಕ್ರಿಯೆಯೆಂದರಿಯಬೇಕು.

"ಲಿಂಗವೇ ಪತಿ ಮತ್ತು ಶರಣನೇ ಸತಿ'' ಯೆಂಬ ವಿಚಾರ ಸರಣಿಯಲ್ಲಿ ಅಕ್ಕ ಮಹಾದೇವಿಯ ವಚನಗಳು ಅನುಪಮವಾದ ಶೈಲಿಯಲ್ಲಿವೆ.

''ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ
ಅನು ಮದುವಳಿಗೆಯಾದೆನು
ವಸುದೆಯ ಭಕ್ತರೆಲ್ಲ ನಿಬ್ಬಣಿಗರಾದರು
ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ''

ಅಕ್ಕ ಮಹಾದೇವಿ ಲೋಕ ರೂಢಿಯನ್ನೂ ಬಿಟ್ಟಿಲ್ಲ, ಲೌಕಿಕ ರೀತಿ ರಿವಾಜು ಗಳನ್ನು ಬಿಟ್ಟಿಲ್ಲ. ಅಲೌಕಿಕ ಸಾಧನೆಯ ಎತ್ತರಕ್ಕೆ ಏರಿದ್ದನ್ನು ಇಲ್ಲಿ ಕಾಣಬಹುದು.

''ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ
ಎಡೆಇಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ ಎಲೆ ಅವ್ವಾ
ನೀನು ಕೇಳಾ ತಾಯಿ
ಭವವಿಲ್ಲದ ಭಯವಿಲ್ಲದ ರಿರ್ಭಯ ಚೆಲುವಂಗಾನೊಲಿದೆ ನಾನು
ಕುಲ ಸೀಮೆ ಇಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
ಇದು ಕಾರಣ, ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು''.

ಬಹುಶಃ ಸತಿ-ಪತಿ ಸಂಬಂಧದ ವಿಷಯದಲ್ಲಿ ಮಾನವ ಕುಲದ ಉದ್ವೇಗ ಇಷ್ಟೊಂದು ಸುಂದರವಾಗಿ ಎಲ್ಲಿಯೂ ಅಭಿವ್ಯಕ್ತವಾಗಿರಲಿಕ್ಕಿಲ್ಲ. ಸೌಂದರ್ಯಾತೀತ ವಾದ ಸೌಂದರ್ಯವನ್ನು ಈ ಪರಿಯಾಗಿ ಯಾರೂ ಅಳವಡಿಸಿಕೊಂಡಿರಲಿಕ್ಕಿಲ್ಲ. ವಿಶ್ವದ ಚೆಲುವೇ ಲಿಂಗದ ನಿಸ್ಸೀಮ ಚೆಲುವಿಕೆಯಾಗಿ ನಿಂತು ಸಾವ ಕೆಡುವ ಸೌಂದರ್ಯವನ್ನೆಲ್ಲ ಮೀರಿ ಅಕ್ಕ ಮಹಾದೇವಿಯೊಡನೆ ಮದುವೆಯಾಗಿ ಸಂಪೂರ್ಣ ಸಾಮರಸ್ಯ ಹೊಂದಿ ದಂತೆ ಕಾಣುತ್ತದೆ. ಇದಕ್ಕೆ ಇನ್ನೊಂದು ವಚನ ಪ್ರಮಾಣ ಒದಗಿಸುವದು.

''ಒಮ್ಮೆ ಕಾಮನ ಕಾಲ ಹಿಡಿವೆ
ಮತ್ತೊಮ್ಮೆ ಚಂದ್ರಮಂಗೆ ಸೆರಗನೊಡ್ಡಿ ಬೇಡುವೆ
ಸುಡಲೀ ವಿರಹವೇ ನಾನಾರಿಗೆ ಧೃತಿಗೆಡುವೆ ?
ಚೆನ್ನಮಲ್ಲಿಕಾರ್ಜುನ ದೇವನು ಎನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗಿಲೆಯಾದೆನವ್ವಾ"

ಅನಂತ ಬಯಕೆಗಳು ಈಡೇರುವ ಲಕ್ಷಣಗಳನ್ನು ಸನಿಹದಲ್ಲಿ ತೋರದಾದೊಡನೆ ಅದಕ್ಕಾಗಿ ಕೊರಗುವದನ್ನು ಇಲ್ಲಿ ನೋಡಬಹುದು.

ಅಕ್ಕ ಮಹಾದೇವಿಯ "ಶರಣ ಸತಿ ಲಿಂಗ ಪತಿ" ಭಾವವನ್ನು ತನ್ಮಯತೆಯನ್ನು, ಪ್ರತಿಯೊಂದು ವಚನದಲ್ಲಿಯೂ ಕಾಣಬಹುದು. ಚೆನ್ನ ಮಲ್ಲಿಕಾರ್ಜುನನೊಡನೆ ತನ್ನ ವಿವಾಹವು ಎಂದೋ ಮುಗಿದು ಹೋದ ವಿಷಯ ಮಿಕ್ಕಿದ ಲೋಕದ ಗಂಡರು ತನಗೆ ಸಂಬಂಧವಿಲ್ಲವೆಂದು ಖಡಾಖಂಡಿತವಾಗಿ ನುಡಿದಿರುವಳು.

ಅಕ್ಕ ಮಹಾದೇವಿಯ ತಪೋಮಯ ಜೀವನದ ಜ್ವಾಲೆಯಿಂದ ಸಿಡಿದ "ಲಿಂಗ ಪತಿ" ಭಾವದ ಕಿಡಿ ನುಡಿಗಳು ಲೆಕ್ಕವಿಲ್ಲದಷ್ಟು. "ಇಹಕ್ಕೊಬ್ಬ ಗಂಡ ಪರಕ್ಕೊಬ್ಬ ಗಂಡನೆ ? ಲೌಕಿಕಕ್ಕೊಬ್ಬ ಪಾರಮಾರ್ಥಕ್ಕೊಬ್ಬ ಗಂಡನೇ ?" ಎಂದು ಚಿಕ್ಕ ವಯಸ್ಸಿನಿಂದಲೇ, ಅವಳ ವಿವಾಹಕ್ಕೆ ಮನವೊಲಿಸಲು ಪ್ರಯತ್ನಿಸಿದವರ ಬಾಯಿ ಮುಚ್ಚಿಸಿದ್ದಾಳೆ. "ಚನ್ನ ಮಲ್ಲಿಕಾರ್ಜುನಯ್ಯನನ್ನು ಆತ್ಮ ಸಂಗಾತಕ್ಕೆ ನೀನುಂಟು" ಎಂದು ಏಕಾಂಗಿತನ ಅನುಭವಿಸಿದಾಗ ತನ್ನ ಆಧ್ಯಾತ್ಮ ಸತಿತ್ವವನ್ನು ಖಚಿತ ಪಡಿಸಿದ್ದಾಳೆ. "ಚೆನ್ನಮಲ್ಲಿಕಾರ್ಜುನನ ಕೂಡಿ ಸುಖಿಯಾದೆನು". "ಚೆನ್ನಮಲ್ಲಿಕಾರ್ಜುನನ ಕೂಟ ಪರಮ ಸುಖ" ಎಂದು ಮುಂತಾಗಿ ತನ್ನ ಅವಿನಾಭಾವ ಸಂಬಂಧವನ್ನು ಎತ್ತಿ ತೋರಿಸಿದ್ದಾಳೆ. ಇಲ್ಲಿ ಸತಿಪತಿ ಸಂಬಂಧವು ರತ್ನ ಮತ್ತು ಅದರ ಕಾಂತಿಯಂತೆ, ಶಬ್ಧ ಮತ್ತು ಅದರ ಅರ್ಥದಂತೆ ಅಭಿನ್ನವಾದುದು.

ಬಸವಣ್ಣ ಮತ್ತು ನೀಲಾಂಬಿಕೆ ಇವರ ದಾಂಪತ್ಯ ಜೀವನ ಭೋಗ ಜೀವನವಾಗಿರಲಿಲ್ಲ. ಆದರೆ ದಂಪತಿಗಳು "ಶರಣ ಸತಿ ಲಿಂಗ ಪತಿ" ತತ್ವಕ್ಕೆ ಅಂಟಿಕೊಂಡಿದ್ದರು ಎಂಬುದಕ್ಕೆ "ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯನು" ಎಂಬ ನೀಲಾಂಬಿಕೆಯ ವಚನ ಸಾಕ್ಷಿಯಾಗಿದೆ.

ಶಿವಶರಣೆ ಸತ್ಯಕ್ಕ, ಅಕ್ಕ ಮಹಾದೇವಿಯ ಹಾಗೆಯೇ ವಿರಾಗಿಣಿ. ಶಂಭುಜಕ್ಕೇಶ್ವರನಿಗೆ ತನ್ನನ್ನು ಅರ್ಪಿಸಿಕೊಂಡವಳು. ಅವಳ ಶರಣ ಸತಿ ಲಿಂಗಪತಿ" ಭಾವವನ್ನು ಸೂಚಿಸುವ ವಚನ ಹೀಗಿದೆ.

> "ಇನಿಯಂಗೆ ತವಕವಿಲ್ಲ ಎನಗೆ ಸೈರಣೆಯಿಲ್ಲ
> ಮನದಿಚ್ಛೆಯನರಿವ ಸಖಿಯರಿಲ್ಲ,
> ಮನ್ಮಥ ವೈರಿಯ ಅನುಭಾವದಲ್ಲಿ ಮನ ಸಿಲುಕಿ ಬಿಡದು
> ಇನ್ನೆನೆನಿನ್ನೇವೆ ದಿನವೃಥಾ ಹೋಗಿ, ಯೌವನ ಬೇಸರವ್ಪುಗದ ಮುನ್ನ
> ಪಿನಾಕಿಯ ತಂದು ನೆರಹವ್ವಾ ಶಂಭು ಜಕ್ಕೇಶ್ವರನ"

ಈ ವಚನ ಅಕ್ಕಮಹಾದೇವಿಯ ಇದೇ ಭಾವವುಳ್ಳ ಇನ್ನೊಂದು ವಚನವನ್ನು ಜ್ಞಾಪಿಸುತ್ತದೆ.

''ಬಂದಹನೆಂದು ಬಟ್ಟೆಯ ನೋಡಿ, ಬಾರದಿರ್ದೊಡೆ ಕರಗಿ ಕೊರಗಿದೆನವ್ವಾ
ತಡವಾದಡೆ ಬಡವಾದೆ ತಾಯೇ
ಚೆನ್ನ ಮಲ್ಲಿಕಾರ್ಜುನ ಒಂದಿರುಳಗಲಿದೊಡೆ
ತೆಕ್ಕೆ ಸಡಿಲಿದ ಜಕ್ಕವಕ್ಕಿಯಂತಾದೆನವ್ವಾ''

ಈ ಎರಡೂ ಪದಗಳಲ್ಲಿಯ ಭಾವದಿಂದ ಉಂಟಾಗುವ ಸಾಮರಸ್ಯಾನುಭವ ಅನುಪಮವಾದುದು.

ತನ್ನ ದೃಷ್ಟಿಗೆ ಎಲ್ಲವೂ ಶಿವಮಯವಾಗಿ ತೋರುವ, ಮುಟ್ಟಿದ್ದೆಲ್ಲ ಸುಗಂಧ ಮಯವಾಗುವ ಸ್ಥಿತಿಯೇ ಶರಣನ ಸ್ಥಿತಿ. ಇಂತಹ ಅನುಭಾವಿಗೆ ಈಶ್ವರನು ಎಲ್ಲೆಡೆಯೂ ಗೋಚರಿಸುತ್ತಾನೆ. ಶಿವ ಶರಣರು ದೀಕ್ಷೆಯಿಂದ ಲಿಂಗದಲ್ಲಿ ಜನನ ಅಥವಾ ಕರಸ್ಥಲದಲ್ಲಿ ಜನನವೆಂದು ಹೇಳುತ್ತಾರೆ. ಇದು ವೀರಶೈವರ ಲಿಂಗೋದ್ಭವ ಕಲ್ಪನೆ. ಇದಕ್ಕೆ ''ಅಯೋ ನಿಜತೆ'' ಎಂದೂ ಹೇಳುತ್ತಾರೆ. ಶಿವನು ಸಾಕಾರ ರೂಪದಲ್ಲಿ ಗುರುವಾಗಿ ಬಂದು ಶಿಷ್ಯನಿಗೆ ದೀಕ್ಷೆ ನೀಡಿ ತಾನೇ ಲಿಂಗಸ್ವರೂಪನೆಂಬುದನ್ನು ಬೋಧಿಸುವನು. ಇದು ವಚನ ಶಾಸ್ತ್ರದ ಪ್ರತಿಪಾದನೆ.

ಹಡಪದ ಅಪ್ಪಣ್ಣನ ಹೆಂಡತಿ ಲಿಂಗಮ್ಮ ತನ್ನ ಒಂದು ವಚನದಲ್ಲಿ "ಹಡಪದ ಅಪ್ಪಣ್ಣನೆ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು" ಎಂದು ಹೇಳಿಕೊಂಡಿದ್ದಾಳೆ. ಲಿಂಗವೆಂದರೆ "ಪತಿ'' ಎಂಬ ಶರಣ ಶರಣೆಯರ ನಂಬುಗೆ. "ಶರಣ ಸತಿ ಲಿಂಗಪತಿ'' ಎಂಬ ಮಾತು ಪ್ರಸಿದ್ಧವಾಗಲಿಕ್ಕೆ ಕಾರಣವಾಗಿದೆ.

ಲೋಕದ ಲೌಕಿಕ ಗಂಡರಿಗೂ ತಮ್ಮ ಮನದ ಅಲೌಕಿಕ ಗಂಡನಿಗೂ ಇರುವ ಅಸಾಧಾರಣ ಅಂತರವನ್ನು ಅವರ ಗುಣ ವಿಶೇಷ ವೈಶಿಷ್ಟ್ಯಗಳಿಂದ ಕೆಲ ಶಿವಶರಣಿಯರು ತಮ್ಮ ಬೆಡಗಿನ ವಚನಗಳಲ್ಲಿ ಅತ್ಯಂತ ಮಾರ್ಮಿಕವಾಗಿ ಬಣ್ಣಿಸಿದ್ದಾರೆ. ಅವರ ಆಚರಣೆ ಕುರಿತ ವಿಚಾರಗಳು ವಚನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಳವಟ್ಟಿವೆ. ವ್ರತ ನಿಯಮಗಳನ್ನು ಕುರಿತು ಶರಣರಿಗಿಂತ ಶರಣೆಯರು ಒಂದು ಕೈ ಮೇಲಾಗಿಯೇ ಹೇಳಿದುದನ್ನು ಆಚರಣೆಯಲ್ಲಿ ತಂದು ಜೀವನ ಹಸನಾಗಿಸಿಕೊಂಡಿದ್ದನ್ನು ಅಕ್ಕ ಮಹಾದೇವಿ, ಸತ್ಯಕ್ಕ, ಗಜೇಶ ಮಸಣಯ್ಯ, ರೆಮ್ಮವ್ವೆ, ಲಿಂಗಮ್ಮ, ಸೋಮವ್ವೆ ಮುಂತಾದವರ ವಚನಗಳಲ್ಲಿ ಕಾಣಬಹುದು.

೧೧. ಲಿಂಗಾಂಗ ಸಾಮರಸ್ಯ

"ಲಿಂಗ ಪ್ರಾಣ. ಪ್ರಾಣ ಲಿಂಗವಾಯಿತ್ತು,
ಅಂಗಲಿಂಗ, ಲಿಂಗ ಅಂಗವಾಯಿತ್ತು,
ಗುಹೇಶ್ವರ ಲಿಂಗದಲ್ಲಿ ಸರ್ವಾಂಗ
ಪ್ರಾಣಲಿಂಗವಾಯಿತ್ತು".

ಆನಂದ ಭಕ್ತಿಯ ಮುಂದಿನ ಹಂತವೇ ಸಮರಸ ಭಕ್ತಿ. ಈ ಭಕ್ತಿಯನ್ನಾಶ್ರಯಿಸಿದವನು ಐಕ್ಯನು. ಐಕ್ಯಾಂಗನು ಸ್ವಯಂ ಆನಂದ ರೂಪಿಯಾಗಿರುತ್ತಾನೆ.

ಅಂಗಲಿಂಗಿಗಳ ಸಂಗ ಸುಖವನ್ನು ಚನ್ನಬಸವಣ್ಣನು ಹೀಗೆ ಹೇಳಿರುತ್ತಾನೆ.

"ಅಂಗದುದಯ ಲಿಂಗ ಸುಖ
ಲಿಂಗದುದಯ ಅಂಗ ಸುಖ
ಅಂಗಲಿಂಗ ಸಂಗಸುಖದಿಂದ
ಮಿಕ್ಕಮೀರಿನಿಂದ
ಪರಮ ಸುಖವನೇ ನೆಂಬೆನಯ್ಯ
ಕೂಡಲ ಚನ್ನಸಂಗನ ಶರಣನೇ ನೆಂಬೆನಯ್ಯ"

ಇಂತಹ ಅನೇಕ ಮಾತುಗಳಲ್ಲಿ ಅಂಗಲಿಂಗ ಸಂಬಂಧದ ಪರಮ ಸುಖವನ್ನು ಸೂಚಿಸುತ್ತಾನೆ. ಲಿಂಗದಲ್ಲಿ ನಟ್ಟ ಮನಸ್ಸು ಪಡುವ ಆನಂದದ ಬೆರಗನ್ನು ಇನ್ನೊಂದು ವಚನ ಹೀಗೆ ಹೇಳುತ್ತದೆ.

"ಎನ್ನ ಮನವು ನಿಮ್ಮಲ್ಲಿ ನೆಟ್ಟು
ತೆಗೆಯಲಾರದ ಬೆಳಗು ನೋಡಯ್ಯ
ಇಹವೆಂಬುದನರಿಯೆ ಪರವೆಂಬುದನರಿಯೆ
ಪರಮಾನಂದದೊಳಿರ್ದೆ ನೋಡಯ್ಯ"

ಲಿಂಗದಲ್ಲಿ ನಟ್ಟ ದೃಷ್ಟಿ ಮನಸ್ಸನ್ನೂ ಅದರಲ್ಲಿ ಲೀನಗೊಳಿಸುತ್ತದೆ. ಹೀಗೆ ಲಿಂಗದಲ್ಲಿ ನಟ್ಟ ಮನಸ್ಸೇ ಅಂಗಲಿಂಗ ಸಂಬಂಧವಾಗಿ ಬೆಳಗಾಗಿ ಹೊಳೆಯುತ್ತದೆ. ಅದು ಬೆಳಗಿನಲ್ಲಿ ಬೆಳಗಾದಂತೆ.

ಲಿಂಗವನ್ನಪ್ಪಿದ ಶರಣನ ದೇಹವನ್ನು ವಾಯುವನ್ನಪ್ಪಿದ ಪರಿಮಳಕ್ಕೆ ಹೋಲಿಸಿದ್ದಾರೆ.

ಅಲ್ಲಮ ಪ್ರಭುಗಳು ಅಕ್ಕಮಹಾದೇವಿಗೆ "ತನುಗುಣ ನಾಸ್ತಿಯಾಗಿ ಲಿಂಗ ಸಂಗಿಯಾದಳು, ಗುಹೇಶ್ವರಲಿಂಗದಲ್ಲಿ ಸ್ವಯಲಿಂಗವಾದಳು ಅರ್ಥಾತ್ ತಾನೇ ಲಿಂಗ ಸ್ವರೂಪಿಯಾದಳು" ಎಂದು ಕೊಂಡಾಡಿ ತಲೆಬಾಗಿದ್ದಾರೆ. ಅದೇ ರೀತಿ ಅಕ್ಕಮಹಾ ದೇವಿಯು "ಲಿಂಗ ಸುಖ ಸಂಗದಲ್ಲಿ ಮನ ಅರ್ಪಿತವಾಯಿತು, ಕೂಡುವ ಕೂಟದ ಅಥವಾ ಲಿಂಗಾಂಗ ಸಾಮರಸ್ಯದ ಬಯಕೆಯು ಉಳಿಯದಾಯಿತು" ಎಂದು ಹೇಳಿದ್ದಾಳೆ.

ವೀರಶೈವ ಧರ್ಮದಲ್ಲಿ ಅಂಗನು ಲಿಂಗದಲ್ಲಿ ಸಮರಸವಾಗಲು ಷಟ್‌ಸ್ಥಲ ದಾಚರಣೆಯನ್ನು ಕಲ್ಪಿಸಲಾಗಿದೆ. ಇದುವೇ ಭವ ಬಂಧನವನ್ನು ಕಳೆದು ನಿತ್ಯ ಮುಕ್ತಿ, ನಿತ್ಯಾನಂದ ಕೊಡುವ ಲಿಂಗಾಂಗ ಸಾಮರಸ್ಯವಾಗಿದೆ. ಇಲ್ಲಿ ಸುಲಲಿತ ವೇದಾಂತವು ಸುಗಮವಾದ ಸಿದ್ಧಾಂತದೊಡನೆ ಕೂಡಿಕೊಂಡಿದೆ. ಭಕ್ತಿ ಜ್ಞಾನಗಳು, ಈ ಮಾರ್ಗದ ತಿರುಳು. ಆದುದರಿಂದ ಇದರಲ್ಲಿ ದ್ವೈವತ್ವದ ಭಕ್ತಿಯೂ ಉಂಟು, ಅದ್ವೈತದ ಜ್ಞಾನವೂ ಉಂಟು. ಭಕ್ತನು "ಲಿಂಗವ ಮುಟ್ಟಿದ ಕೈ ಮೊಸಲು, ಲಿಂಗವ ಧರಿಸಿದ ದೇಹ ದೇಗುಲ ಎಂಬ ತತ್ವದಾಚಾರಣೆಯಂತೆ ಪರಿಶುದ್ಧನಾಗಿರು ತ್ತಾನೆ.

ನೀರಿನಲ್ಲಿ ನೀರು, ಹಾಲಿನಲ್ಲಿ ಹಾಲು, ಬಯಲಲ್ಲಿ ಬಯಲು ಬೆರಸಿದಂತೆ ಒಂದಾಗಿ ಮಹಾಲಿಂಗವಾದಾತನೇ ಐಕ್ಯನೆನಿಸುತ್ತಾನೆ. ಮಹಾದೇವಿಯಕ್ಕನ ಸಮರಸ ಭಕ್ತಿಯ ಪರಿಣಾಮವಾದ ಲಿಂಗಾಂಗ ಸಾಮರಸ್ಯದ (ಶಿವ ಜೀವೈಕ್ಯ) ಸ್ವಾನುಭಾವ ದಲ್ಲಿ ದ್ವೈತಭಾವವಿಲ್ಲ. ಉಪ್ಪಿನ ಗೊಂಬೆ ಸಮುದ್ರವನ್ನು ಅಳೆಯಲು ಹೋದಂತೆ ಎಂದು ಹೇಳುತ್ತಾರೆ.

ಅಗ್ನಿಯನ್ನು ಆವರಿಸಿದ ಕಟ್ಟಿಗೆಯು ಅಗ್ನಿಯೇ ಆಗುವಂತೆ ಲಿಂಗವನ್ನು ಧರಿಸಿ ದವನು ಲಿಂಗಮಯನೇ ಆಗುವನು. ಲಿಂಗ ಭಕ್ತನು ಸರ್ವಾಂಗ ಲಿಂಗಮಯನಾಗಲು ಲಿಂಗ ಪೂಜೆಯೇ ಸಾಧನವು. ಲಿಂಗವು ಸತ್‌ಕ್ರಿಯಾ ಜ್ಞಾನಗಳ ಸ್ವರೂಪವಾಗಿದೆ. ಅದನ್ನು ನೀನು ಪೂಜಿಸಿ ಲಿಂಗವೇ ನೀನಾಗೆಂದು ಗುರುವು ಉಪದೇಶಿಸುತ್ತಾನೆ. ಗುರು ಹೇಳಿದಂತೆ ಇಷ್ಟಲಿಂಗ ಪೂಜಿಸಿ ಪೂರ್ಣಲಿಂಗನಾಗಬೇಕು ಅಂದರೆ ಭಕ್ತನು ಮಹಾ ದಾನಂದ ಭರಿತನಾಗುವನು. ಇದುವೇ ಲಿಂಗಾಂಗ ಸಾಮರಸ್ಯ.

ಲಿಂಗಾಂಗ ಸಾಮರಸ್ಯವನ್ನು ಎತ್ತಿ ತೋರಿಸುವಂಥ ಮುಪ್ಪಿನ ಷಡಕ್ಷರಿ ಶಿವ ಯೋಗಿಗಳ ಒಂದು ಶ್ರೇಷ್ಠ ಭಕ್ತಿ ಗೀತೆ ಹೀಗಿದೆ—

"ಎನ್ನ ಕರದೊಳಗಿರ್ದು ಎನ್ನೊಳೇತಕೆ ನುಡಿಯೆ,
ಎನ್ನ ಭವ ಭವದಿಲ್ಲಿ ಬಿಡದಾಳ್ದನೆ ?
ಎನ್ನ ಚಿಂತಾಮಣಿಯೆ, ಎನ್ನ ಪರುಷದ ಖನಿಯೆ
ಎನ್ನ ಬೇಡಿದುದೀವ ಸುರಭೂಜವೆ
ಎನ್ನ ಸಂಜೀವನವೆ, ಎನ್ನ ಪರಮಾಯುವೆ
ಎನ್ನ ಕರದೊಳಗಿದು ಏಕೆ ನುಡಿಯೆ ?
ಎನ್ನ ಮಾತೆಯು ನೀನೆ, ಎನ್ನ ತಾತನು ನೀನೆ,
ಎನ್ನ ಬಂಧುವು ಬಳಗ ಸಖನು ನೀನೆ
ಎನ್ನ ಪತಿಯೂ ನೀನೆ, ಎನ್ನ ಹಿತನೂ ನೀನೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ?
ಎನ್ನ ನಿಲ್ಲಿಗೆ ತಂದು ಭಿನ್ನವನು ಮಾಡಿದೆ
ಅನ್ಯನೇ ನಾನಿನಗೆ ? ಹೇಳು ಗುರುವೆ ?
ಎನ್ನೊಡನೆ ನುಡಿಯದಿರೆ ನಿನ್ನನಾ ಭವ ಭವದಿ
ಚೆನ್ನ ಬಿಡುವೆನೆ ಷಡಕ್ಷರಿ ಲಿಂಗವೆ ?"

ಲಿಂಗದೊಡನೆ ಮಾತನಾಡುತ್ತಿರುವಂತೆ ತೋರುವ ಈ ಗೀತೆಯನ್ನು ಕೇಳಿದರೆ ಲಿಂಗವು ಬಾಯ್ದೆರೆದು ಮಾತನಾಡುವುದೇನೋ ಅನಿಸುತ್ತದೆ, ಅದೆಂತಹ ಸಾಮರಸ್ಯ !

೧೨. ಇಷ್ಟಲಿಂಗ

"ಇಷ್ಟ" ಎಂದರೆ "ಅಪೇಕ್ಷೆ" ಅಥವಾ "ಪ್ರೀಯವಾದ" ಎಂದರ್ಥ. ಇಷ್ಟ ಲಿಂಗವೆಂದರೆ ಬೇಡಿದ ಫಲ ನೀಡುವ ದೈವ ಎಂದು ಅರ್ಥೈಸಿಕೊಳ್ಳಬಹುದು.

ಬಸವಣ್ಣನವರು ತಮ್ಮ ಆನಂದಾತಿರೇಕವನ್ನು ಅವರು ಹೀಗೆ ವ್ಯಕ್ತ ಪಡಿಸಿದ್ದಾರೆ.

"ಶ್ರೀಗುರು ಕರುಣಿಸಿ ಹಸ್ತಮಸ್ತಕ ಸಂಯೋಗದಿಂದ
ಪ್ರಾಣಲಿಂಗವನ್ನು ಕರತಳಾಮಳಕವಾಗಿ
ಕರಸ್ಥಲಕ್ಕೆ ತಂದು ಕೊಟ್ಟನಾಗಿ
ಒಳಗೆನ್ನದೆ ಹೊರಗೆನ್ನಡೆ ಆ ಲಿಂಗದಲ್ಲಿ
ನಚ್ಚಿ, ಮೆಚ್ಚಿ ಹರುಷದೊಳೋಲಾಡಿದೆ
ಆ ಲಿಂಗವ ಪಡೆದು ಆನಂದಿಸುವೆ
ಕೂಡಲ ಸಂಗಮ ದೇವಾ"

ವೀರಶೈವ ಧರ್ಮದ ಲಾಂಛನ ಇಷ್ಟಲಿಂಗ. ಅದನ್ನು ಧರಿಸಿದಾಗಲೇ ವೀರ ಶೈವನೆನ್ನಿಸಿಕೊಳ್ಳುತ್ತಾನೆ. ಅದು ಜಗದಗಲ-ಮುಗಿಲಗಲ-ಮಿಗೆಯಗಲ ಮತ್ತು ಅಗಮ್ಯ-ಅಗೋಚರ-ಅಪ್ರಮಾಣನಾಗಿರುವ ಪರಮಾತ್ಮನ ಸಂಕೇತ. ಹೀಗೆ ವಿಶ್ವಾತ್ಮನ ಕುರುಹಾದ ಇಷ್ಟಲಿಗವು "ವಿಶ್ವವೇ ನನ್ನ ಮನೆ, ಮಾನವ ಕುಲವೇ ನನ್ನ ಕುಟುಂಬ" ಎಂಬ ಭಾವನೆಯನ್ನು ಬೆಳೆಸಲು ಸೂತ್ರನಾಯಿತು.

ಗುರುವಿನಿಂದ ದೀಕ್ಷಾಬದ್ಧನಾಗಿ ಪಡೆದುಕೊಂಡ ಲಿಂಗಕ್ಕೆ ಇಷ್ಟಲಿಂಗವೆಂದೆನ್ನುವರು. ವೀರಶೈವ ಧರ್ಮವು ಲಿಂಗವನ್ನು ಶಿವನ ಪ್ರತೀಕವೆಂದು ತಿಳಿಯುತ್ತದೆ. ಶಿವನು ಸೃಷ್ಟಿಸಿದ ಪ್ರಪಂಚವೆಲ್ಲವೂ ಲಿಂಗ ಸ್ವರೂಪವೆಂದು ಭಾವಿಸುತ್ತದೆ, ಮತ್ತು ಪ್ರಕೃತಿಯೇ ಪೀಠ, ಶಿವನೇ ಲಿಂಗ ಅಂದರೆ ಶಿವಶಕ್ತಿಯ ಅವಿನಾ-ಭಾವವೇ ಲಿಂಗ ವಾಗಿದೆ ಎಂದು ನಂಬುತ್ತದೆ. ಅನೇಕ ವಿಭೂತಿ ಪುರುಷರು ಆಚಾರ್ಯ ಮಹೋದಯರು ಇಷ್ಟಲಿಂಗವನ್ನು ಪೂಜಿಸಿ ಶಿವ ಸ್ವರೂಪರಾಗಿ ಶಿವ ಯೋಗಿಗಳೆಂದು ಪ್ರಸಿದ್ಧರಾಗಿದ್ದಾರೆ. ಬಸವಾದಿ ಪ್ರಮಥರು ಇಷ್ಟಲಿಂಗವನ್ನು ಪೂಜಿಸಿ ಶಿವ ಶರಣರೆಂದು ಪ್ರಖ್ಯಾತರಾಗಿ ಇಷ್ಟಲಿಂಗ ಪೂಜೆಯು ಸ್ಥಾವರ ಲಿಂಗ ಪೂಜೆಗಿಂತ ಶ್ರೇಷ್ಟವೆಂದು ಜಗತ್ತಿಗೆ ಸಾರಿ ಹೇಳಿದ್ದಾರೆ.

ಅಲ್ಲಮ ಪ್ರಭುಗಳು ಹೀಗೆ ಹೇಳುತ್ತಾರೆ---

"ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ,
ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ,
ಸರ್ವಕಾರಣ ಲಿಂಗವಾಗಿ, ಲಿಂಗವನೆ ಅರಿದರಿದು
ಸಂಗ ಸುಖದೊಳೋಲಾಡುವೆ ಗುಹೇಶ್ವರಾ".

ಸದ್ಗುರುವು ಶಿಷ್ಯನನ್ನು ಕೃಪಾ ದೃಷ್ಟಿಯಿಂದ ವೀಕ್ಷಿಸಿ ಅವನ ಶರೀರಕ್ಕೆ ಅಂಟಿಕೊಂಡಂಥ ದೋಷವನ್ನು ಹೋಗಲಾಡಿಸಿ, ಸಕಾಮ ಕರ್ಮಂಗಳನ್ನು ಬಿಡಿಸಿ ನಿಷ್ಕಾಮ ಕ್ರಿಯೆಗಳನ್ನು ಬೋಧಿಸಿ ಇಷ್ಟಲಿಂಗವನ್ನು ಅನುಗ್ರಹಿಸುತ್ತಾನೆ. ಇಲ್ಲಿ ಹಸ್ತಮಸ್ತಕ ಸಂಯೋಗಾತ್ಮಕ ಕ್ರಿಯೆಯು ಬಹಳ ಮಹತ್ವವುಳ್ಳದ್ದು. ಸದಾಚಾರಗಳನ್ನು ಆಜ್ಞಾಪಿಸಿ, ಉತ್ತಮರ ಮತ್ತು ಶರಣರ ನಡೆಯನ್ನು ತಿಳಿಸಿ ಕೊಡುತ್ತಾನೆ. ಸಪ್ತಸಂಸ್ಕಾರಗಳಿಂದ ಸ್ಥೂಲ ದೇಹದ ಕಾರ್ಮಿಕ ಮಲ ನಾಶವಾಗುವದು. ಷಡಕ್ಷರ ಮಹಾಮಂತ್ರವನ್ನು ಉಪದೇಶಿಸಿ ಮಂತ್ರ ದೀಕ್ಷೆ ನೀಡುತ್ತಾನೆ. ಏಳು ಉಪ ಸಂಸ್ಕಾರಗಳಿಂದ ಕ್ರಿಯಾ ದೀಕ್ಷೆ ನೀಡಿ ಭಾವ ವಿಶಾಲವಾಗುವಂತೆ ಮಾಡುತ್ತಾನೆ. ಹೀಗೆ ಸದ್ಗುರುವು ಮೋಕ್ಷ ಗುರುವಾಗಿ ಭಾವದಲ್ಲಿ ಪರಿಶುದ್ಧತೆಯನ್ನು ವ್ಯಾಪಕತೆಯನ್ನು ತುಂಬಿ ಭಾವಲಿಂಗವನ್ನು ನೆಲೆಗೊಳಿಸುವನು. ನಿತ್ಯ ಮುಕ್ತಿಯನ್ನು ಪಡೆದು ನಿತ್ಯಾನಂದವನ್ನು ಹೊಂದಲು ಅಣಿಗೊಳಿಸುವನು. ತನ್ನ ವರದ ಹಸ್ತವನ್ನು ಶಿಷ್ಯನ ಶಿರದ ಮೇಲಿಟ್ಟು ಮಹಾ ಚೈತನ್ಯವನ್ನು ಭಾವಿಸಿ ಮನದಲ್ಲಿ ಮೂರ್ತರೂಪ ಗೊಳಿಸಿಕೊಂಡು ನಂತರ ಅದನ್ನು ಶಿಷ್ಯನ ಕಣ್ಣುಗಳಿಂದ ತನ್ನ ಕೃಪಾಪೂರ್ಣ ಕಣ್ಣುಗಳ ಮುಖಾಂತರ ಹೊರತೆಗೆದು ಇಷ್ಟಲಿಂಗವನ್ನಾಗಿ ಮಾಡಿ ಕರುಣಾಮಯ ಹೃದಯದಿಂದ ಶಿಷ್ಯನ ಎಡಗೈಯಲ್ಲಿ ಇರಿಸುತ್ತಾನೆ. "ಈ ಇಷ್ಟಲಿಂಗವು ನಿನ್ನ ಚಿತ್‌ಸ್ವರೂಪ, ಇದು ಸುಜ್ಞಾನ ಸತ್ಕ್ರಿಯೆಗಳನ್ನು ಸಮನ್ವಯಗೊಳಿಸುವ ಸಾಧನ" ಎಂದು ಉಪದೇಶಿಸಿ ಬಲಗಿವಿಯಲ್ಲಿ ಷಡಕ್ಷರ ಮಹಾಮಂತ್ರವನ್ನು ಬೋಧಿಸಿ ಇದುವೇ ನಿನ್ನ ಪ್ರಾಣ, ಪ್ರಾಣ ಬೇರೆಯಲ್ಲ, ಲಿಂಗ ಬೇರೆಯಲ್ಲ, ಲಿಂಗ ಪ್ರಾಣಿಯಾಗಿ ಬಾಳೆಂದು ಹರಸುತ್ತಾನೆ. ಶಿರವೆಂಬ ಅರಮನೆಯಿಂದ ಕರವೆಂಬ ಕಮಲಕ್ಕೆ ಬಂದ ಈ ಮಹಾಲಿಂಗವು ಸಾಮಾನ್ಯವಲ್ಲ. ಇದು ಇಷ್ಟಲಿಂಗ, ಇಷ್ಟಾರ್ಥವನ್ನು ಪೂರೈಸುವಂಥಹದು ಎಂದು ಅಭಯ ನೀಡುತ್ತಾನೆ. ಈ ಲಿಂಗದ ಮಧ್ಯದಲ್ಲಿ ಮೂರು ಲೋಕದ ಸಕಲ ಚರಾಚರ ಜಗತ್ತು ಅಡಗಿದೆ. ಇದನ್ನು ಹೊರತು ಪಡಿಸಿ ಬೇರೆಯಾವುದೂ ಇಲ್ಲ. ಎಲ್ಲವನ್ನೂ ಒಳಗೊಂಡ ಮಹಾಲಿಂಗವನ್ನು ಚೆನ್ನಾಗಿ ಪೂಜಿಸಬೇಕೆಂದು ಜ್ಞಾನಿಗಳು ಹೇಳಿದ್ದಾರೆ. ಇದು ಬ್ರಹ್ಮಾದಿ ದೇವತೆಗಳಿಗೂ ದೊರಕಿಲ್ಲ. ಇಂಥ ಮಹಾ ಘನಲಿಂಗವನ್ನು ಸದ್ಗುರು ಇಷ್ಟಲಿಂಗವನ್ನಾಗಿ ಕರುಣಿಸುತ್ತಾನೆ. ಅರುಹಿನ ಕುರುಹನ್ನಾಗಿ ಉಪದೇಶಿಸುತ್ತಾನೆ. ಚಿತ್‌ಚೈತನ್ಯದ ಚುಳುಕನ್ನಾಗಿ ಅನುಗ್ರಹಿಸುತ್ತಾನೆ.

ಇಷ್ಟಲಿಂಗವನ್ನು ಸಂಶೋಧಿಸಿದ ಮಹಾನುಭಾವರು ಅದನ್ನು ಮನುಷ್ಯನ ಆಕಾರಕ್ಕೇನೇ ಹೋಲಿಸಿದ್ದಾರೆ. ಅದು ಐದು ಲಕ್ಷಣಗಳಿಂದ ಕೂಡಿರಬೇಕೆಂದು ಹೇಳುತ್ತಾರೆ. ಬಾಣ, ಪೀಠ, ವಿಸ್ತಾರ, ಎತ್ತರ ಮತ್ತು ಗೋಮುಖ, ಶಿವಪೂಜೆಗೆ ಕುಳಿತ ವ್ಯಕ್ತಿಯನ್ನು ನೋಡಿದರೆ ಲಿಂಗದ ಆಕಾರವಾಗಿಯೇ ಕಾಣುವನು. ಅವನ

ಕೆಳಭಾಗವೇ ಪೀಠ, ದಿಡವೇ ಎತ್ತರ, ಶಿರವೇ ಬಾಣ, ಎಡಗೈ ಅಂಗೈಯಲ್ಲಿ ಲಿಂಗ ಹಿಡಿದು ಅದನ್ನು ನೆಟ್ಟ ದೃಷ್ಟಿಯಲ್ಲಿ ನೋಡುವುದೇ ಗೋಮುಖವೆನಿಸುವದು. ಲಿಂಗದ ಆಕಾರಕ್ಕೂ ಅಂಗದ ಆಕಾರಕ್ಕೂ ಭೇದವಿಲ್ಲದೇ ಅಂಗದಲ್ಲಿ ಲಿಂಗವನ್ನು ಲಿಂಗ ಗುಣ ಗಳನ್ನು ಅಳವಡಿಸಿಕೊಂಡರೆ ಲಿಂಗವೇ ತಾನಾಗುವನು.

ಗುರು ಸಂಸ್ಕಾರವಿಲ್ಲದೇ ಲಿಂಗಕಟ್ಟಿಕೊಂಡರೆ ಚೈತನ್ಯ ಬರುವುದಿಲ್ಲ. ಚೈತನ್ಯ ಮಯ ಇಷ್ಟಲಿಂಗವುಳ್ಳವನೇ ಲಿಂಗಾಯತನೆನಿಸಿಕೊಳ್ಳುತ್ತಾನೆ. ಲಿಂಗಾಯತ ತಂದೆ-ತಾಯಿಗಳ ಹೊಟ್ಟೆಯಲ್ಲಿ ಹುಟ್ಟಿದ ಮಾತ್ರಕ್ಕೆ ಲಿಂಗಾಯತನಾಗುವುದಿಲ್ಲ. ಗುರುವಿನ ಕೃಪೆಯಿಂದ ಲಿಂಗ ಧಾರಣ ಮಾಡಿದವನೇ ಲಿಂಗಾಯತ. ಧಾರಣ ಮಾಡಿದ ಮೇಲೆ ನಿಷ್ಟೆಯಿಂದ ಪೂಜೆ ಮಾಡಿ ಅದನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕು. ಆಮೇಲೆ ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಗಿ ಸಮರಸಗೊಳ್ಳಬೇಕು. ಆಗ ನಿಜವಾದ ಲಿಂಗಭಕ್ತನೆನ್ನಿಸಿಕೊಳ್ಳುವನು. ಅವನಷ್ಟು ಸುಖಿಯಾದ ಜೀವಿ ಬೇರೆ ಯಾರೂ ಇಲ್ಲ. ಇಂಥ ದಿವ್ಯಲಿಂಗವನ್ನು ಪಡೆದ ಮೇಲೆ ಕಂಡ ಕಂಡ ದೇವತೆಗಳನ್ನು ಆರಾಧಿಸುವ ಅವಶ್ಯಕತೆಯಿಲ್ಲ. ಅಂದರೆ ಅನ್ಯ ದೇವತೆಗಳನ್ನು ತಿರಸ್ಕರಿಸಬೇಕೆಂದೆನೂ ಅಲ್ಲ. ತನ್ನ ಇಷ್ಟಲಿಂಗದಲ್ಲಿಯೇ ಎಲ್ಲವನ್ನೂ ಕಂಡುಕೊಳ್ಳಬೇಕು.

ಇಷ್ಟಲಿಂಗವನ್ನು ಇನ್ನೊಂದು ದೃಷ್ಟಿಯಿಂದ ಕಾಣಬಹುದು. ಲಿಂಗದಲ್ಲಿಯ "ಪೀಠ" ಶಕ್ತಿ ಇದ್ದಂತೆ "ಬಾಣ" ಶಿವನಿದ್ದಂತೆ, ಶಿವಶಕ್ತಿಯರನ್ನು ಒಂದುಗೂಡಿಸುವ ಸಂಕೇತವೇ ಲಿಂಗಕ್ಕೆ ಕಪ್ಪು ಕಂತೆಯೆನ್ನಿಡುವದು ಎಂದು ಭಾವಿಸಬಹುದು. ಈ ಕಪ್ಪು ಕಂತೆಯನ್ನು ನೆಟ್ಟ ದೃಷ್ಟಿಯಿಂದ ನೋಡುವುದರಿಂದ ಕಂಗಳ ಕಾಂತಿ ಬೆಳಗಿ ಅದಕ್ಕೆ ಪ್ರಕಾಶ ಪ್ರಾಪ್ತನಾಗುತ್ತದೆ. ಕರಿಯ ಮೋಡದಲ್ಲಿ ಮಿಂಚು ಸ್ಫುಟವಾಗಿ ಕಾಣುವಂತೆ ಲಿಂಗ ಮತ್ತು ಕಣ್ಣಿನ ನೋಟದಲ್ಲಿ ಪ್ರಕಾಶವು ಸ್ಫುಟವಾಗಿ ತೋರು ವದು. ಜ್ಞಾನೇಂದ್ರಿಯಗಳಲ್ಲಿ ಪ್ರಧಾನವಾದ ಕಣ್ಣೇ ಇಷ್ಟಲಿಂಗಕ್ಕೆ ಮೂಲವಾಗಿದೆ. ಕಣ್ಣಿಗೆ ಕಾಂತಿಯನ್ನು ಕೊಡುವ ಲಿಂಗವು ಕಳಾಮಯವಾಗಿರುತ್ತದೆ. ಇಷ್ಟಲಿಂಗ ಚಿಕ್ಕದಾದರೂ ಅದರ ಕೀರ್ತಿ ಬಹಳ ದೊಡ್ಡದು. ಮಸ್ತಕದಲ್ಲಿಯ ಚಿಚ್ಚೈತನ್ಯವು ಈ ಇಷ್ಟಲಿಂಗದಲ್ಲಿ ಚುಳುಕಾಗಿದೆ, ಬೆಳಕಾಗಿದೆ.

ಇಷ್ಟಲಿಂಗವನ್ನು ಧರಿಸುವ ಭಕ್ತನು ಯಾರೊಬ್ಬರನ್ನೂ ಕೈಯೊಡ್ಡಿ ಬೇಡ ಬಾರದು. ಕಾಯಕ ಮಾಡಿ ಗುರುಲಿಂಗ ಜಂಗಮಕ್ಕೆ ಸಲ್ಲಿಸುವ ಕರ್ತವ್ಯ ಭಕ್ತನ ದಾಗಬೇಕು. ಜೊತೆಗೆ ಆ ಪೂಜ್ಯರಿಂದ ಪಾದೋದಕ ಪ್ರಸಾದಗಳಿಗಾಗಿ ಕೈಯೊಡ್ಡ ಬೇಕಲ್ಲದೇ ತನ್ನ ಹೊಟ್ಟೆ ಹೊರೆಯಲು ಸತಿಸುತರನ್ನು ಸಲುಹಲು ಕನಸಿನಲ್ಲಿಯೂ ಮಾನವರನ್ನು ಯಾಚಿಸಬಾರದು. ಭವಿಗಳನ್ನಂತೂ ಎಂದೂ ಬೇಡಬಾರದು. ಅವರ ಪದಾರ್ಥಗಳು ಇಷ್ಟಲಿಂಗಕ್ಕೆ ಸಲ್ಲಲಾರವು. "ಬೇಡುವವರಿಲ್ಲದೇ ಬಡವನಾದೆನಯ್ಯಾ"

ಎಂದು ಬಸವಣ್ಣನವರು ಕಲ್ಯಾಣದಲ್ಲಿ ಬೇಡದ ಜನರಿಲ್ಲವೆಂದೇ ಉದ್ಗಾರ ತೆಗೆದಿದ್ದಾರೆ. ಯಾಕೆಂದರೆ ಅಲ್ಲಿ ಪ್ರತಿಯೊಬ್ಬರೂ ಸಂತೃಪ್ತ ಜೀವನವನ್ನು ನಡೆಸುತ್ತಿದ್ದರು. ಲಿಂಗವೇ ತಾನಾದ ಶರಣನು ಲಿಂಗದ ಹಂಗಿನೊಳಗೂ ಇರುವುದಿಲ್ಲವಾದ ಕಾರಣ ಅನ್ಯರ ಹಂಗೇಕೆ ? ಲಿಂಗ ಧರಿಸುವ ಶರಣನಲ್ಲಿ ಅಹಂಕಾರ, ಮಮಕಾರ, ಅಷ್ಟಮದಗಳಿಗೆ ಅವಕಾಶವಿಲ್ಲದಾಗಬೇಕು. ಲಿಂಗ ವಿಷಯವಲ್ಲದ ಶಬ್ಧಗಳನ್ನು ಮಾತಾಡಬಾರದು, ಕೇಳಲೂಬಾರದು. ಶಿವಭಕ್ತರಲ್ಲದವರಿಗೆ ಶಿರಬಾಗಬಾರದು. ತಪ್ಪಿಯಾದರೂ ಸುಳ್ಳು ಮಾತಾಡಬಾರದು. ಪರಸ್ತ್ರೀಯರ ಸಂಗ ಬಿಡಬೇಕು. ಲಿಂಗ ಪೂಜಾಕ್ರಮವನ್ನು ಚಾಚೂ ತಪ್ಪದಂತೆ ಪಾಲಿಸಬೇಕು. ಇದುವೇ ವೀರಶೈವರ ಇಷ್ಟಲಿಂಗ ಧಾರಕರ ಸತ್ಯಶುದ್ಧ ನಡೆ ನುಡಿ. ಅಂಥ ನಡೆ, ನುಡಿಯಲ್ಲದೇ ಕೇವಲ ಎದೆಯ ಮೇಲೆ ಲಿಂಗ ಧರಿಸಿದರೆ ಸಂಪೂರ್ಣ ಫಲ ಸಿಕ್ಕದು. ಇಂಥ ತತ್ವಗಳನ್ನು ಚೆನ್ನಾಗಿ ತಿಳಿದು ಲಿಂಗ ಧರಿಸಿದರೆ ಭಕ್ತನ ಶರೀರವೆಲ್ಲ ಲಿಂಗಮಯವಾಗುವದರಲ್ಲಿ ಸಂದೇಹವಿಲ್ಲ, ಅವನ ಅಂಗಾಂಗಗಳೆಲ್ಲ ಲಿಂಗ ಸ್ವರೂಪವನ್ನು ಹೊಂದಿ ಅವನು ಲಿಂಗನಾಗುವನು. ಶಿವನೇ ತಾನಾಗುವನು.

ಇಷ್ಟಲಿಂಗದ ಸ್ಪರ್ಶವೆಂದರೆ ಮೈಯಲ್ಲಿ ಮಿಂಚು ಸಂಚಾರವಾದಂತೆ. ವಿದ್ಯುತ್ ಶಾಖ ತಗಲಿದಂತೆ. ತ್ರಿಕಾಲದಲ್ಲಿಯೂ ಇಷ್ಟಲಿಂಗ ಶರೀರದ ಮೇಲಿರಬೇಕು. ಅದು ಪ್ರತಿಯೊಂದು ಸಂಸಾರಿಕ ಅನಿಷ್ಟವನ್ನು ಪರಿಹರಿಸುತ್ತದೆ. ನಾಭಿಯ ಕೆಳಗೆ ಲಿಂಗ ವನ್ನು ಧರಿಸಬಾರದು. ಅಗ್ನಿಯ ಸಂಸ್ಕಾರವಿಲ್ಲದೇ ಅಕ್ಕಿಯು ಹೇಗೆ ಅನ್ನವಾಗುವ ದಿಲ್ಲವೋ ಹಾಗೆ ಅಂಗನು ಲಿಂಗಮಯನಾಗಬೇಕಾದರೆ ಸತ್ಕ್ರಿಯೆ ಹಾಗೂ ಸುಜ್ಞಾನ ಗಳ ಸಂಸ್ಕಾರ ಅವಶ್ಯಬೇಕು.

ಸ್ಥಾವರ ಲಿಂಗವು ಹಿಂಸಾತ್ಮಕ ಯಜ್ಞದ ಅಧಿಪತಿಯಾದ ಕೈಲಾಸದ ಶಿವನ ಸಂಕೇತವಾದರೆ ಇಷ್ಟಲಿಂಗವು ಅಹಿಂಸಾತ್ಮಕ ಪರಶಿವನ ಪ್ರತೀಕವಾಗಿದೆ. ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ ಅಖಂಡ ಎಂಬ ಪರವಸ್ತುವಿನ ಆರು ಲಕ್ಷಣ ಗಳನ್ನು ಒಳಗೊಂಡಿದೆ. ಈ ಆರು ಲಕ್ಷಣಗಳ ಸಂಸ್ಕಾರವನ್ನು ಆರು ಅಕ್ಷರಗಳ ಷಣ್ಮಂತ್ರದ (ಓಂ ನಮಃ ಶಿವಾಯ) ಮೂಲಕ ಸಂಬಂಧಿಸುವರು. ಮತ್ತು ಈ ಆರು ಲಕ್ಷಣಗಳು ಹೆಪ್ಪುಗಟ್ಟಿ (ಘನೀಭೂತವಾಗಿ) ಆತ್ಮ, ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂಬ ಆರು ರೂಪಗಳನ್ನು ತಾಳುವದು. ಈ ಆರು ರೂಪಗಳು ವೃತ್ತ, ವರ್ತುಳ, ಕಟಿ, ಗೋಮುಖ, ನಾಳ, ಗೋಳಕ ಎಂಬ ಆಕೃತಿಗಳನ್ನು ಹೊಂದುವರು. ಇಂತಹ ಇಷ್ಟಲಿಂಗವು ದೈವೀ ಶಕ್ತಿಯನ್ನು ತುಂಬಿಕೊಂಡ ಪಾತ್ರೆ ಯಂತಾಗುವದು. ಇದನ್ನು ಯಾವಾಗಲೂ ಅಂಗದ ಮೇಲೆ ಧರಿಸುವದರಿಂದ ಮಾಯಾ ಚೇತನದ ಅಲೆಗಳು ಹೊರಗಿನಿಂದ ಅಂಗ ಮನ ಭಾವಗಳಲ್ಲಿ ಬಂದು ಸೇರು

ವದಿಲ್ಲ. ಹೀಗಾಗಿ ಇದು ರಕ್ಷಾಕವಚವಾಗಿ ಕಾರ್ಯ ಮಾಡುವದು. ಇಷ್ಟಲಿಂಗದಲ್ಲಿ ತುಂಬಿಕೊಂಡ ದೈವೀಶಕ್ತಿಯ ಅಲೆಗಳು ಭಕ್ತನು ಮಾಡುವ ಸಕಲ ಕಾರ್ಯವನ್ನು ಶುದ್ಧಗೊಳಿಸಲು ಸಹಾಯಕವಾಗುವವು. ಹಾಗೂ ಆ ಕಾರ್ಯವೆಲ್ಲವನ್ನೂ ಸತ್ಯ ಶುದ್ಧವಾದ ಕಾಯಕವಾಗಲು ಪ್ರೇರೇಪಿಸುವದು. ಆದ್ದರಿಂದ ಇಷ್ಟಲಿಂಗವನ್ನು ಅಂಗದಿಂದ ಕಳಚಿ ಇಡಬಾರದು. ಕಳಚಿ ಬೇರೆ ಕಡಿಗೆ ಇಟ್ಟರೆ ಪೃಥ್ವಿಯ ಗುರುತ್ವಾಕರ್ಷಣೆಗೆ ಒಳಗಾಗಿ ಅದರಲ್ಲಿಯ ಅಶಾಂಶೀ ದೈವೀಶಕ್ತಿಯು ಅದೃಶ್ಯವಾಗುವದು. ಇದನ್ನು ಧರಿಸಿ ಬೇರೆ ದೇವತೆಗಳನ್ನು ಅರ್ಚಿಸಿದರೆ ಇದರಲ್ಲಿಯ ದೈವೀಶಕ್ತಿಯು ವಿಭಜನೆಗೊಂಡು ಸರಿಯಾಗಿ ಕಾರ್ಯಗೈಯುವದಿಲ್ಲ. ಹೀಗಾಗಿ ಸ್ಥಾವರ ದೇವತೆಗಳನ್ನು ಅರ್ಚಿಸಬಾರದು. ಆದರೆ ಅವುಗಳನ್ನು ಹೀಗಳೆಯದೆ ಸಾಮಾಜಿಕ ಭಕ್ತಿಯಿಂದ ಪರಧರ್ಮ ಸಹಿಷ್ಣುತೆಯಿಂದ ಗೌರವಿಸಬೇಕು. ಭಕ್ತನು ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನು ಕೊಟ್ಟು ತ್ರಿವಿಧ ದಾಸೋಹಿಯಾಗುತ್ತಾನೆ. ಲಿಂಗಸಂಗವನರಿತವನೇ ಕುಲಜನ ಎಂದು ಬಸವಣ್ಣನವರು ಹೇಳುತ್ತಾರೆ. ಭಕ್ತನು "ಲಿಂಗವ ಮುಟ್ಟಿದ ಕೈ ಮಿಸಲು, ಲಿಂಗವ ಧರಿಸಿದ ದೇಹ ದೇಗುಲ" ಎಂಬ ತತ್ವದಾಚರಣೆಯಂತೆ ಪರಿಶುದ್ಧನಾಗಿರುತ್ತಾನೆ. ಅಕ್ಕಮಹಾದೇವಿಯು ಪರಮಾತ್ಮನು ಎಳ್ಳ ಮೊನೆಯಲ್ಲಿ ಮುಳ್ಳ ಕೊನೆಯಲ್ಲಿ ಪೊಳ್ಳ ಬಿಡದಂತೆ ಅಂತರ್ಯಾಮಿಯಾಗಿ ಸರ್ವವನ್ನೂ ವ್ಯಾಪಿಸಿರುತ್ತಾನೆ ಮತ್ತು ತೀರ ಚಿಕ್ಕವನಾಗಿ ಲಿಂಗರೂಪದಲ್ಲಿ ಬಂದು ಅಂಗೈಯಲ್ಲಿ ಕೂಡ್ರುವನೆಂದು ಆನಂದಾಭಿಮಾನಗಳಿಂದ ಹೇಳಿ ಅರ್ಪಿತ ಮನೋಭಾವದಿಂದ ಲಿಂಗಾರಾಧನೆಯಲ್ಲಿ ದಿವ್ಯಾನಂದ ಪಡೆಯುತ್ತಾಳೆ.

ಇಷ್ಟಲಿಂಗ ಚೈತನ್ಯವೇ ಜಂಗಮ. ಜಂಗಮ ಪುಂಗವನಿಂದಲೇ ಲಿಂಗಕ್ಕೆ ಪ್ರಾಣಬರುತ್ತದೆ. ಜಂಗಮ ತೃಪ್ತಿಯಿಂದಲೇ ಲಿಂಗದೇವನ ತೃಪ್ತಿಯಾಗುತ್ತದೆ. ಯಾಕಂದರೆ ಲಿಂಗದ ಮುಖ ಜಂಗಮವೆನಿಸಿದೆ. ಬಸವಣ್ಣ ಜಂಗಮ ಸಾಧಕನಾಗಿ ಸ್ವಯಂಲಿಂಗವಾದ ಎಂದು ಚನ್ನ ಬಸವಣ್ಣನವರು ಒಂದು ವಚನದಲ್ಲಿ ಹೇಳುತ್ತಾರೆ. ಯಾಕಂದರೆ ಜಂಗಮ ತತ್ವದ ಅನುವನರಿಯದೆ ಲಿಂಗತತ್ವದ ಸಾಕ್ಷಾತ್ಕಾರವಾಗುವುದಿಲ್ಲ, ಅಂಗನ ಪ್ರಾಣ ಲಿಂಗ. ಲಿಂಗದ ಹರಣ ಜಂಗಮ. ಇವುಗಳ ಸಂಗಮ ತಾತ್ವಿಕವಾದುದು, ಅಂಗನಿಗೆ ಲಿಂಗದಿಂದ ಪ್ರಾಣ ಕಳೆ ಬೆಳಗಿದರೆ ಲಿಂಗದ ಪ್ರಾಣ ಜಂಗಮನಿಂದಲೇ ಪ್ರಜ್ವಲಿಸುವದು. ಜಂಗಮ ವಿಲ್ಲದ ಲಿಂಗವು ಜಡವಾಗುವದು. ಲಿಂಗವಿಲ್ಲದೇ ಜಂಗಮನು ಶೋಭಿಸನು. ಜಂಗಮನಿಗೆ ಲಿಂಗವೇ ಆಶ್ರಯವಾಗಿದೆ. ಇದು ಆಗಮವು ಹೇಳಿದ ಅರ್ಥ.

೧೩. ಧೃತಿ ಕ್ಷಮೆ ದಮೆ

(i) ಧೃತಿ— "ಧೃತಿ" ಯೆಂದರೆ ಧೈರ್ಯ. ಪರಿಪೂರ್ಣ ಧರ್ಮವನ್ನು ಆಚರಿಸಬೇಕಾದರೆ ಅದರ ಮುಖ್ಯ ಲಕ್ಷಣಗಳನ್ನು ತಿಳಿದಿರಬೇಕು. ಅದರಲ್ಲಿ ಮಹತ್ವದ ಲಕ್ಷಣವೆಂದರೆ ಧೃತಿ. ಮಾನವನು ಧೃತಿಗೆಟ್ಟರೆ ಏನನ್ನೂ ಸಾಧಿಸಲಾರನು. ಈ ಜಗತ್ತಿನಲ್ಲಿ ಸರ್ವ ಸುಖೋಪಭೋಗಗಳನ್ನು ಅನುಭವಿಸಬೇಕಾದರೆ ಮೊದಲು ಧೃತಿ ಬೇಕು. ಧರ್ಮ ರಕ್ಷಣೆಯೂ ಸಹ ಅದರಿಂದಲೇ ಆಗುವದು.

ಸ್ಥಿರ ಬುದ್ಧಿ, ಧೃಡ ಮನಸ್ಸುಗಳಿಂದಲೇ ಏನನ್ನಾದರೂ ಸಾಧಿಸಬಹುದು. ಆದ ಕಾರಣ ಧೃತಿಯು ಪ್ರತಿಯೊಬ್ಬನಿಗೆ ಚೇತನ ಸ್ವರೂಪವಾಗಿದೆ. ಚೇತನದಿಂದಲೇ ಶರೀರದಲ್ಲಿ ಪ್ರವೃತ್ತಿ ಪ್ರಾಪ್ತವಾಗುತ್ತದೆ. ಪ್ರವೃತ್ತಿಯಿಲ್ಲದ ವಸ್ತು ಜಡವೆನಿಸುತ್ತದೆ. ಧೈರ್ಯವಿದ್ದರೆ ಮನುಷ್ಯನಲ್ಲಿಯ ಜಡತನ ದೂರವಾಗುತ್ತದೆ. ಚೈತನ್ಯವೂ ಚೇತನ ಗೊಳ್ಳುತ್ತದೆ. ಧೈರ್ಯದಿಂದ ಪ್ರತಿಯೊಂದು ಕಾರ್ಯವು ಕೈಗೂಡುತ್ತದೆ. ಆದ್ದರಿಂದ ಧೈರ್ಯವು ಮಾನವನ ಕೈಗೋಲು. ''ಧೈಯಂ ಸರ್ವತ್ರ ಸಾಧನಂ". ಧೈರ್ಯವು ಸಕಲ ಸಾಧ್ಯಕ್ಕೆ ಸಾಧನವಾಗಿದೆ. ಮೋಕ್ಷ, ಸಿದ್ಧಿಯನ್ನು ಸಾಧಿಸಲು ಪ್ರಥಮ ಸಾಧನ. ಪ್ರಥಮ ಪುರುಷಾರ್ಥವಾದ ಧರ್ಮದ ಸಾಧನೋಪಾಯ. ಧೈರ್ಯವು ಧಾರಣ ಶಕ್ತಿಯನ್ನು ನೀಡುವುದರಿಂದ ಧರ್ಮದ ಮುಂದಿನ ಮೆಟ್ಟಲುಗಳು ಸುಗಮ ವಾಗುವವು.

''ಶರೀರಮಾದ್ಯಂ ಖಲು ಧರ್ಮ ಸಾಧನಮ''. ಅಂದರೆ ಶರೀರವು ಧರ್ಮದ ಪ್ರಥಮ ಸಾಧನ. ಆದರೆ ಶರೀರವೆಷ್ಟೇ ಗಟ್ಟಿಮುಟ್ಟಾಗಿದ್ದರೂ ಧೈರ್ಯವಿಲ್ಲದವನು ಏನನ್ನೂ ಸಾಧಿಸಲಾರನು. ಕಣ್ಣಿಗೆ ದೃಷ್ಟಿದೋಷವೇನೂ ಇರಲಿಕ್ಕಿಲ್ಲ. ಆದರೆ ಬೆಳಕಿನ ಸಹಾಯವಿಲ್ಲದೆ ಕಣ್ಣಿಗೆ ಏನೂ ಕಾಣುವುದಿಲ್ಲ. ಹಾಗೆ ಸದೃಢ ಶರೀರಕ್ಕೆ ಧೃಡ ಮನಸ್ಸು ಬೇಕಾಗುತ್ತದೆ. ಮನುಷ್ಯನಿಗೆ ಧೈರ್ಯವೇ ಜೀವಾಳವಾಗಿರುವುದ ರಿಂದ ಶರೀರಕ್ಕೂ ಧೈರ್ಯ ಗುಣಕ್ಕೂ ಅನ್ಯೋನ್ಯ ಸಂಬಂಧವಿದೆ. ಆದ್ದರಿಂದ ಧರ್ಮ ಸಿದ್ಧಿಗಾಗಿ ಶರೀರ ಸಾಧನವು ಮುಖ್ಯ ಸಾಧನವೆಂದು ಸ್ಪಷ್ಟವಾಗಿ ಕಾಣುತ್ತದೆ. ಧೈರ್ಯವಿಲ್ಲದವನು ಇದ್ದೂ ಸತ್ತಂತೆಯೇ. ಅದಕ್ಕಾಗಿಯೇ ''ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು ?'' ಎಂದು ಶರಣರು ಕೇಳಿದ್ದಾರೆ.

ಧೈರ್ಯವೆಂದರೆ ಮನೋಬಲ. ಅದು ಹೀನವಾಗಿದ್ದರೆ ಶರೀರ ಶಕ್ತಿ ಇದ್ದರೂ ನಿರುಪಯುಕ್ತ. ಯಾಕಂದರೆ ಮನುಷ್ಯನ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಮನಸ್ಸಿನ ಇಚ್ಛೆಯಂತೆ ಕೆಲಸಮಾಡುತ್ತವೆ. ಯಾವುದೇ ಕಾರ್ಯ ಮಾಡಿದರೂ

ಅಲ್ಲಿ ಮನಸ್ಸಿರಬೇಕಾಗುವದು. ಇಲ್ಲದಿದ್ದರೆ ಆ ಕಾರ್ಯ ಯಶಸ್ವಿಯಾಗುವದಿಲ್ಲ. ಆದ ಕಾರಣ ಧೈರ್ಯದಿಂದ ಸ್ಥಿರ ಮನವುಳ್ಳವನಾಗಿರಬೇಕು. ಮತ್ತು ಧೈರ್ಯದಿಂದ ಕಾರ್ಯದಲ್ಲಿ ಸ್ಥಿರತೆ ಹಾಗೂ ಧೃಢತೆಯನ್ನು ಸಾಧಿಸಬೇಕು.

ಹೊರಗಿನ ಶತೃಗಳನ್ನು ಗೆಲ್ಲಲು ಧೈರ್ಯ ಬೇಕಾದಂತೆ ಆಂತರಿಕ ಶತೃಗಳನ್ನು ಗೆಲ್ಲಲು ಧೈರ್ಯ ಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಗಳು ಆಂತರಿಕ ಶತೃಗಳು. ಇವುಗಳನ್ನು ಗೆಲ್ಲಲಿಕ್ಕೆ ಮನೋಬಲ ಆತ್ಮಬಲ ಮುಖ್ಯ. ಶಿವಯೋಗಿಗಳು ಮಹಾತ್ಮರು ಮತ್ತು ಪರಮ ವೈರಾಗಿಗಳು ಮಾತ್ರ ಅನಿಮಿತ್ತ ವೈರಿ ಗಳನ್ನು ಆತ್ಮ ಶಕ್ತಿಯಿಂದ ಗೆದ್ದು ಧೀರರಾಗಿದ್ದಾರೆ. ಸಜ್ಜನರು ದುರ್ಜನರಿಂದ ಎಷ್ಟೇ ಕಷ್ಟಕ್ಕೊಳಗಾದರೂ ತಮ್ಮ ಸತ್ಯವನ್ನು ಬಿಟ್ಟುಕೊಡುವುದಿಲ್ಲ. ಉಪಕಾರ ವನ್ನೇ ಕೋರುವರು. ಅಪಕಾರ ಮಾಡಿದವರಿಗೂ ಉಪಕಾರ ಮಾಡುವುದೇ ಸಜ್ಜನಿ ಕೆಯ ಲಕ್ಷಣ. ಇದಕ್ಕೂ ಧೃತಿಯೇ ಕಾರಣವೆನ್ನಬಹುದು.

ಧೀರತನವೇ ಕಾರ್ಯದ ಯಶಸ್ಸಿಗೆ ಕಾರಣವಾಗುವದು. ಧೀರೋದಾತ್ತತೆ ಮಾನವನನ್ನು ಉತ್ತಮನನ್ನಾಗಿಸುವದು. ಆದ್ದರಿಂದ ಪ್ರತಿಯೊಬ್ಬನೂ ಧೈರ್ಯ ವಂತನಾಗಿರಬೇಕು.

ಕೆಲವು ಜನರು ಸಕಲವೂ ದೈವಾಧೀನವೆಂದು ಕುಳಿತು ಹೇಡಿಯಾಗುತ್ತಾರೆ. ಧೈರ್ಯಗುಂದದೇ ದೈವವನ್ನು ನಂಬಿ ಮಾಡುವವನಿಗೆ ದೇವರು ಸಹಾಯ ಮಾಡು ತ್ತಾನೆ. ಅಧರ್ಮವನ್ನು ಧೈರ್ಯದಿಂದ ದೂರ ಮಾಡದೇ ಹೋದರೆ ಧರ್ಮವು ನೆಲೆಗೊಳ್ಳಲಾರದು. ಆದ್ದರಿಂದ ಧರ್ಮದ ರಕ್ಷಣೆಗಾಗಿ ಧೈರ್ಯದ ಉಪಯೋಗ ವಾಗಬೇಕು. ಧೈರ್ಯವೇ ಮಾನವ ಧರ್ಮದ ಅಡಿಗಲ್ಲಾಗಬೇಕು.

(ii) ಕ್ಷಮೆ— ಧರ್ಮದ ಇನ್ನೊಂದು ಮಹತ್ವದ ಲಕ್ಷಣವೆಂದರೆ "ಕ್ಷಮೆ". ಧೃತಿ, ಕ್ಷಮೆ ಇವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಧರ್ಮವನ್ನು ಆಚರಿಸುವವನು ಕ್ಷಮಾ ಗುಣವುಳ್ಳವನಾಗಿರಬೇಕು. ಯಾವುದೇ ಒಂದು ಕಾರ್ಯ ವನ್ನೆಸಗಲು ಸಾಮರ್ಥ್ಯ ಹಾಗೂ ಧೈರ್ಯ ಯಾವನಲ್ಲಿರುವದೋ ಅವನಲ್ಲಿ ಕ್ಷಮಾ ಗುಣವಿದ್ದರೆ ಅದು ಭೂಷಣಪ್ರಾಯವಾಗುವದು. ಸಮರ್ಥನಲ್ಲಿ ಮಾತ್ರ ಕ್ಷಮೆಗೆ ಬೆಲೆಯಿದೆ. ಅಸಮರ್ಥನಲ್ಲಿ ಅಧೈರ್ಯವಂತನಲ್ಲಿ ಕ್ಷಮೆಗೆ ಪ್ರಯೋಜನವಿಲ್ಲ. ಅಂಥ ವನು ವೈರಿಯ ತಪ್ಪನ್ನು ಕ್ಷಮಿಸುತ್ತೇನೆಂದರೆ ಹಾಸ್ಯಾಸ್ಪದವಾಗಿ ಕಾಣುವದು. ಅವನಲ್ಲಿ ಸಾಮರ್ಥ್ಯವಿರುವುದಿಲ್ಲ. ಅಂಜುಬುರುಕುತನವಿರುತ್ತದೆ. ಕಾರಣ ಅವನು ಹೇಡಿಯೆನಿಸಿಕೊಳ್ಳುತ್ತಾನೆ. ಧರ್ಮ ಲಕ್ಷಣಗಳು ಒಂದಕ್ಕೊಂದು ಪೋಷಕವಾಗಿವೆ. ಧರ್ಮಸಂಗ್ರಹಕ್ಕಾಗಿ ಕ್ಷಮಾ ಗುಣವು ಬಹಳ ಉಪಕಾರಿಯಾಗಿದೆ.

ಪ್ರತಿಕ್ರಿಯೆಯನ್ನು ತೋರಿಸುವ ಸಾಮರ್ಥವಿದ್ದಾಗ್ಯೂ ಅಪಕಾರ ಮಾಡಿದವನಿಗೆ ಅಪಕಾರವನ್ನುಂಟು ಮಾಡದಿರುವದೇ ಕ್ಷಮೆ ಎನಿಸಿಕೊಳ್ಳುವದು. ಧೈರ್ಯ, ಸಾಹಸ, ಶೂರತನವಿದ್ದರೂ ವೈರಿಯನ್ನು ದೂಸಿಸದಿರುವುದೇ ಕ್ಷಮೆ. ಶೂರನು ಅಸಮರ್ಥನೊಡನೆ ಹೋರಾಡಿ ಸುಲಭವಾಗಿ ಗೆಲ್ಲುವನು. ಆದ್ದರಿಂದ ಅದು ಅವನ ನೈಜ ಕರ್ತವ್ಯವೆನಿಸಲಾರದು. ಯಾವ ಹಾವು ವಿಷಯುಕ್ತವಾಗಿದೆಯೋ ಅದಕ್ಕೆ ಕ್ಷಮಾಗುಣ ಗೌರವ ತರುತ್ತದೆ. ವಿಷರಹಿತ ಹಾವಿಗೆ ಕ್ಷಮೆ ಶೋಭಿಸಲಾರದು. ಕಾರಣ ಅದು ವಿನೀತವಾಗಿರುತ್ತದೆ. ಕಾರಣ ಪ್ರತಿರೋಧ ಶಕ್ತಿಯಿದ್ದರೂ ತಾಳ್ಮೆಯಿಂದಿರುವುದೇ ಕ್ಷಮೆ.

ಕ್ಷಮೆಯಿಂದ ಅಪರಾಧಿಯು ತನ್ನ ತಪ್ಪನ್ನು ತಿದ್ದಿಕೊಳ್ಳುವನು. ಶಿಕ್ಷೆಯಿಂದ ಅಪರಾಧಿಯಲ್ಲಿ ದ್ವೇಷ, ಅಸೂಯೆ, ಸ್ಪರ್ಧೆ ಬೆಳೆದರೆ ಕ್ಷಮೆಯಿಂದ ಅಪರಾಧಿಯು ಸುಧಾರಿಸುವನು. ಪ್ರತಿಯೊಬ್ಬ ಮನುಷ್ಯನು ಒಂದಿಲ್ಲೊಂದು ಸಲ ತಪ್ಪು ಮಾಡಿಯೇ ಮಾಡುತ್ತಾನೆ. ನಡೆಯುವವನು ಎಡವಲಿಕ್ಕೆ ಬೇಕು. ತಪ್ಪು ಮಾಡುವದು ಮನುಷ್ಯನ ಸ್ವಭಾವ. ಕ್ಷಮೆ ತೋರುವದು ದೈವತ್ವದ ಸಂಕೇತ. ಒಮ್ಮೆ ಮಾಡಿದ ತಪ್ಪನ್ನು ಅರಿತು ಜಾಣತನದಿಂದ ಮುನ್ನಡೆಯದಿದ್ದರೆ ಕ್ಷಮೆ ಸಿಗದು. ಜೀವನದ ಗುರಿಯೂ ದೊರಕದು.

ಕ್ಷಮಾ ಗುಣದಿಂದ ಜೀವನದಲ್ಲಿ ಶಾಂತಿ ದೊರಕುತ್ತದೆ. ಶಾಂತಿ ಜೀವನದ ಪರಮ ಗುರಿಯಾಗಿದೆ. ಯಾಕಂದರೆ ಕ್ಷಮಾ ಗುಣದಿಂದ ಜಗತ್ತಿನಲ್ಲಿ ಚಿರಶಾಂತಿಯನ್ನು, ನಿರ್ವೈರವನ್ನು ಸ್ಥಾಪಿಸಬಹುದು ಎಂದು ಮಹಾನುಭಾವಿಗಳು ನಿರೂಪಿಸಿದ್ದಾರೆ. ಸುಖ–ದುಃಖ, ನ್ಯಾಯ–ಅನ್ಯಾಯ, ಲಾಭ–ಹಾನಿ ಇಂತಹ ದ್ವಂದ್ವಗಳು ಸಂಸಾರದಲ್ಲಿ ಬಂದೇ ಬರುತ್ತವೆ. ಇವುಗಳನ್ನು ಸಮಚಿತ್ತದಿಂದ ಸಹಿಸುವ ಸಹನಶೀಲತೆಯೇ ಕ್ಷಮಾ ಗುಣವೆನಿಸುತ್ತದೆ ಎಂದು ಹೇಳುತ್ತಾರೆ. ಸುಖ ಬಂದರೆ ಹಿಗ್ಗಬಾರದು. ದುಃಖ ಬಂದರೆ ಕುಗ್ಗಬಾರದು. ಹಿಗ್ಗುವದೂ ಕುಗ್ಗುವದೂ ಧೃತಿವಂತನ, ಕ್ಷಮಾವಂತನ ಲಕ್ಷಣವಲ್ಲ. ಅದು ಮಾನವ ಧರ್ಮವೂ ಅಲ್ಲ. ಸುಖ–ದುಃಖಗಳೆರಡನ್ನು ಏಕಚಿತ್ತದಿಂದ ಎದುರಿಸಬೇಕು. ಇದಕ್ಕೆ ದ್ವಂದ್ವ ಸಹಿಷ್ಣುತೆ ಅನ್ನುತ್ತಾರೆ. ಸಂಸಾರವು ದ್ವಂದ್ವಮಯವಾಗಿರುವದರಿಂದ ಅದನ್ನು ಸಹಿಸುವ ತಾಳ್ಮೆಯನ್ನು ಸಂಪಾದಿಸಿಕೊಳ್ಳಬೇಕು. ಇಂಥ ದ್ವಂದ್ವ ಸಹಿಷ್ಣುತಾ ರೂಪವಾದ ಕ್ಷಮೆಯು ಇಹಪರಗಳೆರಡರ ಸುಖಕ್ಕೂ ಕಾರಣವಾಗುವದು. ಮತ್ತು ಮೋಕ್ಷಪದವಿಗೆ ಪರಿಣಾಮಯಾಗುವದು.

ಮನುಷ್ಯನು ಅವಿವೇಕತನದಿಂದ ಒಮ್ಮೆ ಇಂದ್ರಿಯಗಳ ದಾಸನಾದರೆ ತಾಮಸ ವೃತ್ತಿ ಬೆಳೆಯುತ್ತಾ ಹೋಗಿ ಮಾನವೀಯತೆ ಮಾಯವಾಗಿ ದಾನವೀಯತೆಗೊಳಗಾಗುವನು. ಅದಕ್ಕಾಗಿಯೇ ಮಾನವ ಧರ್ಮವನ್ನು ಕಾಪಾಡಿಕೊಳ್ಳಲು ದಮೆ ಅವಶ್ಯವೆಂದು, ಧರ್ಮದ ಲಕ್ಷಣಗಳಲ್ಲಿ ಒಂದು ಎಂದು ಪರಿಗಣಿಸಿದ್ದಾರೆ. ಬಾಹ್ಯೇಂದ್ರಿಯಗಳು ವಿಷಯ ವಾಸನೆಯಲ್ಲಿ ತೊಡಗುವದನ್ನು ತಪ್ಪಿಸಿ ಪರಶಿವನ ವಿಷಯದಲ್ಲಿ ತೊಡಗುವಂತೆ ಮಾಡುವದೇ ದಮೆಯ ಅರ್ಥ. ಬಹಿರ್ಮುಖ ವೃತ್ತಿಯನ್ನು ಅಂತರ್ಮುಖಗೊಳಿಸಿ ಶಿವಸಾಕ್ಷಾತ್ಕಾರದತ್ತ ಹರಿಸುವದೇ ಜೀವಾತ್ಮನ ಕರ್ತವ್ಯವಾಗಿದೆ.

ಜ್ಞಾನೇಂದ್ರಿಯಗಳ ಕಾರ್ಯವನ್ನು (ಗಂಧ, ರಸ, ರೂಪ, ಸ್ಪರ್ಶ, ಶಬ್ದ) ವಶಪಡಿಸಿಕೊಳ್ಳುವದು ಕಷಸಾಧ್ಯವಾದುದು. ಪಂಚ ವಿಷಯಗಳಲ್ಲಿ ಒಂದೊಂದೇ ವಿಷಯವು ದಾರಿ ತಪ್ಪಿಸುವ ಶಕ್ತಿಯನ್ನು ಪಡೆದಾಗ ಐದೂ ಕೂಡಿದರೆ ಮನುಷ್ಯನ ಗತಿ ಚಿಂತಾಜನಕವಾಗುತ್ತದೆ.

ಮೂಗು ಸುಗಂಧ ದುರ್ಗಂಧವನ್ನು ಮೂಸಿಸುತ್ತದೆ.
ನಾಲಿಗೆ ಸಿಹಿ ಕಹಿ ರುಚಿಗಳನ್ನು ನೋಡುತ್ತದೆ.
ಕಣ್ಣು ಸುಂದರ ರೂಪ ನೋಡಲು ಆತುರಪಡಿಸುತ್ತದೆ.
ಮೈ ಚರ್ಮ ಕೋಮಲವಾದ ಸ್ಪರ್ಶಸುಖ ಬಯಸುತ್ತದೆ.
ಕಿವಿಯು ಇಂಪಾದ ಗಾಯನ(ಶಬ್ಧ) ಕೇಳಲು ಇಚ್ಛಿಸುತ್ತವೆ.
ಇದು ಪ್ರಕೃತಿ ಧರ್ಮ.

ಪಶು, ಪಕ್ಷಿ, ಕ್ರಿಮಿ-ಕೀಟಕಗಳೂ ಸಹಿತ ವಿಷಯ ವಾಸನೆಯ ಸೆಳೆತಕ್ಕೆ ಬೀಳುತ್ತವೆ. ಅವು ಒಂದೊಂದು, ಒಂದೊಂದೇ ಇಂದ್ರಿಯದ ವ್ಯಾಮೋಹದಲ್ಲಿ ಸಿಲುಕಿ ಸಾಯುವದನ್ನು ಷಣ್ಮುಖ ಸ್ವಾಮಿಗಳು ಮನನೀಯವಾಗಿ ಹೇಳಿದ್ದಾರೆ.

ಭ್ರಮರ ಸಂಪಿಗೆ ಹೂವಿನ ಸುಗಂಧವನ್ನು ಮೂಸುತ್ತಾ
ಮೂಸುತ್ತಾ ಅಸು ನೀಗುತ್ತದೆ. ಪಾತರಗಿತ್ತಿ ದೀಪದ
ರೂಪವನ್ನು ನೋಡುತ್ತಾ ನೋಡುತ್ತಾ ಅದರಲ್ಲಿಯೇ
ಬಿದ್ದು ಸತ್ತು ಹೋಗುತ್ತದೆ.
ಆನೆಯು ತನ್ನ ಮೈ ಚರ್ಮಕ್ಕೆ ತಗಲುವ ತಂಪಾದ
ಕೋಮಲವಾದ ಸ್ಪರ್ಶ ಸುಖವನ್ನು ಬಯಸುತ್ತಾ ಕೃತಕ
ಬಲಿಯಲ್ಲಿ ಬೀಳುತ್ತದೆ.
ಜಿಂಕೆ ಕಿವಿಗೆ ಇಂಪಾದ ಶಬ್ಧ ಶ್ರವಣ-ಸುಖ ಬಯಸಿ
ಬೇಟೆಗಾರನ ಬಾಣಕ್ಕೆ ಬಲಿಯಾಗುತ್ತದೆ.

ಮೀನು ನಾಲಿಗೆ ರುಚಿಗೆ ಮರುಳಾಗಿ ಜಾಲಗಾರನ
ಬಲಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ.

ಹೀಗೆ ವಿಷಯ ವ್ಯಾಮೋಹದಲ್ಲಿ ವಿನಾಶವಿದೆಯೆಂಬುದು ಕಂಡು ಬರುತ್ತದೆ. ಆದ್ದರಿಂದ ಸ್ವಭಾವತಃ ಬಹಿರ್ಮುಖವಾದ ಇಂದ್ರಿಯಗಳನ್ನು ಅಂತರ್ಮುಖಗೊಳಿಸಿ ಅಂತರಾತ್ಮನಲ್ಲಿ ಬೆರೆತು ಧೀರನಾಗಬೇಕೆಂದೂ, ಆಧ್ಯಾತ್ಮಿಕ ತತ್ವವನ್ನು ಬೀರಿ ಅನಿತ್ಯ ಜೀವನಕ್ಕೆ ನಿತ್ಯ ಹಾಗೂ ಶಾಶ್ವತ ಶಾಂತಿಯನ್ನು ಸಾಧಿಸಬೇಕೆಂದೂ, ಭಾರತೀಯ ಸಂಸ್ಕೃತಿ ಸಾರಿ ಹೇಳುತ್ತದೆ.

ಇಂದ್ರಿಯಗಳ ಮೇಲೆ ಹಿಡಿತವಿಲ್ಲದಿದ್ದರೆ ಆಪತ್ತುಗಳಿಗೆ ಎಡೆ ಮಾಡಿಕೊಡುತ್ತದೆ. ಆದರೆ ಇಂದ್ರಿಯ ನಿಗ್ರಹವು ಸಂಪತ್ತಿಗೆ ಮೂಲವೆನ್ನುವದನ್ನು ಮತ್ತು ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನವೆಂಬುದನ್ನು ಮರೆಯಬಾರದು.

ದಮೆಯನ್ನು ಕಾಯ್ದುಕೊಳ್ಳಲು ವೀರಶೈವರಲ್ಲಿ ಷಟ್‌ಸ್ಥಲ ಸಿದ್ಧಾಂತ ಮುಖ್ಯವಾಗಿದೆ. ವೀರಶೈವರು ಪಂಚಜ್ಞಾನೇಂದ್ರಿಯ ಮತ್ತು ಮನಸ್ಸು (ಆತ್ಮ) ಈ ಆರು ಇಂದ್ರಿಯಗಳಿಗೆ ಆರು ಲಿಂಗಗಳ ಸಂಬಂಧಗೊಳಿಸಿ ಆರು ವಿಷಯಗಳನ್ನು ಪ್ರಸಾದವೆಂದು ಭಾವಿಸಿ ಲಿಂಗಕ್ಕೆ ಅರ್ಪಿಸಿ ಪ್ರಸನ್ನತೆಯನ್ನು ಪಡೆಯುತ್ತಾರೆ. ಒಟ್ಟಿಗೆ ಪದಾರ್ಥವನ್ನು ಲಿಂಗದ ಪ್ರಸಾದವೆಂದು ಪವಿತ್ರ ಭಾವನೆಯಿಂದ ಪರಿಗ್ರಹಿಸಬೇಕು. ಇದರಿಂದ ವಿಷಯ ವಾಸನೆ ಕಡಿಮೆಯಾಗಿ ಶಾಂತಮನಸ್ಸು ದೊರೆಯುತ್ತದೆ. ಮತ್ತು ಇಂದ್ರಿಯ ದಮನ ಅವಶ್ಯವಾಗಿ ಆಗುತ್ತದೆ. ಶಿವ ಶರಣರು ಇಂಥ ತತ್ವವನ್ನು ಆಚರಿಸಿ ಉಂಡು ಉಪವಾಸಿಗಳೂ ಬಳಸಿ ಬ್ರಹ್ಮಚಾರಿಗಳೂ ಆಗಿ ಅಮರರಾಗಿದ್ದಾರೆ. ಈ ತತ್ವ ವಿಶ್ವಮಾನವ ಧರ್ಮಕ್ಕೆ ಅನುಕರಣೀಯ. ಧರ್ಮ ಸಾಧನೆಗಾಗಿ ದಮೆಯನ್ನು ಸಾಧಿಸಿ ಧೀರನಾಗಬೇಕು.

೧೪. ವೀರಶೈವತ್ವ

"ವೀ" ಎಂದರೆ ಶಿವ ಜೀವರ ಐಕ್ಯವನ್ನು ಬೋಧಿಸುವ ವಿದ್ಯೆ ಮತ್ತು "ರ" ಎಂದರೆ ಆ ವಿದ್ಯೆಯಲ್ಲಿ ಯಾವ ಶಿವಭಕ್ತನು ರಮಿಸುವನೋ ಅವನು ಎಂದು ಸಿದ್ಧಾಂತ ಶಿಖಾಮಣಿಯ ಗ್ರಂಥಕರ್ತರು ಹೇಳಿದ್ದಾರೆ. ಶಂಕರ ಸಂಹಿತೆಯಲ್ಲಿ ಇನ್ನೂ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಯಾವ ಶಿವಭಕ್ತನು ಗುರುಕರುಣೆಯಿಂದ ಪಡೆದ ಇಷ್ಟ ಲಿಂಗವನ್ನು ವಾಮಕರದಲ್ಲಿ ಧರಿಸಿಕೊಂಡು ಲಿಂಗದಲ್ಲಿ ಮನಸ್ಸು ಹಾಗೂ ದೃಷ್ಟಿಯನ್ನಿರಿಸಿ ಬಾಹ್ಯ ಚಿತ್ತ ವೃತ್ತಿಗಳನ್ನು ದೂರಿಕರಿಸಿ ನಿಸ್ಪೃಹವಾಗಿ ಪೂಜಿಸುವನೋ ಅವನೇ ವೀರಶೈವನು. ಅಂದರೆ ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ ಶಿವಯೋಗವನ್ನು ಸಾಧಿಸುವವನೇ ವೀರಶೈವನು.

ಶೈವದಿಂದ ವೀರಶೈವವಾಯಿತು ಎನ್ನುವದು ಯೋಗ್ಯವಲ್ಲ. ವೀರಶೈವವು ಶೈವ ಧರ್ಮದೊಂದಿಗೆ ಸ್ವತಂತ್ರವಾಗಿ ಬೆಳೆದಿದೆ ಎಂದು ತಿಳಿದು ಬರುತ್ತದೆ. ಬ್ರಹ್ಮ ಸೂತ್ರಗಳಿಗೆ ವೀರಶೈವ ಪರಿಭಾಷ್ಯ ಬರೆದವರು ಶ್ರೀಪತಿ ಪಂಡಿತರು. ವೀರಶೈವರು ಶಿವಶಕ್ತಿಯನ್ನು ಭಿನ್ನವಾಗಿ ಭಾವಿಸುವುದಿಲ್ಲ. ಶಿವನನ್ನು ಬಿಟ್ಟು ಶಕ್ತಿಯಿಲ್ಲ, ಶಕ್ತಿಯನ್ನು ಬಿಟ್ಟು ಶಿವನಿಲ್ಲ. ಪುಷ್ಪ ಪರಿಮಳದಂತೆ ಶಿವಶಕ್ತಿಯ ಅವಿನಾಭಾವ ಸಂಬಂಧವಿದೆ.

ವೀರಶೈವದಲ್ಲಿ ಜೀವ-ಜಗತ್ತು ಮಿಥ್ಯವೆಂದು ಪ್ರತಿಪಾದಿಸುವದಿಲ್ಲ. ದೇಹ ಇಂದ್ರಿಯಗಳು ಹೇಯವೆಂದು ತಿರಸ್ಕರಿಸುವದಿಲ್ಲ. ಜೀವನು ಕೈಗೊಂಡ ಯಾವುದೇ ಕಾಯಕ ತುಚ್ಛವೆಂದು ಜರಿಯುವದಿಲ್ಲ. ಭೋಗವನ್ನು ದುಃಖಪ್ರದವೆಂದು ಕೈಬಿಡುವದಿಲ್ಲ. ಈ ಜಗತ್ತು ಆತ್ಮ ಶಕ್ತಿಯ ವಿಕಾಸಮಾರ್ಗಕ್ಕೆ ಸಾಧನವೆಂದು ಭಾವಿಸಲಾಗುತ್ತದೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳೇ ವೀರಶೈವನ ಸಾಧನಗಳು-ಸಿದ್ಧಾಂತಗಳು. ವೀರಶೈವನು ದೇಹತ್ಯಜಿಸಿ ಮುಕ್ತನಾಗುವುದಿಲ್ಲ. ದೇಹಿಯಾಗಿಯೇ ನಿತ್ಯ ಮುಕ್ತ ಸ್ಥಿತಿ ಪಡೆವ ಭಾಗ್ಯ ವೀರಶೈವನದು.

ವೀರಶೈವವು ಜಾತಿ ವಾಚಕವಲ್ಲ, ತತ್ವ ಸೂಚಕ. ತಾತ್ವಿಕ ತಳಹದಿಯ ಮೇಲೆ ವೀರಶೈವವು ನೆಲೆ ನಿಂತಿದೆ. ವಸ್ತುತಃ ಇದೊಂದು ಮತವಲ್ಲ. ಮಹಾನ್ ಧರ್ಮ. ಇದು ವಿಶ್ವದ ಧರ್ಮಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು. ವೇದ ಉಪನಿಷತ್ತುಗಳಿಗಿಂತಲೂ ಮೊದಲೇ ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರಚಲಿತವಾಗಿದ್ದಿತು.

ಶೈವ ಧರ್ಮವು ವೀರಶೈವದಲ್ಲಿ ಪರಿಪೂರ್ಣತೆಯನ್ನು ಹೊಂದಿತೆಂದು ಖ್ಯಾತ ಸಂಶೋಧಕರ ಅಭಿಪ್ರಾಯ. 1904 ರಲ್ಲಿಯ ಅಖಿಲ ಭಾರತ ವೀರಶೈವ ಮಹಾ ಸಭೆಯ ಮೊದಲನೆ ಅಧಿವೇಶನದ ಮೊದಲನೇ ಗೊತ್ತುವಳಿಯೂ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ವೀರಶೈವತ್ವವು ಕೇವಲ ಗ್ರಂಥ ಪ್ರಮಾಣದ ಮೇಲೆ ನಿಂತಿಲ್ಲ. ಅನುಭವ ಪ್ರಮಾಣದ ಮೇಲೆ ನಿಂತಿದೆ.

ವೀರಶೈವನು ಲೋಕಾಚಾರ ವರ್ಜಿತನು. ಲೋಕಾವಲೋಕಗಳನ್ನು ಪರಿಗಣಿಸುವದಿಲ್ಲ. ಅವನಿಗೆ ತಿಥಿ, ವಾರ, ನಕ್ಷತ್ರ, ಯೋಗ ಕರಣಾದಿಗಳ ಹಂಗಿಲ್ಲ. ಆತನು ತೀರ್ಥಯಾತ್ರೆಗಳನ್ನು ಕೈಗೊಳ್ಳುವುದಿಲ್ಲ. ವೇದ ಮಾರ್ಗ ಮನ್ನಿಸುವುದಿಲ್ಲ. ಅವನಿಗೆ ಬೇಧಿಕಾಚಾರಣೆಗಳಿಲ್ಲ. ವೀರಶೈವನು ವರ್ಣಾಶ್ರಮಗಳನ್ನು ಪರಿಪಾಲಿಸುವದಿಲ್ಲ. ಎಲ್ಲಾ ಮಂತ್ರಗಳನ್ನು ತ್ಯಜಿಸಿ ಶಿವ ಮಂತ್ರವನ್ನು ಮಾತ್ರ ಸದಾ ಜಪಿಸುವನು. ಅದನ್ನೇ ಧ್ಯಾನಿಸುವನು. ಭವಿಸಂಗವನ್ನು ಬಿಟ್ಟು ಸದಾ ಸದ್ಭಕ್ತರ ಮಧ್ಯದಲ್ಲಿರತಕ್ಕವನು. ಈ ಅಭಿಪ್ರಾಯವನ್ನು ವೀರಶೈವಾಮೃತ ಪುರಾಣದಲ್ಲಿ ಕಾಣುತ್ತೇವೆ.

ಮಾನವನ ಹೃದಯ ಮಿಡಿತದ ಅಂತಃಕರಣ ಸೆಲೆಯಾಗಿ, ನೀತಿಯ ನೆಲೆಯಾಗಿ ಸಕಲ ಜೀವಿಗಳಿಗೆ ಲೇಸನ್ನೇ ಬಯಸಿ, ಸಕಲರಲ್ಲಿ ಸಕಲೇಶನನ್ನು ಕಂಡು, ಸರ್ವ ಕಾಲಿಕ ಸತ್ಯವನ್ನು ಸಾರುತ್ತಾ ಉಳಿಸಿ, ಬೆಳೆಸಿ, ಹಾಗೂ ಗಳಿಸಿಕೊಂಡ ಶ್ರೇಷ್ಠತೆ ವೀರಶೈವಕ್ಕಿದೆ. ಇದು ನನಗೆ ಬೇಕು, ಇದು ನನಗೆ ಬೇಕು ಎಂದು ಹಾಹಾಕಾರ ಮಾಡಿದುದಲ್ಲ, ನಿನಗೇನು ಬೇಕು ಕೊಡುತ್ತೇನೆ ಎಂದು ತ್ಯಾಗ ಮಾಡುತ್ತಾ ಬಂದುದು ಎಂದು ಪರಮೇಶ್ವರಾಗಮದಿಂದ ಉದ್ಘೋಷಿಸಲ್ಪಟ್ಟಿದೆ.

"ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೆ
ಸರ್ವ ಭೋಗಪ್ರದಂ ಪುಣ್ಯಂ ಶಿವಸಾಯುಜ್ಯ ದಾಯಕಂ''

ಈ ಶ್ಲೋಕವು ವೀರಶೈವದ ವಿಶಾಲತೆಯನ್ನು ಹೇಳುವದಲ್ಲದೆ ಮತ ಪ್ರಕ್ರಿಯೆಗಳ ಪ್ರಾಧಾನ್ಯತೆಯನ್ನೂ ವಿಶ್ವಮಾನವನಾಗುವ ಸಾಮರಸ್ಯವನ್ನು ಉಗ್ಗಡಿಸುವ ಗಮನಾರ್ಹ ಉಕ್ತಿಯಾಗಿದೆ. ಕರ್ಮ ಮಾರ್ಗದ ನಂಬಿಕೆಯನ್ನು ತೊಡೆದು, ಜಾತಿಯ ಮೇಲು ಕೀಳುಗಳನ್ನು ಅಲ್ಲಗಳೆದು, ಸ್ತ್ರೀ-ಪುರುಷರ ಬಾಹ್ಯ ರೂಪದ ಬೇಧವನ್ನು ಅಳಿಸಿ, ಭಕ್ತಿ ಜ್ಞಾನಕ್ರಿಯೆ ಇವುಗಳ ಸಮನ್ವಯವನ್ನು ಸಾಧಿಸಿದ ಗರಿಮೆ ವೀರಶೈವಕ್ಕಿದೆ. ಸಚರಾಚರ ವಸ್ತುಗಳಲ್ಲಿ ಶಿವತ್ವವನ್ನು ದರ್ಶಿಸುವ ಆಸ್ತಿಕತೆ, ತ್ಯಾಗ ಭೋಗ ಯೋಗಗಳ ಸಮನ್ವಯಗಳನ್ನು ವೀರಶೈವದಲ್ಲಿ ಕಾಣಬಹುದು.

ಮಾನವನನ್ನು ದೇವನನ್ನಾಗಿಸುವ ಧರ್ಮಕ್ಕಿಂತ ಮಹತ್ತರವಾದ ಧರ್ಮ ಮತ್ತೊಂದಿದೆಯೇ ? ಇದು ಕಾಲ ಕಾಲಾಂತರದಿಂದ ವೀರ ಮಹೇಶ್ವರರ ಆಚರಣೆಯಲ್ಲಿ ಸಂರಕ್ಷಣೆ ಹೊಂದುತ್ತಾ ಬಂದು ಬಸವಾದಿ ಪ್ರಮಥರ ಕ್ರಿಯಾ ಜ್ಞಾನದ ಮಂಥನದಲ್ಲಿ ಪ್ರಖರವಾಗಿ ಪ್ರಕಾಶಿಸಿ ದಶ ದಿಕ್ಕುಗಳಲ್ಲಿ ಪಸರಿಸಿ ಇಂದು ರಸಭರಿತ ಫಲ ತುಂಬಿದ ಹೆಮ್ಮರವಾಗಿದೆ. ಇದು ಆತ್ಮ ತಂತ್ರವಾಗಿ ಆತ್ಮೋನ್ನತಿಗೆ ಆಕರವಾಗಿದೆ. ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ'' ಎಂಬುದು ವೀರಶೈವ ತತ್ವ ರೂಪ, ಸಾಕಾರರೂಪ. ಇಲ್ಲಿ ತತ್ವವು ಸುಂದರವಾದ ರೂಪವನ್ನು ಹಾಗೂ ಆಕರ್ಷಕವಾದ ವ್ಯಕ್ತಿತ್ವವನ್ನು ಹೊಂದಿದೆ. ಅಂಗ, ಪ್ರಾಣ, ಆತ್ಮಗಳು ವ್ಯಕ್ತಿರೂಪಕ್ಕೆ ಹೇಗೆ ಅವಶ್ಯಕವೋ ಹಾಗೇಯೇ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳು ವೀರಶೈವ ಧರ್ಮಕ್ಕೆ ಅವಶ್ಯಕವಾದವುಗಳು. ಇವುಗಳಲ್ಲಿ ಒಂದು ಕುಂಠಿತವಾದರೆ, ಎಲ್ಲವೂ ಕುಂಠಿತ. ಇವುಗಳಿಂದಲೇ ತಪಸ್ಸು, ಮೋಕ್ಷ, ಲೌಕಿಕ ವಿದ್ಯೆ ಮೊದಲಾದವುಗಳು ಲಭಿಸುತ್ತವೆ.

ವೀರಶೈವತತ್ವ ವಿಶ್ವಕ್ಕೆ ಅನ್ವಯವಾಗುವಂತಹ ತತ್ವ ಸಿದ್ಧಾಂತಗಳನ್ನು ಒಳಗೊಂಡಿದೆ. ಯಾವ ತತ್ವ ಅಂದು ಇಂದು ಮುಂದು ಸರ್ವ ಕಾಲದಲ್ಲಿಯೂ, ಅಲ್ಲಿ ಇಲ್ಲಿ ಎಲ್ಲೆಲ್ಲಿಯೂ, ಅವರಿಗೆ ಇವರಿಗೆ ಎಲ್ಲರಿಗೂ ಅನ್ವಯವಾಗುವದೋ ಅದು ವಿಶ್ವಧರ್ಮ. ವೀರಶೈವ ಧರ್ಮ ಇಂಥ ಸರ್ವಕಾಲಿಕ ಸತ್ಯ ಮತ್ತು ನಿತ್ಯ ನೂತನ ತತ್ವಗಳನ್ನು ಬೋಧಿಸುತ್ತದೆ. ಎಲ್ಲರನ್ನೂ ಇಂಬಿಟ್ಟುಕೊಳ್ಳುವಂಥ ಹೃದಯ ವೈಶಾಲ್ಯತೆಯನ್ನು ಹೊಂದಿದೆ. ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸಲು ಹೇಳುತ್ತದೆ. ವಿಶ್ವಕುಟುಂಬತ್ವವನ್ನು ಸಾರುತ್ತಾ ಸಕಲರಿಗೆ ಲೇಸನ್ನೇ ಬಯಸುತ್ತದೆ. ಜಾತಿಯ ಭೀತಿಯನ್ನು ಹೊಡೆದೋಡಿಸಿ ನೀತಿಯ ಧರ್ಮದ ಜ್ಯೋತಿಯನ್ನು ಹಿಡಿದಿದೆ. ಹೀಗೆ ಇಡೀ ವಿಶ್ವದಲ್ಲಿಯೇ ಶ್ರೇಷ್ಠ ಸಿದ್ಧಾಂತಗಳನ್ನು ಒಳಗೊಂಡಿದ್ದರಿಂದ ಇದು ವಿಶ್ವಮಾನ್ಯ ಧರ್ಮವಾಗಿದೆ.

ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಕೇರಳ, ತಮಿಳು ನಾಡು ಮತ್ತು ಇತರಡೆಗಳಲ್ಲೆಲ್ಲ ಸೇರಿ ಒಟ್ಟು ಸುಮಾರು 4 ಕೋಟಿ ವೀರಶೈವರಿದ್ದಾರೆ. ಪೌರ್ವಾತ್ಯ ಪಾಶ್ಚಿಮಾತ್ಯ ದೇಶಗಳಲ್ಲಿಯೂ ವೀರಶೈವರ ಸಂಖ್ಯೆ ಸಾಕಷ್ಟಿದೆ. ಈ ಧರ್ಮ ತತ್ವ ಸಿದ್ಧಾಂತಗಳ ಬಗ್ಗೆ ಎಲ್ಲರಿಗೂ ತಿಳುವಳಿಕೆಯಾಗುವದು ಅವಶ್ಯವಿದೆ.

ಶಿವನು ಸ್ವಯಂಭೂ ಆಗಿದ್ದು ಆತನಿಂದಲೇ ಈ ಸೃಷ್ಟಿ, ಈ ಪ್ರಪಂಚ, ನಿರ್ಮಾಣವಾಗಿದೆ. ಆತನನ್ನು ಅರಿತು ಆತನಲ್ಲಿಯೇ ಲೀನವಾಗಬೇಕೆಂಬ ಭಾವನೆಯನ್ನು ವೀರಶೈವ ಧರ್ಮ ಹೊಂದಿದೆ. ಕಾರಣ ಶಿವನನ್ನು ಇಷ್ಟಲಿಂಗ ರೂಪದಲ್ಲಿ

ಆರಾಧಿಸಿ ಲಿಂಗಾಂಗ ಸಾಮರಸ್ಯವನ್ನು ಪಡೆದು ಆತ್ಮ ಸಾಕ್ಷಾತ್ಕಾರವನ್ನು ಹೊಂದುವುದೇ ವೀರಶೈವರ ಅಂತಿಮ ಗುರಿ. ಈ ಗುರಿಯನ್ನು ಸಾಧಿಸಬೇಕಾದರೆ ವೀರಶೈವ ಧರ್ಮದ ತತ್ವಗಳನ್ನು ಅಭ್ಯಾಸಿಸಿ ಅವು ತೋರಿದ ಮಾರ್ಗದಲ್ಲಿ ಮುನ್ನಡೆದು ತನು, ಮನ, ಧನ ಭಾವಗಳನ್ನು ಶಿವನಿಗೆ ಸಮರ್ಪಿಸಿಕೊಳ್ಳಬೇಕು. ಶಕ್ತಿ ವಿಶಿಷ್ಟ ಧ್ವೈತದಲ್ಲಿ ಹೇಳಿದ ಸಿದ್ಧಾಂತಗಳ ಸಾಧನೆಯಿಂದ ಆತ್ಮವನ್ನು ಜಾಗೃತಗೊಳಿಸಿ ಶಿವ ಕೃಪೆ ಹೊಂದಬೇಕು. ಇವುಗಳ ಮಹತ್ವ ಹಾಗೂ ಸಾಧನೆಯ ಬಗ್ಗೆ ಈ ಕೃತಿಯಲ್ಲಿ ಕೂಲಂಕೂಷವಾಗಿ ಬರೆಯಲಾಗಿದೆ.

ವೀರಶೈವದಲ್ಲಿ ಶಿವಾನುಭವ ಅಥವಾ ಶಿವ ಸಾಮರಸ್ಯಕ್ಕೆ ಬಹಳ ಮಹತ್ವವಿದೆ. ಸದಾವಕಾಲ ಇಷ್ಟಲಿಂಗ ಚಿಂತನೆಯಲ್ಲಿ ತಲ್ಲೀನಾದರೆ ಶಿವಾನುಭವ ಪಡೆಯುವದು ಸಾಧ್ಯವಿದೆ. ಇಷ್ಟಲಿಂಗ ಪೂಜೆಯಲ್ಲಿ ಅಡಗಿದ್ದ ವೈಜ್ಞಾನಿಕ ಆಯುರಾರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುವದನ್ನು ಕೆಲ ಚಿಕಿತ್ಸಕ ಬುದ್ಧಿಯುಳ್ಳವರು ಇತ್ತೀಚೆಗೆ ಕಂಡು ಹಿಡಿದಿದ್ದಾರೆ. ವಿಭೂತಿ, ರುದ್ರಾಕ್ಷಿ, ಮಂತ್ರ ಗಂಧ, ಧೂಪ, ದೀಪ ಇವುಗಳ ಪರಿಣಾಮವನ್ನು ಗೌಣವಾಗಿ ಕಾಣಲಿಕ್ಕೆ ಸಾಧ್ಯವಿಲ್ಲ. ಆದಕಾರಣ ವಿಭೂತಿ, ರುದ್ರಾಕ್ಷಿ ಹಾಗೂ ಲಿಂಗ ಇವುಗಳು ಯಾವಾಗಲೂ ದೇಹದ ಮೇಲೆ ಧರಿಸಲ್ಪಟ್ಟಿರಬೇಕು. ಶಿವಪೂಜೆಯನ್ನು ಹೊರತುಪಡಿಸಿ ಹೋಮ, ಹವನ, ಯಜ್ಞ-ಯಾಗಾದಿಗಳಿಗೆ ಇಲ್ಲಿ ಅವಕಾಶವಿಲ್ಲ.

ಒಳ್ಳೆಯ ಕಾರ್ಯಕ್ಕೆ ಯಾವಾಗಲೂ ಶುಭ ಸಮಯ. ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಸಮಾಜ ಬಾಂಧವರನ್ನು ಪ್ರೀತಿಯಿಂದ ಕಾಣಬೇಕು. ಕಾಯಕ ದಾಸೋಹ ಭಾವನೆಯುಳ್ಳವನಾಗಿರಬೇಕು. ತಾನು ತನ್ನ ಸರ್ವಸ್ವವೂ ಶಿವನಿಗೆ ಅರ್ಪಿತ ಎಂದು ಭಾವಿಸಬೇಕು. ಧರ್ಮದ ಆಚಾರ ವಿಚಾರಗಳನ್ನು ತಪ್ಪದೇ ಪಾಲಿಸುವುದಲ್ಲದೇ ಚಿಕ್ಕ ಮಕ್ಕಳು ಪಾಲಿಸುವಂತೆ ಮಾಡಬೇಕು. ಪ್ರಾರ್ಥನೆ ಧ್ಯಾನಗಳ ಕಡೆಗೆ ಗಮನ ಹರಿಸಿ ಗುರುಲೀಗ ಜಂಗಮರನ್ನು ಆರಾಧಿಸುತ್ತಿರಬೇಕು. ವೀರಶೈವ ಮಠ, ಮಂದಿರ, ದೇವಸ್ಥಾನಗಳ ರಕ್ಷಣೆಗೆ ಮುಂದಾಗಬೇಕು. ದುಶ್ಚಟಗಳಿಂದ ದೂರವಿರಬೇಕು. ಸ್ವಧರ್ಮನಿಷ್ಠೆ ಪರಧರ್ಮ ಸಹಿಷ್ಣುತೆ ತತ್ವವನ್ನು ಅಕ್ಷರಶಃ ಪಾಲಿಸಬೇಕು. ಶಿವಶರಣರು ಹಾಗೂ ಶರಣ ಸಾಹಿತ್ಯಕ್ಕೆ ಯೋಗ್ಯ ಮನ್ನಣೆ ಕೊಡಬೇಕು. ಇವು ವೀರಶೈವರು ಗಮನದಲ್ಲಿಡಬೇಕಾದ ಕೆಲವು ಮಹತ್ವದ ಅಂಶಗಳು.

ಗುರುವಿನ ಗುರುವಾದ ಜಂಗಮನ ಅನುಗ್ರಹ ದೊರಕಿಸುವುದೇ ವೀರಶೈವ ಧರ್ಮದ ಪರಮ ಗುರಿ. ಜಂಗಮತ್ವ ಕೇವಲ ಸಂಸ್ಕಾರದಿಂದ ಉಂಟಾಗುವದಿಲ್ಲ.

ಶಾಸ್ತ್ರಾಧ್ಯಯನ ಮಾಡಿ ವಿವೇಕ ಸಂಪನ್ನತೆಯನ್ನು ಗಳಿಸಿದರೆ ಜಂಗಮತ್ವ ಉಂಟಾಗುತ್ತದೆ ಎಂದು ತೋಂಟದ ಸಿದ್ಧಲಿಂಗೇಶ್ವರರು ಹೇಳುತ್ತಾರೆ. ಕಾರುಣ್ಯ ಮೂರ್ತಿ ಗುರು, ಆರಾಧ್ಯ ಮೂರ್ತಿ ಲಿಂಗ, ಅನುಗ್ರಹ ಮೂರ್ತಿ ಜಂಗಮ. ಈ ಮೂರು ಅಂಶಗಳ ಅರಿವು ವೀರಶೈವನಿಗೆ ಅವಶ್ಯ. ಹಸಿವು, ತೃಷೆ, ಸುಖ, ದುಃಖ, ಜನನ, ಮರಣ, ಇವುಗಳನ್ನು ಮೀರಿನಿಂತವನೇ ಜಂಗಮನು. ಜಾತಿಯಿಂದ ಜಂಗಮತ್ವ ಬರುವದಿಲ್ಲ. ದೇವರ ಕೃಪೆಯಿಂದ ಶುದ್ಧಾಚರಣೆಯಿಂದ ಸಂಪಾದಿಸಲ್ಪಡಬೇಕಾದದ್ದು, ಹೀಗೆ ಪರಶಿವನ ಪ್ರತ್ಯಕ್ಷ ರೂಪವೇ ಜಂಗಮವೆಂದು ಕಂಡು ಬರುತ್ತದೆ. ಶರಣ ಸಿದ್ಧಾಂತದಲ್ಲಿ ಜಂಗಮನಿಗೆ ಅತ್ಯುನ್ನತ ಸ್ಥಾನವಿದೆ. ಜಂಗಮಕ್ಕೆ ವೈರಾಗ್ಯವೆ ಆಧಾರಸ್ತಂಭ, ಭಕ್ತಿ ಜ್ಞಾನಗಳೊಂದಿಗೆ ವೈರಾಗ್ಯವನ್ನು ಸಾಧಿಸಿ ಶಿವಯೋಗ ಸಂಪನ್ನನಾದರೆ ನಿಜವಾದ ವೀರಶೈವತ್ವವನ್ನು ಪಡೆದಂತಾಗುವದು.

ಹೀಗೆ ವೀರಶೈವ ಧರ್ಮದ ಮತಿಯನ್ನರಿತು ಶರಣ ತತ್ವ ಸಿದ್ಧಾಂತಗಳಿಗನುಗುಣವಾಗಿ ನಡೆದರೆ ಮಾನವ ಅತಿಮಾನವನಾಗಿ, ದೇವ ಮಾನವನಾಗುವದರಲ್ಲಿ ಸಂದೇಹವಿಲ್ಲ.

೧೫. ಧ್ಯಾನ, ಮೌನ, ಪ್ರಾರ್ಥನೆ

ಆಡಂಬರದ ಪೂಜೆ ಪರಮಾತ್ಮನಿಗೆ ಸಲ್ಲದು. ಅದು ಕೇವಲ ಡಂಭಾಚಾರ. ಪರಮಾತ್ಮನು ಅಡಗಿಕೊಂಡು ಕುಳಿತಿರುವ ಈ ದೇಹ ಮಂದಿರವನ್ನು ಚೆನ್ನಾಗಿ ಕಾಯ್ದಿರಿಸಬೇಕು. ಸರ್ವಸ್ವವನ್ನು ಆತನಿಗೆ ಸಮರ್ಪಿಸಬೇಕು. ಪರಮಾತ್ಮನನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಮಾನವರು ನಡೆಸಿರುವ ಅನೇಕ ಸಾಧನೆಗಳಲ್ಲಿ ಧ್ಯಾನ, ಮೌನ, ಪ್ರಾರ್ಥನೆಗಳಿಗೆ ತಮ್ಮದೇ ಆದ ವೈಶಿಷ್ಟ್ಯತೆ ಇದೆ. ಪರಮಾತ್ಮನನ್ನು ಕಣ್ಣಿನಿಂದ ನೋಡದೇ, ಕೈಯಿಂದ ಮುಟ್ಟದೇ, ಮೂಗಿನಿಂದ ಮೂಸಿಸದೇ ದಿವ್ಯ ಅನುಭವದಿಂದ ಮಾತ್ರ ತಿಳಿದುಕೊಳ್ಳಬಹುದು. ಪವಿತ್ರ ಬುದ್ಧಿಯಿಂದ ಮಾತ್ರ ಅರ್ಥಮಾಡಿಕೊಳ್ಳಬಹುದು. ಅಂತಹ ದಿವ್ಯಾನುಭವ ಪಡೆಯಲಿಕ್ಕೆ ಧ್ಯಾನ ಮೊದಲನೇ ಮಾರ್ಗ

(i) ಧ್ಯಾನ

ಮನಸ್ಸು ಮನುಷ್ಯನನ್ನು ಭವಬಂಧನದಿಂದ ಮುಕ್ತಗೊಳಿಸುವ ಸಾಧನವಾಗಿದೆ. ನೀತಿಕಾರರು ಮನಸ್ಸನ್ನು ಮರ್ಕಟನಿಗೆ ಹೋಲಿಸಿದ್ದಾರೆ. ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯಗಳಿಗೆ ಪ್ರೇರಕವಾದ ಮನಸ್ಸನ್ನು ನಿಗ್ರಹಿಸಿ ಅದನ್ನು ದೇವರ ಧ್ಯಾನದಲ್ಲಿ ತೊಡಗಿಸಬೇಕು. ಯಾರು ಮನಸ್ಸನ್ನು ಗೆಲ್ಲುತ್ತಾರೋ ಅವರು ಜಗತ್ತನ್ನೇ ಗೆಲ್ಲಬಲ್ಲರು. ಬಾಹ್ಯ ಪ್ರಪಂಚವನ್ನು ಮರೆತು ಆಂತರಿಕ ಸಾಧನೆಯಿಂದ ಒಳಗಿನ ಜ್ಯೋತಿ ರೂಪದ ಲಿಂಗವನ್ನು ಕಾಣುತ್ತಾ ಆನಂದ ಪಡೆಯುವುದೇ ಧ್ಯಾನ. ಮಾನವನು ಮಹಾದೇವನಾಗಲು "ಧ್ಯಾನ" ಪ್ರಮುಖ ಸಾಧನಗಳಲ್ಲಿ ಒಂದು. ತನ್ನ ಆತ್ಮದ ಇರವನ್ನು ತಿಳಿಯಲಿಕ್ಕೆ ಮನಸ್ಸನ್ನು ನಿಯಂತ್ರಣ ಮಾಡಲು ಹಚ್ಚುವುದೇ ಶಕ್ತಿಯ ಪ್ರತಿ ರೂಪವಾದ ಭಕ್ತಿಯು. ಹೊರ ಜಗತ್ತಿನ ಪ್ರಚೋದನೆಯನ್ನು ಕಳೆದು ಆಂತರಿಕ ಕ್ರಿಯೆಯನ್ನು ಸ್ಥಗಿತಗೊಳಿಸಿ ಆತ್ಮನಿಗೆ ವಿಶ್ವಾತ್ಮನ ಚಿಂತನೆಗೆ ಎಡೆಮಾಡಿ ಕೊಡುವದು ವೀರಶೈವರಲ್ಲಿ ಗಮನಾರ್ಹವಾಗಿದೆ. ಧ್ಯಾನಾಸಕ್ತನಲ್ಲಾಗುವ ನಂತರದ ಮಾನಸಿಕ ಅತ್ಯುನ್ನತ ಮಟ್ಟವನ್ನು ವರ್ಣಿಸಲು ಶಬ್ದಗಳು ಸಾಲುವುದಿಲ್ಲ. ಭೋಗಾಂಗಿಯು ಯೋಗಾಂಗಿಯಾಗಿ ಪರಿಣಮಿಸಿ ಭಾವ ಲಿಂಗದ ಸಹಾಯದಿಂದ ಸುಷುಪ್ತಾವಸ್ಥೆಯಲ್ಲಿ ಮುಳುಗುತ್ತಾನೆ. ಅಂಗಾಂಗ ಸಾಮರಸ್ಯ ಹೊಂದಿದಾಗ ಸಂಪೂರ್ಣ ಆನಂದ ಅಥವಾ ಅಮೋಘ ಶಾಂತಿ ದೊರಕುತ್ತದೆ. ಈ ಅವಧಿ ಕಳೆದ ಬಳಿಕ ಸಾಧಕನು ಏನನ್ನೂ ನೆನಪಿಗೆ ತರಲಾರನು.

ಹೊರಗಿನ ಹತ್ತಾರು ಸಮಸ್ಯೆಗಳನ್ನು ಬದಿಗೊತ್ತಿ ಅಂತರ್ಮುಖಿಯಾಗಿ ಆತ್ಮಾನು ಸಂಧಾನಿಯಾಗುವದಕ್ಕೆ ಧ್ಯಾನಸ್ಥನಾಗುವದು ಎನ್ನುತ್ತಾರೆ. ನಿರ್ಮಲ ನಿಜ ಚಿತ್ತನಾಗಿ ಚಿನ್ಮೂರ್ತಿಯನ್ನು ಧ್ಯಾನಿಸುವುದರಲ್ಲಿಯೇ ಜೀವನ್ಮುಕ್ತಿಯಿದೆ ಎಂದು

ಹೇಳುತ್ತಾರೆ. ಶಿವನ ಸದ್ರೂಪವು ಆನಂದ ರೂಪದಿಂದ ಕೂಡಿದೆ. ಇದರ ಅನು ಸಂಧಾನದಿಂದ ಘೋರವಾದ ಭವ ಬಂಧನ ದೂರವಾಗುತ್ತದೆ. ನಿತ್ಯ ಮಂಗಲ ಪ್ರಾಪ್ತಿಯಾಗುತ್ತದೆ. ಹುಟ್ಟು ಸಾವುಗಳ ಚಿಂತೆ ಇಲ್ಲದಂತಾಗುತ್ತದೆ. ಹಲವಾರು ಅಡ್ಡಿ ಆತಂಕಗಳು ಬಂದರೂ ಶಿವಧ್ಯಾನದಿಂದ ಅವು ದೂರವಾಗುತ್ತವೆ. ಅಂದರೆ ಜ್ಞಾನಾಗ್ನಿಯೂ ಅವೆಲ್ಲವನ್ನು ಸುಟ್ಟು ಹಾಕುತ್ತದೆ. ಮನುಷ್ಯನ ಬದುಕಿಗೆ ಬೆಳಕು ಬೇಕು. ಆದರೆ ಕೇವಲ ಬಾಹ್ಯ ಬೆಳಕಿನಿಂದ ಬಾಳು ಹಸನಾಗುವದಿಲ್ಲ. ಅದು ಪರಮಾತ್ಮನ ಪರಮಜ್ಞಾನವೆಂಬ ಬೆಳಕಿನಿಂದ ಹಸನಾಗತ್ತದೆ. ಸದಾಚಾರ,ಶಿವಾಚಾರ ಗಳ ಸಂಗಮದಿಂದ ಸದ್ಗುಣ ಸಚ್ಚಾರಿತ್ರ್ಯವನ್ನು ಹೊಂದಿ ಶಿವನಲ್ಲಿ ಸಮಗ್ರವಾಗಿ ಆಸಕ್ತನಾಗಿರುವುದೇ ಶಿವೈಕ್ಯವನ್ನು ತಂದು ಕೊಡುತ್ತದೆ.

ಧ್ಯಾನ ಮಾಡಲು ಗಂಡು ಹೆಣ್ಣೆಂಬ ಭೇಧವಿಲ್ಲ, ಅಶಾಂತಿ ಅತೃಪ್ತಿಗಳಿಂದ ಶಾಂತಿ ಸಂತೃಪ್ತಿಗಳಿಗೆ ಬರಲು ಯಾರಾದರೇನು ? ಒಳಗಿನ ಅಜ್ಞಾನ, ಸಂಶಯ, ಭ್ರಾಂತಿ, ಇವುಗಳನ್ನು ಬಿಟ್ಟು ನಿರ್ಮಲ ಮತ್ತು ನಿಶ್ಚಲ ಚಿತ್ತನಾಗಿರುವುದೇ ಧ್ಯಾನದ ಮೂಲ.

ಹೊನ್ನು, ಹೆಣ್ಣು, ಮಣ್ಣು, ಅಧಿಕಾರಗಳ ಸಲುವಾಗಿ ಅರಿಷಡ್ವರ್ಗಗಳಿಗೆ ಬಲಿಯಾಗುವದೇ ಬಾಹ್ಯಬಂಧನ. ದೇಹ ಮತ್ತು ಇಂದ್ರಿಯಗಳಿಗೆ ಸಂಬಂಧ ಪಟ್ಟಂತೆ ಅಹಂಕಾರ ಅಭಿಮಾನಗಳು ಆಧ್ಯಾತ್ಮಿಕ ಬಂಧನಗಳು. ಇವುಗಳಿಲ್ಲದಿರುವಿಕೆ ಅಧ್ಯಾತ್ಮಿಕ ಜೀವನ್ಮುಕ್ತಿ ಎಂದು ಹೇಳುತ್ತಾರೆ. ಮೊದಲು ಶಿವಜ್ಞಾನಿಯಾಗಿರಬೇಕು. ನಂತರ ಶಿವಧ್ಯಾನಿಯಾಗಬೇಕು. ಆಮೇಲೆ ಶಿವಾನುಭವಿಯಾಗಬೇಕು. ಅಂದರೆ ಶಿವಾ-ನಂದ ತಾನೇ ತಾನಾಗಿ ಪ್ರಾಪ್ತವಾಗುತ್ತದೆ.

ಮೊದಲಿನ ಕಾಲದಲ್ಲಿ ಸಾಧು ಸಂತರು ಮನಶ್ಯಾಂತಿಗಾಗಿ ಮತ್ತು ಆತ್ಮಸಾಕ್ಷಾ-ತ್ಕಾರಕ್ಕಾಗಿ ಪರ್ವತ, ಅರಣ್ಯ-ಪ್ರದೇಶಗಳಲ್ಲಿ ಹಾಗೂ ಏಕಾಂತ ಸ್ಥಳಗಳಲ್ಲಿ ಧ್ಯಾನ ಮಾಡುತ್ತಿದ್ದರು. "ವಿಪಾಸನಾ" ಎನ್ನುವ ಧ್ಯಾನ ಪದ್ಧತಿಯನ್ನು ಗೌತಮ ಬುದ್ಧನು 2500 ವರ್ಷಗಳ ಹಿಂದೆ ಪುನಃ ಶೋಧಿಸಿ ತೆಗೆದನು. ಈ ಪದ್ಧತಿಯ ಧ್ಯಾನದಿಂದ ಸಾಧಕನು ಪ್ರತಿಯೊಂದು ವ್ಯಕ್ತಿಯನ್ನಾಗಲಿ ವಸ್ತುವನ್ನಾಗಲಿ ನಿಜ ಸ್ಥಿತಿಯನ್ನು ಅರಿ ಯಲು ಸಮರ್ಥ ನಾಗುತ್ತಾನೆ. ಯಾಕೆಂದರೆ ಅದರಲ್ಲಿ ಆತ್ಮ ನಿರೀಕ್ಷಣೆ ಒಳಗೊಂಡಿರು ತ್ತದೆ. ಪ್ರಾಣಾಯಾಮದಿಂದ ಏಕಾಗ್ರತೆಯನ್ನು ಸಾಧಿಸಬಹುದು. ಅದರಿಂದ ಮಾನವ ಪ್ರಜ್ಞೆ ಜಾಗೃತವಾಗುತ್ತದೆ.ಜಾಗೃತ ಪ್ರಜ್ಞೆಯ ಮುಖಾಂತರ ದೇಹ ಮತ್ತು ಮನಸ್ಸು ಗಳಲ್ಲಿ ಆಗುವ ಬದಲಾವಣೆಯನ್ನರಿತು ಭವ ಬಂಧನದ ಸಂಕಷ್ಟಗಳಿಂದ ಪಾರಾಗಿ

ಶಾಶ್ವತ ಸುಖವನ್ನು ಪಡೆಯುವ ಮಾರ್ಗವನ್ನು ಕಂಡು ಹಿಡಿಯಲು ಸುಲಭವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಕೈಕೊಂಡ ಕಾರ್ಯದಲ್ಲಿ ಅಲಸ್ಯತನವನ್ನು ಹೊಡೆದೊಡಿಸಿ ಅಶಿಸ್ತು ಅದಕ್ಷತೆ ಮತ್ತು ಭ್ರಷ್ಟಾಚಾರಗಳನ್ನು ತೊಡೆದು ಹಾಕಿ ಚೆನ್ನಾಗಿ ಕಾರ್ಯಮಾಡುವಂಥ ಆರೋಗ್ಯಕರ ಪ್ರವೃತ್ತಿಯನ್ನು ಹಾಗೂ ಸಂಸ್ಕೃತಿಯನ್ನುಅಳವಡಿಸಲು ಅಂತರಿಕ ಪರಿಶುದ್ಧತೆ ಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯನ್ನು ಧ್ಯಾನಾಸಕ್ತನನ್ನಾಗಿ ಮಾಡುವದರಿಂದ ಅವನ ಅಂತರಿಕ ಪ್ರಜ್ಞೆ ಸುಧಾರಿಸಿ ಕಾರ್ಯ ಪ್ರವೃತ್ತನನ್ನಾಗಿ ಮಾಡುತ್ತದೆ, ಅಷ್ಟೇ ಅಲ್ಲ ಅವನಲ್ಲಿ ಸದ್ಗುಣಗಳು ಮನೆ ಮಾಡುತ್ತವೆ.

ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರದಲ್ಲಿ ಅರಣ್ಯ ಅಭಿವೃದ್ಧಿ ನಿಗಮದಲ್ಲಿ ವಿಭಾಗೀಯ ಅಧಿಕಾರಿಯಾಗಿದ್ದ ಆಯ್.ಎಫ್.ಎಸ್. ಅಧಿಕಾರಿಯೊಬ್ಬರು(ಶ್ರೀಡಿಲೀಪಸಿಂಗ್) ಈ ದಿಸೆಯಲ್ಲಿ ತಮ್ಮ ಲಕ್ಷ್ಯ ಹರಿಸಿ ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡಿದರು. ಅದು ತಕ್ಷಣ ಅಂಗೀಕರಿಸಲ್ಪಟ್ಟು ಸರಕಾರದಿಂದ 40 ನೌಕರರ ಒಂದು ತಂಡ ವಿಪಾಸನಾ ವಿಶ್ವ ವಿದ್ಯಾಪೀಠ ಇಗತ್‌ಪುರಿ'' ಗೆ ಕಳುಹಿಸಲ್ಪಟ್ಟಿತ್ತು. ಆ ತಂಡ ಉಪಾಸನಾ ಪದ್ಧತಿಯ ಧ್ಯಾನದಲ್ಲಿ ತರಬೇತು ಪಡೆದು ಹಿಂದುರಿಗಿದ ನಂತರ ಅವರ ಕಾರ್ಯ ವೈಖರಿಯನ್ನು ನಿರೀಕ್ಷಿಸಲಾಗಿ ಅದ್ಭುತ ಬದಲಾವಣೆ ಕಂಡು ಬಂದಿತು. ಅವರಲ್ಲಿ ಶಿಸ್ತು, ಸಂಯಮ, ದಕ್ಷತೆ, ಪ್ರಾಮಾಣಿಕತನ ಗಣನೀಯ ಪ್ರಮಾಣದಲ್ಲಿ ಕಂಡು ಬಂದವು. ಇಲಾಖೆಯ ಮುಖ್ಯಸ್ಥರೊಡನೆ ಚರ್ಚೆಯಾಗಿ ಈ ಯೋಜನೆಗೆ ಈಗ ಪ್ರಾಶಸ್ತ್ಯ ದೊರಕಿದೆ.

ಆದೇ ರೀತಿ ತಿಹಾರ ಜೈಲಿನ ಡಿ. ಆಯ್. ಜಿ. ಕಿರಣ ಬೇಡಿಯವರು ಕೈದಿಗಳಿಗೆ ಧ್ಯಾನ ಯೋಗಾಸನಗಳ ತರಬೇತಿ ನೀಡಿ ಅವರಲ್ಲಿ ಮಾನಸಿಕ ಬದಲಾವಣೆ ತರುವಲ್ಲಿ ಒಳ್ಳೇ ಯಶಸ್ಸು ಪಡೆದಿದ್ದಾರೆ. ಕಾರ್ಮಿಕ ಇಲಾಖೆಯ ಆಯುಕ್ತರಾದ ರತ್ನಾಕರ ಗಾಯಕವಾಡ ಅವರು ಎಲ್ಲಾ ಇಲಾಖೆಗಳಿಗೆ ಸುತ್ತೋಲೆ ಕಳುಹಿಸಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಸಂಸ್ಕೃತಿಯನ್ನು ತರುವಲ್ಲಿ ಧ್ಯಾನ ಮತ್ತು ಯೋಗದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ. ಇದು ಪವಾಡ ಸದೃಶ ಬದಲಾವಣೆಯನ್ನುಂಟು ಮಾಡಲಿಕ್ಕಿಲ್ಲ ಆದರೆ ಒಳ್ಳೇ ವ್ಯಕ್ತಿತ್ವ ರೂಪಿಸಿಕೊಳ್ಳಲು ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಅಷ್ಟೇ ಅಲ್ಲ ಮಾನಸಿಕ ಶಾಂತಿ ಹಾಗೂ ದೈಹಿಕ ವಿಶ್ರಾಂತಿ ದೊರಕಿಸಲು ಅನುವು ಮಾಡಿಕೊಡುತ್ತದೆ ಮತ್ತು ಜೀವನದ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಲು ಪ್ರಯೋಜನಕಾರಿಯಾಗಿದೆ.

ಗುರುಕೃಪೆಯಿಂದ ಧರಿಸಿಕೊಂಡ ಲಿಂಗವನ್ನು ಧ್ಯಾನಿಸುವ ಜನರೇ ಬಹಳ. ಕೆಲವರು ಆಧಾರಾದಿ ಚಕ್ರಗಳಲ್ಲಿಯ ಜ್ಯೋತಿಯನ್ನು ಧ್ಯಾನಿಸುತ್ತಾರೆ. ಇನ್ನು ಕೆಲವರು ಬಾಹ್ಯಮೂರ್ತಿಗಳಲ್ಲಿ ಮನದೃಷ್ಟಿಗಳನ್ನಿಟ್ಟು ಧ್ಯಾನಿಸುತ್ತಾರೆ. ಧ್ಯೇಯ ಮೂರ್ತಿಗಳನ್ನು ಪುನಃ ಪುನಃ ಮನಸ್ಸಿನಲ್ಲಿಟ್ಟು ಭಾವಿಸುವವರಿಂದ ಧ್ಯಾನವಾಗುವದು. ಈ ಧ್ಯಾನವು ಕೇವಲ ಮೌನಯುತವಾದುದು. ವಿಭಿನ್ನ ಮೂರ್ತಿಗಳನ್ನು ಧ್ಯಾನಿಸುಸುವದು ಸಹಜಮಾರ್ಗವಲ್ಲ— ಮತ್ತು ಪರಿಪೂರ್ಣ ಧ್ಯಾನವೂ ಆಗುವದಿಲ್ಲ ಎಂದು ಶರಣರು ಹೇಳುತ್ತಾರೆ.

ಇಷ್ಟಲಿಂಗದಲ್ಲಿ ದೃಷ್ಟಿಯಿರಿಸಿ, ಷಡಕ್ಷರ ಮಂತ್ರವನ್ನು ಪಠಿಸುವ, ಅದರ ಅರ್ಥವನ್ನು ಗ್ರಹಿಸುತ್ತಾ ಭಾವದಲ್ಲಿ ಬೆಳೆಯುವ ಲಿಂಗ ಧ್ಯಾನವು ಅಮೋಘವಾದದ್ದು ಎಂದು ಹೇಳುತ್ತಾರೆ. ಯೋಗದ ಧ್ಯಾನಕ್ಕಿಂತ ಶಿವಯೋಗದ ಧ್ಯಾನ ಅನುಪಮವಾದದ್ದು. ಯಾಕೆಂದರೆ ಶಿವನನ್ನು ನೋಡಿ ಧ್ಯಾನಿಸುವ ಕಣ್ಣು-ಮನಸ್ಸುಗಳೆರಡೂ ಪವಿತ್ರವಾಗುತ್ತವೆ. ಹೀಗೆ ಧ್ಯಾನವೇ ಇಷ್ಟಲಿಂಗದ ನಿಜವಾದ ಅರ್ಚನೆಯಾಗುವದು. ಮಾನಸ ಶಾಸ್ತ್ರದ ದೃಷ್ಟಿಕೋನದಿಂದ, ಮಾನಸಿಕ ಗತಿಯನ್ನು ಜೀವಾತ್ಮನು ಈ ವಿಶ್ವಾತ್ಮನನ್ನು ಹೊಂದುವಂತೆ ಬದಲಿಸುವದೇ ಧ್ಯಾನವೆಂದು ಹೇಳಬಹುದು.

(ii) ಮೌನ

ಇಷ್ಟಲಿಂಗ ಧ್ಯಾನವುಳ್ಳವನೇ ಸಾಮಾನ್ಯವಾಗಿ ಬಾಹ್ಯ ವ್ಯವಹಾರದಲ್ಲಿ ಮೌನವುಳ್ಳವನಾಗಿರುತ್ತಾನೆ.

ಭಾಷೆ ಮತ್ತು ಲಿಪಿ ಬೆಳೆದು ಬರುವ ಮೊದಲು ಮನುಷ್ಯ ಮೌನಿಯಾಗಿದ್ದರಲೇಬೇಕು. ಕೈ ಬಾಯಿ ಸನ್ನೆಯಿಂದ ತನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಿರಬೇಕು. ದೈನಂದಿನ ವ್ಯವಹಾರದಲ್ಲಿ ಇಂದಿಗೂ ಕೈಸನ್ನೆ ಮತ್ತು ಮಾತುಗಳೆರಡರ ಉಪಯೋಗ ಸಾಕಷ್ಟು ಪ್ರಚಲಿತವಿದೆ.

ಮಾತು ಮಂತ್ರವಾಗಬೇಕು ಎನ್ನುತ್ತಾರೆ. ಅಂದರೆ ಮನುಷ್ಯ ಲಿಂಗ ಮುಖನಾಗಿ ಲಿಂಗ ಸಂಬಂಧವಾಗಿ ನಡೆಯಬೇಕು, ಎಂದರ್ಥ. ಮಾನವ ಜೀವನದಲ್ಲಿ ನಡೆನುಡಿಗಳೆರಡಕ್ಕೂ ಬಹಳ ಮಹತ್ವವಿದೆ. ನುಡಿದು ಸುಳ್ಳುಗಾರನಾಗುವದಕ್ಕಿಂತ ನಡೆದು ನುಡಿಯಬೇಕೆಂಬುದು ಅತ್ಯುನ್ನತ ಮಾರ್ಗ.

"ಮಾತು ಬೆಳ್ಳಿ ಮೌನ ಬಂಗಾರ" ಎಂದು ಹೇಳುವಲ್ಲಿ ಮೌನದ ಮಹತ್ವವನ್ನು ಅರಿಯಬಹುದು. ಬಾಯಿತಪ್ಪಿ ಏನನ್ನಾದರೂ ಮಾತನಾಡುವದಕ್ಕಿಂತ ಮೌನವಾಗಿರುವುದೇಲೇಸು. ಕೆಲವರು ಸ್ವಭಾವತಃ ಕಡಿಮೆ ಮಾತುಳ್ಳವರು ಆಗಿರುತ್ತಾರೆ.

ಆ ಮಾತು ಬೇರೆ. ಆದರೆ ಮೌನವನ್ನು ವಿಧಿಸಿಕೊಳ್ಳಬೇಕು (reticence) ಅರ್ಥಾತ್ ಮೌನವೆಂಬುದನ್ನು ಒಂದು ವ್ರತದಂತೆ ಆಚರಿಸಬೇಕು ಅದಕ್ಕೆ ಬಹಳ ಮಹತ್ವವಿದೆ.

ಮೌನವ್ರತ ಮನುಷ್ಯನಲ್ಲಿ ಒಂದು ರೀತಿಯ ಸಂಯಮವನ್ನು ಬೆಳೆಸುತ್ತದೆ. ಸಂಯಮ ಒಂದು ರೀತಿಯ ಶಕ್ತಿಯನ್ನು ತಂದು ಕೊಡುತ್ತದೆ. ಆತ್ಮ ಪ್ರಕಾಶಕ್ಕೆ ಪೂರಕವಾಗುತ್ತದೆ. ಭಾವಿ ಶುದ್ದಿಯುಂಟಾಗಿ ಶಿವ ಚೈತನ್ಯ ಮೂಡಿ ಬರುತ್ತದೆ ಯಾವುದೇ ಒಂದು ವಿಷಯದಲ್ಲಿ ದೃಢ ನಿರ್ಧಾರ ತೆಗೆದುಕೊಳ್ಳಲು ಸಹಾಯವಾಗುತ್ತದೆ. ಶ್ರದ್ಧಾಪೂರ್ಣ ಕಾರ್ಯದಲ್ಲಿ ನಿರತನಾಗಲು ಮೌನ ಸಹಾಯ ಮಾಡುತ್ತದೆ. ಮೌನವಾಗಿದ್ದುಕೊಂಡು ಜ್ಞಾನದ ಸ್ಥಿತಿಯನ್ನು ಪಡೆದವರು ಅನೇಕರಿದ್ದಾರೆ. ಆತ್ಮಾನಂದದ ಉನ್ನತ ಶಿಖರವನ್ನು ಅನುಭವಿಸಿದವರಿದ್ದಾರೆ.

ಯಾವ ಯೋಗೀಶ್ವರನು ಯಾರ ಜೊತೆಗೂ ಒಮ್ಮೆಯೂ ತತ್ವ ವಿಚಾರ ಮಾಡದೆ ಶಾಸ್ತ್ರೋಪದೇಶ ಪ್ರವಚನಾದಿಗಳನ್ನು ಮಾಡದೇ ಸದಾ ಆನಂದ ಸ್ವರೂಪ ಸ್ಥಿತಿಯಿಂದಿರುತ್ತಾನೋ ಅವನೇ ಮೌನಿಯೆಂದು ಕರೆಯಿಸಿಕೊಳ್ಳುತ್ತಾನೆ. ಎಂಬುದು ನಿಜಗುಣ ಶಿವಯೋಗಿಗಳ ಅಭಿಪ್ರಾಯವಾಗಿತ್ತು. ಜ್ಞಾನಿ, ಸ್ತ್ರೀ, ಪುರುಷ, ಹಿರಿಯ, ಕಿರಿಯ, ಬಾಲಕ–ಯುವಕ ಯಾರೇ ಇದ್ದರೂ ಅವರ ಮೇಲೆ ಸುದೃಷ್ಟಿಯುಳ್ಳವರಾಗಿ ತಮ್ಮ ಆನಂದ ಸ್ಥಿತಿಯಲ್ಲಿಯೇ ಮಗ್ನರಾಗಿರುವವರಿಗೆ ಮೌನಿ ಎನ್ನುತ್ತಾರೆ. ಅವರು ಪರಮಾತ್ಮ ಜೀವಾತ್ಮವೆಂಬ ಭಾವನಾರಹಿತವಾಗಿ, ಅಚಲವಾದ ಆತ್ಮ ಸ್ವರೂಪದಲ್ಲಿಯೇಮನಸ್ಸನ್ನಿರಿಸಿ ಆತ್ಮಾನಂದ ಸ್ಥಿತಿಯುಳ್ಳವರಾಗುವುದರಿಂದ ಸ್ಥಿತಪ್ರಜ್ಞರೆಂದೆನಿಸಿಕೊಳ್ಳುತ್ತಾರೆ. ಯಾವ ಪುರುಷನು ತನ್ನ ಹೃದಯದಲ್ಲಿರುವ ಎಲ್ಲಾ ಇಚ್ಛೆಗಳನ್ನು ತ್ಯಾಗಮಾಡಿ ತನ್ನಲ್ಲಿಯೇ ತಾನು ಸ್ಥಿತಮತಿಯುಳ್ಳವನಾಗಿ ಆನಂದ ಸ್ಥಿತಿಯಿಂದಿರುತ್ತಾನೋ ಅವನು ಸ್ಥಿತಪ್ರಜ್ಞನೆಂದೆನಿಸುವನು ಎಂದು ಶ್ರೀ ಕೃಷ್ಣನು ಬಗವದ್ಗೀತೆಯಲ್ಲಿ ಹೇಳಿದ್ದಾನೆ.

ಮೌನ ಸ್ಥಿತಿಗೆ ಬ್ರಹ್ಮಸ್ಥಿತಿ ಎಂತಲೂ ಕರೆಯುತ್ತಾರೆ. ಯಾವಾಗಲೂ ಬ್ರಹ್ಮ ಸ್ಥಿತಿಯಲ್ಲಿರಲಿಕ್ಕಾಗದವರು ವರ್ಷದಲ್ಲಿ ಅಥವಾ ತಿಂಗಳದಲ್ಲಿ ಕೆಲವೊಂದು ದಿನಗಳಾದರೂ ಅಥವಾ ವಾರದಲ್ಲಿ ಒಂದು ದಿನವಾದರೂ ಮೌನವ್ರತ ಆಚರಿಸುವದನ್ನು ರೂಢಿಸಿಕೊಳ್ಳಬೇಕು. ಎಂದರೆ ವಿಷಯ ಸುಖಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಶರೀರದ ಯೋಗ ಕ್ಷೇಮದ ಕಡೆಗೆ ಗಮನ ಕೊಡಲಿಕ್ಕಾಗುತ್ತದೆ. ಮತ್ತು ಆಯುಷ್ಯ ವೃದ್ಧಿಯಾಗುತ್ತದೆ.

ಸಿದ್ಧಾರೂಢರ ಪರಮ ಶಿಷ್ಯರಾದ ಮತ್ತು ಅವರ ಉತ್ತರಾಧಿಕಾರಿಯಾದ ಗುರುನಾಥರೂಢರು ಸದಾ ಮೌನಿಯಾಗಿದ್ದುಕೊಂಡು ಆನಂದ ಸ್ವರೂಪ ಸ್ಥಿತಿ

ಯಲ್ಲಿರುತ್ತಿದ್ದರು. ಅವರ ಸ್ನಾನ-ಪಾನ, ಉಟೋಪಚಾರ ಇತ್ಯಾದಿ ವ್ಯವಸ್ಥೆ ಯನ್ನು ಅವರ ಭಕ್ತಾದಿಗಳೇ ಮಾಡುತ್ತಿದ್ದರು. ಅವರು ಸುಖದುಃಖವೆಂಬ ದ್ವಂದ್ವ ವನ್ನು ಮೀರಿ ನಿಂತು ರಾಗದ್ವೇಷಗಳನ್ನು ತ್ಯಾಗ ಮಾಡಿ ಯಾವಾಗಲೂ ಹಸನ್ಮುಖಿ ಗಳಾಗಿದ್ದುಕೊಂಡು ಮೌನ ಸ್ಥಿತಿಯುಳ್ಳವರಾಗಿ ಆರೂಢವೆಂಬ ಅತ್ಯುಚ್ಛ ಸ್ಥಿತಿ ಯನ್ನು ಹೊಂದಿ ಭಕ್ತಾದಿಗಳ ಮೇಲೆ ಅನುಗ್ರಹ ಮಾಡುತ್ತಾ ಕೃಪಾಶೀರ್ವಾದ ವನ್ನು ಬೀರಿ ಭಕ್ತರನ್ನು ಕೃತಾರ್ಥರಾಗುವಂತೆ ಮಾಡಿದರು. ಅವರಂಥಹ ಮೌನ ವೃತ ಆಚರಿಸುವುದು ಸುಲಭಸಾಧ್ಯವಲ್ಲ.

ಭಕ್ತರು ಮತ್ತು ಸಾಧಕರು ಮೌನ ವೃತದ ಮಹತ್ವವನ್ನರಿಯಲು ಮೇಲೆ ಅವರ ಉದಾಹರಣೆ ಕೊಡಲಾಗಿದೆ.

ಕಣ್ಣುಗಳೆರಡು, ಕಿವಿಗಳೂ ಎರಡು ಆದರೆ ಬಾಯಿ ತಾನು ಒಂದೇ ಇದೆ ಏಕೆ ? ಎಂದು ಹಾನಗಲ್ಲ ಕುಮಾರ ಸ್ವಾಮಿಗಳು ಪ್ರಶ್ನೆ ಹಾಕಿಕೊಂಡು ಅದಕ್ಕೆ ತಾವೇ ಉತ್ತರ ಕೊಟ್ಟಿದ್ದಾರೆ. ನೋಡುವದು ಹಾಗೂ ಕೇಳುವದು ಎರಡು ಪಟ್ಟಾದರೆ ಮಾತನಾಡುವದು ಒಂದು ಪಟ್ಟು ಇರಬೇಕು. ಅಂದರೆ ಮಾತಿಗಿಂತ ಮೌನಕ್ಕೆ ಅವರು ಹೆಚ್ಚು ಬೆಲೆ ಕೊಟ್ಟಿದ್ದಾರೆ. ಸುಪ್ರಸಿದ್ಧ ಆಂಗ್ಲ ನಾಟಕಕಾರ ಶೆಕ್ಸಪಿಯರ್ ಸಹಿತ "Lend thy ears but reserve thy judgment" (ಕಿವಿಗೊಟ್ಟು ಕೇಳು ನಿರ್ಣಯವನ್ನು ಮಾತ್ರ ಕಾಯ್ದಿಡು — ಅಂದರೆ ಒಮ್ಮೆಲೆ ಮಾತಾಡಿ ಕೆಡ ಬೇಡ) ಎಂದು ಉಪದೇಶ ಮಾಡಿದ್ದಾನೆ.

ಮಾತಿಗೆ ಬೆಲೆ ಇಲ್ಲವೆಂದಲ್ಲ. ಆದರೆ ಮೌನಕ್ಕೆ ಇರುವ ಬೆಲೆ ಹಾಗೂ ಮಹತ್ವ ಮಾತಿಗಿಲ್ಲ ಎನ್ನುವದು ಬಲ್ಲವರ ಅಭಿಪ್ರಾಯವಾಗಿರುತ್ತದೆ.

ಮೌನವೃತ ಯೋಗಭ್ಯಾಸದ ಒಂದು ಅಂಗ. ಪ್ರತಿಯೊಬ್ಬ ಮನುಷ್ಯನು ತನ್ನ ಜೀವಿತದ ಅವಧಿಯಲ್ಲಿ ಎಷ್ಟು ಸಲ ಉಸಿರಾಡಬೇಕು ಎಂದು ನಿಗದಿ ಪಡಿಸಲ್ಪ-ಟ್ಟಿರುತ್ತದೆ. ಮಾತನಾಡುವಾಗ ಮನುಷ್ಯನ ಉಸಿರು ಸ್ವಾಭಾವಿಕವಾಗಿಯೇ ಹೊರ ಹೋಗುತ್ತದೆ. ಹೆಚ್ಚು ಹೆಚ್ಚು ಮಾತನಾಡಿದಂತೆ ಮತ್ತು ಹೆಚ್ಚು ಹೆಚ್ಚು ಜೋರಿ ನಿಂದ ಅಥವಾ ಅವಸರವಸರವಾಗಿ ಮಾತನಾಡಿದಂತೆ ಹೆಚ್ಚು ಉಸಿರು ಹೊರಹೋಗು ತ್ತದೆ. ಅದರಿಂದ ಉಸಿರು ಹೊರಹೋಗುವ ಪ್ರಮಾಣ ಹೆಚ್ಚಾಗಿ ನಿಗದಿತ ಪ್ರಮಾಣ ಬೇಗ ಖರ್ಚಾಗಿ ಹೋಗುತ್ತದೆ. ಇದರ ಪರಿಣಾಮವಾಗಿ ಆಯುಷ್ಯ ಕಡಿಮೆಯಾಗು ತ್ತದೆ, ಎಂದು ಹೇಳುತ್ತಾರೆ. ಅಂದರೆ ಕಡಿಮೆ ಮಾತನಾಡುವವನು ಬಹಳ ದಿನ ಬಾಳುತ್ತಾನೆ ಎನ್ನುವ ಇಂಗಿತ ಇದರಲ್ಲಿದೆ. ಇದೂ ಸಹ ಮೌನದ ಮಹತ್ವವನ್ನು ತೋರಿಸುತ್ತದೆ.

ಮೌನದಿಂದ ತನ್ನಲ್ಲಿ ಅಂತರ್ಗತವಾಗಿರುವ ಅನಂತ ಶಕ್ತಿಯನ್ನು ಜಾಗ್ರತ ಗೊಳಿಸಿಕೊಂಡು ಪರಿಪೂರ್ಣತ್ವ ಹೊಂದಬಹುದು. ಏಕಾಂತತೆ, ಏಕಾಗ್ರತೆ, ತಪಸ್ಸು ಇದಕ್ಕೆ ಆಧಾರ ಸ್ತಂಭಗಳಾಗಿರುತ್ತವೆ. ಇಂದ್ರಿಯಗಳಿಂದುಂಟಾಗುವ ಆವೇಶದ ಜ್ವಾಲೆಯನ್ನು ಆಧ್ಯಾತ್ಮಿಕ ಭಾವನೆಗೆ ಪರಿವರ್ತಿಸಲು ಮೌನವನ್ನು ಒಂದು ಸಾಧನ ವನ್ನಾಗಿ ಬಳಸಿಕೊಳ್ಳಬಹುದು. ವ್ಯರ್ಥ ಚಿಂತನೆ ಸ್ವಾರ್ಥ, ಪರಚಿಂತನೆಗಳಲ್ಲಿ ವೇಳೆ ಗಳೆಯುವದಕ್ಕಿಂತ ಆಧ್ಯಾತ್ಮಿಕ ಚಿಂತನೆಯಲ್ಲಿ ಕಾಲಕಳೆಯಲು ಮೌನವ್ರತ ಅನುವು ಮಾಡಿಕೊಡುತ್ತದೆ. ಮರೆವು ಕಳೆದು ಅರಿವನ್ನುಂಟು ಮಾಡಿಕೊಳ್ಳಲು ಉತ್ತಮ ಸಾಧನೆಯಾಗುತ್ತದೆ. ಇದು ಜ್ಞಾನೋದಯಕ್ಕೆ ಎಡೆಮಾಡಿಕೊಡುತ್ತದೆ.

''ಸುರರು ಮೌನವಿಹರು ಸರಿಯಾಗಿ ನಡೆವರು
ಧರ್ಮ ಮಾರ್ಗವೊಂದೆ ತಾರಕವದು''.

ಮೌನದಿಂದ ಜ್ಞಾನವುಂಟಾಗುತ್ತದೆ. ಜ್ಞಾನ ಮೀರಿಸುವಂಥ ಸುಖ ಇನ್ನೊಂ ದಿಲ್ಲ. ಯಮ, ನಿಯಮ, ಆಸನ, ಪ್ರಾಣಾಯಾಮ ಮುಂತಾದ ಅಷ್ಟಾಂಗಯೋಗ ಸಾಧನೆಯಿಂದ ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳನ್ನು ನಿಯಂತ್ರಣ ದಲ್ಲಿಟ್ಟುಕೊಳ್ಳಬಹುದು. ಇಂತಹ ಯೋಗ ಸಾಧನೆಗೆ ಮನಸ್ಸು ಸಂಯಮ ಹೊಂದ ಬೇಕಾಗುತ್ತದೆ. ಸಂಯಮ ಮೌನವ್ರತದಿಂದ ಬರುತ್ತದೆ.

ಜಾನಪದ ಕವಿ ಹಾಗೂ ಅನುಭಾವಿ ಶರೀಫಸಾಹೇಬರು ವಿಷಮ ವಾತಾವರಣ ದಿಂದ ಪರಿಪೂರ್ಣವಾಗಿ ತುಂಬಿದ ಈ ಸಂಸಾರದಲ್ಲಿ ಹೇಗಿದ್ದರೂ ಜನರಿಗೆ ಸರಿಯಿಲ್ಲ, ನೆಮ್ಮದಿಯಿಲ್ಲ. ಕುಹಕಿಗಳು ಕುತ್ಸಿತರುಗಳು ತುಂಬಿದ ಜಗತ್ತಿನಲ್ಲಿ

"ಮೂಕನಾಗಿರಬೇಕೋ, ಜಗದೊಳು ಜ್ಯೋಕ್ಯಾಗಿರಬೇಕೋ
ಕಾಕು ಕುಹಕರ ಸಂಗ ನೂಕಿರಬೇಕೋ——

ಶ್ರೀ ಶಂಕರ ಬ್ರಹ್ಮ ತಾನಾಗಿರಬೇಕೋ" ಎಂದು, ಜೀವನ ಜೋಕೆ ಯಿಂದ ಸಾಗಬೇಕೆಂದೂ ಮೂಕನಂತೆ ಮೌನಧಾರಿಯಾದ ತಪಸ್ವಿಯಂತೆ ಕಾಲ ಕಳೆಯಬೇಕೆಂದೂ ಸಲಹೆಯಿತ್ತಿದ್ದಾರೆ.

(iii) ಪ್ರಾರ್ಥನೆ

ಪ್ರಾರ್ಥನೆ ಎಂದರೆ ನಮ್ಮ ಅನೇಕ ಬೇಡಿಕೆಗಳನ್ನು ದೇವರ ಮುಂದೆ ಮಂಡಿಸಿ ಈಡೇರಿಸಲು ಪೀಡಿಸಿ ಕಾಡಿಸುವದಲ್ಲ. ಪ್ರತಿನಿತ್ಯ ಕೆಲವು ಕ್ಷಣಗಳಾದರೂ ಪೂಜೆ, ಭಜನೆ, ಧ್ಯಾನ, ಪ್ರಾರ್ಥನೆ ಮಾಡಬೇಕು. ದೇಹಕ್ಕೆ ಅನ್ನ, ನೀರು, ಗಾಳಿ, ಹೇಗೆ ಅವಶ್ಯವೋ ಹಾಗೆ ಆಧ್ಯಾತ್ಮಿಕ ಪ್ರಗತಿಗೆ ಇಂಥ ಕೆಲವು ಸಾಧನಗಳೂ ಮುಖ್ಯ.

ಪ್ರಾರ್ಥನೆಯಿಂದ ಮನಃಶುದ್ಧಿ, ಶಕ್ತಿ ಬಲ, ಓಜಸ್ಸು-ತೇಜಸ್ಸು ಎಲ್ಲವೂ ದೊರೆಯುತ್ತವೆ. ಪ್ರತಿನಿತ್ಯದ ಸಾಧನೆಯಿಂದ ಶಕ್ತಿ ಸಂಗ್ರಹವಾಗುತ್ತದೆ.

ಪ್ರಾರ್ಥನೆ ಮಾಡಲು ಅತೀ ಬುದ್ಧಿವಂತಿಕೆಯಾಗಲಿ, ಚಮತ್ಕಾರವಾಗಲಿ, ಆಡಂಬರವಾಗಲಿ ಬೇಕಾಗಿಲ್ಲ. ಪ್ರಾರ್ಥನೆ ಮಾಡುವಾಗ ದೇವರು ಹೃದಯವನ್ನು ನೋಡುತ್ತಾನೆ. ಪರೀಕ್ಷಿಸುತ್ತಾನೆ. ಅಪೇಕ್ಷಿಸುತ್ತಾನೆ. ಹೃದಯದ ಪರಿಶುದ್ಧತೆಯನ್ನು, ಪ್ರಾಮಾಣಿಕತೆಯನ್ನು, ಶರಣಾಗತಿಯನ್ನು ಬಯಸುತ್ತಾನೆ. ಆನಂದವೇ ಪ್ರಾರ್ಥನೆಯ ಗುರಿ. ಪ್ರಾರ್ಥನೆಯು ಬಾಳಿನ ಮೇಲೆ ಅತ್ಯಂತ ಶಕ್ತಿಯುತವಾದ ಪ್ರಭಾವ ಬೀರುತ್ತದೆ. ಮಾನವನ ಸಂಕುಚಿತ ಮನೋವೃತ್ತಿಯನ್ನು ಅಳಿಸಿ ಹೃದಯವನ್ನು ವಿಶಾಲಗೊಳಿಸುತ್ತದೆ. ಮನುಷ್ಯನಲ್ಲಿಯ ಕಲ್ಮಷಗಳನ್ನು ನಾಶಗೊಳಿಸಿ ಪರಮಾತ್ಮನ ಹತ್ತಿರ ಕೊಂಡೊಯ್ಯುತ್ತದೆ. ಪ್ರತಿನಿತ್ಯವನ್ನು ಪ್ರಾರ್ಥನೆಯಿಂದ ಆರಂಭಿಸಿದರೆ ಅದರ ಪ್ರಭಾವ ಸಂಜೆಯವರೆಗೆ ಇರುತ್ತದೆ. ಯಾವದೇ ದೋಷ, ವಿಘ್ನ, ಅಪಮೃತ್ಯುಗಳು ತಪ್ಪುತ್ತವೆ. ರಾತ್ರಿ ಮಲಗುವ ಮುನ್ನ ಮಾಡಿದ ಪ್ರಾರ್ಥನೆ ದುಃಸ್ವಪ್ನಗಳ ಬಾಧೆಯನ್ನು ತಪ್ಪಿಸಿ ಶಾಂತ ರೀತಿಯಿಂದ ನಿದ್ರೆಮಾಡಲು ಅವಕಾಶ ಮಾಡಿಕೊಡುತ್ತದೆ.

"ಹೊತ್ತಾರೆ ಎದ್ದು ಲಿಂಗವ ನೆನೆದರೆ
ಅಪಮೃತ್ಯು ಕಾಲ ಕರ್ಮಂಗಳು ತಪ್ಪುವವು".

ಎಂದಿದ್ದಾರೆ; ನಮ್ಮ ಪ್ರಮಥರು. ಪ್ರಾತಃಕಾಲದ ಶಿವನಾಮ ಸ್ಮರಣೆ ಅನಂತ ಸಮಸ್ಯೆಗಳನ್ನು ಪರಿಹರಿಸುವದಲ್ಲದೆ ಭವ ಭಯವನ್ನು ನಿವಾರಿಸಬಲ್ಲದು.

ಪರಮಾತ್ಮನನ್ನು ಇಷ್ಟಪಟ್ಟ ಯಾವುದೇ ನಾಮದಿಂದ ಸ್ಮರಿಸಿ ಪ್ರಾರ್ಥನೆ ಸಲ್ಲಿಸಬಹುದು. ನಾಮವು ಆಧ್ಯಾತ್ಮ ಶಕ್ತಿಯ ವಾಹಕವಿದ್ದಂತೆ. ನಾಮ ಸ್ಮರಣವೆಂದರೆ ದೇವರಲ್ಲಿ ಐಕ್ಯತೆಯನ್ನು ಹೊಂದುವ ಒಂದು ಪ್ರಕ್ರಿಯೆ. ನಾಮಕ್ಕಿಂತ ಅದರಲ್ಲಿ ಗುರುವಿನ ಶಕ್ತಿಯು ಮಹತ್ವದ್ದಿದೆ. ಅದರಿಂದ ಭಗವಂತನ ರೂಪದ ಅನುಭವ ಬರುವದು. ಪರಮಾತ್ಮನು ರೂಪ ತೋರಲಿ, ತೋರದಿರಲಿ ಸದಾ ನಾಮ ಸ್ಮರಣೆ ಮಾಡಿ ಪ್ರಾರ್ಥಿಸುತ್ತಲೇ ಇರಬೇಕು. ಭಕ್ತನು ತಾಯಿ ಗರ್ಭದಲ್ಲಿರುವ ಕೂಸಿನಂತೆ. ಅದಕ್ಕೆ ತಾಯಿಯ ಮುಖ ನೋಡಲಾಗದು. ಆದರೆ ತಾಯಿ ಅದರ ಬಗ್ಗೆ ಚಿಂತನೆ ಮಾಡುತ್ತಲೇ ಇರುತ್ತಾಳೆ. ವಿಶ್ವದ ವಿರಾಟ ಸ್ವರೂಪದ ಅನುಭವ ಪಡೆದವಳು—ತಾಯಿ ಯಶೋದೆ, ಆದರ ಶ್ರೇಯಸ್ಸು ಕೃಷ್ಣನಿಗಲ್ಲ. ಹಾಗೆ ದೇವರ ಅನುಭವವನ್ನು ಧ್ಯಾನ, ಪ್ರಾರ್ಥನೆಗಳ ಮುಖಾಂತರ ಸ್ವಪ್ರಯತ್ನದಿಂದ ಪಡೆದುಕೊಳ್ಳಬೇಕಾಗುತ್ತದೆ.

ಭಕ್ತನು ಅನನ್ಯ ಶರಣಾಗತನಾಗಿ ಆಶಾರಹಿತನಾಗಿ ಮೊರೆ ಹೊಕ್ಕರೆ ದೇವರು ಅವನ ಹತ್ತಿರ ಬರುತ್ತಾನೆ. "ಪರಮಾತ್ಮ ನನ್ನ ಕಾಲುಗಳನ್ನು ಈ ನೆಲದ ಮೇಲೆ ಗಟ್ಟಿಯಾಗಿರಿಸು. ಜಾರಗೊಡಬೇಡ, ಅಂದರೆ ನಾನು ಈ ಕತ್ತಲೆಯಿಂದ ಪಾರಾಗಿ ಪ್ರಕಾಶವನ್ನು ಕಾಣಬಹುದು'' ಎಂದು ಸತತವಾಗಿ ಪ್ರಾರ್ಥಿಸಿಕೊಂಡರೆ ಅಂತಃ ಕರಣವು ಕರಗಿ ಪರಮಾತ್ಮನು ಬೇಗನೆ ದರ್ಶನ ಕೊಡುವನು.

ಬೇರೆಯವರ ದುಃಖವನ್ನು ಕಂಡಾಗ ಆಗಲಿ ಅಥವಾ ಸ್ವತಃ ನಾವು ಕಷ್ಟದಲ್ಲಿ ರುವಾಗ ಆಗಲಿ. ಆ ದುಃಖವನ್ನು ದೂರ ಮಾಡುವದು ನಮ್ಮ ಕೈಯಲ್ಲಿಲ್ಲದಾಗ, ದೇವರಲ್ಲಿ ಮೊರೆಯಿಟ್ಟು ಪ್ರಾರ್ಥಿಸುವದೊಂದೇ ಉಪಾಯ. ಮನಸ್ಸಿನ ಏಕಾಗ್ರತೆಗೆ ಸ್ಥಲ ಮತ್ತು ಕಾಲಗಳ ಅವಶ್ಯಕತೆ ಇದೆ. ಏಕಾಂತದಲ್ಲಿ ಒಬ್ಬರೇ ಕುಳಿತು ಪ್ರಾರ್ಥಿಸಿ ದರೆ ಅವನು ಭಗವಂತನಲ್ಲಿ ತಲ್ಲೀನನಾಗುವ ಸಂಭವ ಹೆಚ್ಚಿದೆ. ಇಬ್ಬರು ಮೂವರು ಒಂದೆಡೆ ಸೇರಿ ಪ್ರಾರ್ಥನೆ ಸಲ್ಲಿಸಿದರೆ ನೈತಿಕ ಮಟ್ಟವು ಹೆಚ್ಚಾಗುವದು. ಈಗ ಅಲ್ಲಲ್ಲಿ ಸಮುದಾಯಿಕ ಪ್ರಾರ್ಥನೆಗಳನ್ನು ಕಾಣುತ್ತೇವೆ. ಹೀಗೆ ಮಾಡುವದರಿಂದ ಸಾಧಕರಲ್ಲಿ ಮನೋಸ್ಥೈರ್ಯ ಬರುವದು. ಸಾಮೂಹಿಕ ಭಜನೆಯ ಪರಿಣಾಮವೂ ಒಳ್ಳೆಯದಾಗುವದು. ನೈತಿಕ ಸ್ಥಿರತೆಯೂ ಕೂಡ ಅದರಿಂದ ಸಾಧಿಸಲ್ಪಡುತ್ತದೆ. ಆದರೆ ಅದರಲ್ಲಿ ವಿವಿಧತೆ ಇರಬೇಕು. ಅಂದರೆ ಮಾತ್ರ ಅದು ಕೇವಲ ಯಾಂತ್ರಿಕ ವಾಗದೆ ಭಾವಪೂರ್ಣವಾಗುವದು. ಮರದ ಎಲೆ ಟೊಂಗೆಗಳು ಬೆಳೆಯಬೇಕಾದರೆ ಬೇರಿಗೆ ಹೇಗೆ ನೀರು ಹಾಕಬೇಕೋ ಹಾಗೆ ಪಾರಮಾರ್ಥದ ದಿವ್ಯತ್ವವನ್ನು ಕಾಣ ಬೇಕಾದರೆ ಭಕ್ತಿಗೆ ಪ್ರಾರ್ಥನೆಯೆಂಬ ನೀರು ಹಣಿಸುತ್ತಲೇ ಇರಬೇಕು. ಬೆಳಿಗ್ಗೆ ಮತ್ತು ಸಾಯಂಕಾಲ ನಿಯಮಿತವಾಗಿ ಪ್ರಾರ್ಥನೆ ಮಾಡುವದರಿಂದ ತಾವು ಮಾಡಿದ ಕುಕರ್ಮಂಗಳು ಅಳಿಸಿ ಹೋಗುತ್ತವೆ ಎಂದು ಬಲ್ಲವರು ಹೇಳುತ್ತಾರೆ.

"ಬಿಂದುವಿನಲ್ಲಿಯೇ ಸಿಂಧುವು'' ಎನ್ನುವ ಹಾಗೆ ಪ್ರಾರ್ಥನೆಯಿಂದ ಅನುಭವಕೆ ಬರುವ ಬಿಂದು ರೂಪವು ಪರಮಾತ್ಮನ ಪ್ರತೀಕವೆಂದು ಭಾವಿಸಬೇಕು. ಅಗಳಿನ ಮೇಲೆ ಅನ್ನದ ಪರೀಕ್ಷೆ ಅನ್ನುವದಲ್ಲವೇ ಹಾಗೆ. ಗುಣ ದೃಷ್ಟಿಯಿಂದ ಅಗಳಿನಲ್ಲಿ ಮತ್ತು ಅನ್ನದಲ್ಲಿ ಏನೂ ಭೇದವಿಲ್ಲ. ಆದರೆ ಒಂದು ವ್ಯತ್ಯಾಸವಿದೆ ಅಗಳಿನಿಂದ ಅನ್ನ ಮಾಡಲಿಕ್ಕೆ ಬರುವದಿಲ್ಲ. ಆದರೆ ಬಿಂದುವಿನಲ್ಲಿ ಪರಮಾತ್ಮನ ರೂಪು ಪ್ರಕಟ ವಾಗುವದು.

ಪ್ರಾರ್ಥನೆಯಿಂದ ಆತ್ಮ ವಿಶ್ವಾಸ ಹುಟ್ಟುತ್ತದೆ. ಆತ್ಮರೂಪದಲ್ಲಿದ್ದ ಪರ ಮಾತ್ಮನ ಅನುಗ್ರಹ ತನ್ನ ಮೇಲಿದೆ, ಅದು ತನ್ನನ್ನು ರಕ್ಷಿಸುತ್ತದೆ ಎಂಬ ಧೃಡವಾದ ವಿಶ್ವಾಸ ಪ್ರಾರ್ಥನೆ ಮಾಡುವ ಸತ್ಪುರುಷರಲ್ಲಿ ಯಾವಾಗಲೂ ಬಲವಾಗಿರುತ್ತದೆ.

ಶಕ್ತಿಯ ಬಗ್ಗೆ ಒಮ್ಮೆ ಅರಿವುಂಟಾಯಿತೆಂದರೆ ಎಲ್ಲವನ್ನು ಅವನಿಗೆ ಅರ್ಪಿಸಬೇಕು ಎನ್ನುವ ಭಾವನೆ ಬರುತ್ತದೆ. ಇದರಿಂದ ಸೂಕ್ಷ್ಮಪ್ರಜ್ಞೆ ಲಭಿಸುತ್ತದೆ. ದಿವ್ಯ ಜ್ಞಾನ ಉಂಟಾಗುತ್ತದೆ. ಎಲ್ಲಾ ಬಗೆಯ ಮಾನಸಿಕ ತುಮುಲಗಳು ಕಡಿಮೆ ಯಾಗುತ್ತವೆ. ಚರ್ಚೆ ವಾಗ್ವಾದ ಎಲ್ಲಾ ಕೊನೆಗೊಂಡು ಶಾಂತಿ ಮತ್ತು ಜ್ಞಾನ ಮಾತ್ರ ಉಳಿಯುತ್ತದೆ. ಇಂತಹ ಒಂದು ಮಾನಸಿಕ ವಿಕಾಸ ಅಮರತ್ವವನ್ನು ತಂದು ಕೊಡುತ್ತದೆ.

"ಹೆ ಸದ್ಗುರು ಪರಮಾತ್ಮನೆ! ನಿನ್ನನ್ನೇ ನಾನು ನೆರೆ ನಂಬಿ ನಿನ್ನ ಪಾದಾರ-ವಿಂದಗಳನ್ನು ಹಿಡಿದಿದ್ದೇನೆ. ನೀನೆ ತಾಯಿ ತಂದೆ, ಬಂಧು ಬಳಗ, ನೀನಲ್ಲದೆ ನನಗೆ ಮತ್ತಾರೂ ಇಲ್ಲ. ನಿನ್ನನ್ನು ಬಿಟ್ಟು ಇನ್ನಾರಿಗೂ ಶರಣು ಹೋಗಲಾರೆ. ಅಜ್ಞಾನಿ ಯಾದ ನನ್ನ ತಪ್ಪುತಡೆಗಳನ್ನು ಮನ್ನಿಸು. ನನ್ನನ್ನು ಸರ್ವ ರೀತಿಯಿಂದ ಉದ್ಧ ರಿಸು, ರಕ್ಷಿಸು" ಎಂದು ಅಂಗಲಾಚಿ ಪ್ರಾರ್ಥಿಸಿದರೆ ಪರಮಾತ್ಮನು ತಕ್ಷಣವೇ ಎತ್ತಿ ಹಿಡಿದು ಸದಾಕಾಲ ಉದ್ಧರಿಸುತ್ತಾನೆ.

ಹೀಗೆ ಸಂಕಟಗಳ ನಿವಾರಣೆಗೆ ದೇವರ ಸಹಾಯವನ್ನು ದೊರಕಿಸಿಕೊಡಲು ಪ್ರಾರ್ಥನೆಯೊಂದೇ ಸಮರ್ಥ ಸಾಧನೆ. ಆದ್ದರಿಂದ ಪ್ರತಿಯೊಬ್ಬ ಮನುಷ್ಯನು ದಿನದಲ್ಲಿಯ ಕೆಲಸವುಯುವಾದರೂ ನಿಯಮಿತವಾಗಿ ದೇವರ ಪ್ರಾರ್ಥನೆಯನ್ನು ಮಾಡ ಬೇಕು. ಇದಕ್ಕಾಗಿ ಹಣ ವೆಚ್ಚ ಮಾಡಬೇಕಾಗಿಲ್ಲ. ಶ್ರಮವಹಿಸಬೇಕಾಗಿಲ್ಲ.

ಮೊದಲು ಮನೆ ಮನೆಗಳಲ್ಲಿ ಹಿರಿಯರು ಚಿಕ್ಕ ಮಕ್ಕಳಿಗೆ ಬೆಳಿಗ್ಗೆ ಮತ್ತು ಸಾಯಂಕಾಲ ದೇವರನ್ನು ನಮಿಸಿ, ಸ್ತುತಿ-ಸ್ತೋತ್ರಗಳನ್ನು ಹಾಡಲು ಕಲಿಸುತ್ತಿ ದ್ದರು. ಅದೇ ರೀತಿ ಪುರಾಣ ಪುಣ್ಯ ಕಥೆಗಳನ್ನು ಹೇಳುತ್ತಿದ್ದರು. ಪ್ರಾಥಮಿಕ ಶಾಲೆಗಳು ಮುಂಜಾನೆ ವಿದ್ಯಾರ್ಥಿಗಳ ಪ್ರಾರ್ಥನೆಯಿಂದಲೇ ಪ್ರಾರಂಭವಾಗುತ್ತಿದ್ದವು. ಆದ್ದರಿಂದ ಸಹಜವಾಗಿ ದುರಾಚರಣೆಯ ಕಡೆಗೆ ಹೊರಳಲು ಮನಸ್ಸು ಹಿಂಜರಿಯು ತ್ತಿತ್ತು. ಆದರೆ ಈಗ ಎಲ್ಲವೂ ವಿಚಿತ್ರ. ಹೇಳಲಿಕ್ಕೆಶಬ್ಧ ಸಾಲವು.

ಒಟ್ಟಿನ ಮೇಲೆ, ಮನಸ್ಸನ್ನು ಸಂಸಾರ ಬಂಧನದಿಂದ ಮುಕ್ತಗೊಳಿಸುವದು, ನಿರ್ಮಲಗೊಳಿಸುವದು, ಸ್ಥಿರಗೊಳಿಸುವದು, ನಿತ್ಯನಿಯಮಿತವಾದ ಏಕ ಮನಸ್ಸಿನ ದೇವರ-ಧ್ಯಾನ ಮತ್ತು ಪ್ರಾರ್ಥನೆ ಎನ್ನುವದನ್ನು ಮರೆಯಬಾರದು.

ಸಮುದಾಯ ಪ್ರಾರ್ಥನೆ— ಮುಸ್ಲೀಮ ಬಾಂಧವರು ಸಮುದಾಯ ಪ್ರಾರ್ಥನೆಗೆ ಬಹಳ ಬೆಲೆ ಕೊಡುತ್ತಾರೆ. ಪ್ರತಿ ಮಂಗಳವಾರ, ಶುಕ್ರವಾರ ಮತ್ತು ವಿಶೇಷ ಹಬ್ಬ ಹರಿದಿನಗಳಲ್ಲಿ ಮಸೀದೆಯಲ್ಲಿ ಸೇರಿ ಪ್ರಾರ್ಥನೆ ಮಾಡುವರು. ದಿನ ನಿತ್ಯವೂ ತಮ್ಮ ಸಮೀಪದಲ್ಲಿರುವ ಮಸೀದಿಗಳಿಗೆ ಹೋಗಿ ಪ್ರಾರ್ಥನೆ ಮಾಡುವರು.

ವರ್ಷಕ್ಕೊಂದು ಸಲ ಈದ್‌ಗಾಹ ಪ್ರಾರ್ಥನೆ ಸಲ್ಲಿಸುವರು. ನಂತರ ಜಗತ್ತಿನ ಮುಸ್ಲೀಮರೆಲ್ಲರೂ ಮೆಕ್ಕಾದಲ್ಲಿ ಹಜ್ ಮೂಲಕ ಒಟ್ಟು ಸೇರುವರು. ಅದೇರೀತಿಯೆ ಕ್ರಿಶ್ಚಿಯನ್ನರು ಪ್ರತಿ ರವಿವಾರ ಚರ್ಚಗಳಲ್ಲಿ ಸೇರಿ ಸಮುದಾಯ ಪ್ರಾರ್ಥನೆ ಸಲ್ಲಿಸುವರು. ಈ ಪದ್ಧತಿ ಅನುಕರಣೀಯ.

ಮಡಿವಾಳ ಮಾಚಯ್ಯ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ.

"ಸಂಗಿಸುವಲ್ಲಿ ಸುಸಂಗಿಸುವಲ್ಲಿ ಮಹಾಸಂಗಿಸುವಲ್ಲಿ——".

ಸಂಗಿಸುವದು ಎಂದರೆ ಸಹಜವಾಗಿ ಭೆಟ್ಟಿಯಾಗುವದು,ಸುಸಂಗಿಸುವದು ಎಂದರೆ ಅನುಭವ ಮಂಟಪದಂತಹ ಸ್ಥಳದಲ್ಲಿ ಸತ್ಸಂಗ ಶರಣರ ಗೋಷ್ಠಿ ನಡೆಸುವದು, ಮಹಾಸಂಗಿಸುವಲ್ಲಿ ಎಂದರೆ ಇಡೀ ಸಮಾಜವೇ ಒಂದೇ ಕಡೆ ಕೂಡುವದು ಎಂದರ್ಥ. ಪ್ರತಿದಿನ ಇಷ್ಟಲಿಂಗ ಪೂಜೆ ಮಾಡಿದರೆ ಸಾಲದು. ತಮ್ಮ ತಮ್ಮ ಮನೆಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ಸೇರಿ ಧಾರ್ಮಿಕ ಚರ್ಚೆ ಹಾಗೂ ಪ್ರಾರ್ಥನೆ ನಡೆಸಬೇಕು. ವಾರಕ್ಕೊಂದು ಸಲ ಯಾವುದೇ ದೇವಸ್ಥಾನದಲ್ಲಿ ಬಸವ ಮಂಟಪ, ಬಸವ ಭವನ ಅಥವಾ ಇನ್ನಾವುದೇ ಇಂತಹ ಸ್ಥಳದಲ್ಲಿ ಕೂಡಿ ಪ್ರಾರ್ಥನೆ ಮಾಡಬೇಕು. ವರುಷಕ್ಕೊಂದು ಸಲ ಊರಲ್ಲಿನ ಸಮಾಜ ಬಾಂಧವರೆಲ್ಲ ಸಮುದಾಯ ಪ್ರಾರ್ಥನೆ ಸಲ್ಲಿಸಬೇಕು. ಊರೊಳಗಿನ ಸಮಾಜ ಬಾಂಧವರೆಲ್ಲ ಕನಿಷ್ಟ ಪಕ್ಷ ಒಂದು ವಿಶಾಲವಾದ ಬಯಲಿನಲ್ಲಿ ಯಾದರೂ ಸೇರಿ ಪ್ರಾರ್ಥನೆ ಮಾಡುವದು ಅತ್ಯಂತ ಅವಶ್ಯಕ. ಪ್ರಾರ್ಥನೆಯನ್ನು ನಡೆಸುವವರ ಒಂದು ಸಮಿತಿಯು ಪ್ರಾರ್ಥನಾ ನಿರ್ವಹಣೆಗೆ ವ್ಯವಸ್ಥೆ ಮಾಡಬೇಕು. ಧರ್ಮಧ್ವಜಾರೋಹಣ ಮೊದಲು ಮಾಡಿ, ಪ್ರಾರ್ಥನೆ, ಧರ್ಮ ಸೂತ್ರ ಘೋಷಣೆ ನಂತರ ವಚನ ಸಾಹಿತ್ಯ ಕುರಿತು ವಿದ್ವಾಂಸರ ಹಾಗೂ ಅನುಭಾವಿಗಳ ಜೊತೆ ಚರ್ಚೆ ನಡೆಸಿ ಕೊನೆಗೆ ಅವರಿಂದ ಉಪನ್ಯಾಸ ಮಾಡಿಸಿ ಮಂಗಲ ಮಾಡಿಸಬೇಕು. ಸಮುದಾಯ ಪ್ರಾರ್ಥನೆಯಲ್ಲಿ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಹುಡುಗರು, ವಯಸ್ಕರು, ಮುದುಕರು ಹೀಗೆ ಭಿನ್ನ ಭೇದವಿರಬಾರದು. ಸಾಧ್ಯವಿದ್ದಷ್ಟು ಮುಂಜಾನೆ 10 ಗಂಟೆಯೊಳಗೆ ಸಮುದಾಯ ಪ್ರಾರ್ಥನೆ ಮುಗಿಯುವಂತೆ ವ್ಯವಸ್ಥೆ ಮಾಡಬೇಕು. ಪ್ರಾರ್ಥನೆ ಮುಗಿದ ನಂತರ ಸಾರ್ವಜನಿಕರಿಂದ ಕೂಡಿಸಿದ ದೇಣಿಗೆಯಲ್ಲಿ ಪ್ರಸಾದ ವಿತರಣೆಯ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಂತಹ ಪದ್ಧತಿ ಸಮಾಜ ಸಂಘಟನೆಗೆ ನೆರವಾಗುತ್ತದೆ.

————

೧೩. ವೀರಶೈವ ಧರ್ಮದ ಲೋಕ-ಸಂಗ್ರಹ ದೃಷ್ಟಿ

ವೀರಶೈವರಿಗೆ ಅವ್ಯವಹಾರಿಕ ಆಚರಣೆ ನಿಷಿದ್ಧ. ಅವರ ಧಾರ್ಮಿಕ ವಿವೇಚನೆ ಹಾಗೂ ಆಚರಣೆಯಲ್ಲಿ ಲೋಕ ಸಂಗ್ರಹ ಕಾರ್ಯ ಸಹಜವಾಗಿ ಸೇರಿಹೋಗಿದೆ.

"ಪ್ರತಿಯೊಬ್ಬರಲ್ಲಿ ಬಹುಮುಖ್ಯವಾಗಿ ಇರಬೇಕಾದ ಗುಣವೆಂದರೆ ಸ್ವತಂತ್ರ ವಿಚಾರ ಶೀಲತೆ. ಸಾಮಾಜಿಕ, ಆಧ್ಯಾತ್ಮಿಕ ಹಾಗೂ ತಾತ್ವಿಕ ಯಾವುದೇ ವಿಚಾರ ವಿರಲಿ ಮುಕ್ತ ಮನಸ್ಸಿನಿಂದ ಚರ್ಚಿಸಿ ಒಂದು ತೀರ್ಮಾನಕ್ಕೆ ಬರಬೇಕು. ಶಾಶ್ವತ ವಾದ ಹಾಗೂ ಸಾರ್ವತ್ರಿಕವಾದ ಅದರಲ್ಲಿಯೂ ಆಧುನಿಕ ಯುಗ ಮನೋಧರ್ಮಕ್ಕೆ ಹೆಚ್ಚು ಹತ್ತಿರವಾದ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸ ಬೇಕು. ಧರ್ಮ ಇರುವದು ಬೋಧನೆಗಲ್ಲ,ಬದುಕುವುದಕ್ಕೆ ಎಂಬುದನ್ನು ಅರಿಯಬೇಕು. ಧರ್ಮದ ಹೆಸರಿನಲ್ಲಿ ಲೌಕಿಕವನ್ನು ನಿರ್ಲಕ್ಷಿಸಬಾರದು. ಅಥವಾ ಲೌಕಿಕದಲ್ಲಿ ಮುಳು ಗಿದವರು ಧರ್ಮವನ್ನು ತಿರಸ್ಕರಿಸಬಾರದು. ಈ ಎರಡನ್ನೂ ಏಕಕಾಲದಲ್ಲಿ ಮುನ್ನಡೆಸಿಕೊಂಡು ಹೋಗುವದೇ ಪೂರ್ಣಜೀವನ ದೃಷ್ಟಿ ವ್ಯಕ್ತಿಯ ಹಿತ ಸಮಾ ಜಕ್ಕೆ ಪೂರಕವಾಗಬೇಕು. ಸಾಮಾಜಿಕ ಹಿತ ವ್ಯಕ್ತಿಯ ಉದ್ಧಾರಕ್ಕೆ ಪೋಷಕ ವಾಗಬೇಕು" ಇದು ವೀರಶೈವ ಧರ್ಮದ ವಿಶಾಲ ಧೋರಣೆ.

ದೇವಾಲಯಗಳ ಪರಾವಲಂಬನೆಯನ್ನು ತೆಗೆದು ಆತ್ಮ ವಿಶ್ವಾಸವನ್ನು ಆ ಮೂಲಕ ಆತ್ಮ ನಿರೀಕ್ಷಣೆಯ ಕಾರ್ಯವನ್ನು ಪ್ರೈದೂಡಿಸಿಕೊಳ್ಳುವದು ಮೊದಲನೇ ಕೆಲಸ. ಅವರವರ ಉದ್ಧಾರವನ್ನು ಅವರೇ ಮಾಡಿಕೊಳ್ಳಬೇಕು. ಅವರವರ ಉಪಾ ಸನೆಯನ್ನು ಅವರೇ ಮಾಡಬೇಕು. ಧರ್ಮಾಚರಣೆಯಲ್ಲಿ ದಳ್ಳಾಳಿಗಳಿರಬಾರದು. ಯಾಕೆಂದರೆ ಅವರ ಕೈಯಲ್ಲಿ ಧರ್ಮವೆನ್ನುವದು ಪ್ರದರ್ಶದನ ಒಂದು ಸಾಮಗ್ರಿ ಯಾಗುತ್ತದೆ. ಆದಕಾರಣ ಧರ್ಮ ವೈಯಕ್ತಿಕವಾಗಬೇಕು ಅದೇ ವೇಳೆಗೆ ಅದರ ಫಲ ಸಾರ್ವತ್ರಿಕವಾಗಬೇಕು. ಅಂದರೆ ಸಾಧನೆಯ ಫಲವನ್ನು ಸಮಾಜದ ಹಿತಕ್ಕೆ ಅರ್ಪಿಸಬೇಕು. ಕಾಯಕ ಮತ್ತು ದಾಸೋಹಗಳಂಥ ಶ್ರೇಷ್ಠ ತತ್ವಗಳ ಆಚರಣೆ ಯಿಂದ ಇದನ್ನು ಸಾಧಿಸಬಹುದು. ದಾಸೋಹವಿಲ್ಲದೇ ಕಾಯಕ ಪೂರ್ಣಗೊಳ್ಳುವದಿಲ್ಲ. ವ್ಯಕ್ತಿ ಎಷ್ಟೇ ದೊಡ್ಡವನಾಗಿರಲಿ, ಸಮಾಜ ಅವನಿಗಿಂತಲೂ ದೊಡ್ಡದು. ಮೂರ್ತಿ ಪೂಜೆ ಮಾಡುವ ಮೂಢತನ ಹೋಗಬೇಕು. ಸ್ಥಾವರಕ್ಕಳಿವುಂಟು ಜಂಗಮಕ್ಕಳಿ ವಿಲ್ಲ. ಸ್ಥಾವರ ಎಂದರೆ ಜಡವ್ಯವಸ್ಥೆ. ಜಂಗಮ ಎಂದರೆ ಚೈತನ್ಯ ಶೀಲತೆ, ಜಡ ವಾದದ್ದು ಅಳಿಯುತ್ತದೆ. ಚೈತನ್ಯ ಶೀಲವಾದದ್ದು ಬೆಳೆಯುತ್ತದೆ ಎಂಬುದನ್ನು ಅರಿಯಬೇಕು.

ಮೂಢ ನಂಬಿಕೆಯಿಂದ ದೂರವಿರಬೇಕು. ಜೋತಿಷ್ಯ, ಪಂಚಾಂಗ, ಹರಕೆ ಯಜ್ಞ, ಯಾಗ, ಹೋಮ, ಹವನ ಮುಂತಾದವುಗಳಲ್ಲಿ ಆಸಕ್ತಿಯುಳ್ಳವರಾಗ ಬಾರದು. ಮನಸ್ಸಿನ ಏಕೈಕ ನಿಷ್ಠೆಯ ಮುಂದೆ ಇವೆಲ್ಲ ಏನೂ ಮಾಡಲಾರವು. ಕಾಲ ಕೆಟ್ಟಿದೆ, ಸಮಾಜ ಹಾಳಾಗಿ ಹೋಗಿದೆ, ನಾನೊಬ್ಬನೆ ಏನು ಮಾಡಲಿಕ್ಕಾ ಗುತ್ತದೆ ಎನ್ನುವ ಪಲಾಯನವಾದ ಸರಿಯಲ್ಲ. ತಾವು ಮಾಡಲಾಗದುದನ್ನು ಇತರರ ಮೇಲೆ ಹಾಕಿ ಸಾಮಾಜಿಕ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಬುದ್ಧಿ ವಂತಿಕೆ ಇದು. ಸಾತ್ವಿಕ ಜೀವನ ಎಂದರೆ ಪೆದ್ದ ಜೀವನವೆಂದು ಯಾರೂ ತಿಳಿದು ಕೊಳ್ಳಬಾರದು. ಸತ್ಯದ ತಳಹದಿಯ ಮೇಲೆ ಬಾಳಬೇಕು, ಅಂಜದೆ-ಅಳುಕದೆ ಬಾಳಬೇಕು, ಮಾನವೀಯ ಮೌಲ್ಯಗಳನ್ನರಿತು ಲೌಕಿಕದಲ್ಲಿ ಚೆನ್ನಾಗಿ ಬಾಳಬೇಕು, ಎಂಬುದು ಅಂತರಂಗದಿಂದ ಮೂಡಿ ಬರಬೇಕು. ಇದು ಯಾವ ದೇಶ ಯಾವ ಕಾಲ ಕ್ಕಾದರೂ ಸಾಧ್ಯವಾಗುತ್ತದೆ ಅದುವೇ ವೀರಶೈವ ಧರ್ಮದ ತತ್ವ ಎನ್ನುವದನ್ನು ಮರೆಯಬಾರದು.

ಧಾರ್ಮಿಕ ಅಂಧ ಶ್ರದ್ಧೆಯನ್ನು ಖಂಡಿಸಬೇಕು. ಹಿಂದಿನ ಜನ್ಮದಲ್ಲಿ ನಾವು ಮಾಡಿದ ಕರ್ಮ ನಮ್ಮನ್ನು ಇಂದು ನಿಯಂತ್ರಿಸುತ್ತದೆ, ಅದರಂತೆ ಎಲ್ಲಾ ನಡೆಯು ತ್ತದೆ, ಒಳ್ಳೇ ಕರ್ಮ ಮಾಡಿದವನು ಒಳ್ಳೇ ವರ್ಣದಲ್ಲಿ ಹುಟ್ಟುತ್ತಾನೆ, ಈಗ ಶ್ರೀಮಂತನಾಗಿರುವವನು ಹಿಂದಿನ ಜನ್ಮದಲ್ಲಿ ಪುಣ್ಯ ಮಾಡಿ ಬಂದವನು, ನಮ್ಮ ಕರ್ಮಕ್ಕನುಗುಣವಾಗಿ ವಿಧಿ ನಮ್ಮನ್ನು ನಡೆಸುತ್ತದೆ- ಎಂದು ಎಲ್ಲಕ್ಕೂ ನಮ್ಮ ಕರ್ಮ ನಮ್ಮ ಹಣೆಯ ಬರಹವನ್ನು ನಂಬುವಂತೆ ಮಾಡುವದು ವೀರಶೈವ ಧರ್ಮ ವಲ್ಲ. ಪುರುಷ ಪ್ರಯತ್ನವನ್ನು ಹಿಂದೆ ಸರಿಸಿ ವಿಧಿವಾದವನ್ನು ಅದು ಎಂದೂ ಮುಂದು ಮಾಡುವದಿಲ್ಲ. ಜನ ಸಾಮಾನ್ಯರ ಮೇಲಿನ ಪ್ರೀತಿಯಿಂದ ಅವರನ್ನು ಉದ್ಧರಿಸುವಂತಹ ಆತ್ಮಾವಲಂಬನೆಯ ಕಳಕಳಿಯಿಂದ ನೂರಾರು ದೇವರುಗಳನ್ನು ಮತ್ತು ಅವುಗಳ ಸುತ್ತ ಬೆಳೆದ ಅಂಧ ಶ್ರದ್ಧೆಗಳನ್ನು ಶೋಷಣೆಯ ವಿಧಾನಗಳನ್ನು ವೀರಶೈವ ಧರ್ಮ ನಿರ್ದಾಕ್ಷಿಣ್ಯವಾಗಿ ಖಂಡಿಸಿ ಒಟ್ಟು ಸಾಮಾಜಿಕ ವ್ಯವಸ್ಥೆಯ ಪುನರ ನಿರ್ಮಾಣದ ಹೊಸ ದೃಷ್ಟಿಯನ್ನು ಬೀರಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಷಟ್‌ಸ್ಥಲ ಸಿದ್ಧಾಂತದ ಪ್ರಕಾರ ಐಕ್ಯಸ್ಥಲ ತಲುಪಿದ ಸಾಧಕನು ಅಲ್ಲಿಯೇ ನಿಲ್ಲುವುದಿಲ್ಲ. ಅರವಿಂದರು ಹೇಳಿದ ಅತಿಮಾನಸ ಶಕ್ತಿಯನ್ನು ಪಡೆದು ಲೋಕ ಹಿತ ಕ್ಕಾಗಿ ಕೆಳಗಿನ ಮೆಟ್ಟಲುಗಳಿಗೆ ಇಳಿದು ಬಂದು ತಾನು ಕಂಡ ಬೆಳಕನ್ನು ಇತರರಿಗೂ ತೋರಿಸುವ ಪ್ರಯತ್ನ ಮಾಡುತ್ತಾನೆ ಈ ಸಾಮಾಜಿಕ ಕಳಕಳಿ, ಅದರ ಹಿಂದಿ ರುವ ಮಾನವೀಯ ಅನುಕಂಪ ವೀರಶೈವ ಧರ್ಮದ ಮೂಲ ತತ್ವ. ಷಟ್‌ಸ್ಥಲದ ಪ್ರತಿಯೊಂದು ಸ್ಥಳದಲ್ಲಿಯೂ ಒಂದು ಕಡೆ "ಅಂಗ ಭಕ್ತಿ" ಇನ್ನೊಂದು ಕಡೆ

''ಲಿಂಗ ಭಕ್ತಿ'' ವಿಕಾಸಗೊಳುತ್ತಾ ಚಲನ ಶೀಲವಾದ ಒಂದು ಪರಿಪೂರ್ಣ ಮಾರ್ಗ ವಾಗುತ್ತದೆ.

ಬೇರು ಶುದ್ಧವಾದರೆ ಗಿಡ ಶುದ್ಧವಾಗುತ್ತದೆ. ಮನಸ್ಸನ್ನು ನಿಗ್ರಹಿಸಬೇಕಾದರೆ ಚಿತ್ತವನ್ನು ಶುದ್ಧಗೊಳಿಸಬೇಕು. ಚಿತ್ತ ಶುದ್ಧಿಯನ್ನು ಪಡೆಯಬೇಕಾದರೆ ಸಾಂಸಾರಿಕ ಜೀವನಕ್ಕೆ ಅತೀತರಾಗಿ ನಿಲ್ಲಬೇಕೆಂದೇನೂ ಅಲ್ಲ. ಎಲ್ಲರಂತೆ ಲೌಕಿಕದಲ್ಲಿದ್ದು ಅದನ್ನು ಮೀರಿ ನಡೆಯಬೇಕು. ಮೀನು ನೀರಲ್ಲಿದ್ದರೂ ನೀರನ್ನು ತನ್ನೊಳಗೆ ಬಿಟ್ಟುಕೊಳ್ಳುವದಿಲ್ಲ. ಇಂತಹ ಸಾಧನೆಯ ಕ್ಷೇತ್ರಕ್ಕೆ ಹಾಕಿಕೊಂಡ ಮಾರ್ಗವೆಂದರೆ ತ್ರಿವಿಧ ದಾಸೋಹ. ತನು ಮನ ಧನಗಳನ್ನು ಅದರದರ ಸ್ಥಾನಕ್ಕೆ ಅರ್ಪಿಸುತ್ತಾ ಹೋದರೆ ಲೌಕಿಕದಲ್ಲಿದ್ದರೂ ಲೌಕಿಕತೆಯನ್ನು ಒಳಗೆ ಸೇರಿಸಿಕೊಳ್ಳುವದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಧರ್ಮದ ಹೆಸರಿನಲ್ಲಿ ಅಸಹಜ ವೈರಾಗ್ಯವನ್ನು ತಾಳಬಾರದು.

ಧರ್ಮದ ಮೊದಲನೆ ಹೆಜ್ಜೆ ವೈಯಕ್ತಿಕ ಸಾಧನೆ ಅನಂತರ ಬೋಧನೆ. ಈಗ ಧಾರ್ಮಿಕ ಭಾಷಣ ಮಾಡುವದು ಕೇಳುವದು, ಒಂದು ಚಟವಾಗಿ ಪರಿಣಮಿಸಿದೆ. ನಿತ್ಯ ಜೀವನದ ಆಚರಣೆಯಲ್ಲಿ ಅವರು ಅದರಿಂದ ಬಹುದೂರವಾಗಿರುತ್ತಾರೆ. ಅಂಥವರು ತಾವೂ ಕೆಡುತ್ತಾರೆ. ಸಮಾಜವನ್ನೂ ಅಡ್ಡದಾರಿಗೆ ಎಳೆಯುತ್ತಾರೆ. ಇಂಥವರಿಗೆ ಶರಣರು ''ಮಾತಿನಂತೆ ಮನವಿಲ್ಲದ ಜಾತಿ ಡೊಂಬರು'' ಎಂದು ಕರೆದಿದ್ದಾರೆ. ಕಾರಣ ಮಾತನಾಡಿ ಮನ ಸೆಳೆಯುವ, ಹಣ ಸೆಳೆಯುವ ಪ್ರವೃತ್ತಿ ಹೋಗಬೇಕು. ಸಮಾಜದ ಸ್ವಾಸ್ಥ್ಯದ ಕಡೆಗೆ ಲಕ್ಷ್ಯಗೊಡಬೇಕು. ಧರ್ಮಕ್ಕಿರುವ ಸಾಮಾಜಿಕ ಹಾಗೂ ವೈಯಕ್ತಿಕ ಸಂಬಂಧಗಳನ್ನು ಅರಿಯಬೇಕು. ಆಧುನಿಕ ದೃಷ್ಟಿಯೆಂದರೆ, ಧರ್ಮ ಸಾಮಾಜಿಕ ಜೀವನದಲ್ಲಿ ಪ್ರದರ್ಶಿತವಾಗಬಾರದು ಮತ್ತು ಸಮಾಜವನ್ನು ನಿಯಂತ್ರಿಸಬಾರದು. ಆದರೆ ಇದರ ಪ್ರತ್ಯಕ್ಷ ಆಚರಣೆ ಕಷ್ಟಕರ.

''ಧರ್ಮ'' ಎನ್ನುವದು ಈಗ ತನ್ನ ಮೌಲ್ಯವನ್ನು ಕಳೆದುಕೊಂಡಿದೆ. ಬಹುಶಃ ಅದೇ ಕಾರಣಕ್ಕಾಗಿ ಅದನ್ನು ಅವಲಂಬಿಸಿ ಇರಬೇಕಾದ ಅರ್ಥ ಕಾಮಗಳು ಅದೇ ದಾರಿಯನ್ನು ಹಿಡಿದಿವೆ. ಮಾನವ ವರ್ಗವನ್ನು ಒಂದುಗೂಡಿಸಿ ಉದ್ಧರಿಸಬೇಕಾದ ಧರ್ಮ ಒಡೆದು ಆಳುವ ಸಾಧನವಾಗಿ ಪರಿಣಮಿಸಿದೆ. ಕಾವಿಯ ಮರೆಯಲ್ಲಿ ಕಾಮ ಜೀವನಕ್ಕೂ, ದೇವತೆಗಳ ಹೆಸರಿನಲ್ಲಿ ದೇವದಾಸಿಯರ ನಿರ್ಮಾಣಕ್ಕೂ, ಮಠ ಮಾನ್ಯಗಳ ಉದ್ಧಾರದ ಹೆಸರಿನಲ್ಲಿ ಜನರಿಂದ ಹಣ ಸುಲಿಯುವದಕ್ಕೂ, ಪರೋಪಕಾರದ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸಿ ತಲೆಗಂಡಾಯ ವಸೂಲ ಮಾಡುವದಕ್ಕೂ ಧರ್ಮ ಅನುಕೂಲ ಮಾಡಿಕೊಟ್ಟಿದೆ ಏನೋ ಅನಿಸುತ್ತಿದೆ. ಎಲ್ಲರೂ ಒಟ್ಟಾಗಿ ಬೆಳೆ

ಯುವಂತಹ ಸಾಮಾಜಿಕ ಪರಿಸರ ನಿರ್ಮಾಣ ಇಂದಿನ ಅಗತ್ಯವಾಗಿದೆ. ಸರ್ವಸಮಾನತೆಯ ಆಧಾರದ ಮೇಲೆ ನಿಂತ ಸಾಮಾಜಿಕ ನ್ಯಾಯ ಇಂದು ಬೇಕಾಗಿದೆ.

ಜೀವನದಲ್ಲಿ ನಾವು ಬಯಸಿದಂತೆ ಅವಕಾಶಗಳು ಲಭಿಸುವದಿಲ್ಲ. ನಮ್ಮ ಪಾಲಿಗೆ ಬಂದದ್ದನ್ನು ನಿಷ್ಠೆಯಿಂದ ನಿರ್ವಹಿಸುವದು ಯಶಸ್ಸಿನ ಗುಟ್ಟು. ನಿಜವಾದ ಶೂರ ತನಗೆ ಕೊಟ್ಟು ಕುದುರೆಯನ್ನೇ ಪಳಗಿಸಿ ಸವಾರಿ ಮಾಡುತ್ತಾನೆ.

''ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ"

ಎಂದು ಅಲ್ಲಮ ಪ್ರಭು ಜೀವನದ ಯಶಸ್ಸಿನ ಗುಟ್ಟನ್ನು ಸೂಚಿಸಿದ್ದಾನೆ.

ಲೋಕ ಹಿತ ಸಾಧಕವಾದ, ಸಾಮಾಜಿಕ ಕಾರ್ಯಗಳಿಗೆ ವ್ಯಕ್ತಿಗತವಾದ, ಆಂತರಿಕ ಸಾಧನೆ ಹೆಚ್ಚು ಅರ್ಥಪೂರ್ಣವಾಗಿದೆ. ಸಾಮಾಜಿಕ ಮೌಲ್ಯಕ್ಕೆ ಆಧ್ಯಾತ್ಮಿಕ ಸ್ಪರ್ಶ ದೊರೆಯಬೇಕು. ವ್ಯಕ್ತಿತ್ವ ವಿಕಾಸದ ಪೂರ್ಣದೃಷ್ಟಿ ಮತ್ತು ಸ್ವಯಂಪೂರ್ಣ ಸಮಾಜದ ಸಮಗ್ರ ಕಲ್ಪನೆ ಹೊಂದಿ ಬಾಳಲು ಪ್ರಯತ್ನಿಸಬೇಕು. ಅವು ಒಂದಕ್ಕೊಂದು ಪೂರಕವಾಗಿವೆ. ಹೇಗೆಂದರೆ— "ಜಗವಿರಲು ದೇವರಿಹನು– ದೇವರಿರಲು ಜಗವಿದೆ". ಸಮಾಜದಿಂದ ನಾನು ಏನನ್ನು ಪಡೆದೆ ಎಂದು ಕೇಳುವುದಕ್ಕೆ ಮೊದಲು ಸಮಾಜಕ್ಕೆ ನಾನು ಏನನ್ನು ಕೊಟ್ಟೆ ಎಂದು ವಿಚಾರಿಸಬೇಕು. ವ್ಯಕ್ತಿ ತನ್ನ ಉದ್ಧಾರವನ್ನು ತಾನು ಮಾಡಿಕೊಳ್ಳಬೇಕು ನಿಜ—ಆದರೆ ಅದೇ ಸಮಯದಲ್ಲಿ ಆತ ಸಮಾಜವನ್ನು ತಿರಸ್ಕರಿಸುವಂತಿಲ್ಲ. ಈ ಎರಡನ್ನು ಸಾಧಿಸುವ ಸಮನ್ವಯ ದೃಷ್ಟಿಯನ್ನೇ ವೀರಶೈವ ಧರ್ಮ ಸಮರ್ಥವಾಗಿ ಪ್ರತಿಪಾದಿಸುತ್ತದೆ. ಸರ್ವ ಸಮಾನತೆ, ಸರ್ವೋದಯ ದೃಷ್ಟಿ, ಕಾಯಕ ನಿಷ್ಠೆ, ಸಂಪತ್ತಿನ ಹಂಚಿಕೆ ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಆಧರಿಸಿ ಧಾರ್ಮಿಕ ಮೌಲ್ಯಗಳು ಬೆಳೆಯುವಂತೆ ವೀರಶೈವ ಧರ್ಮ ಮೊದಲಿಂದಲೂ ಪ್ರಯತ್ನಿಸಿದೆ. ಬಹಿರಂಗದ ಲೌಕಿಕ ಜೀವನವನ್ನು ಒಪ್ಪಿಕೊಂಡು ಅಂತರಂಗದ ಅಲೌಕಿಕ ಜೀವನವನ್ನು ಶ್ರೀಮಂತಗೊಳಿಸಬೇಕೆನ್ನುವದು ಆಧುನಿಕ ದೃಷ್ಟಿ. ಆಧ್ಯಾತ್ಮವೆನ್ನುವದು ಕಾಡಿನಲ್ಲಿ ಕುಳಿತು ತಪಸ್ಸು ಮಾಡುವವರಿಗೆ ಮಾತ್ರವಲ್ಲ. ಜೀವನದ ಜಂಜಾಟದಲ್ಲಿದ್ದರೂ ಕಾಯಕ ದಾಸೋಹಗಳಲ್ಲಿ ನಿರತರಾದ ಎಲ್ಲರೂ ಅಳವಡಿಸಿಕೊಳ್ಳಬೇಕಾದ ಸಾರ್ವತ್ರಿಕ ಮೌಲ್ಯವುಳ್ಳದ್ದು ಎಂಬುದನ್ನು ಗಮನಿಸಬೇಕು.

ಎಲ್ಲಾ ಧರ್ಮಗಳ ಸಾರ ಸರ್ವಸ್ವವನ್ನು ಒಳಗೊಂಡು ವಿಶ್ವಮಾನವ ಮಹಾಧರ್ಮದ ಸಂಕೇತದಂತೆ ಹಾಗೂ ಚಿರಂತನವಾಗಿ ಉಳಿಯುವಂತೆ ಬೆಳೆದು ಬಂದ

ವೀರಶೈವ ಧರ್ಮದ ವಿಶ್ವ ವ್ಯಾಪಕವಾದ ತತ್ವ ದರ್ಶನವನ್ನು ಪ್ರತಿಯೊಬ್ಬ ವೀರಶೈವನು ಮಾಡಿಕೊಳ್ಳಬೇಕು. ಮನದಲ್ಲಿ ಮಹಾದೇವ ನೆಲೆಗೊಂಡವನೇ ವೀರಶೈವ ಎಂದು ಸಿದ್ಧರಾಮನು ವೀರಶೈವದ ವ್ಯಾಪ್ತಿಯನ್ನು ವಿಶಾಲಗೊಳಿಸಿರುವನು.

ಜೀವನದಲ್ಲಿ ಮೌಲ್ಯಗಳು ನಿಂತ ನೀರಿನಂತೆ ಜಡವಾದವುಗಳಲ್ಲ, ಪರಿವರ್ತನಶೀಲವಾದವುಗಳು. 'ಅರ್ಥ' ನಿಮಿತ್ತ ಮೌಲ್ಯ. ಅದನ್ನು ಈಡೇರಿಸಿಕೊಡುವ ಸಹಜ ಮೌಲ್ಯ 'ಕಾಮ' ಇವುಗಳಿಗೆ ನಿಜವಾದ ಮೌಲ್ಯ ಬರುವದು ''ಧರ್ಮ'' ದ ಸ್ಪರ್ಶದಿಂದ. ಇದೆಲ್ಲದರಿಂದ ಲಭಿಸುವ ಪರಮ ಮೌಲ್ಯವೆಂದರೆ ''ಮೋಕ್ಷ''. ಇದನ್ನು ಪಡೆಯುವದಕ್ಕಾಗಿಯೇ ಉಳಿದೆಲ್ಲವುಗಳನ್ನು ಪಡೆಯಬೇಕಾಗುತ್ತದೆ. ಎಲ್ಲಾ ಮೌಲ್ಯಗಳ ಸಮಾವೇಶದಿಂದ ಇಹಪರಗಳ ಸಮನ್ವಯವನ್ನು ಸಾಧಿಸುವುದೇ ವೀರಶೈವ ಧರ್ಮದ ಪರಮಗುರಿ. ಅದನ್ನು ಅರಿತು ಬಾಳುವದೇ ನಮ್ಮ ಧ್ಯೇಯವಾಗಲಿ.

.... ಗ್ರಂಥಋಣ ....

1.	ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ	ಜ. ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿ.
2.	ಮಾನವ ಧರ್ಮ	ಜ. ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿ.
3.	ಶಿವಯೋಗ	ಜ. ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿ.
4.	ಆರೈದು	ಜ. ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿ.
5.	ತೋಂಟದಾರ್ಯ ವಚನ	ಪ್ರೊ. ಸಾ. ಶಿ. ಮ.
6.	ಅಷ್ಟಾವರಣ	ಪ್ರೊ. ವಿ. ವಿ. ಸಂಗಮದ
7.	ಷಟ್‌ಸ್ಥಲ ಬ್ರಹ್ಮ ಚೆನ್ನ-ಬಸವಣ್ಣ	ಅನ್ನದಾನಯ್ಯ ಪುರಾಣಿಕ
8.	ರುದ್ರಾಕ್ಷಿ	ಶಂಕರಗೌಡ ಬಿರಾದಾರ

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8799

S.J.V.J. PRATISHTHAN
LIBRARY
Jangamawadimath, Varanasi
Acc. No.

ಮುನ್ನುಡಿಯಿಂದ

ನಮ್ಮ ನೆಚ್ಚಿನ ಜಿಲ್ಲಾ ನ್ಯಾಯಾಧೀಶರೂ, ಧರ್ಮದತ್ತಿ ಆಯುಕ್ತರೂ (Charity Commissioner) ಆದ ಶ್ರೀ ಬಿ. ಎಸ್. ಪಾಟೀಲರು ವೃತ್ತಿಯಲ್ಲಿ ನ್ಯಾಯಾಧೀಶರಾದರೂ ಪ್ರವೃತ್ತಿಯಲ್ಲಿ ಧರ್ಮದರ್ಶಿಗಳು. ಧರ್ಮಶಾಸ್ತ್ರ, ಸಾಹಿತ್ಯ, ಸಂಸ್ಕೃತಿ ಮುಂತಾದ ವಿಷಯಗಳಲ್ಲಿ ಅಪಾರ ಸಂಸ್ಕಾರವುಳ್ಳವರು, ಅಭಿರುಚಿ ಪಡೆದವರು, ಕೃಷಿ ಮಾಡಿದವರು. ತಮ್ಮ ಕರ್ತವ್ಯ ಕರ್ಮಗಳನ್ನು ನಿತ್ಯವೂ ತೃಪ್ತಿಕರವಾಗಿ ಪೂರೈಸುತ್ತ ಬಿಡುವಿಲ್ಲದ ಅವಧಿಯಲ್ಲಿಯೂ ಗ್ರಂಥ ರಚನೆ ಮಾಡುತ್ತಿರುವುದನ್ನು ನೋಡಿದರೆ ಸಾಹಿತ್ಯ ಸ್ಫೂರ್ತಿ, ಧರ್ಮ ಜಿಜ್ಞಾಸೆ, ತತ್ವವಿವೇಚನೆಗಳು ಅವರ ಬಾಳಿನ ಉಸಿರಾಗಿರುವುದು ಸ್ಪಷ್ಟವಾಗುತ್ತದೆ.

ವೀರಶೈವ ದರ್ಶನ ಭಾರತೀಯ ಷಡ್ದರ್ಶನಗಳ ಹೊರಗೆನಿಂತ ಪ್ರೌಢ ದರ್ಶನ. ಈ ಪ್ರೌಢದರ್ಶನಕ್ಕೆ ಮೂಲ ಶಿವಾಗಮಗಳು. ವೀರಶೈವ ದರ್ಶನ ಶಿವಾಗಮಗಳ ಆಧಾರದಿಂದ ಇತರ ಶೈವಧರ್ಮಗಳೊಡನೆ ಅನಾದಿ ಕಾಲದಿಂದಲೂ ಬೆಳೆಯುತ್ತ, ಮಾರ್ಪಡುತ್ತ ಬಂದಿದೆ. ಕ್ರೈಸ್ತ, ಬೌದ್ಧ, ಮಹಮ್ಮದೀಯ ಧರ್ಮಗಳಂತೆ ಇದು ಒಬ್ಬರಿಂದ ಸ್ಥಾಪಿತವಾದುದಲ್ಲ. ಕಾಲಕಾಲಕ್ಕೆ ಉದಯಿಸಿದ ಮಹಾನುಭಾವರು ತಂತಮ್ಮ ಆಚಾರ, ಅನುಭವ, ದರ್ಶನಗಳ ಬಲದಿಂದ ಅದನ್ನು ತಿದ್ದುತ್ತ, ತೀಡುತ್ತ, ಅದಕ್ಕೆ ಹೊಸರೂಪಕೊಡುತ್ತ ಬಂದಿರುವರು. ಬಸವಾದಿ ಪ್ರಮಥರು ಪ್ರಾಚೀನ ವೀರಶೈವಕ್ಕೆ ಹೊಸ ರೂಪ ಕೊಟ್ಟು ಇಂದು ನಾವೆಲ್ಲ ಅಪ್ಪಿ, ಒಪ್ಪಿ, ಆಚರಿಸುತ್ತಿರುವ ನೂತನ ವೀರಶೈವವನ್ನು ಪ್ರತಿಷ್ಠಾಪಿಸಿದರು ಎಂಬುದು ಶ್ರೀ ಪಾಟೀಲರ ಅಭಿಮತ. ನ್ಯಾಯಾಧೀಶರು ವಿಷಯಗಳನ್ನು ಕೇಳಿ, ನೋಡಿ, ಓದಿ, ತಮ್ಮ ನಿರ್ಣಯ ಕೊಡುವರು. ಆ ಸ್ಥಿತಿಯಲ್ಲಿ ಈ ಗ್ರಂಥವನ್ನು ಪ್ರಾರಂಭಿಸುತ್ತಲೇ ಈ ಅಭಿಪ್ರಾಯವಿಟ್ಟಿರುವರು. ಇದು ನ್ಯಾಯಾಧೀಶರ ನಿರ್ಣಯವಾದುದರಿಂದ ನಾವು ಮೌನವಾಗಿದ್ದೇವೆ.

ಡಾ|| ಆರ್. ಸಿ. ಹಿರೇಮಠ
ವಿಶ್ರಾಂತ ಕುಲಪತಿಗಳು
ಕ. ವಿ. ವಿ. ಧಾರವಾಡ.